# ಪುರುಷಾಮೃಗ

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ – 28

ಸಾಹಿತ್ಯಮಾಲೆ – 27

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

**ಮೂಲ**
**ರಾಬರ್ಟ್ ಲೂಯಿ ಸ್ಟೀವನ್‌ಸನ್**

**ಕನ್ನಡ ಅನುವಾದ**
**ಆನಂದ**

**ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002

**Purushamruga,** (Kannada translation of Dr. Jekyll and Mr. Hyde) by **R. L. Stevenson**; Kannada translation by **Ananda**; Editor-in-Chief: **Dr. Pradhan Gurudatta**; Published by **Registrar**, **Karnataka Anuvada Sahitya Academy**, Kannada Bhavana, J.C. Road, Bangalore - 560 002. 2007; Pp. xvi + 134; Price: Rs. 50/-

ಈ ಆವೃತ್ತಿಯ ಹಕ್ಕುಗಳು : ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮೊದಲ ಮುದ್ರಣ : 1956 – ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು
1957 – ರುಚಿರ ಪುಸ್ತಕ ನಿಲಯ, ಮೈಸೂರು

ಮುದ್ರಣ : 2007
ಪುಟಗಳು : xvi + 134
ಬೆಲೆ : ರೂ. 50/–
ಪ್ರತಿಗಳು : 3200

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ : 22107770

ಸಹಕಾರ :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : ಶ್ರೀಪಾದ್

**ಐಎಸ್‌ಬಿಎನ್ : 978–81–905692–2–4**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. 69, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – 560020 ದೂ : 23342724

ಹೆಚ್.ಡಿ. ಕುಮಾರ ಸ್ವಾಮಿ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – 560 001

ದಿನಾಂಕ : 15.03.2007

# ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು–ನುಡಿಗಳ ಹಿರಿಮೆಯನ್ನು ಇತರ ಭಾಷಾ–ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ–ವಿಜ್ಞಾನ– ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

(ಹೆಚ್.ಡಿ. ಕುಮಾರ ಸ್ವಾಮಿ)

ಹೆಚ್.ಎಸ್. ಮಹದೇವ ಪ್ರಸಾದ್
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ,
ವಿಧಾನಸೌಧ

ಬೆಂಗಳೂರು – ೫೬೦ ೦೦೧

ದಿನಾಂಕ : ೦೮–೦೨–೨೦೦೭

## ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ–ವಿದೇಶಗಳ ಕಥೆ–ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದುಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

**(ಹೆಚ್.ಎಸ್. ಮಹದೇವ ಪ್ರಸಾದ್)**

**ಐ.ಎಂ. ವಿಠ್ಠಲಮೂರ್ತಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ,
ವಿಧಾನಸೌದ
ಬೆಂಗಳೂರು – 560 001
ದಿನಾಂಕ : 08–02–2007

## ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ–ವಿದೇಶಗಳ ಕಥೆ–ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದುಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

**(ಹೆಚ್.ಎಸ್. ಮಹದೇವ ಪ್ರಸಾದ್)**

**ಐ.ಎಂ. ವಿಠ್ಠಲಮೂರ್ತಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರ

ಕಛೇರಿ : ೨೨೨೫೫೪೮೨
೨೨೦೩೪೦೦೬
ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,

## ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್-ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ-ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ-ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ, ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ ಬಗೆಯ ಬಹುಮುಖೀ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು ಮೆರೆದಿರುವ, ಮೆರೆಯುತ್ತಿರುವ ಕನ್ನಡ ಭಾಷೆ-ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.

**(ಐ.ಎಂ. ವಿಠ್ಠಲಮೂರ್ತಿ)**

## ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬, ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ॥ ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು-ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು-ಕೊಡೆಯ ಕಾರ್ಯಕ್ರಮಗಳು ಹೆಚ್ಚು-ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿದೆ: (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ. ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು ಅನುವಾದ ಸಾಹಿತ್ಯ ಅಕಾಡೆಮಿ ತನ್ನ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ-ತಂತ್ರಜ್ಞಾನ, ವೈದ್ಯಕೀಯ, ಮಾನವಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲೀ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ, ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ-ತೆಲುಗು, ಕನ್ನಡ-ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ-ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳು ಜನಸಾಮಾನ್ಯರ ವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ-ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ ಮತ್ತು ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು ಹೊರತರುವುದು – ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿವೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ ಇತರ ಸಂಘ-ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ

ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ-ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್-ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ ಪಿ.ಎಸ್.ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ ಸಹಾಯ-ಸಹಕಾರ-ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯನ್ನುಳ್ಳವರೂ ಆದ ಇಂದಿನ ಕಾರ್ಯದರ್ಶಿಗಳಾದ ಶ್ರೀ ಐ.ಎಂ.ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರುಗಳಾಗಿದ್ದ ಶ್ರೀ ಕೆ.ಆರ್.ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ  ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಆರ್.ಎಲ್. ಸ್ಟೀವನ್‌ಸನ್ ಅವರ ಸುಪ್ರಸಿದ್ಧ ಕೃತಿ 'ಡಾ. ಜೆಕಿಲ್ ಅಂಡ್ ಹೈಡ್'. ಅವರ ಈ ಕೃತಿಯ ಆನಂದರ ಅನುವಾದವಾಗಿರುವ 'ಪುರುಷಾಮೃಗ'ವೂ ಸುವರ್ಣ ಕರ್ನಾಟಕ ಯೋಜನೆಯ ಪ್ರಸಿದ್ಧ ಅಲಭ್ಯ ಅನುವಾದಗಳ ಪ್ರಕಟಣೆ ಕಾರ್ಯಕ್ರಮದಲ್ಲಿ ಸೇರಿದೆ. ಆನಂದರ ಈ ರೂಪಾಂತರ ಸ್ವತಂತ್ರ ಕೃತಿ ಎಂಬಂತೆ ಓದಿಸಿಕೊಳ್ಳುತ್ತದೆ. ಕನ್ನಡದ ವಿಶಿಷ್ಟ ಕತೆಗಾರರೇ ಆಗಿದ್ದ ಆನಂದರ ಸೃಜನಶೀಲತೆ ಈ ರೂಪಾಂತರದಲ್ಲೂ ತನ್ನ ಮೋಹಕತೆಯನ್ನು ಮೆರೆದಿದೆ. ಈ ಕೃತಿಯ ಮರುಮುದ್ರಣಕ್ಕೆ ಅವಕಾಶಮಾಡಿಕೊಟ್ಟಿರುವ ಆನಂದರ ಪುತ್ರರಾದ ಶ್ರೀ ವಿಜಯ ಕುಮಾರ್ ಅವರಿಗೆ ಅಕಾಡೆಮಿಯ ಕೃತಜ್ಞತೆಗಳು ಸಲ್ಲುತ್ತವೆ.

ಅನುವಾದ ಅಕಾಡೆಮಿಯ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೆ ಹಾಗೂ ತಮ್ಮ ಅನೇಕ ಕಾರ್ಯಗಳ  ನಡುವೆಯೂ ಬಿಡುವು ಮಾಡಿಕೊಂಡು ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಡಾ. ಬಿ. ಎಸ್. ರಾಮಕೃಷ್ಣರಾವ್ ಮತ್ತು ಪ್ರೊ॥ ಎಚ್. ಎಸ್. ಹರಿಶಂಕರ್ ಅವರಿಗೆ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ  ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೆ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ


| | | |
|---|---|---|
| ಮುನ್ನುಡಿ | | v |
| ಶುಭಾಕಾಂಕ್ಷೆ | | vi |
| ಹೊಸ ಹೆಜ್ಜೆ | | vii |
| ಪ್ರಸ್ತಾವನೆ | | ix |
| ೧. | ಬಾಗಿಲ ಕಥೆ | ೧-೧೭ |
| ೨. | ಗುಪ್ತನಿಗಾಗಿ ತನಿಖೆ | ೧೮-೩೬ |
| ೩. | ಪೂರ್ಣಸ್ವಸ್ಥರಾಗಿದ್ದ ಡಾಕ್ಟರ್ ಐತಲ್ | ೩೭-೪೦ |

| | | |
|---|---|---|
| ೪. | ಹೊನ್ನಪ್ಪನವರ ಕೊಲೆ | ೪೦–೪೮ |
| ೫. | ಪತ್ರ ಪ್ರಸಂಗ | ೪೯–೬೦ |
| ೬. | ಡಾಕ್ಟರ್ ಜಗನ್ನಾಥ್ – ರವರ ವಿಚಿತ್ರಾನುಭವ | ೬೦–೬೯ |
| ೭. | ಕಿಟಕಿಯಲ್ಲಿ ಕಂಡ ಘಟನೆ | ೬೯–೭೩ |
| ೮. | ಕಡೆಯ ರಾತ್ರಿ | ೭೩–೯೫ |
| ೯. | ಡಾಕ್ಟರ್ ಜಗನ್ನಾಥ್–ರವರ ಲಿಖಿತ ಕಥನ | ೯೫–೧೦೭ |
| ೧೦. | ಹರಿವಿಠಲನಿಂದ ವಿದ್ಯಮಾನದ ಪೂರ್ಣಹೇಳಿಕೆ | ೧೦೭–೧೩೪ |


## ೧. ಬಾಗಿಲ ಕಥೆ

ಲೋಕನಗರ, ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಏರ್ಪಟ್ಟ ಹಿರ್ನಾಟಕ ರಾಷ್ಟ್ರದ ಮಹಾನಗರ ಹಾಗೂ ಅದರ ಮುಖ್ಯ ಪಟ್ಟಣ. ಕಳೆದ ಹತ್ತಾರು ವರ್ಷಗಳಲ್ಲಿ ನಗರವು ಎಲ್ಲ ದಿಕ್ಕಿನಲ್ಲೂ ಅದ್ಭುತವಾಗಿ ಹಬ್ಬಿ ಬೆಳೆದಿದೆ. ಈ ನಗರದ ಬಹು ಉತ್ತಮವಾದ ಹವಾಗುಣವೇ ಭಾರತದ ನಾನಾ ಕಡೆಗಳಿಂದ ಇಲ್ಲಿಗೆ ಜನರನ್ನು ಆಕರ್ಷಿಸಲು ಮುಖ್ಯ ಕಾರಣ. ಜೊತೆಗೆ, ಈ ನಗರದ ವ್ಯಾಪಾರವೂ, ದೊಡ್ಡ ದೊಡ್ಡ ಕೈಗಾರಿಕೆಗಳೂ ನಗರದ ಬೆಳವಣಿಗೆಗೆ ಪ್ರೋತ್ಸಾಹ ಕೊಟ್ಟಿವೆ. ನಗರದ ಎಲ್ಲ ದಿಕ್ಕುಗಳಿಂದ ರಸ್ತೆಯ ಬಸ್ಸುಗಳಲ್ಲೂ, ಆರು ರೈಲ್ವೇ ಮಾರ್ಗಗಳಲ್ಲೂ ಈ ನಗರಕ್ಕೆ ನಿತ್ಯ ವ್ಯಾಪಾರ—ವ್ಯವಹಾರ—ವಿಹಾರಾರ್ಥವಾಗಿ ಹೊರಗಿನಿಂದ ಬಂದು ಹೋಗುವ ಜನ ಸಂಖ್ಯೆಯೇ ಒಂದೂವರೆ—ಎರಡು ಲಕ್ಷದಷ್ಟಾಗುತ್ತದೆ. ನಗರದ ಜನಸಂಖ್ಯೆ ಎಂಟು ಲಕ್ಷವನ್ನು ಮುಟ್ಟಿದೆ.

ಲೋಕನಗರ ಭಾರತದಲ್ಲೇ ಬಹು ಸುಂದರವಾದ ಪಟ್ಟಣವೆಂದು ಖ್ಯಾತಿಗಳಿಸಿದೆ. ಇದರ ವಿಶಾಲವೂ ಚೊಕ್ಕಟವೂ ಆದ ಬೀದಿಗಳನ್ನೂ, ಸುಂದರ ಭವ್ಯಭವನಗಳನ್ನೂ, ರಮಣೀಯವಾದ ಉದ್ಯಾನವನಗಳನ್ನೂ, ಸಂಜೆಯಾಗುತ್ತಲೆ ಬೀದಿಗಳನ್ನು ಬೆಳಗುವ ವಿದ್ಯುತ್ ದೀಪದ ಸಾಲುಗಳನ್ನೂ ನೋಡಿ, ಮರುಳಾಗಿ ಮೆಚ್ಚಿ ತಲೆದೂಗದ ಪ್ರವಾಸಿಗರೇ ಇಲ್ಲವೆನ್ನಬಹುದು.

ಲೋಕನಗರ ಹಿರ್ನಾಟಕದಲ್ಲೂ, ಭಾರತದಲ್ಲೂ ಹೆಸರುಗಳಿಸಿದಂತೆ, ಲೋಕನಗರ ದಲ್ಲಿ ಹೆಸರಾದ ವ್ಯಕ್ತಿ ಎಂದರೆ, ಬ್ಯಾರಿಸ್ಟರ್ ಶಂಕರರಾಯರು. ಅವರ ಧರ್ಮಬುದ್ಧಿ, ಮಾನವನ ದೌರ್ಬಲ್ಯಗಳ ವಿಷಯದಲ್ಲಿ ಕನಿಕರ–ಸಹಾನುಭೂತಿ, ಸಣ್ಣದು–ದೊಡ್ಡದು ಎಂಬ ಭೇದಬುದ್ಧಿಯಿಲ್ಲದ ಸಮದರ್ಶಿತ್ವ, ಹಿಡಿದ ಕೆಲಸದಲ್ಲಿ ಪೂರ್ಣ ಶ್ರದ್ಧೆ—ಈ ಗುಣಗಳು ಅವರು ಬಹು ಜನಪ್ರಿಯರಾಗುವುದಕ್ಕೆ ಕಾರಣಗಳಾಗಿದ್ದವು. ಲಾಯರು, ಡಾಕ್ಟರು, ಜನಪ್ರಿಯರಾದರೆಂದರೆ, ಅವರ ವೃತ್ತಿ ಆಲದ ಮರದ ಹಾಗೆ ಬೆಳೆಯುತ್ತದೆ. ಶಂಕರರಾಯರ ಲಾಯರೀ ವೃತ್ತಿ ಬಹು ದೊಡ್ಡದಾಗಿತ್ತು. ಅವರ ಕೈಕೆಳಗೆ, ವೃತ್ತಿಯ ವ್ಯವಹಾರ ಕಲಿಯುವ ತರುಣ ಲಾಯರುಗಳು, ಮೂರು ನಾಲ್ಕು ಮಂದಿ ಯಾವಾಗಲೂ ಇದ್ದೇ ಇರುತ್ತಿದ್ದರು. ಶಂಕರರಾಯರಿಗೆ ತಿಂಗಳಿಗೆ ಮೂರು ನಾಲ್ಕು ಸಾವಿರ ರೂಪಾಯಿಗಳ ಸಂಪಾದನೆ ಇದೆಯೆಂದು ಅವರ ಹತ್ತಿರದ ಜನ ಹೇಳುತ್ತಿದ್ದರು. ನಗರದ ಭಾರಿ ಭಾರಿ ಧನಿಕರ ಬಡಾವಣೆಯಾಗಿದ್ದ ಶ್ರೀಪುರಂನಲ್ಲಿ, ಬಹು ವಿಸ್ತಾರವಾದ ಕಾಂಪೌಂಡಿನಲ್ಲಿ ಚಿಕ್ಕ ಅರಮನೆಯಂತಿದ್ದ ಅವರ ಮನೆಯೂ, ಅದರ ಸುತ್ತಣ ಸೊಗಸಾದ ಉದ್ಯಾನವೂ, ಕಾಂಪೌಂಡಿನ ಒಂದು ಪಕ್ಕದಲ್ಲಿ ಪ್ರತ್ಯೇಕವಾಗಿದ್ದ ಅವರ ಆಫೀಸು ಕಟ್ಟಡವೂ, ಅವರ ಕ್ಯಾಡಿಲಾಕ್ ಕಾರೂ, ಕೋಚ್‌ಗಾಡಿಯೂ, ಮನೆಯ ಆಳು ಕಾಳುಗಳೂ, ಅವರ ವರಮಾನವನ್ನು ನಿಜವೆನ್ನಿಸುತ್ತಿದ್ದವು.

ಬ್ಯಾರಿಸ್ಟರ್ ಶಂಕರರಾಯರಿಗೆ ಈ ಕಥೆಯ ಸಮಯದಲ್ಲಿ, ಸುಮಾರು ಐವತ್ತು ಮೂರು–ಐವತ್ತನಾಲ್ಕು ವರ್ಷ ವಯಸ್ಸು. ವ್ಯಕ್ತಿಯ ಆಕೃತಿ ಉನ್ನತ, ಧೀರ, ಗಂಭೀರ. ತಲೆಯ ಕೂದಲು ಅರೆವಾಸಿ ನರೆತಿತ್ತು. ಅವರ ನೀಳವಾದ ಮೊನಚಾದ ಮೂಗೂ, ಹುರಿಮೀಸೆಯೂ, ಅವರ ತಿಳಿಗೆಂಪಿನ ಅಗಲವಾದ ಮುಖಕ್ಕೆಲ್ಲ ಅಲಂಕಾರಪ್ರಾಯ ವಾಗಿದ್ದವು. ಸದಾ ಗಂಭೀರವಾಗಿ ಬಿಗಿಮುದ್ರೆಯಿಂದ ಕೂಡಿದ್ದ ಆ ಮುಖ ಎಂದೂ

ಮುಗುಳ್ನಗೆಯಿಂದ ಬೆಳಗಿರಲಿಲ್ಲ. ಲಾಯರು—ಎಂದ ಕೂಡಲೆ ತಡೆಬಡೆಯಿಲ್ಲದ ವಾಚಾಳತ್ವ ಮನಸ್ಸಿಗೆ ಬರುವುದು ಸಹಜ. ಆದರೆ ಬ್ಯಾರಿಸ್ಟರ್ ಶಂಕರರಾಯರ ಸ್ವಭಾವ ಈ ಕಲ್ಪನೆಗೆ ತೀರ ವಿರೋಧವಾಗಿತ್ತು. ಇವರು ಬಹು ಮಿತಭಾಷಿಗಳಾಗಿದ್ದರು. ನಾಲ್ಕು ಜನರ ಗೋಷ್ಠಿಯಲ್ಲಿ ಅಪರೂಪಕ್ಕೆ ಇವರು ಆಡುತ್ತಿದ್ದ ಒಂದೋ ಎರಡೋ ಮಾತುಗಳು ಸಮಯೋಚಿತವಾಗಿದ್ದರೂ, ಕೇಳಿದರೆ, ಮೈಮೇಲೆ ಮಂಜುಗಡ್ಡೆ ಬಿದ್ದ ಹಾಗಾಗುತ್ತಿತ್ತು ! ಮಾತನಾಡಲೇಬೇಕಾದ ಸಂದರ್ಭ ಬಂದರೆ, ಆಗ ತಡೆತಡೆದು, ಭಾವೋದ್ರೇಕರಹಿತವಾಗಿ, ಆಡುತ್ತಿದ್ದರು. ಮಾತನಾಡುವ ರೀತಿಯಲ್ಲಿ, ಅತಿ ದಾಕ್ಷಿಣ್ಯ, ಮಿತಿಮೀರಿದ ಸಂಕೋಚ ಸ್ವಭಾವ ಚೆನ್ನಾಗಿ ಪ್ರಕಟವಾಗುತ್ತಿದ್ದವು. ಈ ಕಾರಣಗಳಿಂದ, ತೆಳ್ಳಗೆ ಉನ್ನತವಾಗಿದ್ದ ಈ ವ್ಯಕ್ತಿಯ ಒಟ್ಟು ಸ್ವರೂಪ, ಧೂಳು ಕವಿದ ಚಿತ್ರದಂತೆ ಮಂಕಾಗಿದ್ದು, ಸಾಮಾನ್ಯ ನೋಟಕ್ಕೆ ನಿರುತ್ಸಾಹವಾಗಿತ್ತು. ಇಷ್ಟಾದರೂ ಈ ಮನುಷ್ಯ, ಇವರನ್ನು ಬಲ್ಲ ಮಂದಿಗೆ ಹೇಗೋ ಏನೋ, ಬಹು ಆದರಣೀಯರಾಗಿದ್ದರು.

ಬ್ಯಾರಿಸ್ಟರಾಗಲು ಲಂಡನ್ನಿಗೆ ಹೋಗಿದ್ದಾಗ ರಾಯರಿಗೆ ಕುಡಿಯುವ ಅಭ್ಯಾಸವಾಯಿತು. ಆದರೆ, ಅವರು ಕುಡಿಯುತ್ತಿದ್ದ ರೀತಿ, ರಸಿಕ ರಸಾಸ್ವಾದನೆ ಮಾಡುವಂತೆ ; ಹೊಟ್ಟೆಬಾಕ ಮಿತಿಮೀರಿ ಗಬಗಬ ತಿನ್ನುವಂತೆ ಅಲ್ಲ. ಅಂದರೆ, ಅವರು ಕುಡಿಯುತ್ತಿದ್ದರೂ, ಕುಡುಕತನದ ದಾಸರಾಗಿರಲಿಲ್ಲ. ಆತ್ಮೀಯ ಮಿತ್ರರ ಮಿತವಾದ ಗೋಷ್ಠಿ ಎಂದರೆ, ಶಂಕರರಾಯರಿಗೆ ಬಹು ಪ್ರಿಯವಾಗಿತ್ತು. ಅವರೊಡನೆ ಸಂತೋಷವಾಗಿ ಕಾಲ ಕಳೆಯುತ್ತಿದ್ದಾಗ, ವಿನಿಯೋಗವಾದ ವೈನೋ, ವ್ಹಿಸ್ಕಿಯೋ, ಬ್ರಾಂದಿಯೋ, ಅವರ ಅಭಿರುಚಿಗೆ ತಕ್ಕುದಾಗಿದ್ದರೆ, ಆಗ ಬ್ಯಾರಿಸ್ಟರ ಕಣ್ಣುಗಳು ತೇಜೋಮಯವಾಗುತ್ತಿದ್ದವು. ಅವುಗಳಲ್ಲಿ ಏನೋ ಒಂದು ಬಗೆಯ ಅಪೂರ್ವವಾದ ಉಚ್ಚ ಮಾನವೀಯ ಭಾವ ಪ್ರಕಟವಾಗಿ, ಎಲ್ಲರನ್ನೂ ಬಹು ಸೌಜನ್ಯದಿಂದ ಆಹ್ವಾನಿಸುವಂತೆ ಭಾಸವಾಗುತ್ತಿತ್ತು. ಮಾತಿಗೆ ಇಳಿಯದೆ ದೃಷ್ಟಿಯಲ್ಲಿ ಮಾತ್ರ ಇರುತ್ತಿದ್ದ ಈ ಭಾವ, ಅವರ ಭೋಜನಾನಂತರದ ಮುಖದಲ್ಲಿ ಮೌನವಾಗಿ, ಸಾಂಕೇತಿಕವಾಗಿ ಇರುತ್ತಿದ್ದರೂ, ಅವರ ನಿತ್ಯಜೀವನದ ವೃತ್ತಿಯ ನಾನಾ ಕಾರ್ಯ ಕಲಾಪಗಳಲ್ಲಿ, ಅನೇಕ ವೇಳೆ, ಬಹು ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು.

ಶಂಕರರಾಯರು ತಮ್ಮ ಮಟ್ಟಿಗೆ, ತಮ್ಮ ಜೀವನದಲ್ಲಿ ಅತಿ ಕಠಿಣವೂ ನಿಷ್ಠುರವೂ ಆದ ಆತ್ಮಸಂಯಮವನ್ನು ಅಭ್ಯಾಸಮಾಡಿದ್ದರು. ಇವರು, ತಮ್ಮ ಮಾದಕ ಪಾನೀಯಗಳ ಚಟವನ್ನು ದಮನಮಾಡುವ ಉದ್ದೇಶದಿಂದ, ಒಬ್ಬರೇ ಇದ್ದಾಗ, ಅತಿ ತೀಕ್ಷ್ಣವಾದ ಜಿನ್–ಅನ್ನು ಕುಡಿಯುತ್ತಿದ್ದರು. ಇವರಿಗೆ ನಾಟಕ, ಸಿನಿಮಾ, ಸಂಗೀತ, ನೃತ್ಯ ಎಂದರೆ ಬಹಳ ಖಯಾಲಿ. ಆದರೂ ಇವರು, ಕಳೆದ ಇಪ್ಪತ್ತು ವರ್ಷಗಳಿಂದ, ಒಂದು ಸಲವಾದರೂ ಥಿಯೇಟರ್ ಒಂದನ್ನು ಪ್ರವೇಶಿಸಿರಲಿಲ್ಲ ! ತಮ್ಮ ಸ್ವಂತ ಜೀವನ ಪಥದಲ್ಲಿ ಶಂಕರರಾಯರು ಇಷ್ಟು ಸಂಯಮಿಗಳಾಗಿ ಕಟ್ಟುನಿಟ್ಟಾಗಿದ್ದರೂ, ಅವರು ಇತರರ ವಿಷಯದಲ್ಲಿ ತೋರುತ್ತಿದ್ದ ಔದಾರ್ಯ, ಸಹನೆ, ಸಹಾನುಭೂತಿಗಳು ಸ್ತೋತ್ರಾರ್ಹವಾಗಿ ದ್ದವು. ಅನೇಕ ವೇಳೆ, ಇತರರ ಹಲವು ಅಕಾರ್ಯಗಳಲ್ಲಿ ವ್ಯಕ್ತವಾಗುತ್ತಿದ್ದ ಶಕ್ತಿ, ಹುಮ್ಮಸ್ಸು, ಉದ್ರೇಕಗಳ ಅತಿರೇಕವನ್ನು ಕಂಡು, ಹೆಚ್ಚು ಕಡಿಮೆ ಅಸೂಯೆಯಿಂದ, ಆಶ್ಚರ್ಯಪಡುತ್ತಿದ್ದರು. ಅಂತು, ಅಕೃತ್ಯ ಎಷ್ಟೇ ಮಿತಿಮೀರಿದ್ದರೂ, ಅವರ ಮನಸ್ಸು, ಅಕಾರ್ಯ ಮಾಡಿದ್ದವರನ್ನು ಆಕ್ಷೇಪಿಸುವುದಕ್ಕೆ ಬದಲಾಗಿ, ಅವರಿಗೆ ಸಹಾಯ ಮಾಡುವುದರ ಕಡೆಗೇ ಹೆಚ್ಚಾಗಿ ಬಾಗುತ್ತಿತ್ತು.

ಬ್ಯಾರಿಸ್ಟರು, ಒಮ್ಮೊಮ್ಮೆ, ವಿಲಕ್ಷಣವಾದ ನಿರ್ಲಿಪ್ತ ಮನೋಭಾವದಿಂದ, "ನೋಡಿ, ಕೇನ್ ಮಹಾಶಯನ ಸ್ವಾಭಿಮತವಾದವು ನನ್ನ ಮನಸ್ಸಿಗೆ ಬಹು ಮೆಚ್ಚಿಕೆಯಾಗಿದೆ. ಯಾರಾದರೂ ಒಬ್ಬ, ಅವನು ನನ್ನ ಸಹೋದರನೇ ಆಗಿದ್ದರೂ, ದುರ್ಮಾರ್ಗಿಯಾಗಲು ಬದ್ಧಕಂಕಣನಾದರೆ, ನಿರ್ವ್ಯೋಚನೆಯಿಂದ, ಅವನ ಹಾದಿ ಅವನಿಗೆ–ಎಂದು ಬಿಟ್ಟು ಬಿಡುತ್ತೇನೆ" ಎಂಬುದಾಗಿ ಹೇಳುತ್ತಿದ್ದರು.

ಶಂಕರರಾಯರ ಮನೋಧರ್ಮ ಈ ರೀತಿಯಾಗಿದ್ದುದರಿಂದ, ದುರ್ಮಾರ್ಗ ಪ್ರವರ್ತಕರಾಗಿ ಕಷ್ಟಕ್ಕೆ ಸಿಕ್ಕಿದ ಮಂದಿ, ಎಲ್ಲರೂ ಕೈಬಿಟ್ಟ ಮೇಲೆ, ಕೊನೆಯದಾಗಿ ಇವರ ಬಳಿಗೆ ಬರುತ್ತಿದ್ದರು. ಅಕೃತ್ಯಕಾರರಿಗೂ ಪಾಪಿಗಳಿಗೂ ಕಟ್ಟಕಡೆಯ ಆಶ್ರಯದಾತರಾಗಿ, ಅವರನ್ನು ಉದ್ಧಾರ ಮಾಡುವ ಅವಕಾಶ ಶಂಕರರಾಯರಿಗೆ ಪದೇ ಪದೇ ಲಭಿಸುತ್ತಿತ್ತು. ಅಂತಹ ಮಂದಿ, ವ್ಯವಹಾರಕ್ಕಾಗಿ ಇವರ ಬಳಿಗೆ ಬಂದು ಹೋಗುತ್ತ, ಇವರ ಸಂಪರ್ಕವನ್ನು ಇಟ್ಟುಕೊಂಡಿರುವ ತನಕ, ಶಂಕರರಾಯರು, ಆ ಜನರ ವಿಷಯವಾಗಿ ತಮ್ಮ ನಡತೆಯಲ್ಲಿ ಯಾವ ವ್ಯತ್ಯಾಸವನ್ನೂ ತೋರಿಸಿಕೊಳ್ಳದೆ ವರ್ತಿಸುತ್ತಿದ್ದರು. ತಮ್ಮ ಗಮನಕ್ಕೆ ಬಂದ ವಿಷಯ ಎಷ್ಟೇ ಅಹಿತವಾಗಿರಲಿ, ಅಸಹನೀಯವಾಗಿರಲಿ, ಅದರ ಪ್ರಭಾವಕ್ಕೊಳಗಾಗದೆ ಇರುವುದೂ, ಉದ್ವೇಗಾತಿರೇಕಕ್ಕೆ ಎಡೆಗೊಡದೆ ಇರುವುದೂ, ಅವರಿಗೆ ಎರಡನೇ ಹುಟ್ಟುಗುಣವಾಗಿದ್ದುದರಿಂದ, ಶಂಕರರಾಯರಿಗೆ ಈ ರೀತಿಯ ವರ್ತನೆ ಸುಲಭ ಸಾಧ್ಯವಾಗಿತ್ತು.

ಶಂಕರರಾಯರ ಕೆಳೆತನದ ಬಾಂಧವ್ಯಗಳು ಕೂಡ ಇದೇ ತರದ ನಿರ್ಲಿಪ್ತತೆ, ಹೃದಯ ವೈಶಾಲ್ಯ, ನಿಷ್ಪಕ್ಷಪಾತಗಳ ಆಧಾರದ ಮೇಲೆ ನಿಂತಿದ್ದವು. ಯಾವಾಗಲೋ, ಹೇಗೋ ಏನೋ, ಪ್ರಾರಂಭವಾಗಿ ಸ್ವಯಂಸಿದ್ಧವಾದ ಮಿತ್ರಗೋಷ್ಠಿಯ ಸಹವಾಸ ಸಂಪರ್ಕಗಳನ್ನು, ಬಹುಕಾಲದ್ದು—ಎಂಬ ಒಂದು ಕಾರಣದಿಂದಲೇ, ತೀವ್ರ ಪರೀಕ್ಷೆಗೊಳಪಡಿಸದೆ ಒಪ್ಪಿಕೊಂಡುಬಿಡುವುದು, ನಿಗರ್ವಿಗಳಾಗಿದ್ದ ಶಂಕರರಾಯರ ಜೀವನ ಸೂತ್ರವಾಗಿತ್ತು. ಅವರ ಹತ್ತಿರದ ಸ್ನೇಹಿತರೆಲ್ಲ ಹೆಚ್ಚುಕಡಿಮೆ ಅವರ ಸ್ವಭಾವದವರೇ ಆಗಿದ್ದರು. ಬಹುವರ್ಷಗಳ ಬೆಳವಣಿಗೆಯ ಫಲವಾಗಿ, ದೊಡ್ಡದಾಗಿ ಹರಡಿ ವಿಸ್ತರಿಸಿದ ಆಲದ ಮರದಂತೆ ಇದ್ದ ಅವರ ಕೆಳೆತನದ ಬಾಂಧವ್ಯಗಳಲ್ಲಿ ಹೆಚ್ಚಿನ ಉದ್ದೇಶ–ಆಯ್ಕೆಗಳೇನೂ ಇರಲಿಲ್ಲ.

ಬಹುಶಃ ಇದೇ ಕಾರಣದಿಂದಲೇ ಏನೋ, ಶ್ರೀಯುತ ಶಂಕರರಾಯರಿಗೂ, ಅವರ ದೂರದ ಬಂಧುವಾಗಿದ್ದ ಲಕ್ಷ್ಮೀಪತಯ್ಯನವರಿಗೂ ನಿಕಟವಾದ ಸ್ನೇಹದ ಗಂಟು ಬಿದ್ದಿತ್ತು. ಲಕ್ಷ್ಮೀಪತಯ್ಯನವರು ಶಂಕರರಾಯರಿಗಿಂತ ವಯಸ್ಸಿನಲ್ಲಿ ಎರಡು ಮೂರು ವರ್ಷ ಚಿಕ್ಕವರಾಗಿದ್ದರು. ಅವರಿಗೆ ನಗರದಲ್ಲಿ ಹಲವು ಮನೆ–ಮಠಗಳ ಆಸ್ತಿಯೂ, ಹಳ್ಳಿಯಲ್ಲಿ ಗದ್ದೆ, ಹೊಲ, ತೋಟಗಳೂ ಬೇಕಾದಹಾಗಿದ್ದವು. ಅವುಗಳ ಉತ್ಪತ್ತಿಯಿಂದ, ಬಹು ಜಾಗರೂಕರಾಗಿ ಲೇವಾದೇವಿ ನಡೆಸುತ್ತ, ತಕ್ಕಮಟ್ಟಿಗೆ ದೊಡ್ಡ ಪ್ರಮಾಣದ ನಗದಿನ ಒಡೆಯರೂ ಆಗಿದ್ದು, ಲೋಕನಗರದ ಹಲವು ಮಂದಿಗೆ ಪರಿಚಿತರಾದ ಗಣ್ಯವ್ಯಕ್ತಿಯಾಗಿದ್ದರು.

ಶಂಕರರಾಯರ ಮತ್ತು ಲಕ್ಷ್ಮೀಪತಯ್ಯನವರ ಸ್ನೇಹಬಾಂಧವ್ಯ, ಇವರಿಬ್ಬರನ್ನೂ ತಿಳಿದಿದ್ದ ಅನೇಕರಿಗೆ, ಒಡೆಯಲಾರದ ಒಗಟೆಯಾಗಿತ್ತು. ಇವರಿಬ್ಬರಲ್ಲಿ ಪರಸ್ಪರ ಆಕರ್ಷಣೀಯವಾದದ್ದು ಏನಿರಬಹುದು ?—ಅಥವಾ, ಇವರಿಬ್ಬರಿಗೂ ಸಮಾನವಾದ ವಿಷಯ ಏನಿದ್ದೀತು ?—ಎಂದು, ಅವರೆಲ್ಲ ಆಶ್ಚರ್ಯಪಡುತ್ತಿದ್ದರು.

ಬ್ಯಾರಿಸ್ಟರೂ, ಲಕ್ಷ್ಮೀಪತಯ್ಯನವರೂ ಪ್ರತಿ ಭಾನುವಾರ, ಒಟ್ಟಿಗೆ ಕಲೆತು, ಕಾಲುನಡೆಯಲ್ಲಿ, ಮನಸ್ಸು ಎಳೆದ ಕಡೆ ನಗರದಲ್ಲಿ ಸಂಚರಿಸುವುದು ವಾಡಿಕೆಯಾಗಿತ್ತು ; ಮತ್ತು ಇವರ ಈ ವಾಡಿಕೆ ಅನೇಕರಿಗೆ ತಿಳಿದ ವಿಷಯವಾಗಿತ್ತು. ಈ ಮಿತ್ರರಿಬ್ಬರ, ವಾರಾಂತ್ಯದ ಈ ಸಹಸಂಚಾರ ಕಾರ್ಯಕ್ರಮದ ಆಚರಣೆಯಲ್ಲಿ, ಒಂದು ವೈಚಿತ್ರ್ಯವಿತ್ತು. ಭಾನುವಾರದ ಬಿಡುವಿನಲ್ಲಿ ಇವರಿಬ್ಬರೂ, ಕಾಲದ ಗಣನೆಯಿಲ್ಲದೆ, ಮೈಲಿಗಟ್ಟಲೆ, ಬೀದಿ ಬೀದಿಗಳಲ್ಲಿ ಸುತ್ತಾಡುತ್ತಿದ್ದರು. ಆದರೂ, ಹುಟ್ಟುಮೂಕರೇನೋ ಅನ್ನುವಂತೆ, ಪರಸ್ಪರ ಒಂದು ಮಾತೂ ಆಡದೆ, ಮಂಕುಬಡಿದವರ ಹಾಗೆ ಕಾಣುತ್ತಿದ್ದರು ! ಇಬ್ಬರೂ, ಏನೋ ಅಸಹನೀಯವಾದ, ಅಗೋಚರವಾದ, ಕಟ್ಟಿನಿಂದ ಬಂಧಿತರಾಗಿದ್ದಂತೆ ತೋರುತ್ತ, ಬೀದಿಯಲ್ಲಿ ಎದುರಿಗೆ ಬೇರೆ ಯಾರಾದರೂ ಸ್ನೇಹಿತರನ್ನು ಕಂಡರೆ ಸಾಕು, ಬಂಧವಿಮೋಚನೆಯ ಆಸ್ಪದ ಸಿಕ್ಕಿತೆಂದು, ಬಹುಸಂತೋಷದಿಂದ ಅವರನ್ನು ಕೂಗಿ ಕರೆಯುತ್ತಿದ್ದರು ! ಬಹು ಹತ್ತಿರದವರಂತಿದ್ದ ಈ ವ್ಯಕ್ತಿಗಳಿಬ್ಬರ ಈ ವಿಚಿತ್ರ ವರ್ತನೆಯನ್ನು ಎಷ್ಟೋ ಬಾರಿ ಗಮನಿಸಿದ್ದ ಇವರ ಪರಿಚಯಸ್ಥರು, ಇದನ್ನು ಕುರಿತು ಆಡಿಕೊಂಡು ಹಾಸ್ಯ ಮಾಡುತ್ತಿದ್ದರು. ಆದರೆ, ಯಾರು ಏನೇ ಆಡಿಕೊಳ್ಳಲಿ, ಎಷ್ಟೇ ಹಾಸ್ಯ ಮಾಡಲಿ, ಈ ಇಬ್ಬರು ಗೆಳೆಯರು ಮಾತ್ರ, ತಮ್ಮ ಭಾನುವಾರದ ಸಹಸಂಚಾರದ ಕಾರ್ಯಕ್ರಮಕ್ಕೆ ಬಹಳ ಬೆಲೆ ಕಟ್ಟಿದ್ದರು. ವಾರದ ಉಳಿದ ದಿನಗಳಲ್ಲಿ ಇವರಿಬ್ಬರ ಕಾರ್ಯಕ್ರಮಗಳು ಬೇರೆಬೇರೆಯಾಗಿರುತ್ತಿದ್ದರೂ, ಭಾನುವಾರದ ದಿನ ಮಾತ್ರ ಇಬ್ಬರಿಗೂ ಒಂದೇ ಆಗುತ್ತಿದ್ದ ಈ ಕಾರ್ಯಕ್ರಮ, ಇಬ್ಬರ ಗಣನೆಯಲ್ಲೂ ಬಹು ಮುಖ್ಯವಾಗಿತ್ತು. ಈ ಭಾನುವಾರದ ಕಾರ್ಯಕ್ರಮದ ವಿಲಕ್ಷಣವಾದ ಆಚರಣೆಯಲ್ಲಿ ಇವರಿಗೆ ಏನು ಸುಖ ಕಾಣುತ್ತಿತ್ತೋ ಅದನ್ನು, ನಿರಾತಂಕವಾಗಿ ಅನುಭವಿಸುವುದಕ್ಕೋಸ್ಕರ, ಇವರು ಇತರ ಮನೋರಂಜನೆಗಳನ್ನು ಬದಿಗೊತ್ತಿ, ಕಡೆಗೆ, ತಮ್ಮ ವ್ಯವಹಾರದ ಕರೆಯನ್ನೂ ಕಿವಿಗೆ ಹಾಕಿಕೊಳ್ಳದೆ, ತಮ್ಮ ವಿಚಿತ್ರ ಸಂಚಾರವನ್ನು ಒಂದು ವ್ರತದಂತೆ ಬಹು ನಿಷ್ಠೆಯಿಂದ ಪಾಲಿಸುತ್ತಿದ್ದರು.

ಹೀಗೆ ಒಂದು ಭಾನುವಾರ ಬೆಳಿಗ್ಗೆ, ಶಂಕರರಾಯರೂ ಲಕ್ಷ್ಮೀಪತಯ್ಯನವರೂ ಕಲೆತು, ಲೋಕನಗರದ ಬಹು ಪುರಾತನವಾದ ಹಾಗೂ ಕೇಂದ್ರವಾದ ಭಾಗದ ಕಡೆ ಸಂಚಾರ ಹೊರಟರು. ಇಬ್ಬರೂ ಸಾಮಾನ್ಯವಾಗಿ ಐರೋಪ್ಯ ಶೈಲಿಯ ಸೂಟು ಧರಿಸುವವರಾಗಿದ್ದರೂ, ಭಾನುವಾರದ ಸಂಚಾರದ ಸಮಯದಲ್ಲಿ ಮಾತ್ರ, ಇವರ ಪೋಷಾಕು ಬೇರೆಯಾಗಿರುತ್ತಿತ್ತು. ಪಂಚಗಚ್ಚೆ ಹಾಕಿ ಉಟ್ಟ ರೇಷ್ಮೆ ಅಂಚಿನ ಪಂಚೆ, ಬಿಳೀ ಸಿಲ್ಕಿನ ಜುಬ್ಬ, ಜರತಾರಿ ಅಂಚಿನ ಉತ್ತರೀಯ, ಕಾಲುಗಳಲ್ಲಿ ಎಕ್ಕಡಗಳು, ಕೈಯಲ್ಲಿ ಧಡೂತಿಯಾದ ವಾಕಿಂಗ್ ಸ್ಟಿಕ್ಕು—ಇಷ್ಟು ಇಬ್ಬರಿಗೂ ಸಾಮಾನ್ಯವಾಗಿರುತ್ತಿದ್ದವು. ಶಂಕರರಾಯರು, ಕಣ್ಣುಗಳಿಗೆ ರಕ್ಷಣೆಯಾಗಿ, ಕಪ್ಪು ಕನ್ನಡಕವನ್ನು ಹಾಕಿಕೊಳ್ಳುತ್ತಿದ್ದರು. ಲಕ್ಷ್ಮೀಪತಯ್ಯನವರದ್ದು ಸ್ವಲ್ಪ ಬಟ್ಟದಲೆಯಾಗಿದ್ದುದರಿಂದ, ಅವರು ಒಂದು ಬಿಳೀ ಟೋಪಿಯನ್ನು ಧರಿಸುತ್ತಿದ್ದರು.

ಗೊತ್ತುಗುರಿಯಿಲ್ಲದೆ ನಡೆಯುತ್ತ ನಡೆಯುತ್ತ, ಇಬ್ಬರೂ ಆ ಮಹಾನಗರದ ಅತಿ ದಟ್ಟವಾದ, ಚಕ್ರವ್ಯೂಹದ ಕೋಟೆಯಂತಿದ್ದ ಕೇಂದ್ರ ಭಾಗವನ್ನು ತಲುಪಿ, ಅಲ್ಲಿ ದೊಡ್ಡ ಬೀದಿಯೊಂದನ್ನು ಹಾಯ್ದು, ಕಿರಿದಾದ

ಓಣಿಯಂತಿದ್ದ ಒಂದು ಅಡ್ಡ ಬೀದಿಯನ್ನು ಪ್ರವೇಶಿಸಿದರು. ಈ ಬೀದಿಯಲ್ಲಿ ಚಿಕ್ಕ ಚಿಕ್ಕ ಚಿಲ್ಲರೆ ವ್ಯಾಪಾರದ ಅಂಗಡಿಗಳೇ ಹೆಚ್ಚಾಗಿದ್ದವು. ಉಳಿದ ದಿನಗಳಲ್ಲಿ ಜನರಿಂದ ಕಿಕ್ಕಿರಿದು ಗಿಜಿಗಿಜಿ ಅನ್ನುತ್ತಿದ್ದ ಈ ಬೀದಿಯಲ್ಲಿ ಭಾನುವಾರದ ಪ್ರಯುಕ್ತ ಅಂಗಡಿಗಳನ್ನು ಮುಚ್ಚಿದ್ದ ಕಾರಣ, ಜನ ಸಂಚಾರ–ಗೊಂದಲ ಇರಲಿಲ್ಲ. ಈ ಬೀದಿಯಲ್ಲಿ ಪೂರ್ವಾಭಿಮುಖವಾಗಿ ಹೋಗುತ್ತ, ಎಡಗಡೆ ಸಾಲಿನ ಪ್ರಾರಂಭದ ಮೂಲೆಯಿಂದ ಎರಡು ಮನೆಗಳನ್ನು ದಾಟಿದ ಮೇಲೆ, ಒಂದು ಗೇಟು ಇರುವ ಕಾಂಪೌಂಡು ಸಿಕ್ಕುತ್ತದೆ. ಈ ಗೇಟು ಅಂಗಳ ಒಂದಕ್ಕೆ ಪ್ರವೇಶದ್ವಾರ. ಸಾಲಿನ ಐಕ್ಯತೆಗೆ ಭಂಗವನ್ನುಂಟುಮಾಡಿದ್ದ ಕಾಂಪೌಂಡು ಗೋಡೆಯ ಗೇಟಿಗೆ ಹತ್ತಿರದಲ್ಲೆ, ಒಂದು ಪುರಾತನವಾದ ಭಾರಿ ಕಟ್ಟಡ ಎದ್ದುನಿಂತು, ಅದರ ಕರುಮಾಡು (Gable) ಸ್ವಲ್ಪಮಟ್ಟಿಗೆ ಬೀದಿಯ ಮೇಲೆ ಚಾಚಿಕೊಂಡಿತ್ತು. ಕಟ್ಟಡ ಎರಡು ಅಂತಸ್ತಿನದಾಗಿತ್ತು. ಬೀದಿಯಿಂದ ಕಾಣುವ ಕಟ್ಟಡದ ಭಾಗದಲ್ಲಿ ಎಲ್ಲೂ ಕಿಟಕಿಗಳಿರಲಿಲ್ಲ. ಕೆಳ–ಅಂದರೆ, ಭೂಮಟ್ಟದ ಅಂತಸ್ತಿನಲ್ಲಿ, ಒಂದು ಹಳೇ ಕಾಲದ ಮಾದರಿಯ ಬಾಗಿಲಿತ್ತು. ಈ ಬಾಗಿಲಿನ ಚೌಕಟ್ಟೂ, ಕದವೂ, ನಕಾಸೆ ಕೆತ್ತನೆಯಿಂದ ಕೂಡಿದ್ದವು. ಬೋಳು ಹಣೆಯಂತೆ ತೋರುತ್ತಿದ್ದ ತ್ರಿಕೋಣಾಕಾರದ ಕರುಮಾಡಿನ ಗೋಡೆ, ಬಹು ಕಾಲದಿಂದ ಬಿಸಿಲು–ಮಳೆ–ಗಾಳಿಗಳ ಹೊಡೆತಕ್ಕೆ ಸಿಕ್ಕು, ಕಲೆಕಲೆಯಾಗಿ ವಿವರ್ಣವಾಗಿತ್ತು. ಹೊರನೋಟಕ್ಕೆ, ಮನೆಯ ಒಟ್ಟು ಸ್ವರೂಪದಲ್ಲಿ, ಅನೇಕ ವರ್ಷಗಳ ಕಾರ್ಪಣ್ಯಪೂರ್ವಕವಾದ ಉಪೇಕ್ಷೆ ಎದ್ದು ಕಾಣುತ್ತಿತ್ತು.

ಕೆಳ ಅಂತಸ್ತಿನ ಪುರಾತನವಾದ ಬಾಗಿಲಿಗೆ, ಯಾವ ಕಾಲದಲ್ಲೋ ಬಳಿದಿದ್ದ ಬಣ್ಣವೆಲ್ಲ ಒಣಗಿ, ಕಲೆಕಲೆಯಾಗಿ, ಹೊಪ್ಪಳೆ ಎದ್ದು, ಅಲ್ಲಲ್ಲಿ ಉದುರಿಹೋಗಿತ್ತು. ಬಾಗಿಲ ಕೆಳ ಅರ್ಧವೆಲ್ಲ, ಎಲೆ ಅಡಿಕೆ ಹಾಕಿಕೊಳ್ಳುವವರು ಮಾಡುವ ಸುಣ್ಣದ ಕಲೆಗಳಿಂದ ತುಂಬಿಹೋಗಿತ್ತು. ಬೀದಿಯ ಪೋಲಿ ಹುಡುಗರು, ಅದರ ನಕಾಸೆಕೆತ್ತನೆ ಆಕೃತಿಗಳ ಮೇಲೆ ತಮ್ಮ ಚಾಕುಗಳನ್ನು ಪ್ರಯೋಗಿಸಿದ್ದರು. ಇಬ್ಬರೂ ಈ ಬಾಗಿಲ ನೇರಕ್ಕೆ ಬಂದ ಕೂಡಲೆ, ಲಕ್ಷ್ಮೀಪತಯ್ಯನವರು, ತಮ್ಮ ಕೈಲಿದ್ದ ಕೋಲನ್ನು ಎತ್ತಿ, ಮುಚ್ಚಿದ್ದ ಬಾಗಿಲ ಕಡೆ ತೋರಿಸುತ್ತ,

"ಅಯ್ಯಾ ಶಂಕರ್ರಾಯ, ನೀನು ಎಂದಾದರೂ ಆ ಬಾಗಿಲನ್ನು ಗಮನಿಸಿ ನೋಡಿದ್ದೀಯೇನು ?" —ಎಂದು ಕೇಳಿದರು. ಲಾಯರು "ಹುಂ"—ಎಂದು ಉತ್ತರ ಕೊಟ್ಟ ಕೂಡಲೆ, ಲಕ್ಷ್ಮೀಪತಯ್ಯನವರು ಪುನಃ,

"ನೋಡು, ಆ ಬಾಗಿಲನ್ನ ನೋಡಿದ ಕೂಡಲೆ, ನನಗೆ ಒಂದು ವಿಚಿತ್ರವಾದ ಕಥೆ ನೆನಪಿಗೆ ಬರುತ್ತದೆ"—ಎಂದರು.

ಶಂಕರರಾಯರು ಆಶ್ಚರ್ಯದಿಂದ, ಧ್ವನಿಯನ್ನು ಸ್ವಲ್ಪ ಬದಲಾಯಿಸಿ,

"ಆಹಾ ! ಹಾಗೇನು !–ಏನು ಕಥೆಯಯ್ಯ ಅದು ?"—ಎಂದು ಕೇಳಿದರು.

ಲಕ್ಷ್ಮೀಪತಯ್ಯ ಕಥೆ ಹೇಳತೊಡಗಿದರು:

"ಒಳ್ಳೇದು ಹೇಳ್ತೀನಿ ಕೇಳು, ಅದು ನಡೆದದ್ದು ಹೀಗೆ: ಆಗ ಒಳ್ಳೆ ನಡುಮಾಗಿ ಕಾಲ; ಕೃಷ್ಣಪಕ್ಷ ಮುಗಿಯಲು ಇನ್ನು ಎರಡೋ ಮೂರೋ ದಿನಗಳಿದ್ದವು—ಅಷ್ಟೆ. ಅಂದು ಬೆಳಗಿನಜಾವ ಸುಮಾರು ನಾಲ್ಕು ಗಂಟೆ ಸಮಯ. ಆಗ ನಾನು ಮನೆ ಸೇರಲು, ಕಾಲುನಡಗೆಯಲ್ಲಿ ನಡೆದು ಬರುತ್ತಿದ್ದೆ—"

"ಅಂಥಾ ಅವೇಳೇಲಿ ! ಕಾಲುನಡಗೇಲಿ !"

—ಎಂದು ಮಧ್ಯೆ ಬಾಯಿ ಹಾಕಿದರು, ಬ್ಯಾರಿಸ್ಟರು.

"ಹೌದು, ಅದು ಅನಿವಾರ್ಯವಾಗಿತ್ತು. ನಿನಗೆ ಘಾಟಿ ಗೋಪಾಲಯ್ಯನವರು ಗೊತ್ತಲ್ಲ. ಅವರ ಮನೆ ಇರೋದು ನಗರದ ಉತ್ತರದ ಗಡಿಯ ಬಳಿ. ಗಡಿಯ ಆಚೆ, ನಾಲ್ಕಾರು ಮೈಲಿ ದೂರದಲ್ಲಿ, ರಸ್ತೆ ಪಕ್ಕದಲ್ಲೇ ಅವರ ಹೊಲ, ಗದ್ದೆ, ತೋಟಗಳಿವೆ. ಅವುಗಳ ಆಧಾರದ ಮೇಲೆ, ನನ್ನಿಂದ ಸ್ವಲ್ಪ ಹಣ ಕೇಳಿದ್ದರು. ಅದರ ಸಂಬಂಧದಲ್ಲಿ ನಾನು ಸ್ವತ್ತನ್ನು ಕಣ್ಣಾರೆ ನೋಡಬೇಕಾಗಿತ್ತು ; ಅದಕ್ಕೋಸ್ಕರ ಹೋಗಿದ್ದೆ. ವ್ಯವಹಾರ ಕುದುರಿತು. ಅಂದು ರಾತ್ರೆ ಅವರ ಮನೆಯಲ್ಲೇ ಊಟ ಏರ್ಪಡಿಸಿದ್ದರು. ಊಟ, ಮಾತು ಕಥೆ, ಮಾರನೇ ದಿನದ ಕಾಗದ ಪತ್ರ, ಸಾಕ್ಷಿ, ರಿಜಿಸ್ಟ್ರೇಶನ್ನು—ಇತ್ಯಾದಿಗಳ ಏರ್ಪಾಟು ಎಲ್ಲಾ ಮುಗಿಸಿ ನಾನು ಹೊರಡುವ ವೇಳೆಗೆ, ಮಧ್ಯರಾತ್ರಿ ಕಳೆದು ಒಂದು–ಒಂದೂವರೆ ಗಂಟೆಯಾಗಿತ್ತು. ನಾನು ಬಾಡಿಗೆ ಮಾಡಿಕೊಂಡು ಹೋಗಿದ್ದ ಜಟಕಾಗಾಡಿಯಲ್ಲೇ ವಾಪಸು ಹೊರಟೆ. ಗಾಡಿ ಒಂದು, ಫರ್ಲಾಂಗು ಓಡಿದ್ದಾಗ, ಕುದುರೆ ಮುಗ್ಗುರಿಸಿ ಬಿತ್ತು. ದೇವರ ದಯದಿಂದ ಒಳಗೆ ಕೂತಿದ್ದ ನನಗೆ ಏನೂ ಆಗಲಿಲ್ಲ. ಆದರೆ, ಪಾಪ ಕುದುರೆಯ ಬಲ ಮುಂಗಾಲು ಮುರಿದುಹೋಗಿತ್ತು. ನನ್ನ ಮನೆಯಿಂದ ಹೋಗಿ–ಕೆಲಸ ಮುಗಿಯುವ ತನಕ ಕಾದಿದ್ದು–ವಾಪಸು ನನ್ನ ಮನೆ ತಲುಪುವುದಕ್ಕೆ, ಗಂಟೆಗೆ ಒಂದು ರೂಪಾಯಿ ಪ್ರಕಾರ ಬಾಡಿಗೆ ಮಾತಾಡಿದ್ದೆ. ಕುದುರೆ ಕಾಲು ಮುರಿಯುವ ವೇಳೆಗೆ ಹೆಚ್ಚು ಕಡಿಮೆ ಹನ್ನೆರಡು ರೂಪಾಯಿ ಬಾಡಿಗೆ ಆಗಿತ್ತು. ಅವಕ್ಕೆ ಇನ್ನು ಮೂರು

ರೂಪಾಯಿ ಸೇರಿಸಿ, ಒಟ್ಟು ಹದಿನೈದು ರೂಪಾಯಿಗಳನ್ನು ಗಾಡಿಯವನ ಕೈಗೆ ಕೊಟ್ಟು—ಅಲ್ಲಿಂದ ನಡೆದು ಹೊರಟೆ."

"ಸರಿ"—ಎಂದರು, ಶಂಕರರಾಯರು.

"ನೋಡು ಮಿತ್ರಾ, ಕಂಠಮಟ್ಟ ಉಂಡು ಏಳೆಂಟು ಮೈಲಿ ನಡೆಯಬೇಕಾಗಿ ಬಂದರೆ, ಅದರಂಥಾ ದುರದೃಷ್ಟ ಇನ್ನೊಂದಿಲ್ಲ ! ನನಗೆ ಆಗ ಪ್ರಪಂಚದ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗುತ್ತಿರುವೆನೇನೋ ಅನ್ನಿಸುತ್ತಿತ್ತು ! ನಾಲ್ಕು ಹೆಜ್ಜೆ ನಡೆದರೆ, ನನ್ನ ಮುಂದೆ ರಸ್ತೆ ನಲವತ್ತು ಹೆಜ್ಜೆ ಬೆಳೆಯುತ್ತಿದ್ದಂತೆ ಕಾಣುತ್ತಿತ್ತು ! ನಗರದ ಹಳೇ ಕೋಟೆ ಭಾಗದ ಮೂಲಕವೇ ಹೋದರೆ, ಒಂದು ಕಾಲು ಮೈಲಿಯಾದರೂ ಹತ್ತಿರವಾಗಬಹುದೆಂದು ಯೋಚಿಸಿ, ಅದರಂತೆ ನಡೆದು ಬರುತ್ತಿದ್ದೆ. ಬೀದಿಯ ಮೇಲೆ ಬೀದಿಯನ್ನು ದಾಟಿದರೂ, ಉದ್ದಕ್ಕೂ ಬರೀ ದೀಪದ ಕಂಭಗಳೇ ಹೊರತು, ಒಂದು ನರಪ್ರಾಣಿಯ ಸುಳಿವಿರಲಿಲ್ಲ. ನಗರಕ್ಕೆ ನಗರವೇ ನಿದ್ರೆಯಲ್ಲಿ ಮುಳುಗಿದ್ದ ಆ ಹೊತ್ತಿನಲ್ಲಿ, ಬಿಕೋ ಅನ್ನುತ್ತಿದ್ದ ಬೀದಿಯಲ್ಲಿ ಸಾಲು ದೀಪಗಳು ಮಾತ್ರ, ಯಾವುದೋ ಮೆರವಣಿಗೆಗೆ ಸಿದ್ಧವಾಗಿದ್ದಂತೆ ಕಾಣುತ್ತಿದ್ದವು. ಎತ್ತಕಡೆ ನೋಡಿದರೂ ನಿಶ್ಶಬ್ದ-ನಿಶ್ಚಲ ! ಇಂತಹ ಬೀದಿಗಳ ಮೂಲಕ ನಡೆದು ನಡೆದು ಸಾಕಾಗಿ, ಯಾವುದಾದರೂ ಜೀವಂತ ಶಬ್ದ ಕೇಳಿಸೀತೇನೋ-ಎಂಬ ಹಂಬಲಿಂದ ಆಲೈಸಿ ಆಲೈಸಿ ನಿರಾಶನಾಗಿ ಕೊನೆಗೆ, ರಾತ್ರೆ ಗಸ್ತಿನ ಪೋಲೀಸಿನವನು ಯಾವನಾದರೂ ಕಣ್ಣಿಗೆ ಬೀಳಬಾರದೇ ! -ಅವನ ಬೂಟ್ಸು ಹೆಜ್ಜೆಯ ಸದ್ದಾದರೂ ಕಿವಿಗೆ ಕೇಳಿಸಬಾರದೇ !—ಎನ್ನುವ ಸ್ಥಿತಿಗೆ ಬಂದಿದ್ದೆ !

"ಆಗ ನಾನು ಪೂರ್ವ-ಪಶ್ಚಿಮವಾಗಿರುವ ದೊಡ್ಡ ಬೀದಿ ರಣಧೀರ ರೋಡಿನಲ್ಲಿ ಪಶ್ಚಿಮಾಭಿಮುಖವಾಗಿ ನಡೆದು ಹೋಗುತ್ತಿದ್ದೆ. ಆ ಸಮಯದಲ್ಲಿ ಏನೋ ಯೋಚಿಸುತ್ತ ತಲೆ ತಗ್ಗಿಸಿಕೊಂಡು ನಡೆಯುತ್ತಿದ್ದವನು, ಇದ್ದಕ್ಕಿದ್ದ ಹಾಗೆಯೇ ಮನುಷ್ಯ ಹೆಜ್ಜೆಯ ಸದ್ದು ಕೇಳಿ, ತಲೆ ಎತ್ತಿ ನೋಡಿದೆ. ನನ್ನಿಂದ ಸುಮಾರು ಐವತ್ತು ಗಜಗಳ ದೂರದಲ್ಲಿ, ಓಣಿಯೊಂದರಿಂದ ಈ ಬೀದಿಗೆ ಪ್ರವೇಶಿಸಿದ ಒಂದು ಮನುಷ್ಯಾಕೃತಿ, ನನಗೆದುರಾಗಿ, ಅಂದರೆ ಪೂರ್ವಾಭಿಮುಖವಾಗಿ, ನಡೆದು ಬರುತ್ತಿತ್ತು. ಧೊಪ್-ಧೊಪ್ ಎಂದು ಭಾರವಾಗಿ ಬೂಟ್ಸ ಪಾದದ ಸದ್ದು ಮಾಡುತ್ತ, ವೇಗವಾಗಿ ನಡೆದು ಬರುತ್ತಿದ್ದ ಅವನು, ಸಣ್ಣ ಅಳತೆಯ ಮನುಷ್ಯನಾಗಿದ್ದ. ಸಾಮಾನ್ಯವಾದ ಕಪ್ಪು ಬಣ್ಣದ ಸೂಟು ಧರಿಸಿದ್ದ. ಕತ್ತಿಗೆ ಒಂದು ದಪ್ಪನಾದ ಮಫ್ಲರ್ ಸುತ್ತಿದ್ದ . ತಲೆಯಲ್ಲಿ ಕಪ್ಪು ಬಣ್ಣದ ಉಲ್ಲನ್ ಕುಲಾವಿಯನ್ನು, ಟೋಪಿಯಂತೆ ಮಾಡಿಕೊಂಡು ಧರಿಸಿದ್ದ. ಅವನ ಕೈಯಲ್ಲಿ ತಕ್ಕಮಟ್ಟಿಗೆ ದಪ್ಪನಾದ ಒಂದು ದೊಣ್ಣೆ ಇತ್ತು. ಆ ಸಮಯದಲ್ಲಿ ನಾನು, ಅವನು ನಡೆದು ಬರುತ್ತಿದ್ದ ರಸ್ತೆಯ ಪಕ್ಕದ ಎದುರು ಪಕ್ಕದಲ್ಲಿ ನಡೆದು ಹೋಗುತ್ತಿದ್ದೆ. ಹೋಗುತ್ತ, ಒಂದು ಓಣಿ ಎದುರು ಪಕ್ಕದಲ್ಲಿ ಈ ರಸ್ತೆಗೆ ಸೇರುವ ಸ್ಥಳಕ್ಕೆ ನಾಲ್ಕು ಮಾರು ದೂರದಲ್ಲಿದ್ದೆ. ಆಗ ಈ ಓಣಿಯ ಮೂಲಕ ಒಂದು ಹೆಣ್ಣು ಆಕೃತಿ, ಅತಿ ವೇಗದಿಂದ ದೊಡ್ಡ ರಸ್ತೆಯ ಕಡೆ ಬರುತ್ತಿದ್ದುದು ಕಂಡಿತು. ಓಣಿಯು ರಸ್ತೆಯನ್ನು ಸೇರುವ ಮೂಲೆಯಲ್ಲಿ, ನಾಲ್ಕು ಅಂತಸ್ತಿನ ಒಂದು ದೊಡ್ಡ ಕಟ್ಟಡವಿದೆ. ಈ ಮೂಲೆಯಿಂದ, ಆ ಗಂಡಸೂ, ಈ ಹೆಂಗಸೂ, ಹೆಚ್ಚು ಕಡಿಮೆ ಒಂದೇ ದೂರದಲ್ಲಿ, ಒಂದೇ ವೇಗದಲ್ಲಿ, ಮೂಲೆಯನ್ನು ಸಮೀಪಿಸುತ್ತಿದ್ದರು. ಆದ್ದರಿಂದ, ಒಬ್ಬರನ್ನೊಬ್ಬರು ಕಾಣದೆ ಬರುತ್ತಿದ್ದ ಅವರಿಬ್ಬರೂ ಢಿಕ್ಕಿ ಹೊಡೆಯುವುದು ಅನಿವಾರ್ಯವಾಗಿತ್ತು; ಢಿಕ್ಕಿ ಹೊಡೆದರು. ಢಿಕ್ಕಿ ಹೊಡೆದದ್ದು ಕೇವಲ ಆಕಸ್ಮಿಕವಾಗಿದ್ದರೂ, ಢಿಕ್ಕಿ ಹೊಡೆದ ಕೂಡಲೆ ನಡೆದ ಘಟನೆ ಬಹು ಘೋರವಾಗಿತ್ತು ! —ಭಯಾನಕವಾಗಿತ್ತು !! —ಶಂಕರ್ರಾವ್ ! ಅವನು ಏನು ಮಾಡಿದ ಗೊತ್ತೇ ?—"

"ಸಾಕ್ಷಿಯಾಗಿದ್ದೋನು ನೀನು-ನನ್ನ ಕೇಳ್ತೀಯಲ್ಲ, ಏನಾಯಿತೋ ಹೇಳೋದನ್ನು ಬಿಟ್ಟು ?"—ಎಂದು ಬ್ಯಾರಿಸ್ಟರು ಉತ್ತರ ಕೊಟ್ಟರು.

"ಕೇಳು, ಅವರಿಬ್ಬರೂ ಢಿಕ್ಕಿ ಹೊಡೆದ ಕೂಡಲೆ, ಆ ಹೆಣ್ಣು "ಅಯ್ಯಪ್ಪೋ !" ಎಂದು ಕೂಗುತ್ತ ಕೆಳಗೆ ಬಿದ್ದುಬಿಟ್ಟಳು. ಆ ಬಡಪಾಯಿನ ಆ ಚಾಂಡಾಲ, ತನ್ನ ಬೂಟ್ಸು ಕಾಲಿಂದ ತುಳಿದ; ಹೇಗೆ ತುಳಿದಾಂತೀಯ ! ಮನೆ ಕಟ್ಟೋ ಕೂಲಿಗಳು ಕೆಸರನ್ನು ತುಳಿಯೋಲ್ವೇ ?—ಹಾಗೆ ತುಳಿದ. ಹಾಗೆ ತುಳಿಯೋವಾಗ, ಅವನಲ್ಲಿ ಕೋಪವಾಗಲಿ-ಆವೇಶವಾಗಲಿ ಏನೂ ಕಾಣಿಸಲಿಲ್ಲ. ಏನೋ ಒಂದು ಚೇಳನ್ನೋ-ತಿಗಣೇನೋ ತುಳೀತಿರೋ ಹಾಗೆ ತುಳಿದ. ಹೆಣ್ಣು ಭಯಾನಕವಾಗಿ ಅರಚಿಕೊಳ್ತಿತ್ತು. ಅವನ ಮಟ್ಟಿಗೆ, ಆ ಹೆಣ್ಣು ಒಂದು ಜೀವಂತ ಪ್ರಾಣಿಯೇ ಆಗಿರಲಿಲ್ಲ ! ಅವನು ನಾಲ್ಕಾರು ತುಳಿತ ತುಳಿದು, ಆ ಹೆಣ್ಣಿನ ನೋವು-ಕೂಗು-ಕಿರಿಚಾಟ ಒಂದನ್ನೂ ಕಾಣದವನಂತೆ, ಕೇಳದವನಂತೆ, ಕೈ ಬೀಸಿಕೊಂಡು ಮುಂದಕ್ಕೆ ನಡೆದ. ಆ ದಿನ ನಡೆದ ಘಟನೇನ, ಇಷ್ಟು ದಿನಗಳ ಮೇಲೆ ಈಗ ವರ್ಣಿಸೋವಾಗ, ಅದರ ಅಸಲು ಕೇಡಿಗತನ-

ಭಯಂಕರತೆ–ಅಸಹ್ಯಗಳು ಬಾಯಿ ಮಾತಿನಲ್ಲಿ ಕಾಣಿಸದೇ ಇರಬಹುದು, ಶಂಕರ್ರಾವ್ ! ಆದರೆ, ಅದನ್ನು ಕಣ್ಣಾರೆ ನೋಡಿದಾಗ, ಆ ಅಮಾನುಷ ಕೃತ್ಯ ಅಷ್ಟು ಕಠೋರವಾಗಿ, ಕ್ರೂರವಾಗಿ, ಪೈಶಾಚಿಕವಾಗಿತ್ತು ! ಆ ದುರ್ಘಟನೆಗೆ ಕಾರಣನಾಗಿದ್ದ ಆ ಪ್ರಾಣಿ, ಆ ಮೃಗ !– ಮನುಷ್ಯನ ಆಕಾರ ಹೊಂದಿದ್ದನೇ ವಿನಾ, ಅವನು ಮಾಡಿದ ಕೆಲಸದಲ್ಲಿ ಮನುಷ್ಯತ್ವದ ಕಣ ಒಂದಿರಲಿಲ್ಲ ! ನಡೆದ ಘಟನೆಯನ್ನು ವರ್ಣಿಸೋದಕ್ಕೆ ಇಷ್ಟು ಕಾಲ ಹಿಡಿದರೂ, ಘಟನೆ ಮಿಂಚಿನ ವೇಗದಿಂದ ನಡೆದುಹೋಯಿತು–ದೊಡ್ಡ ಲಾರಿ ವೇಗವಾಗಿ ಬಂದು, ಒಂದು ನಾಯಿಕುನ್ನಿ ಮೇಲೆ ಹರಿದುಹೋದ ಹಾಗೆ ! ಕೂಡಲೆ ನಾನು, “ಏ–ಯ್ !”ಎಂದು ಕೂಗುಹಾಕಿ, ಓಡಿಹೋಗಿ, ಆ ಪಾಪಿಯ ಕೊರಳ ಸುತ್ತ ಇದ್ದ ಮಫ್ಲರಿಗೇ ಕೈಹಾಕಿ ಹಿಡಿದು, ಅವನನ್ನು ಹೆಂಗಸು ಬಿದ್ದಿದ್ದ ಸ್ಥಳಕ್ಕೆ ಎಳೆದುಕೊಂಡು ಬಂದೆ. ಅಷ್ಟರಲ್ಲಿ, ಹೆಂಗಸಿನ ಕಿರಿಚಾಟವನ್ನು ಕೇಳಿ ಹತ್ತಿರದ ಮನೆಗಳಿಂದ ಗಾಬರಿಯಾಗಿ ಬಂದಿದ್ದ ಜನರ ಸಣ್ಣ ಗುಂಪೊಂದು ಅವಳ ಸುತ್ತ ಸೇರಿತ್ತು. ನಾನು ಎಳೆತಂದ ಆ ಧೂರ್ತ, ಏನೂ ಪ್ರತಿಭಟಿಸದೆ, ತಂಟೆ ತಕರಾರು ಮಾಡದೆ, ಕುರಿಯ ಹಾಗೆ ನನ್ನ ಕೂಡ ನಡೆದು ಬಂದ. ಹಾಗೆ ಬರುತ್ತಿದ್ದಾಗ, ಅವನು ಒಂದು ಸಲ ನನ್ನ ಕಡೆ ತಿರುಗಿ ದಿಟ್ಟಿಸಿ ನೋಡಿದ. ಪ್ರಮಾಣವಾಗಿ ಹೇಳ್ತೀನಿ ! ಅಂಥಾ ಚಳಿ ಹೊತ್ನಲ್ಲೂ ನನ್ನ ತುದಿಗಾಲಿಂದ ನೆತ್ತಿಯವರೆಗೆ ಬೆವರಿ ನೀರಿಳಿಯೋ ಹಾಗಾಯಿತು ನನಗೆ—ಅವನ ಮುಸುಡಿ ನೋಡಿ ! ಅಷ್ಟು ಅಸಹ್ಯವಾಗಿ, ವಿಕಟವಾಗಿ, ನರಕದಿಂದ ಅದೇತಾನೇ ಎದ್ದುಬಂದ ಹಾಗಿತ್ತು, ಅವನ ಆ ಮುಖ !— ಆ ಮುಖದಲ್ಲಿ ಆ–ಆ–ಭಯಂಕರ ನೋಟ !!!

“ಹೆಂಗಸಿನ ಸುತ್ತ ನಿಂತಿದ್ದ ಜನರಲ್ಲಿ ಕೆಲವರು ಅವಳನ್ನು ಸಂತೈಸುತ್ತಿದ್ದರು. ಅವಳು ಸುಮಾರು ಇಪ್ಪತ್ತು ವರ್ಷದ ಪ್ರಾಯದವಳಾಗಿದ್ದಳು. ಆಕೆಯ ಉಡಿಗೆ ತೊಡಿಗೆಗಳಿಂದ, ಅವಳು ಯಾರದೋ ಮನೆಗೆಲಸದ ಹೆಣ್ಣಾಗಿದ್ದಳೆಂದು ಊಹಿಸಬಹುದಾಗಿತ್ತು. ನಿಜಸ್ಥಿತಿಯೂ ಹಾಗೆಯೇ ಇತ್ತು. ಅವಳು, ಯಾವ ಓಣಿಯಿಂದ ಬಂದಳೋ ಅದೇ ಓಣಿಯಲ್ಲಿ, ಒಬ್ಬ ವರ್ತಕರ ಮನೆಯ ಸೇವಕಿಯಾಗಿದ್ದಳು. ಆ ಮನೆಯಲ್ಲಿ ಯಾರಿಗೋ ಕಾಯಿಲೆಯಾಗಿ ಆ ಹೊತ್ತಿನಲ್ಲಿ ಬಹಳ ಸಂಕಟಪಡುತ್ತಿದ್ದರಂತೆ. ಹತ್ತಿರದಲ್ಲೇ ಇದ್ದ ಡಾಕ್ಟರೊಬ್ಬರನ್ನು ಕರೆತರುವಂತೆ ಆ ಹೆಣ್ಣನ್ನು ಅವಸರದಿಂದ ಕಳಿಸಿದ್ದರಂತೆ. ಆಕೆಗೆ ಈ ವಿಪತ್ತು ಸಂಭವಿಸಿದ್ದರಿಂದ, ಅಲ್ಲಿದ್ದವರ ಪೈಕಿ ಯಾರೋ ಒಬ್ಬರು ಹೋಗಿ, ಸ್ವಲ್ಪ ಹೊತ್ತಿನಲ್ಲೇ, ಅದೇ ಡಾಕ್ಟರನ್ನು ಕರೆತಂದರು.

“ಬಂದ ಡಾಕ್ಟರು, ಇನ್ನೂ ನೆಲದ ಮೇಲೆ ಕುಳಿತು ಭಯದಿಂದ ಕಂಪಿಸುತ್ತ ನರಳುತ್ತಿದ್ದ ಆ ಹುಡುಗಿಯನ್ನು ಪರೀಕ್ಷಿಸಿದ. ಆತನ ಅಭಿಪ್ರಾಯದಲ್ಲಿ ಆಕೆಗೆ ಅಂತಹ ಅಪಾಯಕರವಾದ ಘಾಸಿಯೇನೂ ಆಗಿರಲಿಲ್ಲ. ಆದರೆ, ಪಾಪ ಆ ಎಳೇ ಪ್ರಾಯದ ಹೆಣ್ಣು, ಹುಲಿಯನ್ನು ನೋಡಿದ ಹುಲ್ಲೆಕರುವಿನಂತೆ ಬಹಳ ಭಯಗೊಂಡಿದ್ದಳು.

“ನ್ಯಾಯವಾಗಿ ಆ ದುರ್ಘಟನೆ ಅಲ್ಲಿಗೇ ಮುಕ್ತಾಯವಾಗಬೇಕಾಗಿತ್ತು, ಆದರೆ ಮುಕ್ತಾಯವಾಗಲಿಲ್ಲ . ನನ್ನ ಕೈ ಇನ್ನೂ ಆ ಘಾತುಕನ ಮಫ್ಲರನ್ನು ಹಿಡಿದೇ ಇತ್ತು. ಅಲ್ಲಿ ನೆರೆದಿದ್ದ ಜನ ಸುತ್ತುಗಟ್ಟಿ ಇವನನ್ನೇ ನೋಡತೊಡಗಿದರು. ನೋಡಿದ ಕೂಡಲೆ, ಪ್ರತಿಯೊಬ್ಬನೂ, ವಾಂತಿಯಾಗುವುದೇನೋ ಅನ್ನೋ ಹಾಗೆ ಮುಖಮಾಡಿಕೊಂಡ. ಅವನ ಮೋರೆಯನ್ನು ಮೊದಲ ಸಲ ನೋಡಿದಾಗ ನನಗೂ ಹಾಗೇ ಆಗಿತ್ತು. ಆದ್ದರಿಂದ ಅವರ ಪ್ರತಿಕ್ರಿಯೆ ನನಗೆ ಆಶ್ಚರ್ಯವನ್ನುಂಟು ಮಾಡಲಿಲ್ಲ. ನನಗೆ ಆಶ್ಚರ್ಯವನ್ನುಂಟು ಮಾಡಿದ್ದು, ಆ ಡಾಕ್ಟರರ ಪ್ರತಿಕ್ರಿಯೆ. ಸಾಮಾನ್ಯವಾಗಿ ಡಾಕ್ಟರು ಎಂದರೆ, ಸಾವು–ರೋಗ–ರುಜಿನ ಇತ್ಯಾದಿಗಳ ವಿಕಟ ಸ್ವರೂಪವನ್ನು ನೋಡಿ ನೋಡಿ ಪಳಗಿ, ವಿಕಾರದ ವಿಷಯದಲ್ಲಿ ನಿರ್ಲಿಪ್ತರಾಗಿರುವವರು. ಅಂತಹ ಡಾಕ್ಟರೂ, ನನ್ನ ಹಿಡಿತದಲ್ಲಿದ್ದ ಆ ಕೇಡಿಗನ ಕೆಟ್ಟ ಮೋರೆ ನೋಡಿದ ಕೂಡಲೆ, ಓಕರಿಕೆ ಬರುವವನಂತೆ ಸಂಕಟಪಟ್ಟು, ಅದಕ್ಕೆ ಕಾರಣನಾದವನನ್ನು, ಕೊಲ್ಲುವಂತೆ ಕೋಪಾವೇಶದಿಂದ ನೋಡಿದ. ಅಂತಹ ಪಾಪಿಯನ್ನು ಕೊಂದರೂ ಪಾಪವಿಲ್ಲ ಎಂದು ನನ್ನ ಮನಸ್ಸಿನಲ್ಲೂ ಅನ್ನಿಸುತ್ತಿತ್ತು. ಆದರೆ, ಅದು ಕಾರ್ಯತಃ ಮಾಡುವ ಕೆಲಸವಾಗಿರಲಿಲ್ಲ.

“ಅವನನ್ನು ತತ್‌ಕ್ಷಣ ಪೋಲಿಸಿಗೆ ಕೊಡುವುದಲ್ಲದೆ, ಬೆಳಗಾದ ಕೂಡಲೆ, ಇಡೀ ನಗರದಲ್ಲಿ ಅವನ ನಡತೇನ ಡಂಗುರ ಹೊಡೆಸಿ, ಅವನು ನಗರದಲ್ಲಿ ಎಲ್ಲೂ ಇನ್ನು ಮುಂದೆ ತಲೆ ಎತ್ತದ ಹಾಗೆ ಮಾಡುವುವೆಂದೂ, ಅವನ ಹೊಟ್ಟೆಗೆ ಹಿಟ್ಟು ಹುಟ್ಟದ ಹಾಗೆ ಮಾಡುವೆವೆಂದೂ, ದೇಶಾಂತರ ಓಡಿಹೋಗೋ ಹಾಗೆ ಮಾಡುವೆವೆಂದೂ ಬೆದರಿಕೆ ಹುಟ್ಟಿಸಿದೆವು. ಈ ವೇಳೆಗೆ ಆ ಹೆಣ್ಣಿನ ವರ್ಗದ ಕೆಲವು ಹೆಂಗಸರೂ ಗಲಾಟೆಯನ್ನು ಕೇಳಿ ಗುಂಪಿಗೆ ಬಂದು ಸೇರಿದ್ದರು. ಅವರ ಕೋಪವಂತೂ ಹೇಳತೀರದಾಗಿತ್ತು ! ತಾವು ಹೆಂಗಸರು ಅನ್ನೋದನ್ನು ಮರೆತು, ಅವನ ಮೇಲೆ ಕೈಮಾಡಲು ನುಗ್ಗುತ್ತಿದ್ದರು ! ಅವನನ್ನು ಅವರಿಂದ ರಕ್ಷಿಸುವುದೇ ಬಹು ಪ್ರಯಾಸವಾಯಿತು. ಅಂಥಾ ಜ್ವಾಲಾಮುಖಿಯರನ್ನು ನಾನು ಹಿಂದೆಂದೂ ನೋಡಿರಲಿಲ್ಲ ! ಇಷ್ಟಾದರೂ, ನಮ್ಮ ಮಧ್ಯೆ ಸೆರೆಯಾಗಿ ನಿಂತಿದ್ದ ಆ ಧೂರ್ತ, ಸ್ವಲ್ಪಮಟ್ಟಿಗೆ ಭಯಗೊಂಡಿದ್ದರೂ, ಅದನ್ನು

ತಕ್ಕಮಟ್ಟಿಗೆ ಮುಚ್ಚಿಕೊಂಡು, ಶಾಂತನಾಗಿಯೇ ಇದ್ದ. ಅಷ್ಟೇ ಅಲ್ಲ, ಅಸಹ್ಯ ಕುರೂಪವಾದ, ಕರಾಳ ಭಯಂಕರವಾದ ಆ ಮುಖವನ್ನು ಎತ್ತಿ, ಸ್ವಲ್ಪವೂ ನಾಚಿಕೆಯಿಲ್ಲದೆ, ದಿಟ್ಟತನದ ಮೂದಲಿಕೆಯಿಂದ ನಮ್ಮನ್ನೆಲ್ಲ ನೋಡುತ್ತಿದ್ದ ! ನಮ್ಮ ಬೆದರಿಕೆಯ ಮಾತುಗಳನ್ನು ಕೇಳಿ ಅವನು ಬಾಯಿಬಿಟ್ಟ :

"ಅಯ್ಯಾ, ಏನೋ ನನ್ನ ದುರದೃಷ್ಟ, ಇದೊಂದು ಆಗಬಾರದ್ದು ಆಕಸ್ಮಿಕವಾಗಿ ಆಗಿಹೋಯಿತು. ನೀವು ಇದನ್ನೇ ದೊಡ್ಡದು ಮಾಡಿ, ಗುಲ್ಲೆಬ್ಬಿಸಿ, ನನ್ನನ್ನು ಹಾಳುಮಾಡ್ಬೇಕೂಂತ ಹಟ ತೊಟ್ಟರೆ, ನಾನು ಅಸಹಾಯಕ, ಏನೂ ಮಾಡಲಾರೆ. ನನ್ನದು ತಪ್ಪು ನಿಜ. ಆದರೆ, ನನ್ನನ್ನು ಹಾಳುಮಾಡಿದರೆ, ಆ ಹೆಂಗಸಿಗೇನೂ ಪರಿಹಾರ ದೊರೆತಹಾಗಾಗೋದಿಲ್ಲ. ಅದರ ಬದಲು ಇದು ಇನ್ನೂ ಮುಂದಕ್ಕೆ ಗಲಭೆ–ರಾದ್ಧಾಂತವಾಗಿ ಬೆಳೆಯದ ಹಾಗೆ ಪ್ರಯತ್ನಿಸಿದರೆ, ಇಬ್ಬರಿಗೂ ಲಾಭವಾದೀತು. ಈ ಪ್ರಸಂಗದ ಮಾತನ್ನು ಇಲ್ಲಿಗೇ ಕೈಬಿಡೋದಕ್ಕೆ, ನೀವು ನನ್ನಿಂದ ಏನು ಪರಿಹಾರ ಕೇಳುತ್ತೀರೋ ಕೇಳಿ"

—ಎಂದು ಹೇಳಿ, ಸೊಂಟದ ಮೇಲೆ ಕೈಇಟ್ಟುಕೊಂಡು, ಆ ಮುಸುಡಿ ಇನ್ನೂ ಭಯಾನಕವಾಗಿ ಕಾಣೋಹಾಗೆ, ಹಲ್ಲು ಕಿರಿದ.

"ಅವನು ಮಾಡಿದ್ದ ಅಪರಾಧಕ್ಕೆ, ಹುಡುಗೀಗೆ ಅವನು ನೂರು ರೂಪಾಯಿ ಗಳ ದಂಡ ಕೊಡಬೇಕೂಂತ ನಾವು ತೀರ್ಮಾನಿಸಿದೆವು. ಅವನ ಕೈಲಿದ್ದ ದೊಣ್ಣೆಗೆ ಬೆಳ್ಳಿ ಹಿಡಿಯಿತ್ತು ; ಬೆರಳುಗಳಲ್ಲಿ ಉಂಗುರಗಳಿದ್ದವು ; ಅವನ ಸೂಟು–ಮಫ್ಲರು ಎಲ್ಲ ಬೆಲೆಬಾಳುವುವೇ ಆಗಿದ್ದವು ; ಆದ್ದರಿಂದ ನಾವು ಅಷ್ಟು ದಂಡ ಗೊತ್ತು ಮಾಡಿದೆವು. ನಮ್ಮ ತೀರ್ಮಾನವನ್ನು ಕೇಳಿ ಅವನು ಒಂದೆರಡು ಕ್ಷಣ ನಮ್ಮನ್ನೇ ಮೌನವಾಗಿ ನೋಡಿದ. ಬಹುಶಃ, ಸ್ವಲ್ಪ ಚೌಕಾಸಿ ಮಾಡಬೇಕೂಂತಿದ್ದನೋ ಏನೋ. ಆದರೆ ನಮ್ಮ ಮುಖಗಳನ್ನು ನೋಡಿದಾಗ, ನಮ್ಮ ಮಾತಿಗೆ ಒಪ್ಪದೇ ಇದ್ದರೆ ತನಗೆ ಗಂಡಾಂತರ ತಪ್ಪಿದ್ದಲ್ಲಾಂತ ಅವನಿಗೆ ಸ್ಪಷ್ಟವಾಗಿರಬೇಕು. ಸರಿ, ಎದುರುಮಾತನಾಡದೆ, ನಾವು ಹೇಳಿದ ದಂಡ ಕೊಡುವುದಾಗಿ ಒಪ್ಪಿದ. ತನ್ನಲ್ಲಿ ಆಗ ಅಷ್ಟು ಹಣ ಇಲ್ಲವೆಂದೂ, ತನ್ನ ಕೂಡ ಮನೆಯ ತನಕ ಬಂದರೆ ಕೊಡುವುದಾಗಿಯೂ ಹೇಳಿದ. ನಾವು ಆಗಲಿ—ಎಂದು ಅವನ ಕೂಡ ಹೊರಟೆವು. ಅವನು ನಮ್ಮನ್ನು ಎಲ್ಲಿಗೆ ಕರೆತಂದ ಗೊತ್ತೇ–ಶಂಕರ್ರಾವ್ ?"

"ಈ ಮನೆಗೇಂತ ಕಾಣುತ್ತೆ "—ಎಂದರು ರಾಯರು, ಆ ಬಾಗಿಲನ್ನು ತೋರಿಸಿ.

"ಆಹಾ !–ಹೌದು ಹೌದು, ಇದೇ ಬಾಗಿಲ ಬಳಿಗೆ ಕರೆತಂದ. ನಮ್ಮನ್ನು ಬೀದಿಯಲ್ಲೇ ನಿಲ್ಲಿಸಿ, ತನ್ನ ಜೇಬಿನಿಂದ ಒಂದು ಭಾರಿ ಬೀಗದ ಕೈಯನ್ನು ಈಚೆಗೆ ತೆಗೆದು, ಅದನ್ನು ಬಾಗಿಲ ಬೀಗದ ರಂಧ್ರದಲ್ಲಿ ತೂರಿಸಿ ತಿರುಗಿಸಿ, ಬಾಗಿಲನ್ನು ತೆರೆದು ಒಳಗೆ ಹೋಗಿ, ಸ್ವಲ್ಪ ಹೊತ್ತಿನಲ್ಲೇ ಈಚೆಗೆ ಬಂದ. ಅವನ ಕೈಯಲ್ಲಿ ಹತ್ತು ರೂಪಾಯಿಗಳ ನಗದೂ, ಇನ್ನು ಉಳಿದ ತೊಂಬತ್ತು ರೂಪಾಯಿಗಳಿಗೆ ಒಂದು ಚೆಕ್ಕೂ ಇದ್ದುವು. ಚೆಕ್ಕು ಹಿರ್ನಾಟಕಾ ಸ್ಟೇಟ್ ಬ್ಯಾಂಕಿನ ಕೋಟೆ ಶಾಖೆಯದಾಗಿದ್ದು, ಅದನ್ನು ಯಾರು ಹಾಜರು ಮಾಡುತ್ತಾರೋ ಅವರಿಗೆ ಹಣ ಪಾವತಿಯಾಗೋ ಹಾಗೆ ಬರೆಯಲ್ಪಟ್ಟಿತ್ತು. ಚೆಕ್ಕಿಗೆ ಮಾಡಿದ್ದ ರುಜುವನ್ನು ಗಮನಿಸಿದೆ. ಅದು, ಈಗ ನಾನು ಹೇಳ್ತಿರೋ ಕಥೆಗೆ ಸಂಬಂಧಪಟ್ಟಿದ್ದರೂ, ಆ ಹೆಸರನ್ನು ಬಹಿರಂಗಪಡಿಸೋಹಾಗಿಲ್ಲ. ಆದರೆ, ಇಷ್ಟು ಮಾತ್ರ ಹೇಳಬಲ್ಲೆ ; ಆ ರುಜು ಯಾರ ಹೆಸರಾಗಿತ್ತೋ ಆತ, ಈ ನಗರದ ಬಹಳ ಪ್ರಸಿದ್ಧನಾದ ಮನುಷ್ಯ. ಆ ಹೆಸರು ಪದೇ ಪದೇ ನ್ಯೂಸ್‌ಪೇಪರುಗಳಲ್ಲಿ ಕಾಣುವಂಥಾದ್ದಾಗಿತ್ತು. ಚೆಕ್ಕಿನಲ್ಲಿದ್ದ ಇತರ ಬರವಣಿಗೆ–ಅಂದರೆ, ಹಣದ ಮೊತ್ತವನ್ನು ಗುರುತಿಸಿದ್ದ ಅಂಕಿಗಳೂ, ಮಾತುಗಳೂ, ಸ್ಥಿರವಾದ ಕೈಯಲ್ಲಿ ಸ್ಪಷ್ಟವಾಗಿ ಇಂಗ್ಲೀಷಿನಲ್ಲಿ ಬರೆಯಲ್ಪಟ್ಟಿದ್ದವು. ಚೆಕ್ಕಿನಲ್ಲಿದ್ದ ರುಜು ಸಾಚಾ ಆಗಿದ್ದಿದ್ದ ಪಕ್ಷದಲ್ಲಿ, ತೊಂಬತ್ತಲ್ಲ–ತೊಂಬತ್ತು ಸಾವಿರ ರೂಪಾಯಿಗಳಿಗಾದರೂ, ಅದನ್ನು ನಂಬಬಹುದಾಗಿತ್ತು—ಅಂಥಾ ಭಾರಿ ಕುಳದ ರುಜುವಾಗಿತ್ತು ಅದು ! ಆದರೆ, ಆ ರುಜು ಸಾಚಾ ಹೌದೋ ಅಲ್ಲವೋ ಯಾರು ಬಲ್ಲರು ? ನಾನೇನೋ, ಆ ಚೆಕ್ಕು ಸ್ವಲ್ಪ ಅನುಮಾನಾಸ್ಪದವೇಂತ ನಿಸ್ಸಂಕೋಚವಾಗಿಯೇ ಹೇಳಿಬಿಟ್ಟೆ. ಹೌದೋ ಅಲ್ಲವೋ ನೀನೇ ಹೇಳು ? ಒಬ್ಬ ಮನುಷ್ಯ–ಧೂರ್ತ ಪಿಶಾಚಿಯಾಕಾರದ ಮನುಷ್ಯ ! ಬೆಳಗಿನ ಜಾವ ನಾಲ್ಕು ಗಂಟೆ ಸಮಯ ! ಯಾವುದೋ ಒಂದು ಓಣೀಲಿ, ದೆವ್ವದ ಮನೇ ಹಾಗಿದ್ದ ಒಂದು ಮನೆ ! ಅವನು ಅಂಥಾ ಮನೆ ಒಳಗೆ ಹೋಗಿ, ಈಚೆಗೆ ಬಂದಾಗ, ಅವನ ಕೈಲಿ, ತೊಂಬತ್ತು ರೂಪಾಯಿಗಳಿಗೆ, ಹೆಸರಾದ ದೊಡ್ಡ ಬ್ಯಾಂಕಿನ ಮೇಲೆ ಒಂದು ಚೆಕ್ಕು ; ಚೆಕ್ಕಿನಲ್ಲಿ ರುಜು ಆಗಿದ್ದ ಹೆಸರೋ, ಬೇರೆ ಇನ್ನೊಬ್ಬ, ಬಹಳ ಪ್ರಸಿದ್ಧನಾಗಿದ್ದ ಮನುಷ್ಯಂದು ! ಇವೆಲ್ಲ ಅನುಮಾನಕ್ಕೆ ಎಷ್ಟು ಬೇಕೋ ಅಷ್ಟೂ ಆಗಿದ್ದವು. ಆದ್ದರಿಂದ ನಾನು ಸ್ಪಷ್ಟವಾಗಿ ಹಾಗೆ ಹೇಳೇಬಿಟ್ಟೆ. ಆದರೆ ಆ ಪಿಶಾಚಯ್ಯ, ನಮ್ಮ ಅನುಮಾನದಿಂದ ಸ್ವಲ್ಪಾನೂ ನೊಂದುಕೊಳ್ಳದೆ, ಅಸಮಾಧಾನಪಟ್ಟುಕೊಳ್ಳದೆ,ಗಹಗಹಿಸಿ ನಕ್ಕ ! ನಕ್ಕು,

"ಅಯ್ಯಾ, ಅನುಮಾನಕ್ಕೆ ಆಸ್ಪದವಿದೆ, ನಿಜ ; ಆದರೆ, ನೀವೇನೂ ಚಿಂತಿಸಬೇಡಿ, ಧೈರ್ಯವಾಗಿರಿ. ಅಷ್ಟೇಕೆ ? ಬೆಳಗಾಗಿ ಬ್ಯಾಂಕು ತೆರೆಯುವತನಕ ನಿಮ್ಮ ಜೊತೇಲೇ ಇದ್ದು, ನಿಮ್ಮನ್ನೂ ಬ್ಯಾಂಕಿಗೆ ಕರೆದೊಯ್ದು, ಈ ಚೆಕ್ಕಿಗೆ ನಾನೇ ನಗದು ಹಣ ಪಡೆದು ಪಾವತಿ ಮಾಡುತ್ತೇನೆ. ಆಗಬಹುದಷ್ಟೆ '—ಎಂದ. ಅದು ನಮಗೆ ಒಪ್ಪಿಗೆಯಾಗಿತ್ತು, ಒಪ್ಪಿದೆವು.

"ಅದೇ ಪ್ರಕಾರ, ನಾನೂ, ಆ ಹುಡುಗಿಯ ಕಡೆಯ ಒಬ್ಬ ಗಂಡಸೂ, ಅವನನ್ನು ಕರೆದುಕೊಂಡು ನಮ್ಮ ಮನೆಗೆ ನಡೆದುಹೋದೆವು. ನಾವು ನಮ್ಮ ಮನೆ ತಲುಪಿದಾಗ ಐದು ಗಂಟೆಗೆ ಹತ್ತಿರವಾಗಿತ್ತು. ಹತ್ತು ಗಂಟೆವರೆಗೂ ಹೇಗೋ ಕಾಲ ಕಳೆದು, ಮೂರು ಜನವೂ ಒಟ್ಟಿಗೆ ಬ್ಯಾಂಕಿಗೆ ಹೋದೆವು. ಅಲ್ಲಿ ನಾನೇ ಕರೆಂಟ್ ಅಕೌಂಟ್ಸ್ ಕ್ಲಾರ್ಕಿನ ಕೈಗೆ ಚಕ್ಕನ್ನು ಕೊಟ್ಟು ರುಜುವಿನ ವಿಷಯವಾಗಿ ನನಗಿದ್ದ ಅನುಮಾನವನ್ನು ಅವನಿಗೆ ತಿಳಿಸಿದೆ. ಆದರೆ, ನಾನು ಅನುಮಾನಪಡಬೇಕಾಗಿಲ್ಲವೆಂದೂ, ರುಜು ಸಾಚಾ ಆಗಿತ್ತೆಂದೂ, ಆ ಕ್ಲಾರ್ಕು ತಿಳಿಸಿದ—"

ಲಕ್ಷ್ಮೀಪತಯ್ಯ ಈ ಮಾತು ಹೇಳಿದಾಗ ಬ್ಯಾರಿಸ್ಟರು, ತಟ್ಟನೆ "ಥತ್-ಥತ್ !"—ಎಂದರು.

"ಹಾ ! ನಿರೀಕ್ಷೆ ತಪ್ಪಿದರೆ ಹಾಗೇ ಅನ್ನಿಸುತ್ತೆ, ಅಲ್ವೇ ? ನನಗೂ ಹಾಗೇ ಅನ್ನಿಸಿತು, ಶಂಕರ್ರಾವ್ ! ಚೆಕ್ಕಿನ ರುಜು ಸಾಚಾ ಆಗಿದ್ದಿದ್ದನ್ನ ನೋಡಿದರೆ, ಅದರ ಹಿಂದೆ ಏನೋ ಕಥೆ ಇರಬೇಕು—ಆ ಕಥೆ ಸ್ವಲ್ಪ ಅಸಹ್ಯವಾಗಿರಬೇಕು–ಅಂತ ಅನ್ನಿಸೋದು ಸಹಜ. ಚೆಕ್ಕನ್ನು ಮನೆ ಒಳಗಿನಿಂದ ತಂದುಕೊಟ್ಟ ವ್ಯಕ್ತಿ, ಮನುಷ್ಯ ರೂಪದ ಪಿಶಾಚಿ ! ಅಲ್ಲ—ಪಿಶಾಚಿ ರೂಪದ ಮನುಷ್ಯ ! ಪಿಶಾಚಿ ಎಷ್ಟು ಅಸಹ್ಯವೋ, ಭಯಾನಕವೋ, ಅವನ ನಡವಳಿಕೆನೂ ಅಷ್ಟೇ ಅಸಹ್ಯವಾಗಿತ್ತು , ಭಯಾನಕವಾಗಿತ್ತು ! ಅವನಲ್ಲ, ಅವನ ನೆರಳು ಕೂಡ ಹೊಲಸು ಅನ್ನೋಹಾಗಿತ್ತು ! ಆದರೆ, ಚೆಕ್ಕನ್ನು ಬರೆದು ರುಜುಮಾಡಿದ್ದ ವ್ಯಕ್ತಿ, ನಗರದಲ್ಲಿ ಹೆಸರಾದ, ನಾಗರಿಕನಾದ ಸಭ್ಯ ಗೃಹಸ್ಥ ; ಚಿನ್ನದಂಥಾ ಮನುಷ್ಯ ; ಪರೋಪಕಾರಕ್ಕೆ ಎತ್ತಿದ ಕೈಯಾಗಿ, ಶುಭ್ರವಾದ ನಡತೆಯುಳ್ಳವನಾಗಿದ್ದ. ನನ್ನ ಕೈಲಿದ್ದ ಚೆಕ್ಕು, ಹಸುವಿನ ಹಾಲಿನಂಥ ಒಬ್ಬ ಮನುಷ್ಯನಿಗೂ, ನಾಗರಹಾವಿನ ವಿಷದಂಥ ಒಬ್ಬ ಕೇಡಿಗನಿಗೂ, ಯಾವುದೋ ರೀತಿಯ ಸಂಬಂಧವನ್ನು ಸೂಚಿಸುತ್ತಿತ್ತು. ಈ ಸಂಬಂಧ ಸೂಚನೆ, ನಿಜವಾಗಿಯೂ ಬಹಳ ವಿಷಾದಕರವಾಗಿತ್ತು. ಈ ಚೆಕ್ಕು, ನಮಗೆ ಸೆರೆಸಿಕ್ಕಿದ್ದ ಪಾಪಿ ಆ ಗಣ್ಯವ್ಯಕ್ತಿಯಿಂದ ಬಲವಂತವಾಗಿ ವಸೂಲ್ಮಾಡುತ್ತಿದ್ದ ಗುಟ್ಟುತೆರವಾಗಿತ್ತೆಂದು ತೋರುತ್ತೆ. ಈಗ ಮಧ್ಯವಯಸ್ಸು ದಾಟಿರುವ ಆ ಸಭ್ಯಗೃಹಸ್ಥ, ಹಿಂದೆ ಯಾವಾಗಲೋ ತನ್ನ ಪ್ರಾಯದ ಹುರುಪಿನಲ್ಲಿ—ಏನೋ ಅವಿವೇಕ ಮಾಡಿರಬೇಕು; ಮಾಡಿ, ಪೀಕಲಾಟಕ್ಕೆ ಸಿಕ್ಕುವ ಹಾಗಿದ್ದಿರಬೇಕು; ಆ ವಿಷಯ, ನಮಗೆ ಸಿಕ್ಕಿಬಿದ್ದಿದ್ದ, ಯಾತಕ್ಕೂ ಹೇಸದೆ, ಪಿಶಾಚಿ ಸ್ವರೂಪನಿಗೆ ಮಾತ್ರ ತಿಳಿದ ವಿಷಯವಾಗಿದ್ದು, ಅವನು ತನ್ನ ತಿಳುವಳಿಕೆಯನ್ನು ಸ್ವಾರ್ಥಕ್ಕೆ ಉಪಯೋಗಿಸುವ ಸಲುವಾಗಿ, ಬೆದರಿಕೆ ಹುಟ್ಟಿಸುತ್ತ ಹಣಕ್ಕೆ ಬಲಾತ್ಕರಿಸುತ್ತಿರಬಹುದು; ಮಾನಿಯಾದ ಆ ಮನುಷ್ಯ, ತನ್ನ ಗೌರವವನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ, ಇವನಿಗೆ ಕೇಳಿಕೇಳಿದಾಗ ಹಣ ತೆತ್ತು ಇವನ ಬಾಯಿ ಮುಚ್ಚಿಸುತ್ತಿರಬೇಕು—ಎಂದು ನನ್ನ ಊಹೆ. ಅಂದಿನಿಂದ ಈ ಬಾಗಿಲ ಮನೆಯನ್ನು 'ಗುಟ್ಟುತೆರ ನಿವಾಸ' ಅಂತ ನಾಮಕರಣ ಮಾಡಿದ್ದೇನೆ. ಆದರೇನು ಇಷ್ಟೆಲ್ಲಾ ತಿಳಿದು ಊಹಿಸಿದರೂ, ಕಥೆ ಪೂರ್ಣವಾಗಲಿಲ್ಲ."

—ಎಂದು, ಲಕ್ಷ್ಮೀಪತಯ್ಯ ಮೌನವನ್ನವಲಂಬಿಸಿ, ಯೋಚನೆಯಲ್ಲಿ ಮಗ್ನರಾದರು. ಕೆಲವು ಕ್ಷಣಗಳು ಬಿಟ್ಟು ಶಂಕರರಾಯರು, ಇದ್ದಕ್ಕಿದ್ದಹಾಗೆಯೇ, ಲಕ್ಷ್ಮೀಪತಯ್ಯನವರ ಕಡೆ ತಿರುಗಿ,

"ಚೆಕ್ಕು ಬರೆದು ರುಜುಮಾಡಿದ್ದಾತ ಈ ಹಳೇಬಾಗಿಲ ಮನೆಯಲ್ಲಿ ವಾಸಿಸುತ್ತಾರೋ ಇಲ್ಲವೋ ನಿನಗೆ ತಿಳಿಯದೇ ?" ಎಂದು ಪ್ರಶ್ನೆ ಮಾಡಿದರು.

"ಆಹಾ ! ಯಾಕಿರಬಾರದು ! ಅಂಥಾ ದೊಡ್ಡ ಮನುಷ್ಯ ಈ ದೆವ್ವದ ಮನೇಲಿ ! ಇಲ್ಲ ಶಂಕರ್ರಾವ್, ಆತ ಇಲ್ಲಿ ವಾಸಮಾಡುತ್ತಿಲ್ಲ ; ಅವರ ಹೆಸರಿನ ಬೋರ್ಡು ಚಿನಿವಾರ ಚೌಕದಲ್ಲಿದೆ "—ಎಂದರು ಲಕ್ಷ್ಮೀಪತಯ್ಯ.

"ಸರಿ, ಲಕ್ಷ್ಮೀಪತಿ, ಈ ಹಳೇ ಬಾಗಿಲಿನ ಮನೆಯ ವಿಷಯವಾಗಿ ನೀನು ಮುಂದಕ್ಕೆ ಏನನ್ನೂ ವಿಚಾರಿಸಲೇ ಇಲ್ವೇನು ?"

—ಎಂದು, ಶಂಕರರಾಯರು ಪುನಃ ಕೇಳಿದರು.

"ಇಲ್ಲ ಶಂಕರ್ರಾವ್, ವಿಚಾರಿಸಲಿಲ್ಲ. ಇಂಥಾ ವಿಷಯದಲ್ಲಿ ನನಗೆ ಬಹಳ ಸಂಕೋಚ. ಕೆಲವು ಸಂದರ್ಭಗಳಲ್ಲಿ, ತನಿಖೆ ಮಾಡೋರ ಹಾಗೆ ಕೆದಕಿ ಕೆದಕಿ ಪ್ರಶ್ನೆ ಮಾಡೋದೂಂದ್ರೆ, ನನ್ನ ಮನಸ್ಸಿಗೆ ಸ್ವಲ್ಪವೂ ಹಿಡಿಸದ ಕೆಲಸ. ಅಂಥಾ ಅನಿಷ್ಟವಾದ ಕೆಲಸಕ್ಕೆಲ್ಲ ಪೋಲೀಸಿನೋರೇ ಲಾಯಕ್ಕು ! ತನಿಖೆ

ಪ್ರಾರಂಭಿಸಿಬಿಟ್ಟರೆ, ಎಲ್ಲೋ ಶುರುವಾದ್ದು, ಕನಸ್ನಲ್ಲೂ ಕಾಣಲಾರದ ಹಾಗೆ, ಇನ್ನೆಲ್ಲೋ ಮುಕ್ತಾಯವಾಗುತ್ತೆ ! ಇಂಥಾ ಸಂದರ್ಭದಲ್ಲಿ ಒಂದು ಪ್ರಶ್ನೆ ಪ್ರಾರಂಭಿಸೋದೂಂದ್ರೆ, ಬೆಟ್ಟದ ನೆತ್ತಿಯಿಂದ ದೊಡ್ಡ ಗುಂಡು ಕಲ್ಲನ್ನ ಉರುಳಿಬಿಟ್ಟ ಹಾಗೆ, ಶಂಕರ್ರಾವ್ ! ಕಲ್ಲನ್ನ ಮೆಲ್ಗೆ ಉರುಳಿಬಿಟ್ಟೋನು ಕೂತಲ್ಲೇ ಕೂತಿರ್ತಾನೆ; ಕಲ್ಲು ಮಾತ್ರ, ಉರುಳ್ತಾ ಉರುಳ್ತಾ, ದಾರೀಲಿ ಅಡ್ಡವಾಗಿ ಸಿಕ್ಕ ಸಣ್ಣಪುಟ್ಟ ಕಲ್ಲುಗಳನ್ನೂ ಉರುಳಿಸ್ತಾ ಹೋಗಿಬಿಡುತ್ತೆ; ಕಡೆಗೆ, ಬೆಟ್ಟದ ಬುಡದ ಹೊಲದಲ್ಲಿ ಕೆಲಸ ಮಾಡ್ತಿರೋ ಯಾವನೋ ಬಡಪಾಯಿ ನಿರಪರಾಧಿ ಮುದುಕನ ತಲೆ ಮೇಲೆ ಬೀಳುತ್ತೆ ! ತನಿಖೆಯ ಮೊದಲ ಪ್ರಶ್ನೇನೂ ಹಾಗೇ ! ಎಲ್ಲೋ ಪ್ರಾರಂಭವಾದದ್ದು, ಯಾರ್‍ಯಾರನ್ನೋ ಸುತ್ತು ಹಾಕಿಕೊಂಡು, ಕಡೇಲಿ, ಎಲ್ಲೋ ಮರ್ಯಾದೆಯಿಂದ ಬಾಳ್ತಿರೋ ಮನುಷ್ಯನಿಗೆ ತೊಡರುತ್ತೆ. ಸರಿ ಆಮೇಲೆ, ಅವನು ತಲೆ ಎತ್ತೋ ಹಾಗೇ ಇರೊಲ್ಲ. ಆದ್ದರಿಂದ, ಯಾವ ದಿಕ್ಕಿನಲ್ಲಿ ಅವಲಕ್ಷಣದ ಸೂಚನೆ ಕಾಣುತ್ತೋ ಆ ಕಡೆ ಹೆಜ್ಜೆ ಇಡೋದೇ ಇಲ್ಲ–ನಾನು"—ಎಂದರು, ಲಕ್ಷ್ಮೀಪತಯ್ಯ.

"ಆಹಾ ! ಅನುಮಾನವಿಲ್ಲ, ನೀನು ಮಾಡ್ಕೊಂಡಿರೋ ನಿಯಮ ಬಹಳ ಒಳ್ಳೇದು, ಲಕ್ಷ್ಮೀಪತಿ"

—ಎಂದರು ರಾಯರು. ಲಕ್ಷ್ಮೀಪತಯ್ಯ ಮುಂದುವರಿಯುತ್ತ,

"ಆದರೆ ನನ್ನಷ್ಟಕ್ಕೆ ನಾನೇ ಈ ಸ್ಥಳವನ್ನು ತಕ್ಕಮಟ್ಟಿಗೆ ಪರೀಕ್ಷಿಸಿದ್ದೇನೆ, ಶಂಕರ್ರಾವ್. ಇದನ್ನ ಮನೆ–ಅಂತ ಕರೆಯೋದೂ ಸ್ವಲ್ಪ ಹೆಚ್ಚಿನ ಮಾತು ಅನ್ನು. ಈ ಕಟ್ಟಡಕ್ಕೆ ಬೇರೆ ಬಾಗಿಲು ಯಾವುದೂ ಇಲ್ಲ, ಇದೊಂದೇ ಬಾಗಿಲು. ಹೆಚ್ಚು ಕಡಿಮೆ ಸದಾ ಈ ಬಾಗಿಲು ಮುಚ್ಚೇ ಇರುತ್ತೆ. ಈ ಬಾಗಿಲನ್ನು ಉಪಯೋಗಿಸುವವನು ಅಂದರೆ, ಎಲ್ಲೋ ಬಹಳ ಅಪರೂಪಕ್ಕೆ, ಆ ಕೇಡಿಗ. ಅವನು ಹೊರತು ಇನ್ಯಾರೇ ಆಗಲಿ, ಈ ಬಾಗಿಲನ್ನು ತೆರೆದು ಒಳಗೆ ಹೋಗೋದನ್ನಾಗಲಿ, ಹೊರಕ್ಕೆ ಬರೋದನ್ನಾಗಲಿ ನಾನು ಕಂಡಿಲ್ಲ. ಮೇಲಿನ ಮಹಡಿಗೆ, ಅಂಗಳದ ಒಳಪಾರ್ಶ್ವಕ್ಕೆ ಎದುರಾಗಿ ಮೂರು ಕಿಟಕಿಗಳಿವೆ. ಕೆಳಮಟ್ಟದಲ್ಲಿ ಕಿಟಕಿ ಗಿಟಕಿ ಏನೂ ಇಲ್ಲ. ಮೇಲುಗಡೆ ಇರುವ ಆ ಕಿಟಕಿಗಳು ಸದಾ ಮುಚ್ಚಿಯೇ ಇರುತ್ತವೆ. ಆದರೂ ಅವು, ಧೂಳುಗೀಳು ಮುಚ್ಚದೆ ಚೊಕ್ಕಟವಾಗಿರೋದನ್ನ ನೋಡಿದರೆ, ಉಪಯೋಗದಲ್ಲಿವೆ—ಅಂತ ಹೇಳಬಹುದು. ಹಿಂಭಾಗದಲ್ಲಿ, ಈ ಕಟ್ಟಡಕ್ಕೆ, ಹೊಗೆ ಹೋಗೋ ಚಿಮಿನಿ ಇದೆ. ಅದರಲ್ಲಿ ಸಾಮಾನ್ಯವಾಗಿ ಹೊಗೆಯಾಡುತ್ತಲೇ ಇರುತ್ತೆ. ಅಂದಮೇಲೆ, ಇದರಲ್ಲಿ ಯಾರೋ ವಾಸಿಸುತ್ತಿದ್ದಾರೇಂತ ಊಹಿಸಬಹುದು; ಆದರೆ, ಖಂಡಿತ ಹೇಳೋ ಹಾಗಿಲ್ಲ"—ಎಂದರು, ಲಕ್ಷ್ಮೀಪತಯ್ಯ.

"ಯಾಕೆ ?"—ಎಂದು ಕೇಳಿದರು, ಬ್ಯಾರಿಸ್ಟರು.

"ಇದು ನಗರದ ಬಹು ಪುರಾತನವಾದ ಭಾಗ, ಶಂಕರ್ರಾವ್. ನೋಡು ಇಲ್ಲಿ ಕಟ್ಟಡಗಳು ಕಿಕ್ಕಿರಿದು ಒಂದಕ್ಕೊಂದು ಅಂಟಿಕೊಂಡಿವೆ. ಆ ಚಿಮನಿ ಈ ಕಟ್ಟಡಕ್ಕೇ ಸೇರಿದ್ದೋ–ಅಥವಾ ಪಕ್ಕದ ಕಟ್ಟಡಕ್ಕೆ ಸೇರಿದ್ದೋ–ಹೊರಗಿನಿಂದ ಗೊತ್ತಾಗೊಲ್ಲ"—ಎಂದರು ಲಕ್ಷ್ಮೀಪತಯ್ಯ.

"ಹ್ಞಾ ! ಸರಿ–ಸರಿ, ನಿನ್ಮಾತು ನಿಜ–"—ಎಂದರು, ಶಂಕರರಾಯರು. ನಿಂತಲ್ಲೇ ಇಷ್ಟು ಮಾತು ಆದ ಮೇಲೆ, ಇಬ್ಬರೂ ಅಲ್ಲಿಂದ ಕದಲಿದರು. ಸ್ವಲ್ಪ ದೂರ ಇಬ್ಬರೂ ಮೌನವಾಗಿಯೇ ನಡೆದರು. ಅನಂತರ ಬ್ಯಾರಿಸ್ಟರ್ ಶಂಕರರಾಯರು, ತಮ್ಮ ಮಿತ್ರರನ್ನುದ್ದೇಶಿಸಿ,

"ಅಯ್ಯಾ ಲಕ್ಷ್ಮೀಪತಿ, ಇನ್ನೊಬ್ಬರ ವಿಷಯವನ್ನು ತೀರ ಕೆದಕಿ ನೋಡೋಕೆ ಹೋಗಬಾರದು–ಅನ್ನೋ ಮಾತ್ನ ನಾನೂ ಒಪ್ತೀನಿ. ಆದರೂ, ನಿನ್ನನ್ನ ಒಂದು ಪ್ರಶ್ನೆ ಕೇಳಬೇಕೂಂತ ಅನ್ನಿಸ್ತಾ ಇದೆ. ಉತ್ತರ ಕೊಡೋದೂ ಬಿಡೋದೂ ನಿನಗೆ ಸೇರಿದ್ದು"—ಎಂದರು.

"ಅದೇನು ಕೇಳು, ನೋಡೋಣ ?"

"ಆ ಬೆಳಗಿನ ಜಾವದಲ್ಲಿ ನೀನು ಹಿಡಿದು ದಂಡ ಕೊಡಿಸಿದೆಯಲ್ಲ, ಆ ಮನುಷ್ಯನ ಹೆಸರನ್ನು ನೀನು ತಿಳಿದುಕೊಂಡೆಯಾ, ತಿಳಿದುಕೊಂಡಿದ್ರೆ–ಹೆಸರೇನೂಂತ."

"ಓ ಅವನ ಹೆಸರೇ !–ತಿಳಿದುಕೊಂಡೆ. ಅದನ್ನ ತಿಳಿಸೋದರಲ್ಲಿ ಏನೂ ಬಾಧಕವಿಲ್ಲ–ಅವನ ಹೆಸರು ಗುಪ್ತ–ಅಂತ."

"ಅದು ಪೂರ್ತಿ ಹೆಸರಲ್ಲ."

"ಕಾಮೇಶ್ ಗುಪ್ತ–ಅಂತ"

"ಕಾಮೇಶ ಗುಪ್ತ ! ಹುಮ್–ಸರಿ, ನೋಡೋದಕ್ಕೆ ಹೇಗಿದ್ದಾನೆ ಮನುಷ್ಯ ?"

"ಹ್ಞಾ ! ಅವನನ್ನು ವರ್ಣಿಸೋದು ಅಷ್ಟು ಸುಲಭವಲ್ಲ, ಶಂಕರ್ರಾವ್ ! ಅವನ ಆಕೃತೀಲಿ–ಇಡೀ ನೋಟಕ್ಕೆ, ಏನೋ ವಕ್ರತೆಯ ಅಥವಾ ವಿಕಲತೆಯ ದೋಷ ಎದ್ದು ಕಾಣುತ್ತೆ. ನೋಡಿದೋರು ಯಾರೇ ಆಗಲಿ, ಅವರಲ್ಲಿ ಅಸಹ್ಯ–ಅಸಮಾಧಾನ–ತುಚ್ಛತೆಗಳನ್ನು ಹುಟ್ಟಿಸುತ್ತೆ. ಅಷ್ಟೇ ಅಲ್ಲ, ಪ್ರಪಂಚದಲ್ಲಿ ಅದಕ್ಕೆ ಮೀರಿದ

ಹೇಯವಾದ ವಿಕಲ–ವಿಕಟಾಕೃತಿ ಇರಲಾರದು ಅನ್ನಿಸುತ್ತೆ. ಇನ್ನೊಂದು ವಿಷಯ ಶಂಕರ್ರಾವ್ ; ಮುಖ ಆತ್ಮವನ್ನು ಪ್ರತಿಬಿಂಬಿಸುತ್ತೆ–ಅನ್ನೋ ಮಾತು ನಿಜವಾದರೆ, ಅವನಿಗೆ ಆತ್ಮ ಅನ್ನೋದು ಏನಾದರೂ ಇದ್ದರೆ–ಅದೂ ಅವನ ರೂಪದಷ್ಟೇ ವಿಕಾರವಾಗಿರಬೇಕೂಂತ ಖಂಡಿತವಾಗಿ ಅನ್ನಿಸುತ್ತೆ ! ವಿವರವಾಗಿ ಹುಡುಕಿದರೆ, ಅವನ ವಿಕಲತೆ ಎಲ್ಲಿ–ಎಂದು ಪತ್ತೆ ಮಾಡೋಕಾಗಲ್ಲ. ಆದರೆ ಒಟ್ಟು ನೋಟಕ್ಕೆ ಅವನ ವೈಕಲ್ಯ ತೀರ ಸತ್ಯ. ಅಯ್ಯಾ, ನಿಜವಾಗಲೂ, ಅಂಥಾ ಅಸಹ್ಯವಾದ ಪುರುಷಾಮೃಗ ಇನ್ನೊಂದನ್ನು ಇದುವರೆಗೆ ನಾನು ನೋಡಿಲ್ಲ !–ಅಂಥಾ ಅಸಾಧಾರಣ ವ್ಯಕ್ತಿ ಅವನು ! ಆ ಅವಲಕ್ಷಣ ವ್ಯಕ್ತಿಯಿಂದ ಉಂಟಾಗುವ ಭಾವವಿಕಾರವನ್ನು ವರ್ಣಿಸೋಕೆ, ಬಹುಶಃ, ಪ್ರಪಂಚದ ಯಾವ ಭಾಷೆಯಲ್ಲೂ ಮಾತುಗಳು ಸಿಕ್ಕಲಾರವು ! ಅದು, ನೋಡಿದವರೆಲ್ಲರ ಅನುಭವಕ್ಕೆ ಮಾತ್ರ ಒಂದೇ ರೀತಿಯಾಗಿ ಗೋಚರವಾಗೋ ವಿಷಯ, ಶಂಕರ್ರಾವ್ ! ಒಟ್ಟಿನಲ್ಲಿ ಹೇಳೋದಾದರೆ, ಅವನೊಂದು ಬಿಡಿಸಲಾಗದ ಒಗಟೆಯಾಗಿದ್ದಾನೆ ನನಗೆ. ಆಹಾ! – ಈಗಲೂ ಕಣ್ಣಿಗೆ ಕಟ್ಟಿದ ಹಾಗಿದೆ, ಅವನ ಆ ಕರಾಳ ರೂಪ !"

—ಎಂದು ಮೌನವಾದರು, ಲಕ್ಷ್ಮೀಪತಯ್ಯ. ಅವರ ಮಾತುಗಳನ್ನು ಕೇಳಿ ಶಂಕರರಾಯರು ಯೋಚನಾಪರರಾದರು. ಅದರ ಭಾರದಲ್ಲಿ ಇನ್ನು ಸ್ವಲ್ಪದೂರ ಮೌನವಾಗಿ ನಡೆದು ಅನಂತರ, ಅವರ ಕಡೆ ತಿರುಗಿ,

"ಆ ಮನುಷ್ಯ ಆ ಬಾಗಿಲನ್ನು ತೆಗೆಯೋದಕ್ಕೆ ಬೀಗದ ಕೈಯನ್ನು ಉಪಯೋಗಿಸಿದಾಂತ ನಿನಗೆ ಖಾತ್ರಿಯೇ, ಲಕ್ಷ್ಮೀಪತಿ ?"

—ಎಂದು ಕೇಳಿದರು. ಈ ಪ್ರಶ್ನೆಯಿಂದ, ಲಕ್ಷ್ಮೀಪತಯ್ಯನವರಿಗೆ ಹೊಡೆದೆಬ್ಬಿಸಿದಷ್ಟು ಆಶ್ಚರ್ಯವಾಯಿತು. ಅವರು,

"ಅಯ್ಯಾ ಶಂಕರ್ರಾವ್ !—"—ಅನ್ನುವಷ್ಟರಲ್ಲೇ ಲಾಯರು,

"ಹ್ಞಾ ! ಹ್ಞಾ ! ನಾಬಲ್ಲೆ, ಲಕ್ಷ್ಮೀಪತಿ. ಆ ಚೆಕ್ಕಿನ ಸಂಬಂಧವಾಗಿ ನಾನು ಆ ಇನ್ನೊಬ್ಬ ವ್ಯಕ್ತಿಯ ಹೆಸರನ್ನು ಕೇಳದೇ ಇರೋದಕ್ಕೆ, ನನಗೆ ಅದು ತಿಳಿದುಹೋಗಿರೋದೇ ಕಾರಣ, ಗೊತ್ತಾಯ್ತೇ ಲಕ್ಷ್ಮೀಪತಿ ? ಅಂದ ಮೇಲೆ, ಮಿತ್ರಾ, ನೀನು ಹೇಳಿದ ಕಥೆ ನನ್ನ ತಲೆಗೆ ಪೂರ್ತಿ ಹೊಕ್ಕಿದೆ ! ಅವನು ಬೀಗದಕೈ ಉಪಯೋಗಿಸಿದ ಅಂತ ನೀನು ಹೇಳಿದ್ದು ನಿಜವಾದರೆ, ಅದು ಒಂದು ರೀತೀಲಿ ಕಥೆಗೂ ಬೀಗದಕೈ ಆಗೋ ಹಾಗೆ ನನಗೆ ತೋರ್ತಾ ಇದೆ ! ಆದ್ದರಿಂದ ಬೀಗದಕೈ ವಿಷಯವಾಗಿ ನಿನ್ನನ್ನ ಪ್ರಶ್ನೆ ಮಾಡಿದೆ, ಕಥೆ ಎಲ್ಲಾ ವಿವರದಲ್ಲೂ ಸ್ಪಷ್ಟವಾಗಿರಲೀಂತ"

—ಎಂದರು. ಲಕ್ಷ್ಮೀಪತಯ್ಯನವರಿಗೆ ಸ್ವಲ್ಪ ಅಸಮಾಧಾನವಾಯಿತು. ಅದಕ್ಕೆ ಕಾರಣ, ತಾವು ಒಂದು ಹೆಸರನ್ನು ಬೇಕಂತಲೇ ಮರೆಸಿದ್ದರೂ, ತಮ್ಮ ಮಿತ್ರರು ಯಾವುದೋ ರೀತಿಯಲ್ಲಿ ಅದನ್ನ ಊಹಿಸಿಬಿಟ್ಟರಲ್ಲಾ–ಎಂಬುದು. ಅವರು,

"ಆಹಾ, ನೀನು ಮೊದಲೇ ಎಚ್ಚರಿಕೆ ಕೊಡಬಾರದಾಗಿತ್ತೇ ? ಇನ್ನೊಬ್ಬ ವ್ಯಕ್ತಿಯ ಹೆಸರು, ಯಾರಿಗೇ ಆಗಲೀ, ನನ್ನಿಂದ ಪತ್ತೆಯಾಗೋದು ನನಗೆ ಇಷ್ಟವಿರಲಿಲ್ಲ ; ಅದಕ್ಕೇ ಅದನ್ನು ಮರೆಸಿ ಕಥೆ ಹೇಳಿದೆ. ಹುಂ ! ಅಚಾತುರ್ಯ ನಡೆದುಹೋಯಿತು ! ಏನೇ ಆಗಲಿ, ಶಂಕರ್ರಾವ್, ನಾನೇನೋ ಒಂದನ್ನೂ ಬಿಡದೆ ಬಾಯಿಪಾಠ ಒಪ್ಪಿಸಿದ ಹಾಗೆ ಹೇಳಿದ್ದೇನೆ. ಯಾವುದನ್ನೂ ಬಿಟ್ಟಿಲ್ಲ , ಇಲ್ಲದ್ದನ್ನು ಸೇರಿಸಿಲ್ಲ. ಆ ಮನುಷ್ಯನ ಬಳಿ ಒಂದು ಬೀಗದ ಕೈ ಇತ್ತು–ಸುಮಾರು ಒಂದು ಚೋಟುದ್ದದ ಬೀಗದಕೈ. ಬಾಗಿಲ ಒಳಪಕ್ಕಕ್ಕಿದ್ದ ಬೀಗವನ್ನು ಹೊರಗಿನಿಂದ ತೆರೆಯೋಹಾಗೆ ರಂಧ್ರವಿತ್ತು. ಆ ಬೀಗದ ಕೈ ಅವನ ಹತ್ತಿರ ಈಗಲೂ ಇದೆ"—ಎಂದರು.

"ಆಹಾ ! ನಿನಗೆ ಹೇಗೆ ಗೊತ್ತು–ಅವನ ಬಳಿಯೇ ಇದೆ ಅಂತ ?' '

–ಎಂದು ಕೇಳಿದರು ಲಾಯರು.

"ನಾನು ಹೇಳಲಿಲ್ವೇ, ಅವನೊಬ್ಬನೇ ಆ ಬಾಗಿಲಲ್ಲಿ ಹೋಗಿ ಬಂದು ಮಾಡುತ್ತಿರೋನು–ಅಂತ. ಅವನು ಈಚೆಗೆ, ಒಂದು ವಾರದಿಂದೀಚೆಗೆ, ಅದನ್ನ ಉಪಯೋಗಿಸಿದ್ದನ್ನು ನಾನೇ ಕಣ್ಣಾರೆ ನೋಡಿದ್ದೇನೆ"

—ಎಂದರು, ಲಕ್ಷ್ಮೀಪತಯ್ಯ. ಬ್ಯಾರಿಸ್ಟರ್ ಶಂಕರರಾಯರು ಮಾತನಾಡದೆ ದೀರ್ಘವಾಗಿ ನಿಟ್ಟುಸಿರು ಬಿಟ್ಟರು. ಲಕ್ಷ್ಮೀಪತಯ್ಯ,

"ನೋಡು ಶಂಕರ್ರಾವ್, ಇನ್ನೊಬ್ಬರಿಗೆ ಸಂಬಂಧಪಟ್ಟ ವಿಷಯ ಬಾಯಿ ಬಿಡಬಾರದು ಅನ್ನೋದಕ್ಕೆ ಇದೇ ನಿದರ್ಶನ ! ಈ ಬೀದಿಗೆ ಬಂದು ಆ ಬಾಗಿಲನ್ನು ನೋಡಿದ್ದರಿಂದ, ನನ್ನ ನಾಲಗೆ ಬಿಚ್ಚಿತು. ಪ್ರಪಂಚದಲ್ಲಿ ಒಡಕಬಾಯಿಂದ ಆಗೋ ಅನಾಹುತ ಅಷ್ಟಿಷ್ಟಲ್ಲ ! ಸರಿ ಮಿತ್ರ, ಇದುವರೆಗೂ ಮಾತಾಡಿದಷ್ಟನ್ನು, ಆಕಸ್ಮಿಕವಾಗಿ

ಮಾತಾಡಿದ್ದಾಗಿಹೋಯ್ತು. ಇನ್ನು ಮುಂದೆ ಈ ವಿಷಯಾನ ಪ್ರಸ್ತಾಪಿಸೋದಿಲ್ಲಾಂತ, ಇಬ್ರೂ ಒಪ್ಪಂದ ಮಾಡಿಕೊಂಡು ಬಿಡೋಣ"–ಎಂದರು. ಶಂಕರರಾಯರು,

"ಓಹೋ ! ಅಗತ್ಯವಾಗಿ–ಲಕ್ಷ್ಮೀಪತೀ–ಹೃತ್ಪೂರ್ವಕವಾಗಿ ! ಬೇಕಾದರೆ–ಭಾಷೆ ಕೊಡ್ತೇನಿ–ಎಲ್ಲಿ ?" —ಎಂದು, ತಮ್ಮ ಗೆಳೆಯರ ಕೈಯಲ್ಲಿ ಕೈ ಇಟ್ಟು ಮಾತು ಕೊಟ್ಟರು.

## ೨. ಗುಪ್ತನಿಗಾಗಿ ತನಿಖೆ

ಆ ದಿನ ಸಂಜೆ ತಮ್ಮ ಮನೆಗೆ ಹಿಂತಿರುಗಿದಾಗ, ಬ್ಯಾರಿಸ್ಟರ್ ಶಂಕರರಾಯರು ತೀರ ಖಿನ್ನಮನಸ್ಕರಾಗಿದ್ದರು. ನಿರಾಸಕ್ತರಾಗಿ ರಾತ್ರಿಯ ಊಟ ಮುಗಿಸಿದರು. ಭಾನುವಾರಗಳಲ್ಲಿ, ರಾತ್ರಿ ಊಟವಾದ ಮೇಲೆ, ತಮ್ಮ ಪ್ರತ್ಯೇಕವಾದ ಆಫೀಸು ಕಟ್ಟಡದ ವ್ಯಾಸಂಗದ ಕೊಠಡಿಯಲ್ಲಿ ಸೋಫಾದ ಮೇಲೆ ಕುಳಿತು, ಒಂದು ಹವಾನಾ ಚುಟ್ಟವನ್ನು ಹಚ್ಚಿಕೊಂಡು, ಯಾವುದಾದರೂ ಧರ್ಮಗ್ರಂಥವನ್ನು ಓದುತ್ತಿದ್ದರು. ಆಫೀಸಿನ ಗೋಡೆ ಗಡಿಯಾರದಲ್ಲಿ ಮಧ್ಯರಾತ್ರಿಯ ಹನ್ನೆರಡನೇ ಗಂಟೆ ಹೊಡೆದ ಕೂಡಲೆ, ಪುಸ್ತಕವನ್ನು ಮುಚ್ಚಿಟ್ಟು–ಕೊಠಡಿಗೆ ಬೀಗಹಾಕಿ, ತಮ್ಮ ಶಯನಾಗಾರಕ್ಕೆ ಹೋಗುತ್ತಿದ್ದರು. ಇದು ಬ್ಯಾರಿಸ್ಟರ ಪದ್ಧತಿಯಾಗಿತ್ತು.

ಆದರೆ, ಈ ರಾತ್ರಿ ಮಾತ್ರ ಅವರು ತಮ್ಮ ವಾಡಿಕೆಯಂತೆ ಆಚರಿಸಲಿಲ್ಲ. ಊಟವನ್ನು ಅವಸರದಲ್ಲಿ ಮುಗಿಸಿ, ನೇರವಾಗಿ ತಮ್ಮ ಆಫೀಸು ಕೊಠಡಿಗೆ ಹೋದರು. ಕೊಠಡಿಯ ದ್ವೀಪದ ಸ್ವಿಚ್ಚು ಹಾಕಿ, ಬಾಗಿಲನ್ನು ಮುಚ್ಚಿ ಅಗಳಿ ಹಾಕಿ, ತಮ್ಮ ಮೇಜಿನ ಬಲಪಕ್ಕದಲ್ಲಿದ್ದ ಕಬ್ಬಿಣದ ಪೆಟ್ಟಿಗೆಯ ಬಾಗಿಲನ್ನು ತೆರೆದರು. ಅದರ ಒಂದು ರಹಸ್ಯವಾದ ಖಾನೆಯಿಂದ, ಒಂದು ಉದ್ದವಾದ ಲಕೋಟೆಯನ್ನು ಈಚೆಗೆ ತೆಗೆದು ಮೇಜಿನ ಮೇಲಿಟ್ಟುಕೊಂಡರು. ಲಕೋಟೆಯ ಮೇಲೆ "ಡಾ॥ ಹರಿವಿಠಲ್–ರವರ ಉಯಿಲು" ಎಂಬುದಾಗಿ ಬರವಣಿಗೆಯಿತ್ತು. ಶಂಕರರಾಯರು, ಒಂದು ಚುಟ್ಟ ಹಚ್ಚಿಕೊಂಡು, ಲಕೋಟೆಯೊಳಗಿದ್ದ ಪತ್ರವನ್ನು ಈಚೆಗೆ ತೆಗೆದರು; ಕನ್ನಡಕ ಧರಿಸಿ, ಮೇಜಿನ ಎಲೆಕ್ಟ್ರಿಕ್ ದೀಪದ ಸ್ವಿಚ್ ಹಾಕಿ, ಅದರ ಬೆಳಕಿನಲ್ಲಿ , ಹುಬ್ಬು ಗಂಟಿಕ್ಕಿ, ಪತ್ರವನ್ನು ಪರೀಕ್ಷಿಸತೊಡಗಿ ದರು.

ಆ ಉಯಿಲು ಪತ್ರದ ಬರವಣಿಗೆ, ಡಾ॥ ವಿಠಲ್‌ರವರ ಸ್ವಂತ ಕೈ ಅಕ್ಷರದಲ್ಲಿತ್ತು. ಅದು ಸೃಷ್ಟಿಯಾದ ನಂತರ, ಬ್ಯಾರಿಸ್ಟರ್ ಶಂಕರರಾಯರು ಅದರ ರಕ್ಷಣೆಯ ಭಾರವನ್ನು ವಹಿಸಿದ್ದರೂ, ಅದರ ತಯಾರಿಕೆಯ ವಿಷಯದಲ್ಲಿ ಯಾವ ತೆರನ ಸಹಾಯವನ್ನು ಮಾಡಲೂ ನಿರಾಕರಿಸಿದ್ದರು.

ಈ ಉಯಿಲಿನ ಪ್ರಕಾರ, ಡಾ॥ ಹರಿವಿಠಲ್–ರವರು ಮೃತಿಹೊಂದಿದ ಪಕ್ಷದಲ್ಲಿ, ಅವರ ಸಮಸ್ತ ಆಸ್ತಿಯೂ, ಅವರಿಗೆ "ಮಹೋಪಕಾರಿಯಾಗಿ ಪರಮಾಪ್ತನಾಗಿದ್ದ ಶ್ರೀಯುತ ಕಾಮೇಶ ಗುಪ್ತ–" ಎಂಬುವನಿಗೆ ಸಲ್ಲತಕ್ಕದ್ದೆಂದು ನಿರ್ದೇಶಿಸಲ್ಪಟ್ಟಿತ್ತಲ್ಲದೆ, ಪೂರ್ವೋಕ್ತ ಡಾ॥ ವಿಠಲ್–ರವರು "ಮೂರು ಸೌರಮಾನ ಮಾಸಗಳಿಗೆ ಮೀರಿದ ಯಾವುದೇ ಅವಧಿಯತನಕ ಅದೃಶ್ಯರಾದರೆ, ಅಥವಾ, ಅವರ ಗೈರುಹಾಜರಿಗೆ ಸಮರ್ಪಕವಾದ ವಿವರಣೆ ಇಲ್ಲದೇ ಹೋದರೆ," ಆಗಲೂ, ಡಾಕ್ಟರವರ ಆಶ್ರಿತವರ್ಗಕ್ಕೆ ನಿರ್ದೇಶಿತವಾದ ಕೆಲವು ಸಣ್ಣ ಮೊತ್ತಗಳನ್ನು ಸಲ್ಲಿಸುವುದರ ಹೊರತಾಗಿ, ಬೇರೆ ಯಾವ ಹೊರೆ–ಹೊಣೆಗಾರಿಕೆಗಳೂ ಇಲ್ಲದವನಾಗಿ, ಕಾಲವಿಳಂಬಮಾಡದೆ, ಪೂರ್ವೋಕ್ತ ಕಾಮೇಶ ಗುಪ್ತ ಎಂಬಾತನು, ಪೂರ್ವೋಕ್ತ ಹರಿವಿಠಲ್–ಎಂಬುವವರ ಸ್ಥಾನಕ್ಕೆ ಬರತಕ್ಕದ್ದು–ಎಂದು, ಖುದ್ದುರಾಜಿಯಿಂದ ಮಾಡಲ್ಪಟ್ಟ ನಿರ್ದೇಶವಿತ್ತು.

ಕಥನದ ಈ ಸನ್ನಿವೇಶದಲ್ಲಿ, ಪಾಠಕರು, ಡಾ॥ ಹರಿವಿಠಲ್‌ರವರ ಪರಿಚಯ ಮಾಡಿಕೊಳ್ಳಬೇಕಾದ್ದು ಅವಶ್ಯಕ.

ಹೆಚ್ಚು ಕಡಿಮೆ ಬ್ಯಾರಿಸ್ಟರ್ ಶಂಕರರಾಯರ ಸಮವಯಸ್ಕರೂ, ಅವರ ಕೆಲವೇ ಪರಮಾಪ್ತ ಗೆಳೆಯರಲ್ಲಿ ಒಬ್ಬರೂ ಆಗಿದ್ದ ಡಾ॥ ಹರಿವಿಠಲ್‌ರವರು, ನೋಡುವುದಕ್ಕೆ, ತಿಳಿ ಎಣ್ಣೆಗೆಂಪು ವರ್ಣದ ಸ್ಫುರದ್ರೂಪಿಯಾದ ವ್ಯಕ್ತಿಯಾಗಿದ್ದರು. ಅವರ ಹೆಚ್ಚು ಕಡಿಮೆ ಆರು ಅಡಿಗಳ ಎತ್ತರದ ಸುಪುಷ್ಟವಾದ ದೇಹವೂ, ಅದಕ್ಕೆ, ಚಚ್ಚೌಕವೂ ಅಗಲವೂ ಆದ ಭುಜಗಳೂ, ಅವರ ನೆಟ್ಟನೆಯ ನಿಲುವೂ, ಡಾಕ್ಟರ ವ್ಯಕ್ತಿತ್ವಕ್ಕೆ ಅಪೂರ್ವ ಧೀರತೆಯನ್ನೂ, ಅಸಾಧಾರಣ ಗಾಂಭೀರ್ಯವನ್ನೂ ಕೊಟ್ಟಿದ್ದವು. ಅವರ ತಲೆ ಕ್ರಾಪಿನ ಕೂದಲು ಅಲ್ಲಲ್ಲಿ ಬೆಳ್ಳಗಾಗತೊಡಗಿದ್ದವು. ಅವರ ಹಣೆ ಉನ್ನತವಾಗಿ ವಿಶಾಲವಾಗಿತ್ತು ; ಕೆಳದವಡೆ ಚಚ್ಚೌಕವಾಗಿ, ಗಲ್ಲ ದಪ್ಪನಾಗಿ, ಸ್ವಲ್ಪ ಮುಂದಕ್ಕೆ ಚಾಚಿತ್ತು ; ಮೀಸೆ ಬೋಳಿಸಿದ ಮೇಲು ತುಟಿ ತೆಳ್ಳಗಿತ್ತು ; ಕೆಳ ತುಟಿ ದಪ್ಪನಾಗಿ, ಸದಾ ಮೇಲುತುಟಿಯನ್ನು ಬಿಮ್ಮನೆ ಒತ್ತಿಕೊಂಡಿರು ತ್ತಿತ್ತು ; ಮೂಗು ಉನ್ನತವಾಗಿ ನೀಳವಾಗಿದ್ದು, ಅದರ ಬುಡ ಅಗಲವಾಗಿತ್ತು ; ಹೊಳ್ಳೆಗಳು ದೊಡ್ಡದಾಗಿದ್ದವು ; ಸ್ವಲ್ಪ ಉಬ್ಬಾಗಿದ್ದ ಹುಬ್ಬುಗಳು, ಬಹುಕಾಲ ಜಟಿಲವಾದ ಸಮಸ್ಯೆಗಳ ಚಿಂತನೆಯ ಫಲವಾಗಿ, ಶಾಶ್ವತವಾದ ಗಂಟನ್ನು ಪಡೆದಿದ್ದವು ; ಪೂರ್ಣವಾಗಿ

ತೆರೆಯದ, ಸ್ನಿಗ್ಧಕಾಂತಿಯ ಕಣ್ಣುಗಳ ನೋಟ, ಸದಾ ಅಂತರ್ಮುಖವಾಗಿದ್ದಂತೆ ತೋರುತ್ತಿತ್ತು ; ಮಾತನಾಡುವಾಗ ಅವರ ಧ್ವನಿ ಏರುಪೇರಿಲ್ಲದೆ-ಸಮಾನವಾಗಿ-ಮಂದ್ರ ವಾಗಿರುತ್ತಿತ್ತು.

ಡಾ॥ ಹರಿವಿಠಲ್-ರವರು, ನಾಲ್ಕಾರು ತಲೆಮಾರುಗಳಿಂದ ಆಯುರ್ವೇದ ಶಾಸ್ತ್ರದಲ್ಲಿ ದೇಶದಲ್ಲೆಲ್ಲ ಬಹು ಪ್ರಖ್ಯಾತವಾಗಿದ್ದ ಶ್ರೀಮಂತವಂಶದಲ್ಲಿ ಹುಟ್ಟಿದವರಾಗಿದ್ದರು. ಇವರಿಗೆ ಚಿಕ್ಕಂದಿನಿಂದಲೂ ವ್ಯಾಸಂಗ—ಜ್ಞಾನಾರ್ಜನೆಗಳಲ್ಲಿ ವಿಶೇಷವಾದ ಆಸಕ್ತಿಯಿತ್ತು . ತಮ್ಮ ವಂಶದ ವೃತ್ತಿಯಾಗಿದ್ದ ಆಯುರ್ವೇದ ಶಾಸ್ತ್ರದಲ್ಲಂತೂ ಇವರಿಗೆ ಅಪಾರ ಶ್ರದ್ಧೆಯೂ ಹೆಮ್ಮೆಯೂ ಇತ್ತು. ಬಾಲ್ಯದಿಂದಲೇ, ತಾತನವರ ಬಳಿ ಇವರಿಗೆ ಸಂಸ್ಕೃತ ಭಾಷಾ ವ್ಯಾಸಂಗವಾಯಿತು. ಭಾಷಾ ಪಾಂಡಿತ್ಯವನ್ನು ಪಡೆದ ಮೇಲೆ ಇವರು, ಆ ಭಾಷೆಯಲ್ಲಿದ್ದ ಚರಕ-ಸುಶ್ರುತ ಇತ್ಯಾದಿ, ಆಯುರ್ವೇದ ಗ್ರಂಥಗಳನ್ನು ಪರಿಸತೊಡಗಿದರು. ಇದರ ಫಲವಾಗಿ ಇವರಿಗೆ, ಹಿಂದುಗಳ ಆಯುರ್ವೇದ ಶಾಸ್ತ್ರದ ಮಹತ್ತೂ ಬೃಹತ್ತೂ ಗೋಚರವಾದವು.

ಬ್ರಿಟಿಷರ ಆಳ್ವಿಕೆ ಭಾರತದಲ್ಲಿ ಬೇರೂರಿದ ಮೇಲೆ, ಆಯುರ್ವೇದ ಹಿಂದೆ ಬಿದ್ದು, ಖಿಲವಾಗಿ, ಹೆಚ್ಚುಕಡಿಮೆ ಒಂದು ಶತಮಾನ ಕಾಲ, ಮುಂದುವರಿಯದೆ ನಿದ್ರಾವಸ್ಥೆಯಲ್ಲಿತ್ತು. ಪಾಶ್ಚಾತ್ಯ ರೀತಿಯ ವೈಜ್ಞಾನಿಕ ಸಂಶೋಧನೆಯ ರೀತಿಯಲ್ಲಿ ನಮ್ಮ ಆಯುರ್ವೇದ ಶಾಸ್ತ್ರವನ್ನೂ ಮುಂದುವರಿಸಿದರೆ, ಅದಕ್ಕೆ ಅದ್ಭುತವಾದ ಭವಿಷ್ಯ ಕಾದಿದೆ-ಎಂದು ಊಹಿಸಿ, ಹರಿವಿಠಲರ ತಂದೆ ಪಂಡಿತ ಗೋಪಿನಾಥವಿಠಲರು, ತಮ್ಮ ಕಾಲಕ್ಕೆ, ವಿಶೇಷ ದ್ರವ್ಯವನ್ನು ಖರ್ಚುಮಾಡಿ, ಒಂದು ಪ್ರಯೋಗಶಾಲೆಯನ್ನು ನಿರ್ಮಿಸಿ ಕೊಂಡಿದ್ದರು.

ಹರಿವಿಠಲರು ಒಂದು ಕಡೆ, ತಂದೆಯ ಬಳಿ ಆಯುರ್ವೇದ ಶಾಸ್ತ್ರವನ್ನೂ, ಇನ್ನೊಂದು ಕಡೆ, ಲೋಕನಗರದ ಪ್ರಖ್ಯಾತವಾದ ರಾಷ್ಟ್ರೀಯ ಕಾಲೇಜಿನಲ್ಲಿ ಪಾಶ್ಚಾತ್ಯ ವೈಜ್ಞಾನಿಕ ಶಾಸ್ತ್ರವನ್ನೂ ವ್ಯಾಸಂಗ ಮಾಡಿ, ತರುಣ ವಯಸ್ಸಿನಲ್ಲೇ, ರಸಾಯನ ಶಾಸ್ತ್ರದಲ್ಲಿ ಎಂ.ಎಸ್‌ಸಿ. ಪದವಿಯ ಮೊದಲನೇ ವರ್ಗದ ಅಗ್ರಸ್ಥಾನವನ್ನು ಪಡೆದರು. ಅನಂತರ, ಭಾರತ್ ವಿಜ್ಞಾನಮಂದಿರದಲ್ಲಿ ಒಂದು ವರ್ಷ ವ್ಯಾಸಂಗ ನಡೆಸಿ, ಜೀವರಸಾಯನ ಶಾಸ್ತ್ರದಲ್ಲಿ (Bio-Chemistry) ಅದ್ಭುತವೂ, ಬಹು ಪರಿಣಾಮಕಾರಿಯೂ ಆದ ಸಂಶೋಧನೆಯೊಂದನ್ನು ಯಶಸ್ವಿಯಾಗಿ ಪೂರೈಸಿ, ಡಿ.ಎಸ್‌ಸಿ. ಪದವಿಯನ್ನು ಪಡೆದರು. ಅನಂತರ ಚನ್ನಪುರಿಯ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ, ಎಂ.ಬಿ.ಬಿ.ಎಸ್. ಪದವಿಯಲ್ಲಿ ಉನ್ನತ ಮಟ್ಟದಿಂದ ತೇರ್ಗಡೆಯಾದರು. ಜೀವನೋಪಾಯಕ್ಕೆ ಕೊರತೆ ಇಲ್ಲದೇ ಇದ್ದ ಕಾರಣ, ಶುದ್ಧ ವೈದಿಕರಾಗಿದ್ದರೂ ನವೀನ ದೃಷ್ಟಿಯವರಾಗಿದ್ದ ಇವರ ತಂದೆ, ಪಾಶ್ಚಾತ್ಯ ವೈಜ್ಞಾನಿಕ ಸಂಶೋಧನಾಕ್ರಮದಲ್ಲಿ ಇನ್ನೂ ಹೆಚ್ಚಿನ ಜ್ಞಾನಾರ್ಜನೆ ಮಾಡಲು, ಮಗನನ್ನು ಲಂಡನ್ನಿಗೆ ಕಳಿಸಿದರು. ಶಸ್ತ್ರ ವೈದ್ಯಕ್ಕಿಂತ ಅನುಪಾನ ವೈದ್ಯದಲ್ಲೇ (Medicine) ಹೆಚ್ಚು ಆಸಕ್ತರಾಗಿದ್ದ ಈತ, ಲಂಡನ್ನಿನ ಎಂ.ಆರ್.ಸಿ.ಪಿ. ಎಂಬ ವೈದ್ಯಕೀಯ ಪದವಿಯನ್ನು ನಿರಾಯಾಸವಾಗಿ ಪಡೆದರು. ಅನಂತರ, ಎರಡು ವರ್ಷಗಳ ಕಾಲ ವಿಯನ್ನಾದಲ್ಲಿ ವ್ಯಾಸಂಗಮಾಡಿ, ವೈದ್ಯವೃತ್ತಿಯ ಅತ್ಯುನ್ನತ ಪದವಿಯಾದ ಎಂ.ಡಿ. ಪ್ರಶಸ್ತಿಯನ್ನು ಸಂಪಾದಿಸಿದರು. ವಿಯನ್ನಾದಲ್ಲಿದ್ದಾಗ ಇವರಿಗೆ ಸುಪ್ರಸಿದ್ಧರಾಗಿದ್ದ ಕೆಲವು ಮನಶ್ಶಾಸ್ತ್ರಜ್ಞರ ಪರಿಚಯವಾಯಿತು. ವೈದ್ಯವೃತ್ತಿ ಅನ್ನಮಯ ಶರೀರಕ್ಕೆ ಸಂಬಂಧಪಟ್ಟಿದ್ದರೆ, ಮನಶ್ಶಾಸ್ತ್ರವು, ಅನ್ನಮಯ ಶರೀರದ ಅಧಿಷ್ಠಾತ್ರಿಯಾದ ಮನಸ್ಸಿಗೇ ಸಂಬಂಧಪಟ್ಟುದಾದುದರಿಂದಲೂ, ಮನಸ್ಸಿಗೂ ದೇಹಕ್ಕೂ ನಿಕಟವಾದ ಬಾಂಧವ್ಯವಿದ್ದುದರಿಂದಲೂ, ಡಾ॥ ಹರಿವಿಠಲ್‌ರವರು, ವಿಯನ್ನಾದಲ್ಲಿ ಇನ್ನೆರಡು ವರ್ಷಗಳ ಕಾಲ, ಉದ್ದಾಮ ಪಂಡಿತರ ಬಳಿ ಅದರ ತೀವ್ರವಾದ ವ್ಯಾಸಂಗವನ್ನೂ ಮಾಡಿ, ಸ್ವದೇಶಕ್ಕೆ ಹಿಂತಿರುಗಿದರು.

ವಾಪಸು ಬಂದವರೇ ಡಾ॥ ವಿಠಲ್-ರವರು, ತಾವು ಕಲಿತಿದ್ದ ಆಯುರ್ವೇದವನ್ನೂ, ಪಾಶ್ಚಾತ್ಯ ವೈದ್ಯ ಮತ್ತು ರಸಾಯನ ಶಾಸ್ತ್ರಗಳನ್ನೂ ಸಮನ್ವಯ ಮಾಡುವ ನೂತನ ಸಂಶೋಧನೆಗಳಲ್ಲಿ ತೊಡಗಿದರು. ಅವಕ್ಕಾಗಿ ಕೆಲವು ಅತ್ಯಾಧುನಿಕ ಪಾಶ್ಚಾತ್ಯ ಯಂತ್ರೋಪಕರಣಗಳನ್ನೂ ಇತರ ಸಾಮಗ್ರಿಗಳನ್ನೂ ಸಂಗ್ರಹಿಸಿ, ತಂದೆಯ ಕಾಲದ ಪ್ರಯೋಗಶಾಲೆಯನ್ನು ಒಂದು ಸಂಶೋಧನಾ ಪ್ರಯೋಗಶಾಲೆಯನ್ನಾಗಿ (Research Laboratory) ಮಾಡಿಕೊಂಡರು.

ಮಗ ವಿದೇಶದಿಂದ ವ್ಯಾಸಂಗವನ್ನು ಮುಗಿಸಿ ಸ್ವದೇಶಕ್ಕೆ ಮರಳಿದ ನಾಲ್ಕನೇ ವರ್ಷ, ಪಂಡಿತ ಗೋಪಾಲವಿಠಲ-ರವರು, ವಯೋಧರ್ಮದಿಂದ ಕಾಲವಾದರು. ಅದುವರೆಗೂ ಕೇವಲ ಸಂಶೋಧನೆ ಕಾರ್ಯದಲ್ಲೇ ತೊಡಗಿದ್ದ ಡಾ॥ ಹರಿವಿಠಲ್‌ರವರು, ತಂದೆ ಕಾಲವಾದ ಮೇಲೆ, ಅವರ ವೃತ್ತಿಯನ್ನೂ ಕೈಕೊಳ್ಳಬೇಕಾಯಿತು. ಆಯುರ್ವೇದ ಶಾಸ್ತ್ರದಲ್ಲಿ ಬಹು ಪುರಾತನವೂ ಪ್ರಸಿದ್ಧವೂ ಆಗಿದ್ದ ವಂಶಸ್ಥರಾಗಿ, ಆ ವಿದ್ಯೆಯಲ್ಲಿ ತಂದೆಯಂತೆಯೇ ಉದ್ದಾಮ ಪಂಡಿತರಾಗಿ, ಜೊತೆಗೆ, ಅತ್ಯಾಧುನಿಕ ಪಾಶ್ಚಾತ್ಯ ವೈದ್ಯಶಾಸ್ತ್ರದ ವ್ಯಾಸಂಗವನ್ನೂ ಉನ್ನತ ಮಟ್ಟದಲ್ಲಿ ಪೂರೈಸಿ, ಎರಡು ರೀತಿಗಳನ್ನೂ ವೈಜ್ಞಾನಿಕವಾಗಿ ಸಮನ್ವಯಿಸುತ್ತಿದ್ದ ಡಾ॥ ಹರಿವಿಠಲ್‌ರವರ ವೈದ್ಯವೃತ್ತಿ,

ಲೋಕನಗರ ಅಷ್ಟರಲ್ಲೇ ಅಲ್ಲ–ಇಡೀ ದೇಶದಲ್ಲಿ, ಏಕಮೇವಾದ್ವಿತೀಯವಾದ ವೈಶಿಷ್ಟ್ಯದಿಂದ ಕೂಡಿದ್ದು, ಅವರ ಹೆಸರು ಜನಜನಿತವಾಗಲು ಕಾರಣವಾಯಿತು.

ಬ್ಯಾರಿಸ್ಟರ್ ಶಂಕರರಾಯರ ಮತ್ತು ಡಾ॥ ಹರಿವಿಠಲ್–ರವರ ಸ್ನೇಹ ಬಾಂಧವ್ಯ, ಬಾಲ್ಯದ ಕೆಳೆತನದಿಂದ ಬೆಳೆದು ಬಂದದ್ದಾಗಿತ್ತು. ಕಾಲೇಜು ವ್ಯಾಸಂಗ ಮುಗಿಯುವವರೆಗೂ ಇಬ್ಬರೂ ಸಹಪಾಠಿಗಳಾಗಿದ್ದರು. ಶಂಕರರಾಯರು ಇಲ್ಲಿ ಲಾ–ಪಾಸ್ ಮಾಡಿ, ಬಾರ್–ಅಟ್–ಲಾ ಪದವಿಯನ್ನು ಪಡೆಯಲು ಇಂಗ್ಲೆಂಡಿಗೆ ಹೋಗಿದ್ದ ಸಮಯದಲ್ಲೇ, ಡಾ॥ ವಿಠಲ್‌ರವರೂ, ಹೆಚ್ಚಿನ ವೈದ್ಯ ವಿದ್ಯಾ ವ್ಯಾಸಂಗಕ್ಕಾಗಿ ಅಲ್ಲಿಗೆ ಹೋಗಿದ್ದರು. ಅಲ್ಲಿ ಎರಡು ವರ್ಷಗಳ ಕಾಲ ಇಬ್ಬರೂ ಒಂದೇ ಕೊಠಡಿಯಲ್ಲಿ ವಾಸವಾಗಿದ್ದರು.

* * * *

ಶಂಕರರಾಯರ ವಶದಲ್ಲಿದ್ದ ಡಾ॥ ಹರಿವಿಠಲ್‌ರವರ ಉಯಿಲು ಪತ್ರ, ಅನೇಕ ದಿನಗಳಿಂದ ಅವರ ಕಣ್ಣುರಿಗೂ ಅಸಮಾಧಾನಕ್ಕೂ ಕಾರಣವಾಗಿತ್ತು. ಲಾಯರು ಸಂಪ್ರದಾಯಬದ್ಧವಾದ ಉಚಿತ ಜೀವನವನ್ನು ಮಾತ್ರ ಒಲಿದವರಾಗಿದ್ದರು. ವ್ಯವಹಾರ ದಲ್ಲಿ ವಿಲಕ್ಷಣ ವರ್ತನೆ, ಅವರ ಕಲ್ಪನೆಯಲ್ಲಿ ನೀತಿಬಾಹಿರವಾಗಿತ್ತು. ಆದಕಾರಣ ಅವರ ಕೈಲಿದ್ದ ಡಾಕ್ಟರ ಉಯಿಲು ಪತ್ರ, ಅವರ ಲಾಯರತನಕ್ಕೂ, ವಿಚಾರಶೀಲತೆಗೂ ಅಸಹ್ಯವಾಗಿತ್ತು. ಉಯಿಲಿನಲ್ಲಿ ಉಕ್ತನಾಗಿದ್ದ ಕಾಮೇಶಗುಪ್ತ–ಎಂಬುವವನ ಗುರುತು ಪರಿಚಯಗಳು ಲಾಯರಿಗೆ ಇದುವರೆಗೂ ಇಲ್ಲದೆ ಇದ್ದದ್ದು, ಅವರ ಅಸಮಾಧಾನಕ್ಕೆ ಮುಖ್ಯ ಕಾರಣವಾಗಿತ್ತು. ಈಗ–ಇದ್ದಕ್ಕಿದ್ದ ಹಾಗೇ–ಅವರಿಗೆ ಕಾಮೇಶಗುಪ್ತನ ವಿಷಯ ತಿಳಿದುಬಂದು, ಅವರ ಅಸಮಾಧಾನ ಕೆರಳಿತ್ತು. ಅವರ ಭಾಗಕ್ಕೆ ಕೇವಲ ಹೆಸರು ಮಾತ್ರ ಆಗಿದ್ದು, ಅದರ ವಿಷಯ ಹೆಚ್ಚು ತಿಳಿದುಕೊಳ್ಳಲಾರದೆ ಇದ್ದಾಗಲೇ ತಕ್ಕಮಟ್ಟಿಗೆ ಅನಿಷ್ಟವಾಗಿದ್ದ ಆ ಹೆಸರು, ಈಗ ಅತಿ ಹೇಯವಾದ ಗುಣಗಳಿಂದಲೂ ರೂಪದಿಂದಲೂ ಆರೋಪಿತವಾದ ಮೇಲೆ, ಅನಿಷ್ಟತಮವಾಯಿತು. ಇದುವರೆಗೂ, ಅಜ್ಞಾನ–ಎಂಬ ಅಸ್ಥೂಲವೂ ಚಂಚಲವೂ ಆಗಿದ್ದ ಮಂಜಿನ ಮುಸುಕಿನೊಳಗೆ ಅಗೋಚರವಾಗಿದ್ದ ಆ ಹೆಸರು, ಈಗ ಹಟಾತ್ತನೆ, ಸ್ಫುಟವಾದ ಪೈಶಾಚಿಕ ರೂಪ–ಗುಣಗಳನ್ನು ತಳೆದು, ಈಚೆಗೆ ನೆಗೆದು ಬಂದು ಅವರ ಮುಂದೆ ನಿಂತಿತ್ತು.

ಶ್ರೀಯುತ ಶಂಕರರಾಯರು, ತಮಗೆ ಅಷ್ಟು ಅಪ್ರಿಯವಾಗಿದ್ದ ಆ ಪತ್ರವನ್ನು ಮಡಿಸಿ ಲಕೋಟೆಯೊಳಗೆ ತೂರಿಸಿ, ಅದನ್ನು ಪುನಃ ತಮ್ಮ ಕಬ್ಬಿಣದ ಪೆಟ್ಟಿಗೆಯ ರಹಸ್ಯಸ್ಥಾನದಲ್ಲಿರಿಸಿದರು. ಇರಿಸುತ್ತ, ತಮ್ಮಷ್ಟಕ್ಕೆ ತಾವೇ,

'ಹುಹ್ ! ಇದು ಏನೋ ಒಂದು ತರಹ ಹುಚ್ಚೋ–ಖಯಾಲಿಯೋ ಅಂದುಕೊಂಡಿದ್ದೆ ! ಆದರೆ, ಲಕ್ಷ್ಮೀಪತಿ ಹೇಳಿದ್ದನ್ನು ಕೇಳಿದ ಮೇಲೆ, ಈಗ ಯೋಚಿಸಿದರೆ, ವಿಷಯ ತೀರ ಅವಮಾನಕರವಾಗಿರೋ ಹಾಗೆ ಕಾಣ್ತಾ ಇದೆ !'

—ಎಂದುಕೊಂಡರು.

ಲಾಯರು ಕಬ್ಬಿಣದ ಪೆಟ್ಟಿಗೆಯ ಬೀಗ ಹಾಕಿ, ಮೇಜಿನ ಮೇಲಿದ್ದ ಟೆಲಿಫೋನನ್ನು ಕೈಗೆ ತೆಗೆದುಕೊಂಡು, ತಮ್ಮ ಇನ್ನೊಬ್ಬ ಆಪ್ತ ಗೆಳೆಯರಾಗಿದ್ದ ಡಾಕ್ಟರ್ ಜಗನ್ನಾಥ್‌ರವರಿಗೆ ಡಯಲ್ ಮಾಡಿದರು. ಡಾಕ್ಟರು ಇನ್ನೂ ತಮ್ಮ ಷಾಪಿನಲ್ಲೇ ಇದ್ದರು. ಅವರು ಷಾಪಿನಲ್ಲೇ ಕಾದಿರಬೇಕೆಂದೂ, ತಾವು ಅವರನ್ನು ಸ್ವಲ್ಪ ಅವಸರದಲ್ಲಿ ನೋಡಬೇಕಾಗಿದೆಯೆಂದೂ ತಿಳಿಸಿ, ಫೋನನ್ನು ಕೆಳಗಿಟ್ಟು, ದೀಪ ಆರಿಸಿದರು. ಕೊಠಡಿಯ ಬೀಗವನ್ನು ಹಾಕಿಕೊಂಡು–ಮನೆಯೊಳಕ್ಕೆ ಹೋಗಿ, ಒಂದು ಶಾಲನ್ನು ಹೊದ್ದುಕೊಂಡು ಈಚೆಗೆ ಬಂದರು. ಗ್ಯಾರೇಜಿಗೆ ಹೋಗಿ ಕಾರನ್ನು ಹೊರಗೆ ತಂದು, ಅದರಲ್ಲಿ ಡಾ॥ ಜಗನ್ನಾಥ್‌ರವರ ಷಾಪಿನ ಕಡೆ ಹೊರಟರು.

ಡಾ॥ ಜಗನ್ನಾಥ್‌ರವರೂ ನಗರದ ಇನ್ನೊಬ್ಬ ಹೆಸರಾದ ವೈದ್ಯರಾಗಿದ್ದರು. ಶಂಕರರಾಯರ ಮತ್ತು ಡಾ॥ ಹರಿವಿಠಲ್‌ರವರ ಬಾಲ್ಯದ ಗೆಳೆಯರೂ–ಸಹಪಾಠಿಗಳೂ ಆಗಿದ್ದ ಅವರೂ, ಅಲ್ಲಿ ಇಲ್ಲಿ ವೈದ್ಯಶಾಸ್ತ್ರ ಪದವೀಧರರಾಗಿ, ಅನಂತರ ಲಂಡನ್ನಿಗೆ ಹೋಗಿ, ಅಲ್ಲಿ ಎಫ್.ಆರ್.ಸಿ.ಎಸ್. ಎಂಬ ಉನ್ನತವಾದ ಶಸ್ತ್ರಚಿಕಿತ್ಸಾ ಪದವಿಯನ್ನು ಸಂಪಾದಿಸಿ, ಜೊತೆಗೆ ಎಕ್ಸ್–ರೇ ಶಾಸ್ತ್ರದಲ್ಲೂ ಪಾಂಡಿತ್ಯವನ್ನು ಪಡೆದು ಸ್ವದೇಶಕ್ಕೆ ಹಿಂತಿರುಗಿ ಇಲ್ಲಿ, ಲೋಕನಗರದ ವೈದ್ಯವೃತ್ತಿಯವರ ಕೋಟೆ ಎನ್ನಿಸಿಕೊಂಡಿದ್ದ ಮಹಾವೀರ ಚೌಕದಲ್ಲಿ, ತಮ್ಮ ಸ್ವಂತ ಚಿಕಿತ್ಸಾಲಯವನ್ನು ಸ್ಥಾಪಿಸಿಕೊಂಡಿದ್ದರು. ಇವರ ವಯಸ್ಸೂ, ಹೆಚ್ಚು ಕಡಿಮೆ ಲಾಯರ ಮತ್ತು ಡಾ॥ ವಿಠಲ್‌ರವರ ವಯಸ್ಸೇ ಆಗಿತ್ತು.

ಡಾ॥ ಹರಿವಿಠಲ್‌ರವರ-ಹಾಗೂ ಅವರ ಉಯಿಲು ಪತ್ರದ ವಿಷಯವಾಗಿ, ಯಾವುದು ಹಟಾತ್ತನೆ ತಮಗೆ ಗಭೀರ ಸಮಸ್ಯೆಯಾಗಿತ್ತೋ ಅದನ್ನು ಬಗೆಹರಿಸಲು ಯಾರಾದರೂ ಇದ್ದರೆ, ಅವರು ಡಾಕ್ಟರ್ ಜಗನ್ನಾಥ್-ರವರೆಂದು ಸ್ವಾಭಾವಿಕವಾಗಿಯೇ ಬಗೆದು, ಬ್ಯಾರಿಸ್ಟರು ಅವರನ್ನು ಹುಡುಕಿಕೊಂಡು ಹೊರಟಿದ್ದರು.

ಲಾಯರನ್ನು ನಿರೀಕ್ಷಿಸುತ್ತಿದ್ದ ಡಾ॥ ಜಗನ್ನಾಥ್-ರವರು, ಕಾರಿನ ಸದ್ದು ಕೇಳಿದೊಡನೆಯೇ ಹೊರಕ್ಕೆ ಬಂದು, ತಮ್ಮ ಮಿತ್ರರನ್ನು ಸ್ವಾಗತಿಸಿ, ಒಳಗೆ ತಮ್ಮ ಸ್ವಂತ ಕೊಠಡಿಗೆ ಕರೆದೊಯ್ದರು.

ಡಾ॥ ಜಗನ್ನಾಥ್‌ರವರು ಲಾಯರಿಗಿಂತ ಕುಳ್ಳಾಗಿದ್ದರೂ, ಅವರ ದೇಹ ಲಾಯರ ದೇಹಕ್ಕಿಂತ ಸ್ಥೂಲವಾಗಿತ್ತು. ಆದರೂ ಅವರ ನಡೆಗೆ-ಚಲನವಲನಗಳಲ್ಲಿ ಬಹು ಚುರುಕಿತ್ತು. ನೋಡಿದ ಯಾರಿಗಾದರೂ ಅವರು ಅರೋಗದೃಢಕಾಯರೆನ್ನುವುದು ಸ್ಪಷ್ಟವಾಗುತ್ತಿತ್ತು. ಸದಾ ಹಸನ್ಮುಖವಾದ ಅವರ ಬೋಳುಮುಖವೂ, ಮಿಂಚುವ ಕಣ್ಣುಗಳೂ, ಮನುಷ್ಯ ತುಂಬ ವಿಶ್ವಾಸಿಯೆಂದು ಘೋಷಿಸುತ್ತಿದ್ದುವು. ಮಾತಿನಲ್ಲಿ ಉತ್ಸಾಹ-ಧಾರಾಳ-ಗಡಿಬಿಡಿ ಹೆಚ್ಚು. ವ್ಯವಹಾರದಲ್ಲಿ, ತುಂಬ ಶೀಲ-ಕಟ್ಟುನಿಟ್ಟು.

ಡಾಕ್ಟರ ಕೊಠಡಿಯಲ್ಲಿ ಇಬ್ಬರೂ ಒಂದು ಸೋಫಾದ ಮೇಲೆ ಕುಳಿತರು. ಡಾಕ್ಟರು ಒಂದು ಸಿಗರೇಟನ್ನು ಹಚ್ಚಿಕೊಂಡು, ಲಾಯರಿಗೆ ಒಂದು ಚುಟ್ಟ ಕೊಟ್ಟು-ಕಡ್ಡಿಗೀರಿ ಹಚ್ಚಿ ಹೊಗೆ ಎಳೆಯುತ್ತ, ಅವರನ್ನು ಕುರಿತು,

"ಏನು ಸಮಾಚಾರ-ಶಂಕರ್ ?"

—ಎಂದು ಕೇಳಿದರು. ಲಾಯರು ನೇರವಾಗಿ ಉತ್ತರ ಕೊಡದೆ,

"ಜಗನ್ನಾಥ್, ಹರಿವಿಠಲ್-ಗೆ ಬಹಳ ಹಳೆಯ-ಬಹಳ ಹತ್ತಿರದ ಸ್ನೇಹಿತರು-ಅಂದರೆ, ನಾನು ನೀನು ಇಬ್ಬರೇ ಅಲ್ವೇ-ಹೇಳು"—ಎಂದರು.

"ಬಹಳ ಹಳಬರು ಅನ್ನೋ ಮಾತು ನಿಜ ಶಂಕರ್; ಆದರೆ ಬಹಳ ಹತ್ತಿರದವರೂ ನಾವಿಬ್ರೇ ಹೌದೋ ಅಲ್ವೋ, ಅದನ್ನ ನಾವು ಹೇಗೆ ಹೇಳೋದು ? ಒಂದು ವೇಳೆ ಈ ಮಾತು ನಿಜವಾಗಿದ್ದರೂ, ಈಗ ಅದರ ಮಾತೇಕೆ ? ನಿಜ ಹೇಳೋದಾದರೆ, ಈಚೆಗೆ ನನ್ನ ಅವನ ಭೇಟಿಯೇ ಅಪರೂಪವಾಗಿಬಿಟ್ಟಿದೆ"—ಎಂದರು, ಡಾ॥ ಜಗನ್ನಾಥ್.

"ಆಹ್ಹಾ ! ಹಾಗೇನು ? ಆಶ್ಚರ್ಯ !"—ಎಂದರು, ಲಾಯರು.

"ಏಕೆ ಆಶ್ಚರ್ಯ ?"

"ಏಕೆ-ಅಂದರೆ, ಇಬ್ಬರದ್ದೂ ಒಂದೇ ಕಸಬು. ಇಬ್ಬರು ಹಳೇ ಸ್ನೇಹಿತರು ಒಂದೇ ಕಸಬನ್ನು ಹಿಡಿದರೆ, ಅವರವರ ಮಧ್ಯೆ ಸ್ನೇಹದ ಗಂಟು ಮತ್ತೂ ಬಲವಾಗುತ್ತಲ್ವೇ ?-ನಾನು ಹಾಗೇ ಭಾವಿಸಿದ್ದೆ-ಜಗನ್ನಾಥ್"

"ನಿಜ ನಿಜ ; ಆದರೆ ನಾವಿಬ್ರೂ ಡಾಕ್ಟರುಗಳೇ ಆದರೂ, ಅವನು ಮುಖ್ಯವಾಗಿ **ಫಿಸಿಷಿಯನ್**-ನಾನು ಮುಖ್ಯವಾಗಿ **ಸರ್ಜನ್**; ಆದರೂ ನೀನು ಹೇಳಿದ ಹಾಗೇ, ನಾವಿಬ್ಬರೂ ನಿತ್ಯ ಭೇಟಿಯಾಗುತ್ತಿದ್ದೆವು. ನಮ್ಮ ಕಸಬಿಗೆ ಸಂಬಂಧಪಟ್ಟ ವಿಷಯ ಬೇಕಾದಷ್ಟು ಚರ್ಚೆಮಾಡುತ್ತಿದ್ದೆವು. ಶಂಕರ್, ನಿಜವಾಗಲೂ ಹೇಳ್ತೀನಿ, ಅವನು ಬಹಳ ಬುದ್ಧಿವಂತ-ಮೇಧಾವಿ. ಪಾಶ್ಚಾತ್ಯ ವಿಜ್ಞಾನದ ತಳಹದಿಯ ಮೇಲೆ ಆಯುರ್ವೇದದ ಕಟ್ಟಡ ಕಟ್ಟುವ ಅವನ ಪ್ರಯತ್ನ, ಬಹಳ ಸೊಗಸಾದ್ದು ಅನ್ನೋದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೆ, ಸುಮಾರು ಹತ್ತು ವರ್ಷಗಳ ಹಿಂದೆ ಅವನ ಬುದ್ಧಿ ವಕ್ರದಾರಿ ಹಿಡಿಯಿತು. ಪಾಶ್ಚಾತ್ಯ ವೈಜ್ಞಾನಿಕ ಶಿಕ್ಷಣ ಪಡೆದವನು, ಅದರ ಶಕ್ತಿಯ ಮಿತಿ, ವ್ಯಾಪನೆಗಳನ್ನು ಮೀರಿದ ಕನಸು ಕಾಣತೊಡಗಿದ. ಸಾಮಾನ್ಯ ಜನರೂ-ಕವಿಗಳೂ ಅವನ ಹಾಗೆ ವಾದಿಸಿದರೆ, ಕ್ಷಮಿಸಬಹುದು; ಆದರೆ, ವೈಜ್ಞಾನಿಕವಾಗಿ ಅಷ್ಟು ಪಾಂಡಿತ್ಯ ಪಡೆದವನು ಹಾಗೆ ಮಾತಾಡೋದೂಂದ್ರೆ ಸಹಿಸೋದು ಕಷ್ಟ, ಶಂಕರ್‌ರಾವ್. ನಾವು ವೈದ್ಯರು—ಅದರಲ್ಲೂ, ಪಾಶ್ಚಾತ್ಯ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುವವರು—ಸ್ಥೂಲ ದೇಹಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಗಮನಿಸತಕ್ಕವರು. ಮನೋವ್ಯಾಪಾರ ನಮ್ಮ ಕಸುಬಿನಿಂದ ಹೊರಗಿರುವ ವಿಷಯ. ಪಾಶ್ಚಾತ್ಯ ಮನಶ್ಶಾಸ್ತ್ರ, ಇತ್ತೀಚೆಗೆ ಹುಟ್ಟಿಕೊಂಡ-ಇನ್ನೂ ಶೈಶವಾವಸ್ಥೆಯಲ್ಲಿರುವ ವಿಜ್ಞಾನ. ಮನಸ್ಸಿಗೂ ದೇಹಕ್ಕೂ ಸಂಬಂಧವಿದೆ-ನಿಜ. ಆದರೆ, ಅದರ ಸ್ವರೂಪ ಏನು-ಅನ್ನೋದು ಇನ್ನೂ ಅಸ್ಪಷ್ಟವಾಗಿದೆ. ಅದರ ಶಾಸ್ತ್ರ, ನಿಜ ಹೇಳುವುದಾದರೆ-ಇನ್ನೂ ಕೇವಲ ವೈಯಕ್ತಿಕವಾಗಿದೆ, ಮತ್ತು ವ್ಯಕ್ತಿಗಳಷ್ಟೇ ವೈವಿಧ್ಯವಾಗಿದೆ. ಮನಸ್ಸಿನ ನೂರಾರು, ಸಾವಿರಾರು ವ್ಯಾಪಾರಗಳು-ಇತರ ವಿಜ್ಞಾನಗಳಂತೆ ಪ್ರಯೋಗಕ್ಕೆ ಒಳಪಡತಕ್ಕವಲ್ಲ. ಆ ಶಾಸ್ತ್ರದ ಬಹು ಹೆಚ್ಚಿನ ಭಾಗ, ಕೇವಲ ಊಹಾಲೋಕಕ್ಕೆ ಸೇರಿದೆ-ಅಂತ ನನ್ನ ಭಾವನೆ. ವಿಠಲ ಇಂಗ್ಲೆಂಡಿನಿಂದ ವಾಪಸಾದಾಗಿನಿಂದ , ಸರಿಯಾದ ಅಂದರೆ, ಪಾಶ್ಚಾತ್ಯ ವಿಜ್ಞಾನಸಮ್ಮತ ವಾದ ಹಾದಿಯಲ್ಲಿ ತನ್ನ ಸಂಶೋಧನೆಗಳನ್ನು ನಡೆಸಿದ್ದಿದ್ದರೆ, ಈ ವೇಳೆಗೆ ಅವನಿಗೆ ಎಫ್.ಆರ್.ಎಸ್. ಪದವಿ ಸಿಕ್ಕುತ್ತಿದ್ದುದರಲ್ಲಿ ಅನುಮಾನವಿಲ್ಲ. ಬಹುಶಃ ನೊಬೆಲ್ ಬಹುಮಾನವೂ ಸಿಕ್ಕುತ್ತಿತ್ತೋ ಏನೋ ! ಆದರೆ, ಅವನು ಪಾಶ್ಚಾತ್ಯ ವಿಜ್ಞಾನದ ಕುದುರೆ ಹತ್ತಿ, ಮನಶ್ಶಾಸ್ತ್ರದ ಮರಳ್ಗಾಡಿನಲ್ಲಿ,

ನಿರಾಧಾರ ಕಲ್ಪನೆಯ ಬಿಸಿಲ್ಗುದುರೆಯನ್ನು ಬೆನ್ನಟ್ಟಿದ ! ಅಂದಿನಿಂದ, ನಾನೂ ಅವನೂ ದೂರವಾಗುತ್ತ ಬಂದೆವು. ನಾನು ಕೇವಲ ಮನುಷ್ಯ ಶಂಕರ್, ಈ ಭೂಮಿಗೆ ಅಂಟಿಕೊಂಡಿರುವವನು. ಅವನು ಆಕಾಶದಲ್ಲಿ ಹಾರಾಡೋ ಭ್ರಾಂತಿಪಕ್ಷಿಯಾಗಿದ್ದಾನೆ ! ಆದ್ದರಿಂದ, ನಾನೂ ಅವನೂ ಪರಸ್ಪರ ಸಮೀಪವಾಗಿರೋದು ಅಸಾಧ್ಯವಾಗಿದೆ. ಇಷ್ಟಾದರೂ, ಅವನೊಬ್ಬ ಹಳೇ ಸ್ನೇಹಿತ ಅನ್ನೋದನ್ನ ನಾನು ಮರೆತಿಲ್ಲ. ಅವನಲ್ಲಿ ಕೆಲವು ಬಹು ಒಳ್ಳೆಯ ಗುಣಗಳಿವೆ–ಶಂಕರ್. ಆದರೆ–ಹುಹ್ ! ಅವನ ಆ ಅಶಾಸ್ತ್ರೀಯವಾದ ಶುದ್ಧ ಅಸಂಬದ್ಧ ಪ್ರಲಾಪಗಳೂ, ಧೋರಣೆಗಳೂ, ಎಂತಹ ಪ್ರಾಣ ಸ್ನೇಹಿತರನ್ನೂ ಬೇರೆ ಮಾಡಿಬಿಡುತ್ತವೆ !"

—ಎಂದು ಹೇಳುವಾಗ, ಡಾ॥ ಜಗನ್ನಾಥ್‌ರವರ ಮುಖ ಕೆಂಪಗಾಯಿತು. ಡಾಕ್ಟರ ಈ ಕೋಪಪ್ರದರ್ಶನದಿಂದ ಬ್ಯಾರಿಸ್ಟರ್ ಶಂಕರರಾಯರ ಮನಸ್ಸು ಸ್ವಲ್ಪ ಹಗುರವಾದ ಹಾಗಾಯಿತು. ಲಾಯರು, ತಮ್ಮ ಕಸಬಿಗೆ ಸಂಬಂಧಪಟ್ಟ ನ್ಯಾಯಶಾಸ್ತ್ರದಲ್ಲಿ ಹೊರತು ಇತರ ವಿಜ್ಞಾನಶಾಸ್ತ್ರಗಳಲ್ಲಿ ಆಸಕ್ತರಾಗಿರಲಿಲ್ಲ. ಅವರು–"ಸರಿ, ಇಬ್ಬರೂ ವೈದ್ಯರು, ವಿಜ್ಞಾನಿಗಳು; ಇವರ ನಡುವೆ ತಮ್ಮ ಶಾಸ್ತ್ರಕ್ಕೆ ಸಂಬಂಧಪಟ್ಟ ಯಾವುದೋ ವಿಷಯದಲ್ಲಿ ಏನೋ ಅಭಿಪ್ರಾಯ ಭೇದವುಂಟಾಗಿದೆ–ಅಷ್ಟೇ ಹೊರತು, ಹೆಚ್ಚು ಪ್ರಮಾದವಾದ ಕಾರಣ ಏನೂ ಇರಲಾರದು"—ಎಂದು ಮನಸ್ಸಿನಲ್ಲೇ ಅಂದುಕೊಂಡು, ಬಿಸಿಯೇರಿದ್ದ ಡಾ॥ ಜಗನ್ನಾಥ್ ರವರ ಮನಸ್ಸು ತಣ್ಣಗಾಗಲು ಸ್ವಲ್ಪ ಅವಕಾಶ ಕೊಟ್ಟು, ಅನಂತರ ತಾವು ಬಂದಿದ್ದ ಉದ್ದೇಶವನ್ನು ನೆನೆದು,

"ಒಳ್ಳೇದು ಜಗನ್ನಾಥ್, ವಿಠಲನ ಸ್ನೇಹಿತನೋ ಆಶ್ರಿತನೋ ಆದ ಕಾಮೇಶ ಗುಪ್ತ–ಅಂತ ಒಬ್ಬ ಮನುಷ್ಯನ್ನ ನೀನು ಎಂದಾದರೂ ಕಂಡಿದ್ದೀಯಾ ?"—ಎಂದು ಕೇಳಿದರು.

"ಕಾಮೇಶ ಗುಪ್ತ–ಅಂತಾನೇ ? ಉಹುಂ–ಇಲ್ಲ ; ಆ ಹೆಸರನ್ನೇ ಕೇಳಿಲ್ಲ ನಾನು. ನನಗೂ ವಿಠಲನಿಗೂ ಬಿಟ್ಟು ಹೋದ ಮೇಲೆ ಆ ಸ್ನೇಹ ಉಂಟಾಗಿರಬೇಕು"—ಎಂದರು, ಡಾ॥ ಜಗನ್ನಾಥ್.

ಶಂಕರರಾಯರಿಗೆ ಡಾ॥ ಜಗನ್ನಾಥ್–ರವರಿಂದ ದೊರೆತ ಸಮಾಚಾರ ಇಷ್ಟೆ. ಅವರು ಡಾಕ್ಟರ ಮನೆಯಿಂದ ಹೊರಟು ಮನೆ ತಲುಪಿದರು. ಆ ರಾತ್ರೆ ಅವರು ಹಾಸಿಗೆಯ ಮೇಲೆ ಮಲಗಿದಾಗ ನಿದ್ರೆ ಬರಲಿಲ್ಲ ; ಸುಮ್ಮನೆ ಹಾಸಿಗೆಯಲ್ಲಿ ಹೊರಳಾಡುತ್ತ ರಾತ್ರಿಯನ್ನೆಲ್ಲ ಕಳೆದರು. ಅವರ ತಲೆ, ಅನೇಕಾನೇಕ ಉತ್ತರವಿಲ್ಲದ ಪ್ರಶ್ನೆಗಳ ಮುತ್ತಿಗೆಗೆ ತುತ್ತಾಗಿ ಸಿಡಿಯುತ್ತಿತ್ತು. ಗಾಢಾಂಧಕಾರದಲ್ಲಿ ಗೊಂಡಾರಣ್ಯದ ಮಧ್ಯೆ ದಾರಿತಪ್ಪಿ ತೊಳಲುತ್ತಿದ್ದವನಂತಾಗಿತ್ತು–ಅವರ ಮನಸ್ಸು. ಕಿಟಕಿಗಳಿಗೆ ತೆರೆ ಮುಚ್ಚಿದ್ದರಿಂದ, ಕೊಠಡಿಯಲ್ಲಿ ಇನ್ನೂ ಕತ್ತಲಾಗಿದ್ದರೂ, ಹೊರಗೆ ಹಕ್ಕಿಗಳು ಚಿಲಿಪಿಲಿಗುಟ್ಟುತ್ತ, ಬೆಳಕು ಹರಿಯುತ್ತಿತ್ತೆಂದು ಸೂಚನೆ ಕೊಡುತ್ತಿದ್ದುವು. ಶಂಕರರಾಯರು ಬೆಡ್‌ಸ್ವಿಚ್ ಹಾಕಿ, ಬೆಳಕಿನಲ್ಲಿ ಕೈಗಡಿಯಾರ ನೋಡಿಕೊಂಡರು; ಆರು ಗಂಟೆಯಾಗಿತ್ತು. ದೀಪ ಆರಿಸಿ, ಹಾಸಿಗೆಯ ಮೇಲೆ ಮಲಗಿಕೊಂಡೇ ಪುನಃ, ತಮ್ಮ ತಲೆಗೆ ಹೊಕ್ಕಿದ್ದ ಸಮಸ್ಯೆಯನ್ನು ತೋಡತೊಡಗಿದರು. ಇದುವರೆಗೂ ಈ ಸಮಸ್ಯೆ ಲಾಯರ ಬುದ್ಧಿಶಕ್ತಿಗೆ ಮಾತ್ರ ಸಂಬಂಧಿಸಿದ ವಿಷಯವಾಗಿತ್ತು ; ಆದರೆ ಈಗ, ಅವರ ತರ್ಕ–ಕಲ್ಪನೆಗಳೂ ಅದರ ವಿಷಯವಾಗಿ ಕೆಲಸಮಾಡತೊಡಗಿದ್ದವು—ಉಹುಂ–ಅಲ್ಲ, ಅವೂ ತೊಡಕಿನಲ್ಲಿ ಸಿಕ್ಕಿಬಿದ್ದಿದ್ದವು—ಎಂದರೆ, ಹೆಚ್ಚು ಸಮರ್ಪಕವಾಗಿರುತ್ತದೆ. ಎರಡು ಹಸ್ತದ ಬೆರಳುಗಳನ್ನೂ ಹೆಣೆದು ತಲೆಕೆಳಗೆ ಇಟ್ಟುಕೊಂಡು, ಅಂಗತ್ತನಾಗಿ ಮಲಗಿ ಯೋಚಿಸುತ್ತಿದ್ದಾಗ, ಅವರ ಮಿತ್ರ ಹಾಗೂ ಬಂಧು ಲಕ್ಷ್ಮೀಪತಯ್ಯನವರು ಹೇಳಿದ್ದ ವಿಚಿತ್ರ ಕಥೆಯ ಘಟನಾವಳಿಗಳು, ಅವರ ಮನೋನಯನಗಳ ಮುಂದೆ, ಬಹು ಸ್ಫುಟವಾದ ಸಿನಿಮಾ ಚಿತ್ರದಂತೆ ಸುಳಿದು ಹೋಗತೊಡಗಿದವು.........

.....ನಡುರಾತ್ರಿ ದಾಟಿದ ವೇಳೆ.....ಬೃಹತ್ತಾದ ಲೋಕನಗರ.....ನಿರ್ಜನ ನೀರವ ಬೀದಿಗಳು.....ಎಲ್ಲೆಲ್ಲೂ ದೀಪದ ಕಂಭಗಳ ಸಾಲುಗಳು..... ಆಗ ಹಟಾತ್ತನೆ, ಬೇಗಬೇಗ ನಡೆದು ಬರುತ್ತಿರುವ ಒಂದು ವಿಕಟ ಮನುಷ್ಯಾಕೃತಿ..... ಅವನ ಪಥಕ್ಕೆ ಅಡ್ಡವಾಗಿ ಅವಸರದಿಂದ ಬರುತ್ತಿರುವ ಹೆಂಗಸು. ಮನುಷ್ಯ– ಹೆಂಗಸಿನ ಢಿಕ್ಕಿ–ನೆಲದ ಮೇಲೆ ಬಿದ್ದ ಹೆಂಗಸು–ಅವಳನ್ನು ತುಳಿದ ಆ ನರಪಿಶಾಚಿ !.....ಹೆಂಗಸಿನ ಚೀರಾಟ.....ಅದನ್ನು ಕಿವಿಗೆ ಹಾಕಿಕೊಳ್ಳದೆ ಮುಂದಕ್ಕೆ ಹೋದ ಆ ನರಾಧಮ !–ಜನಗಳ ಗುಂಪು — ಓಡಿಹೋಗಿ ಆ ನೀಚನನ್ನು ಸೆರೆಹಿಡಿದ ಲಕ್ಷ್ಮೀಪತಿ......ಅಥವಾ,

.....ಒಂದು ಭವ್ಯವಾದ ಭವನ–ಅದರ ಶಯನಮಂದಿರ......ಅಲ್ಲಿ ಹಾಸಿಗೆಯ ಮೇಲೆ ಮಲಗಿ ನಿದ್ರಿಸುತ್ತಿದ್ದಾನೆ—ಹರಿವಿಠಲ.....ಅವನ ಮುಖದ ಮೇಲೆ ಮುಗುಳುನಗೆ ಆಡುತ್ತಿದೆ.....ಏನೋ ಮಧುರವಾದ ಸ್ವಪ್ನ ಕಾಣುತ್ತಿದ್ದಾನೆ.....ಆಗ ಕೊಠಡಿಯ ಬಾಗಿಲು ತೆರೆಯುವುದು.....ಮಂಚದ ಪರದೆ ಓರೆಯಾಗುವುದು.....ವಿಠಲ ಕಣ್ಣು ಬಿಡುತ್ತಾನೆ.....ಆಗ.....ಅದೋ ! ಪಕ್ಕದಲ್ಲೇ ನಿಂತಿದೆ !–ಅವನಿಂದ ಸರ್ವಾಧಿಕಾರ ಪಡೆದ ಒಂದು ಭೀಕರ ಕರಾಳಾಕೃತಿ ! .....ಆ ಅವೇಳೆಯ ಹೊತ್ತಿನಲ್ಲೂ ವಿಠಲ ಎದ್ದು, ಆ ವಿಕಟಾಕೃತಿಯ ಅಪ್ಪಣೆಗಳನ್ನು ಗುಲಾಮನಂತೆ ನಡೆಸಲೇ ಬೇಕು !.....

ಶಂಕರರಾಯರ ಮನೋಭಿತ್ತಿಯ ಮೇಲೆ ರೂಪುಗೊಂಡ ಈ ಎರಡು ರೀತಿಯ ಚಿತ್ರಗಳಲ್ಲೂ ಸಮಾನವಾಗಿ ಮತ್ತು ಮುಖ್ಯವಾಗಿ ಇದ್ದ ಆ ಒಂದೇ ವಿಕಟ–ಕರ್ಕಶರೂಪ, ಪಿಶಾಚಿಯಂತೆ ಅವರ ಮನಸ್ಸನ್ನು ರಾತ್ರಿಯೆಲ್ಲ ಆಕ್ರಮಿಸಿತ್ತು. ಮಧ್ಯೆ ಮಧ್ಯೆ ಜೊಂಪು ಹಿಡಿದು, ತೂಕಡಿಕೆಯಿಂದ ಅವರು ಸ್ವಲ್ಪ ಕಣ್ಣುಮುಚ್ಚಿದರೆ ಸಾಕು, ಕನಸಿನಲ್ಲಿ ಅದೇ ಅಸಹ್ಯ ರೂಪಾಕೃತಿ !–ಅದು, ಇನ್ನೂ ರಹಸ್ಯವಾಗಿ, ಕಳ್ಳತನದಿಂದ, ನಿದ್ರಿತಗೃಹಗಳ ಮೂಲಕ, ತಡೆಯಿಲ್ಲದೆ ತೂರಿತೂರಿ ಚಲಿಸುವಂತೆ ತೋರುವುದು; ಅಥವಾ, ರಾತ್ರಿಯ ವೇಳೆ, ಪ್ರಕಾಶಮಾನವಾದ ಕಂಭದೀಪಗಳ ಬೆಳಕಿನಲ್ಲಿ, ನಗರದ ಬೀದಿ–ಗಲ್ಲಿ–ಓಣಿಗಳಲ್ಲಿ ಮಿಂಚಿನ ವೇಗದಿಂದ ಚಲಿಸುತ್ತ, ಪ್ರತಿ ಮೂಲೆಯ ತಿರುವಿನಲ್ಲೂ ಒಬ್ಬೊಬ್ಬ ಹೆಂಗಸಿಗೆ ಢಿಕ್ಕಿ ಹೊಡೆದು ನೆಲಕ್ಕುರುಳಿಸಿ, ತುಳಿದು ತುಳಿದು ಜಜ್ಜಿ, ಅವರ ಚೀರಾಟವನ್ನು ಲಕ್ಷಿಸದೆ ಮುಂದೋಡುವ, ಅದೇ ಅಧಮ ಧೂರ್ತಾಕೃತಿ–ಮತ್ತೆ ಮತ್ತೆ ಕಾಣುವುದು.

ಇಷ್ಟಾದರೂ ಲಾಯರು, ತಾವು ಕಲ್ಪಿಸಿಕೊಂಡ ಆ ವಿಚಿತ್ರ ಆಕೃತಿಗೆ ಒಂದು ನಿರ್ದಿಷ್ಟವಾದ, ಗುರುತು ಹಿಡಿಯಬಲ್ಲಂಥ, ಸ್ಫುಟವಾದ ಮುಖವನ್ನು ಚಿತ್ರಿಸಿಕೊಳ್ಳಲಾರದವರಾಗಿದ್ದರು. ಕನಸಿನಲ್ಲಿ ಅವರು ಕಾಣುತ್ತಿದ್ದ ಆಕೃತಿಗೂ ಮುಖ ಎಂಬುದು ಸ್ಪಷ್ಟವಾಗಿರುತ್ತಿರಲಿಲ್ಲ. ಒಂದು ವೇಳೆ ಇದ್ದರೂ, ಅದು ಅವರ ನೆನಪಿನಲ್ಲಿ ಊರಿನಿಲ್ಲುವ ಮೊದಲೇ, ಬಹುಬೇಗ ಕರಗಿ ಮಾಯವಾಗಿಬಿಡುತ್ತಿತ್ತು. ಆದಕಾರಣ, ನಿಜವಾದ ಜೀವನದಲ್ಲಿ, ರಕ್ತಮಾಂಸಗಳಿಂದೊಡಗೂಡಿ–ಉಸಿರಾಡುತ್ತಿರುವ ಕಾಮೇಶಗುಪ್ತನನ್ನು ಕಣ್ಣಾರೆ ನೋಡಿ, ಎಲ್ಲಕ್ಕಿಂತಲೂ ಹೆಚ್ಚಾಗಿ, ಅವನ ಮುಖಚಹರೆಯ ಪರಿಚಯ ಮಾಡಿಕೊಳ್ಳಬೇಕೆಂದು, ಲಾಯರ ಹೃದಯದಲ್ಲಿ ಅಸಾಧಾರಣವೂ, ತೀವ್ರವೂ ಆದ ಕುತೂಹಲ ಮೂಡಿ, ಬಲವತ್ತರವಾಗಿ ಬೆಳೆಯತೊಡಗಿತು.

ಆ ವಿಚಿತ್ರ ವ್ಯಕ್ತಿಯನ್ನು ಒಂದು ಸಲ, ಒಂದೇ ಸಲ, ಕಣ್ಣಾರೆ ನೋಡಿದರೂ ಸಾಕು, ಆ ನೋಟ ಒಂದರಿಂದಲೇ, ಗಭೀರ ರಹಸ್ಯದಿಂದ ಕೂಡಿದ್ದ ಒಂದು ಸಮಸ್ಯೆಯ ಮೇಲೆ ಬೆಳಕು ಬಿದ್ದಂತಾಗಬಹುದು ; ಬಹುಶಃ, ತೊಡಕಿನ ಒಂದು ತುದಿ ಸಿಕ್ಕಂತಾಗಿ, ತೊಡಕೆಲ್ಲ ಬಿಚ್ಚಿ, ಸಮಸ್ಯೆಯೇ ಇಲ್ಲವಾಗಬಹುದು. ಆಗ, ತಮ್ಮ ಸ್ನೇಹಿತನ ವಿಚಿತ್ರ ಪಕ್ಷಪಾತಕ್ಕೆ ಅಥವಾ ದಾಸ್ಯಕ್ಕೆ (ನೀವು ಈ ಸಂಬಂಧಕ್ಕೆ ಏನು ಬೇಕಾದರೂ ಹೆಸರಿಡ ಬಹುದು) ಮತ್ತು ಅವನ ಉಯಿಲಿನ ಅಸಾಧಾರಣವಾದ ಒಕ್ಕಣೆಗೆ ಒಂದು ಕಾರಣ ವ್ಯಕ್ತವಾಗಬಹುದು— ಎಂದುಕೊಂಡರು. ಅವರ ಮಿತ್ರ ಲಕ್ಷ್ಮೀಪತಯ್ಯ ಬಹುಮಟ್ಟಿಗೆ ನಿರ್ಲಿಪ್ತ ಸ್ವಭಾವದವರಾಗಿದ್ದರು. ಸಾಮಾನ್ಯವಾಗಿ ಅವರ ಮೇಲೆ ಯಾವ ತೆರನ ಪ್ರಭಾವವೂ ಉಂಟಾಗುತ್ತಿರಲಿಲ್ಲ. ಅಂಥಾ ಮನುಷ್ಯನ ಮನಸ್ಸಿನಲ್ಲೂ, ಒಂದೇ ನೋಟಕ್ಕೆ, ಬಹುಕಾಲ ನಿಲ್ಲುವಂಥ ಪರಮದ್ವೇಷದ ಬೆಂಕಿಯನ್ನೆಬ್ಬಿಸಿತ್ತು—ಆ ಕರುಣಾರಹಿತನಾದ ಕಲ್ಲೆದೆಯ ಕಟುಗನ ಕೆಟ್ಟಮೋರೆ ! ಅಂದ ಮೇಲೆ, ಇನ್ನು ಯಾವುದಕ್ಕೆ ಅಲ್ಲದಿದ್ದರೂ, ಅದಕ್ಕೋಸ್ಕರವಾಗಿಯೇ ಆದರೂ, ಆ ಮುಖ, ಕನಿಷ್ಠಪಕ್ಷ ಒಮ್ಮೆಯಾದರೂ, ನೋಡಲರ್ಹವಾಗಿರಬೇಕು— ಅನ್ನಿಸಿತು, ಬ್ಯಾರಿಸ್ಟರ್ ಶಂಕರರಾಯರಿಗೆ.

ಲಕ್ಷ್ಮೀಪತಯ್ಯ ತೋರಿಸಿದ್ದ ಆ ಹಳೇ ಬಾಗಿಲು, ಆತ ಹೇಳಿದ್ದ ವಿಚಿತ್ರ ಕಥೆಯ ಒಂದು ಮುಖ್ಯಾಂಶವಾಗಿತ್ತಷ್ಟೆ. ಸರಿ, ಅಂದಿನಿಂದ ಶಂಕರರಾಯರು, ಸಮಯ ದೊರೆತಾಗಲೆಲ್ಲ ಆ ಬಾಗಿಲಿನ ಆಸುಪಾಸಿನಲ್ಲಿ ಹೊಂಚಿ ಕಾಯತೊಡಗಿದರು. ಅನೇಕ ದಿವಸಗಳವರೆಗೆ, ಹಗಲು ರಾತ್ರಿಗಳ ಬೇರೆ ಬೇರೆ ಸಮಯಗಳಲ್ಲಿ, ಕಾದು ನೋಡಿದರು. ಇದಕ್ಕಾಗಿ ಅವರು, ಆ ಬಾಗಿಲಿನ ಎದುರು ಸಾಲಿನಲ್ಲಿ, ಬಾಗಿಲಿಗೆ ಸ್ವಲ್ಪ ಓರೆಯಾಗಿದ್ದ ಒಂದು ಚಿಕ್ಕ ಖಾಲಿಮನೆಯ ಮುಂಭಾಗದ ಕೊಠಡಿಯನ್ನೂ ಬಾಡಿಗೆಗೆ ತೆಗೆದುಕೊಂಡಿದ್ದರು. ಬೇಟೆಗಾಗಿ ಮರಸು ಕೂರುವ ಶಿಕಾರಿಯಂತೆ, ಲಾಯರು ಆ ಕೊಠಡಿಯ ಕಿಟಕಿಯ ಮೂಲಕ ಹೊಂಚುತ್ತ—'ಹುಂ ! ನೀನು ಕಾಮೇಶ ಗುಪ್ತನೋ !– ಆಗು ಪರವಾಗಿಲ್ಲ ; ಗುಪ್ತನಾಗಿರೋ ನಿನ್ನನ್ನ ಬಹಿರಂಗಪಡಿಸುತ್ತೇನೆ–ನಾನು !' ಎಂದುಕೊಳ್ಳುವರು.

ಹೀಗೆ ಅನೇಕ ದಿನಗಳವರೆಗೆ ಹೊಂಚಿ ಕಾದಮೇಲೆ, ಬ್ಯಾರಿಸ್ಟರ ತಾಳ್ಮೆಗೆ ತಕ್ಕ ಪ್ರತಿಫಲ ದೊರಕಿತು. ಮಾಗಿಯ ಕಾಲ ಕಳೆದು, ಶುಭ್ರವಾದ ವಾತಾವರಣದ ಆ ರಾತ್ರಿ ಬಹು ಹಿತವಾಗಿತ್ತು. ಲಾಯರು ಎಂಟು ಗಂಟೆಗೇ ತಮ್ಮ ಸ್ಥಳದಲ್ಲಿ ಹೊಂಚುಕಾಯು ತ್ತಿದ್ದರು. ಒಂಬತ್ತು ಗಂಟೆಗೇ ಮುಚ್ಚಲು ಪ್ರಾರಂಭವಾದ ಅಂಗಡಿ ಸಾಲು, ಹತ್ತು ಗಂಟೆಗೆ ಪೂರ್ತಿ ಮುಚ್ಚಿಬಿಟ್ಟಿತ್ತು. ಜನಗಳ ತಿರುಗಾಟವೂ ಸ್ವಲ್ಪ ಹೊತ್ತಿನಲ್ಲೇ ನಿಂತು, ಬೀದಿ ನಿಶ್ಶಬ್ದವಾಯಿತು. ಸುತ್ತ ದೂರದಿಂದ, ಲೋಕನಗರದ ತಗ್ಗಿದ ಮರ್ಮರ ಶಬ್ದ ಮಾತ್ರ ಕೇಳಿ ಬರುತ್ತಿತ್ತು. ಇಂತಹ ವಾತಾವರಣದ ವೇಳೆಯಲ್ಲಿ ಸಣ್ಣ ಸಣ್ಣ ಶಬ್ದಗಳೂ ಬಹುದೂರ ಸಾಗಿ ಹೋಗುತ್ತವೆ. ಗಟ್ಟಿಯಾದ ನೆಲದ ರಸ್ತೆಯ ಮೇಲೆ ಯಾರಾದರೂ ನಡೆದು ಬರುತ್ತಿದ್ದರೆ, ಬಹು ದೂರದಿಂದಲೇ, ಅವರು ಕಾಣಿಸಿಕೊಳ್ಳುವ ಮೊದಲೇ, ಅವರ ಹೆಜ್ಜೆಯ ಸದ್ದು ಸ್ಪಷ್ಟವಾಗಿ ಕೇಳಿಬರುತ್ತದೆ. ಶಂಕರರಾಯರು ಆ ದಿನ, ರಾತ್ರಿ ಹನ್ನೆರಡು ಗಂಟೆಯವರೆಗೂ ಕಾದು ನೋಡುವುದೆಂದು ತೀರ್ಮಾನಿಸಿಕೊಂಡಿದ್ದರು. ಕಿಟಕಿಯ ಮೂಲಕ ಆ ಬಾಗಿಲ ಕಡೆಯೇ

ನೋಡುತ್ತ, ಸಿಗಾರ್ ಸೇದುತ್ತ ಕುಳಿತಿದ್ದವರು, ಸಿಗಾರು ಕೆಂಡದ ಬೆಳಕಿನಲ್ಲಿ ಕೈಗಡಿಯಾರ ನೋಡಿಕೊಂಡರು; ಹನ್ನೆರಡಾಗಿತ್ತು. ಶಂಕರರಾಯರು ಎದ್ದು, ಕೊಠಡಿಯ ಬಾಗಿಲನ್ನು ಹಾಕಿಕೊಂಡು ಬೀದಿಗೆ ಬಂದರು. ಆಗ ಅವರಿಗೆ, ಅಂದಿನವರೆಗೂ ಕೇಳಿಸದೆ ಇದ್ದಂಥ ಒಂದು ಹೆಜ್ಜೆಯ ಸದ್ದು ಕೇಳಿಬಂತು. ಆ ಸದ್ದು ಹೆಜ್ಜೆ ಹೆಜ್ಜೆಗೂ ಹತ್ತಿರವಾಗುತ್ತಿತ್ತು. ಲಾಯರು ಆಲೈಸಿ ಕೇಳತೊಡಗಿದರು. ಇದಕ್ಕೆ ಹಿಂದೆ ಅವರು ಎಷ್ಟೋ ಬಾರಿ, ರಾತ್ರಿಯ ನಿಶ್ಶಬ್ದತೆಯಲ್ಲಿ, ದೂರದಿಂದ, ಅಗೋಚರ ವ್ಯಕ್ತಿಯ ಹೆಜ್ಜೆ ಸದ್ದನ್ನು ಕೇಳಿದ್ದರು. ಆದರೆ, ಈ ದಿನ–ಈ ಸಮಯದಲ್ಲಿ–ಕೇಳಿಬರುತ್ತಿದ್ದ ಸದ್ದು, ಅವೆಲ್ಲದರಿಂದ ಪ್ರತ್ಯೇಕವಾಗಿತ್ತು. ಎರಡು ಹೆಜ್ಜೆಗಳ ಸದ್ದಿನ ನಡುವಿನ ಅಂತರ, ಪಾದಗಳು ನೆಲಕ್ಕೆ ಸೋಕುತ್ತಿದ್ದ ರೀತಿ—ಇವುಗಳನ್ನು ಗಮನಿಸಿದರೆ, ಆ ಸದ್ದಿಗೆ ಕಾರಣವಾಗಿದ್ದ ವ್ಯಕ್ತಿ, ಬಹು ಹಗುರವಾಗಿಯೂ, ವಿಲಕ್ಷಣವಾದ ಪದಗತಿಯಿಂದಲೂ, ನಡೆದು ಬರುತ್ತಿದ್ದಂತೆ ಭಾಸವಾಗುತ್ತಿತ್ತು. ತಮ್ಮ ಇಷ್ಟು ದಿನಗಳ ತಾಳ್ಮೆ–ಶ್ರಮಗಳು, ಇನ್ನು ಕೆಲವೇ ಕ್ಷಣಗಳಲ್ಲಿ ಸಾರ್ಥಕವಾಗುವುವೆಂದು ಶಂಕರರಾಯರ ಪರೋಕ್ಷಕ್ಕೆ ಅರಿವಾಗಿ, ಅವರು ಪುಳಕಿತರಾದರು.

ಅಗೋಚರನಾಗಿದ್ದ ಆ ವ್ಯಕ್ತಿ ಬಹು ಅವಸರದಿಂದ ನಡೆದು ಬರುತ್ತಿದ್ದನೆಂದು, ಹೆಜ್ಜೆ ಹೆಜ್ಜೆಗೂ ಜೋರಾಗುತ್ತಿದ್ದ ಕಾಲು ಸಪ್ಪಳ ಸೂಚಿಸಿತು. ಹಳೇ ಬಾಗಿಲಿದ್ದ ಈ ಬೀದಿಗೆ ಆ ವ್ಯಕ್ತಿ ತಿರುಗಿದ ಕೂಡಲೆ, ಅವನ ಬೂಟ್ಸು ಕಾಲಿನ ಸದ್ದು ಮತ್ತೂ ಸ್ಪಷ್ಟವಾಯಿತು. ಲಾಯರು ಬಹು ಎಚ್ಚರಿಕೆಯಿಂದ ಇಣಿಕಿ ನೋಡಿದರು. ಬಾಗಿಲಿಂದ ಸುಮಾರು ಮುವ್ವತ್ತು ಗಜ ದೂರದಲ್ಲಿ ಆ ಮನುಷ್ಯ ಬರುತ್ತಿದ್ದುದು ಕಾಣಿಸಿತು. ಕಪ್ಪು ಛಾಯೆಯ ಸೂಟೊಂದನ್ನು ಧರಿಸಿದ್ದ. ಅವನ ಆಕೃತಿ, ಸಣ್ಣ ಎತ್ತರ—ಗಾತ್ರದ್ದಾಗಿತ್ತು. ಅವನ ತಲೆಯಲ್ಲಿ, ಲಕ್ಷ್ಮೀಪತಯ್ಯ ವರ್ಣಿಸಿದ್ದಂಥ ಕುಲಾವಿತೋಪಿ ಇತ್ತು. ಕೊರಳಸುತ್ತ, ಅಂಗಿಯ ಮೇಲೆ, ಮಫ್ಲರೂ ಇತ್ತು. ದೂರದ ನೋಟಕ್ಕೇ ಶಂಕರರಾಯರ ಮನಸ್ಸಿಗೆ, ಆ ಮನುಷ್ಯನ ಆಕೃತಿ—ನಡಗೆ ಎಲ್ಲ ಹೇಸಿಗೆಯನ್ನುಂಟುಮಾಡಿದ್ದವು. ಆ ಮನುಷ್ಯ, ಬಾಗಿಲ ಎದುರು ಪಕ್ಕದ ಕಾಲುಹಾದಿಯಲ್ಲಿ ನಡೆದುಬರುತ್ತಿದ್ದವನು, ಬಾಗಿಲ ನೇರಕ್ಕೆ ಬಂದವನೇ ಸರ್ರನೆ ತಿರುಗಿ, ಬೀದಿಯನ್ನು ದಾಟಿ, ಹಳೇ ಬಾಗಿಲನ್ನು ಸಮೀಪಿಸಿ, ತನ್ನ ಅಂಗಿಯ ಜೇಬಿನಿಂದ ಒಂದು ದೊಡ್ಡ ಅಗಳಿ ಬೀಗದ ಕೈ (Latchkey)ಯನ್ನು ತೆಗೆದ. ಅವನು, ಇನ್ನೇನು ಬಾಗಿಲನ್ನು ತೆರೆಯಬೇಕು–ಅಷ್ಟರಲ್ಲಿ, ಶಂಕರರಾಯರು ಅವಿತ ಸ್ಥಳದಿಂದ ಈಚೆಗೆ ಬಂದು, ಅವನನ್ನು ಸಮೀಪಿಸಿ ಬೆನ್ನಹಿಂದೆ ನಿಂತು,

"ಕಾಮೇಶ ಗುಪ್ತ–ಅಂದರೆ ನೀವೇ ಅಲ್ಲವೇ ?"ಎಂದರು.

ಕಾಮೇಶ ಗುಪ್ತ, ಚೇಳು ಕುಟುಕಿದವನಂತೆ ಚಕಿತನಾಗಿ, ತಿರುಗಿ ನೋಡದೆ, ನಿಂತ ಹಾಗೆಯೇ ಹಿಸ್— ಎಂದು ಉಸಿರೆಳೆದ; ಕುಗ್ಗಿ, ಒಂದು ಹೆಜ್ಜೆ ಪಕ್ಕಕ್ಕಿಟ್ಟ. ಆದರೆ, ಅವನ ಭಯ ಕ್ಷಣಿಕವಾಗಿತ್ತು. ಅವನು,

"ಹೌದು, ಅದೇ ನನ್ನ ಹೆಸರು—ತಮಗೆ ನನ್ನಿಂದೇನಾಗಬೇಕು ?"

—ಎಂದು ಕೇಳಿದ. ಅವನು ಲಾಯರಿಗೆ ಮುಖ ಕೊಟ್ಟು ಮಾತಾಡದೆ ಇದ್ದರೂ, ಅವನ ಧ್ವನಿ ತಕ್ಕಮಟ್ಟಿಗೆ ನಿರುದ್ವಿಗ್ನವಾಗಿತ್ತು. ಲಾಯರು ಅವನ ಪ್ರಶ್ನೆಗೆ ಉತ್ತರವಾಗಿ,

"ನೀವು ಈ ಮನೆಯೊಳಕ್ಕೆ ಹೋಗುವ ಹಾಗೆ ಕಾಣುತ್ತೆ. ನಾನು ಡಾ॥ ಹರಿವಿಠಲ್‌ರವರ ಒಬ್ಬ ಹಳೇ ಸ್ನೇಹಿತ. ನನ್ನ ಹೆಸರು ಶಂಕರರಾವ್–ಅಂತ. ಶ್ರೀಪುರಂ ಎಕ್ಸ್‌ಟೆನ್‌ಶನ್ನಿನಲ್ಲಿ ವಾಸ. ನೀವು ನನ್ನ ಹೆಸರನ್ನು ಕೇಳಿರಬಹುದು. ನಿಮ್ಮನ್ನ ಇಲ್ಲಿ ಕಂಡದ್ದು ಅನುಕೂಲವೇ ಆಯಿತು. ನಾನು ಡಾಕ್ಟರನ್ನ ಸ್ವಲ್ಪ ಅವಸರವಾಗಿ ನೋಡಬೇಕಾಗಿದೆ. ಈ ವಿಷಯವನ್ನು ಅವರಿಗೆ ದಯವಿಟ್ಟು ತಿಳಿಸಿ; ಅಥವಾ, ನನ್ನನ್ನ ಅವರ ಬಳಿಗೆ ಕರೆದೊಯ್ಯಿರಿ—ಅಂತ ಕೇಳಿಕೋತೇನೆ" —ಎಂದರು.

"ಊಹುಂ—ಅದು ಸಾಧ್ಯವಿಲ್ಲ "—ಎಂದ, ಕಾಮೇಶ ಗುಪ್ತ.

"ಯಾಕೆ ?"

"ಡಾ॥ ವಿಠಲ್ ಮನೇಲಿಲ್ಲ ಈಗ ; ಆದ್ದರಿಂದ ಅವರು ನಿಮಗೆ ಸಿಕ್ಕೋದಿಲ್ಲ "

—ಎನ್ನುತ್ತ ಗುಪ್ತ, ಕೈಲಿದ್ದ ಬೀಗದ ಕೈಯನ್ನು ಬಾಗಿಲ ರಂಧ್ರದಲ್ಲಿ ತೂರಿಸಿದ. ಅನಂತರ, ತಟ್ಟನೆ, ತಲೆ ತಗ್ಗಿಸಿಕೊಂಡೇ,

"ನಿಮಗೆ ನನ್ನ ಹೆಸರು ಗೊತ್ತಾದ್ದು ಹೇಗೆ ?"—ಎಂದು ಕೇಳಿದ.

"ಹೇಳ್ತೇನೆ—ಹೇಳ್ತೇನೆ, ಆದರೆ ಅದಕ್ಕೆ ಮೊದಲು ನೀವು ನನಗೆ ಒಂದು ಉಪಕಾರ ಮಾಡುವುದಾದರೆ—"

"ಓಹೋ ! ಅಗತ್ಯವಾಗಿ–ಸಂತೋಷದಿಂದ ! ಏನಾಗಬೇಕು ಹೇಳಿ."

"ನನಗೆ ನಿಮ್ಮ ಹೆಸರಿನ ಪರಿಚಯ ಮಾತ್ರ ಇದೆ; ಮುಖಪರಿಚಯ ಇದುವರೆಗೂ ಆಗಿಲ್ಲ ; ಅದರ ಪರಿಚಯ ಮಾಡಿಕೊಡೋದರಲ್ಲಿ ನಿಮಗೆ ಯಾವ ಅಭ್ಯಂತರವೂ ಇರಲಾರದಷ್ಟೆ ?"

—ಎಂದರು, ಲಾಯರು. ಗುಪ್ತ ಸ್ವಲ್ಪ ಹಿಂದು ಮುಂದು ನೋಡಿದಂತೆ ತೋರಿತು. ಆದರೆ, ಅವನ ಮನಸ್ಸು ಅನಿಶ್ಚಿತವಾಗಿದ್ದದ್ದು—ಕೆಲವು ಕ್ಷಣಗಳು ಮಾತ್ರ. ಅವನು ತಟ್ಟನೆ ಒಂದು ನಿರ್ಧಾರಕ್ಕೆ ಬಂದು, ಸರ್‍ರನೆ ತಿರುಗಿ, ತಲೆ ಎತ್ತಿ, ಅತಿ ಧಿಕ್ಕಾರದ ಧೋರಣೆಯಿಂದ ಲಾಯರ ಮುಖಕ್ಕೆ ಮುಖ ಕೊಟ್ಟು ನೋಡುತ್ತ ನಿಂತ. ಕೆಲವು ಕ್ಷಣಗಳು ಇಬ್ಬರೂ ನೆಟ್ಟ ನೋಟದಿಂದ ಪರಸ್ಪರ ನೋಡಿದರು. ಅನಂತರ ಲಾಯರು ಶಂಕರರಾಯರು,

"ಹುಮ್, ಇನ್ನು ಪರವಾಗಿಲ್ಲ—ಮತ್ತೆ ಎಲ್ಲಿ ಕಂಡರೂ ನಿಮ್ಮನ್ನ ಗುರುತಿಸಬಲ್ಲೆ. ಈ ಪರಿಚಯದಿಂದ ಪ್ರಯೋಜನವೂ ಇದ್ದೀತು"—ಎಂದರು.

"ಹೌದು ಹೌದು. ನಾನೂ ನಿಮ್ಮ ಹೆಸರನ್ನು ಕೇಳಿದ್ದೆ—ಈಗ ನಿಮ್ಮ ಮುಖಪರಿಚಯವಾದದ್ದು ನನಗೂ ಒಳ್ಳೆಯದೇ; ಜೊತೆಗೆ, ನನ್ನ ವಿಳಾಸವೂ ನಿಮಗೆ ತಿಳಿದಿದ್ದರೆ ಮತ್ತೂ ಒಳ್ಳೇದೂಂತ ಕಾಣುತ್ತೆ "

—ಎಂದು, ಗುಪ್ತ ತನ್ನ ಮನೆಯ ವಿಳಾಸವನ್ನು ತಿಳಿಸಿದ. ಅವನ ಮನೆ, ಲೋಕನಗರದ ಪೂರ್ವಭಾಗದಲ್ಲಿದ್ದ ಕಾಮಾಟಿಪುರಂ—ಎಂಬ ಕೀಳು ಜನರ ವಸತಿಯಲ್ಲಿತ್ತು. ಅವನಾಗಿ ತನ್ನ ಮನೆಯ ವಿಳಾಸವನ್ನು ತಿಳಿಸಿದುದನ್ನು ಕಂಡು ಲಾಯರಿಗೆ ಆಶ್ಚರ್ಯವಾಯಿತು. ಅವರು ಮನಸ್ಸಿನಲ್ಲೇ—'ಆಹಾ ! ಇವನೂ ಉಯಿಲಿನ ವಿಷಯವನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಮಾಡಿರಬಹುದೇ ?' ಎಂದು ಯೋಚಿಸಿ, ತಮ್ಮ ಅಂತರಂಗದ ಯೋಚನೆಯನ್ನೂ ಆಶ್ಚರ್ಯವನ್ನೂ ತಮ್ಮಲ್ಲೇ ಇಟ್ಟುಕೊಂಡು, ಅವನು ತನ್ನ ವಿಳಾಸವನ್ನು ತಿಳಿಸಿದ್ದಕ್ಕಾಗಿ ಸಂತೋಷವನ್ನು ಮಾತ್ರ ವ್ಯಕ್ತಪಡಿಸಿದರು. ಅನಂತರ ಗುಪ್ತ ಕೇಳಿದ—

"ಈಗ ಹೇಳಿ, ನಿಮಗೆ ನನ್ನ ಹೆಸರು ಹೇಗೆ ಗೊತ್ತಾಯ್ತೂಂತ"

"ನಿಮ್ಮ ಚಹರೆ ವರ್ಣನೆ ಕೇಳಿ ಊಹಿಸಿದೆ—" ಎಂದರು, ಲಾಯರು.

"ಚಹರೆ-ವರ್ಣನೆ ! ಯಾರು ವರ್ಣಿಸಿದೋರು, ನನ್ನ ಚಹರೇನ ?"

"ನಮ್ಮಿಬ್ಬರನ್ನೂ ಬಲ್ಲ ಸ್ನೇಹಿತರೊಬ್ಬರು "

"ನಮ್ಮಿಬ್ಬರನ್ನೂ ಬಲ್ಲ ಸ್ನೇಹಿತರೇ ! —ಯಾರು ಆ ಸ್ನೇಹಿತ ?"

ಈ ಪ್ರಶ್ನೆ ಕೇಳುವಾಗ ಗುಪ್ತನ ಧ್ವನಿ ಸ್ವಲ್ಪ ಗಡುಸಾಗಿತ್ತು.

"ಉದಾಹರಣೆಗೆ, ಡಾಕ್ಟರ್ ಹರಿವಿಠಲ್‌ರವರು ನಮ್ಮಿಬ್ಬರನ್ನೂ ಚೆನ್ನಾಗಿ ಬಲ್ಲರು-ಅಲ್ಲವೇ ?"

"ಏನಂದಿರಿ ? ಡಾಕ್ಟರ್ ವಿಠಲ್ !-ಉಹುಂ! ಅವರು ಎಂದಿಗೂ ನಿಮಗೆ ಹೇಳಿರಲಾರರು !! ಖಂಡಿತ ಹೇಳಿರಲಾರರು ! ! ನೀವು ಪಕ್ಕಾ ಸುಳ್ಳು ಹೇಳ್ತಾ ಇದ್ದೀರಿ !"—ಎಂದ, ಕೋಪದಿಂದ ಕೆರಳಿದ್ದ ಗುಪ್ತ .

"ಹ್ಞಾ ! ಹ್ಞಾ ! ನಿಧಾನ, ಗುಪ್ತರೇ, ತಾಳ್ಮೆ ತೆಗೆದುಕೊಳ್ಳಿ. ಸಭ್ಯರ ನಡುವೆ, ಸುಳ್ಳು ಕಳ್ಳ-ಅನ್ನೋ ಮಾತು ಯೋಗ್ಯವಾದ್ದಲ್ಲ !"

—ಎಂದರು, ಗಂಭೀರವಾಗಿ-ಲಾಯರು. ಗುಪ್ತ, ಅದಕ್ಕೆ ಉತ್ತರವಾಗಿ, ಪಿಶಾಚಿಯಂತೆ ಹಲ್ಲು ಕಿರಿದು ಗಹಗಹಿಸಿ ನಕ್ಕು ಮರುಕ್ಷಣದಲ್ಲಿ, ಬಾಗಿಲನ್ನು ತೆರೆದು ಒಳಹೊಕ್ಕು, ರಪ್ಪನೆ ಕದವನ್ನು ಮುಚ್ಚಿ ಅಗಳಿ ಹಾಕಿಕೊಂಡುಬಿಟ್ಟ !

ಕಾಮೇಶ ಗುಪ್ತ ಈ ರೀತಿ, ಲಾಯರನ್ನು ಹೊರಗೆ ಬಿಟ್ಟು ಮನೆಯೊಳಕ್ಕೆ ಮಾಯವಾದ ಕೂಡಲೆ, ಅವರು ಕೆಲವು ಕ್ಷಣಗಳವರೆಗೆ ಅಲ್ಲಾಡದೆ, ಕಲ್ಲುಗೊಂಬೆ ಯಂತೆ ನಿಂತಲ್ಲೇ ನಿಂತುಬಿಟ್ಟರು. ಅವರ ಮನಸ್ಸು ಅಶಾಂತಿಗೀಡಾಗಿ ಬಹು ಭಾರವಾಗಿತ್ತು. ತಮ್ಮ ಅನುಭವವನ್ನು ನೆನೆಯುತ್ತ ಅವರು ಬೀದಿಗಿಳಿದು, ನಿಧಾನವಾಗಿ ಹೆಜ್ಜೆ ಹಾಕತೊಡಗಿದರು. ನಡೆಯುತ್ತ ನಡೆಯುತ್ತ-ಅಡಿಗಡಿಗೆ ನಿಂತು, ಏನೋ ಭ್ರಾಂತಿಗೆ ಸಿಕ್ಕವರಂತೆ ಹಣೆಯ ಮೇಲೆ ಕೈ ಇಟ್ಟುಕೊಳ್ಳುತ್ತ, ನಡೆದರು. ದಾರಿಯುದ್ದಕ್ಕೂ ಅವರು ಮನಸ್ಸಿನಲ್ಲೇ ಚರ್ಚಿಸುತ್ತಿದ್ದ ಸಮಸ್ಯೆ, ಚರ್ಚಿಸಿದಷ್ಟೂ ಗಂಭೀರವಾಗಿ-ತೊಡಕಾಗಿ, ಸಾಮಾನ್ಯವಾಗಿ ಬಿಡಿಸಲಸಾಧ್ಯವಾದ ಜಾತಿಯದಾಗಿತ್ತು. ಅವರು ದರ್ಶನ ಮಾಡಿದ್ದ ಕಾಮೇಶ ಗುಪ್ತ ಕುಳ್ಳಾಗಿದ್ದ ; ಭಯದಿಂದಲೋ, ಕೋಪದಿಂದಲೋ, ವಿವರ್ಣನಾಗಿದ್ದ . ಅವನ ವಕ್ರತೆಗೆ ಹೆಸರಿಟ್ಟು ಹೇಳುವುದು ಅಸಾಧ್ಯವಾಗಿತ್ತು. ಆದರೂ, ಒಟ್ಟು ನೋಟಕ್ಕೆ, ಅವನ ಸ್ವರೂಪ ಎಲ್ಲೋ ವಿಕಲವಾಗಿದ್ದಂತೆ, ತೀರ ಸ್ಪಷ್ಟವಾಗಿ ಭಾಸವಾಗುತ್ತಿತ್ತು. ಅವನು ಮುಗುಳುನಗೆ ನಕ್ಕರೆ ಮುಳ್ಳು ಚುಚ್ಚಿದ ಹಾಗಾಗುತ್ತಿತ್ತು. ಅವನು ಲಾಯರೊಡನೆ ನಡೆದುಕೊಂಡ ರೀತಿಯಲ್ಲಿ, ಒಂದು ಕಡೆ ಪುಕ್ಕಲುತನವೂ, ಇನ್ನೊಂದು ಕಡೆ ದಿಟ್ಟತನವೂ ಸೇರಿ, ಒಟ್ಟಿನಲ್ಲಿ ಮನುಷ್ಯ ಅಸಲು ಕೊಲೆಪಾತಕನಂತೆ ಕಂಡ. ಅವನ ಮಾತು ಹರಕು ಮುರುಕಾಗಿತ್ತು. ಅವನ ಗಂಟಲು ಕಟ್ಟಿಕೊಂಡ ಗೊಗ್ಗರ ಧ್ವನಿ, ಕಿವಿಗೆ ಕರ್ಕಶವಾಗಿತ್ತು . ಅವನ ವ್ಯಕ್ತಿತ್ವದ ಈ ಎಲ್ಲ ಅಂಶಗಳೂ ಅವನಿಗೆ ಪ್ರತಿಕೂಲವಾಗಿಯೇ ಇದ್ದವು. ಆದರೆ, ಇವೆಲ್ಲ ಒಟ್ಟು ಕೂಡಿಯೂ, ಶಂಕರರಾಯರಿಗೆ

ಅವನ ವಿಷಯದಲ್ಲಿ ಉಂಟಾಗಿದ್ದ ಅಸ್ಪಷ್ಟವೂ, ಅನಾಮಿಕವೂ ಆಗಿದ್ದ ಜುಗುಪ್ಸೆ-ಕಳವಳ-ಭೀತಿಗಳಿಗೆ ತಕ್ಕ ವಿವರಣೆಯನ್ನು ಕೊಡಲಾರದಾಗಿದ್ದವು.

ಭ್ರಾಂತಿಯ ಸುಳಿಯಲ್ಲಿ ಸಿಕ್ಕು ಒದ್ದಾಡುತ್ತಿದ್ದ ಶಂಕರರಾಯರು ದಾರಿಯಲ್ಲಿ ನಡೆಯುತ್ತ ತಮ್ಮಷ್ಟಕ್ಕೆ ತಾವೇ— 'ಬೇರೆ-ಬೇರೆ—ಏನೋ ಇರಬೇಕು—ಇದೆ ! ಅದು ಏನು-ಎಂದು ಸ್ಪಷ್ಟಪಡಿಸೋದು ಅಸಾಧ್ಯವಾಗಿದ್ದರೂ, ಆ ಮನುಷ್ಯನಲ್ಲಿ ಇನ್ನೂ ಹೆಚ್ಚಾದ್ದು-ನಾನು ತಿಳಿದುಕೊಳ್ಳಬೇಕಾದ್ದು — ಏನೋ, ಇದ್ದೇ ಇದೆ ! ಆಹಾ ! ದೇವರೇ ! ಆ ಮನುಷ್ಯನಲ್ಲಿ-ಮನುಷ್ಯ ಶಬ್ದಕ್ಕೆ ಹೊಂದುವಂಥಾ ಯಾವ ಗುಣವೂ ಇಲ್ಲವಲ್ಲಾ ! ಅವನಲ್ಲಿ ಈ ರೂಪ ಮತ್ತು ಚರ್ಯೆ, ಗುಹೆಗಹ್ವರಗಳಲ್ಲಿ ವಾಸಿಸುತ್ತಿದ್ದ ಪ್ರಾಚೀನ ಅನಾಗರಿಕ ಅರೆಮಾನವಾವಸ್ಥೆಗೆ ಹಿಮ್ಮೆಟ್ಟಿದ ಪ್ರಸಂಗವಿರಬಹುದೇ ? ಅಥವಾ, ಪಂಚ ಭೂತಾತ್ಮಕವಾದ ಸ್ಥೂಲ ಶರೀರವನ್ನಾಕ್ರಮಿಸಿ, ಅದನ್ನು ಪಲ್ಲಟಗೊಳಿಸುತ್ತಿರುವ ಯಾವುದೋ ಪಾಪಕಲುಷಿತವಾದ ದುಷ್ಟಜೀವದ ಉಗ್ರಪ್ರಭಾವವಿರಬಹುದೇ ಬಹುಶಃ, ಈ ಕಡೆಯ ಯೋಚನೆಯೇ ನಿಜವಿರಬಹುದು....ಹುಂ! ಅಯ್ಯಾ ಹರಿವಿಠಲ್, ನಾನು ಯಾರ ಮುಖದ ಮೇಲಾದರೂ ಶನಿಯ ಕೈವಾಡವನ್ನು ಕಂಡಿದ್ದರೆ—ಆ ಮುಖ, ನಿನ್ನ ಈ ಹೊಸ ಸ್ನೇಹಿತನದು ! ಅಬ್ಬಾ ! ಎಂಥಾ—ನರಪಿಶಾಚಿ ! ಈ ಪುರುಷಾಮೃಗ ! !'— ಎಂದುಕೊಂಡರು.

ಕಾಮೇಶ ಗುಪ್ತ ಪ್ರವೇಶಿಸಿದ ಮನೆ ಇದ್ದ ಅಡ್ಡ ಬೀದಿಯ ದಕ್ಷಿಣಕ್ಕೆ, ಸುಮಾರು ನೂರು ಗಜಗಳ ದೂರದಲ್ಲಿ, ದೊಡ್ಡದಾದ ಚಿನಿವಾರ ಚೌಕವಿತ್ತು. ಲಾಯರು, ಅಡ್ಡ ಬೀದಿಯಿಂದ ಚೌಕಕ್ಕೆ ಹೋಗುವ ದೊಡ್ಡ ರಸ್ತೆಯನ್ನು ಸೇರಿ, ಬಲಕ್ಕೆ ತಿರುಗಿ ಚೌಕವನ್ನು ತಲುಪಿದರು. ಈ ಚೌಕದಲ್ಲಿ ಭಾರಿಭಾರಿ ಕಟ್ಟಡಗಳಿದ್ದವು. ಚೌಕವು ನಗರದ ಕೇಂದ್ರ ಭಾಗದಲ್ಲಿದ್ದುದರಿಂದ, ನಾನಾ ವೃತ್ತಿಯ ಜನರು ಈ ಚೌಕದ ಕಟ್ಟಡಗಳಲ್ಲಿ, ಕಚೇರಿಗಳನ್ನೂ ಕೊಠಡಿಗಳನ್ನೂ — ಮಳಿಗೆಗಳನ್ನೂ ಬಾಡಿಗೆಗೆ ಪಡೆದು, ತಮ್ಮ ವೃತ್ತಿಯನ್ನು ನಡೆಸುತ್ತಿದ್ದರು. ಈ ಚೌಕದ ಎರಡು ಮೂಲೆಗಳಿಂದ ಸಮಾನ ದೂರದಲ್ಲಿ, ಒಂದು ಸೊಗಸಾದ ಕಟ್ಟಡವಿತ್ತು. ಹೊರನೋಟಕ್ಕೇ ಆ ಮನೆಯ ಒಳಗಿನ ಶ್ರೀಮಂತಿಕೆ ವ್ಯಕ್ತವಾಗುತ್ತಿತ್ತು . ಮನೆಯ ಎಲ್ಲ ಕಿಟಕಿಗಳೂ ಕತ್ತಲಾಗಿದ್ದರೂ, ಅದರ ಮುಂಬಾಗಿಲ ಮೇಲಿನ ಗವಾಕ್ಷದಲ್ಲಿ ಮಾತ್ರ ಬೆಳಕು ಕಾಣಿಸುತ್ತಿತ್ತು. ತಮ್ಮ ಸಂಶೋಧನೆಗಳಲ್ಲಿ ತೀವ್ರಾಸಕ್ತರಾಗಿ ದಾಂಪತ್ಯ ಜೀವನದಿಂದ ಪರಾಙ್ಮುಖರಾಗಿದ್ದ ಡಾ॥ ಹರಿವಿಠಲ್‌ರವರು ಈ ಮನೆಯಲ್ಲಿ ಏಕಾಂಗಿಯಾಗಿ ವಾಸಿಸುತ್ತಿದ್ದರು. ಒಬ್ಬ ಅಡಿಗೆಯವನು, ಒಬ್ಬ ಮಧ್ಯವಯಸ್ಸಿನ ಸೇವಕ, ಒಬ್ಬ ಪ್ರಾಯದ ಸೇವಕ ಮತ್ತು ಇಬ್ಬರು ಹೆಣ್ಣಾಳುಗಳು ಹೊರತಾಗಿ, ಮನೆಯಲ್ಲಿ ಮತ್ಯಾರೂ ಇರಲಿಲ್ಲ.

ಲಾಯರು ಶಂಕರರಾಯರು ಈ ಮನೆಯ ಬಾಗಿಲನ್ನು ಸಮೀಪಿಸಿ ತಟ್ಟಿದರು. ಕೆಲವು ಕ್ಷಣಗಳಲ್ಲೇ ಮಧ್ಯವಯಸ್ಸಿನ ಒಬ್ಬ ಸೇವಕ ಬಂದು ಬಾಗಿಲನ್ನು ತೆರೆದ.

"ಡಾಕ್ಟರ್ ವಿಠಲ್‌ರವರು ಮನೆಯಲ್ಲಿದ್ದಾರೆಯೇ—ರಂಗಪ್ಪ ?"

—ಎಂದು ಕೇಳಿದರು ಲಾಯರು.

"ನೋಡಿ ಹೇಳ್ತೇನೆ ರಾಯ್ರೇ, ಒಳಕ್ಬನ್ನಿ "

—ಎಂದು, ರಂಗಪ್ಪ ಅವರನ್ನು ಮನೆಯ ಒಳಗಿನ ಬೈಠಕುಖಾನೆಗೆ ಕರೆದೊಯ್ದ. ಈ ಬೈಠಕುಖಾನೆ ದೊಡ್ಡದಾಗಿದ್ದು, ಬಹು ಸೊಗಸಾದ ಕುರ್ಚಿ, ಸೋಫ—ಮೇಜು—ಟೀಪಾಯಿ—ಜಮಖಾನೆ—ರತ್ನಕಂಬಳಿ ಇತ್ಯಾದಿಗಳಿಂದ ಸಜ್ಜಿತವಾಗಿತ್ತು. ಸುತ್ತ ಗೋಡೆಯ ಬದಿಯಲ್ಲಿ, ಕರಿಮರದ ಅಂದವಾದ ಬೀರುಗಳ ಸಾಲು ಇತ್ತು . ಲಾಯರು ಒಂದು ಸೋಫಾದ ಮೇಲೆ ಕುಳಿತುಕೊಂಡರು. ರಂಗಪ್ಪ ಅವರ ಮುಂದೆ ಒಂದು ಟೀಪಾಯನ್ನು ಇಟ್ಟು, ಅದರ ಮೇಲೆ ಕಡ್ಡಿಪೆಟ್ಟಿಗೆ, ಸಿಗಾರು ಪೆಟ್ಟಿಗೆ, ಬೂದಿ ಉದುರಿಸಲು ಪಿಂಗಾಣಿ ಬಟ್ಟಲು ಮುಂತಾದುವನ್ನು ಇಟ್ಟು ಒಳಗೆ ಹೋದ.

ಶಂಕರರಾಯರು ಒಂದು ಸಿಗಾರನ್ನು ಹಚ್ಚಿಕೊಂಡು ನಿಧಾನವಾಗಿ ಹೊಗೆ ಎಳೆಯುತ್ತ, ತಮಗೆ ಚಿರಪರಿಚಿತವಾಗಿದ್ದ ಬೈಠಕುಖಾನೆಯನ್ನೂ ಅದರ ವಿವಿಧ ಸಾಮಾನುಗಳನ್ನೂ ಅವಲೋಕಿಸಿದರು. ಈ ಕೊಠಡಿ ಅವರ ಮಿತ್ರರಾಗಿದ್ದ ಡಾ॥ ವಿಠಲ್-ರವರಿಗೆ ಬಹು ಪ್ರಿಯವಾಗಿತ್ತು. ಇಡೀ ಲೋಕನಗರದಲ್ಲಿ, ಇಷ್ಟು ಸೊಗಸಾದ, ಸುಖಮಯವಾದ, ಸುಸಜ್ಜಿತವಾದ ಬೈಠಕು ಖಾನೆ ಇನ್ನೊಂದು ಇರಲಾರದು-ಎಂದು, ಶಂಕರರಾಯರೂ ಆಗಾಗ ಅಂದುಕೊಂಡಿದ್ದರು. ಆದರೆ ಈ ರಾತ್ರಿ, ಲಾಯರ ನಾಳಗಳಲ್ಲಿ ಹರಿಯುತ್ತಿದ್ದುದು ರಕ್ತವಲ್ಲ— ಭೀತಿ ! ನರದೇಹವನ್ನಾಕ್ರಮಿಸಿದ್ದ ಪಿಶಾಚಿ ಯಂತೆ ತೋರಿದ ಕಾಮೇಶ ಗುಪ್ತನ ಅವರ್ಣನೀಯ ವಿಕಟಾನನದ ಅಚ್ಚು, ಅವರ ನೆನಪಿನಲ್ಲಿ ಊರಿ ನಿಂತಿತ್ತು. ಅವರು ತಮ್ಮ ವೃತ್ತಿ ನಿರ್ವಹಣೆಯಲ್ಲಿ ಇದುವರೆಗೆ ಅಸಂಖ್ಯಾತ ವ್ಯಕ್ತಿಗಳನ್ನು ನೋಡಿದ್ದರು. ಅವರಲ್ಲಿ , ರೂಪ-ಸೌಂದರ್ಯಗಳ ವಿಷಯದಲ್ಲಿ ,

ಸ್ವಲ್ಪವಾಗಿಯೋ ಹೆಚ್ಚಾಗಿಯೋ ವಂಚಿತರಾದವರು ಹಲವು ಮಂದಿ ಇದ್ದರು. ಕಾಲಕ್ರಮೇಣ ಅವರಲ್ಲಿ ಎಷ್ಟೋ ಮಂದಿಯ ಹೆಸರು, ರೂಪ, ಆಕೃತಿ, ಎಲ್ಲ–ಅವರ ಮನಸ್ಸಿನಿಂದ ಅಳಿಸಿಹೋಗಿದ್ದವು. ಆದರೆ ಕಾಮೇಶ ಗುಪ್ತನ ಚಹರೆ–ಆಕೃತಿಗಳು, ಅವರ ಮನಸ್ಸಿನ ಮೇಲೆ ಬರೆಯ ಗುರುತಿನಂತೆ ಸೀದು ನಿಂತಿತ್ತು. ನೆನೆದ ಕೂಡಲೆ ಅದು ಪ್ರತ್ಯಕ್ಷವಾದಂತೆ ಭಾಸವಾಗಿ, ಅವರು ಅಸಹ್ಯದಿಂದ ಜೀವನದಲ್ಲೇ ನಿರಾಸಕ್ತರಾಗಿಬಿಡುತ್ತಿದ್ದರು. ತಮ್ಮ ಮಿತ್ರರಾಗಿದ್ದ ಡಾಕ್ಟರ್ ಹರಿವಿಠಲ್–ರವರು ಹಾಲಿನಂಥ ಮನುಷ್ಯ— ಎಂದು ಅವರು ಬಲ್ಲವರಾಗಿದ್ದರು. ಅಂಥವರಿಗೆ, ಹೆಸರಿಗೆ ಮಾತ್ರ ಮನುಷ್ಯನಾಗಿದ್ದ ಕಾಮೇಶ ಗುಪ್ತನ ಸಖ್ಯ ಹೇಗಾಯಿತು ? ಯಾವಾಗ ? ಜೀವನದಲ್ಲಿ ಇವರಿಬ್ಬರಿಗೂ ಸಮಾನವಾದ ಉದ್ದೇಶ–ಗುರಿ, ಏನಿದ್ದೀತು ? ಆಹಾ ! ಇವರ ಸ್ನೇಹ ಎಂತಹ ವಿರೋಧಾಭಾಸ ! ಅಮೃತಕ್ಕೆ ವಿಷದ ಸ್ಪರ್ಶವಾದರೆ, ಕೇಡು ಅಮೃತಕ್ಕೆ–ವಿಷಕ್ಕಲ್ಲ—ಎಂದು ಮುಂತಾಗಿ ಯೋಚಿಸುತ್ತಿದ್ದರು, ಲಾಯರು. ತಮ್ಮ ಮಿತ್ರನ ಮತ್ತು ಗುಪ್ತನ ಪರಸ್ಪರ ಸ್ನೇಹದಲ್ಲಿ ತಮ್ಮ ಮಿತ್ರನಿಗೆ ದೂರದಲ್ಲಿ ಏನೋ ಅಮಂಗಳ ಕಾದಿದೆ ಯೆಂದು ಬಗೆದು ಶಂಕರರಾಯರ ಮೈ ನಡುಗಿತು. ಆಗ, ರಂಗಪ್ಪ ವಾಪಸು ಬಂದು ನಮ್ರತೆಯಿಂದ,

"ಸಾಹೇಬರು ಹೊರಗೆ ಹೋಗಿದ್ದಾರೆ ಸ್ವಾಮಿ"—ಎಂದ.

"ಪರವಾಗಿಲ್ಲ ರಂಗಪ್ಪ, ಇನ್ನೊಮ್ಮೆ ಬರ್ತೇನೆ. ಒಳ್ಳೇದು ನಿನ್ನ ಒಂದು ವಿಷಯ ಕೇಳ್ಬೇಕೂಂತಿದ್ದೆ, ರಂಗಪ್ಪ"—ಎನ್ನುತ್ತ ಲಾಯರು, ಎದ್ದು ನಿಂತರು.

"ಏನು ಸ್ವಾಮಿ—ಅದು ?"

"ಏನಿಲ್ಲ, ಈ ಮನೆಗೆ, ಹಿಂದುಗಡೆ ಬೀದಿಯಿಂದ ಒಂದು ಹಳೇ ಬಾಗಿಲಿಲ್ವೇ—ಅದರ ಮೂಲಕ, ಸ್ವಲ್ಪ ಹೊತ್ತಿನ ಹಿಂದೆ, ಕಾಮೇಶ ಗುಪ್ತ ಎಂಬ ಹೆಸರಿನ ಒಬ್ಬ ಮನುಷ್ಯ ಪ್ರವೇಶಿಸಿದ್ದನ್ನ ಕಂಡೆ. ಡಾಕ್ಟರ್ ವಿಠಲ್‌ರವರ ಗೈರುಹಾಜರೀಲಿ ಆ ಮನುಷ್ಯ ಈ ಮನೆಗೆ ಬಂದು ಹೋಗ್ತಾನಲ್ಲ, ಸರಿಯೇ ?"

"ಓ ಕಾಮೇಶ ಗುಪ್ತರೇ ?–ಅದರಲ್ಲೇನೂ ತಪ್ಪಿಲ್ಲ ಸ್ವಾಮಿ. ಗುಪ್ತರ ಹತ್ತಿರಾನೂ ಆ ಬಾಗಿಲ ಒಂದು ಬೀಗದ ಕೈ ಇದೆ."

"ನಿನ್ನ ಯಜಮಾನರು ಆ ಮನುಷ್ಯನಲ್ಲಿ ಬಹಳ ನಂಬಿಕೆ ಇಟ್ಟಿರೋ ಹಾಗಿದೆ–ಅಲ್ವೇ ರಂಗಪ್ಪಾ ?"—ಎಂದು ಕೇಳಿದರು, ಲಾಯರು.

"ಆಹಾ—ಹೌದು ಸ್ವಾಮಿ, ಹೌದು. ಅವರು ಇಲ್ಲಿಗೆ ಬಂದ ಹೋಗೋಕೆ ಯಾರೂ ಅಡ್ಡಿಮಾಡಬಾರದೆಂದೂ, ಅವರು ಹೇಳಿದ ಹಾಗೆ ಕೇಳಬೇಕೆಂದೂ, ನಮಗೆಲ್ಲ ಸಾಹೇಬರ ಅಪ್ಪಣೆಯಾಗಿದೆ, ಸ್ವಾಮಿ ?" ಎಂದ, ರಂಗಪ್ಪ.

"ಹಾಗೋ—ಸರಿ ರಂಗಪ್ಪ, ಆದರೆ ನಾನು ಡಾಕ್ಟರ ಜೊತೇಲಿ ಆ ಕಾಮೇಶ ಗುಪ್ತ ಎಂಬುವರನ್ನು ಇದುವರೆಗೆ ಎಂದೂ ಭೇಟಿಯಾಗಿಲ್ಲವಲ್ಲಾ ?"

—ಎಂದರು, ಶಂಕರರಾಯರು.

"ತಾವೊಬ್ಬರೇ ಅಲ್ಲ ಸ್ವಾಮೀ, ಯಾರೂ ಅವರನ್ನ ನಮ್ಮ ಸಾಹೇಬರ ಕೂಡ ಭೇಟಿಯಾಗಿಲ್ಲ. ಮನೆಯಲ್ಲೇ ಸದಾ ಇರೋ ನಾವು—ಆಳುಗಳು ಕೂಡ, ಅವರನ್ನ ಒಟ್ಟಿಗೆ ನೋಡಿಲ್ಲ. ಆ ಮನುಷ್ಯ ಮನೆಯ ಈ ಭಾಗಕ್ಕೆ ಬರೋದೇ ಇಲ್ಲ ."

"ಹಾಗೇನು ?"

"ಹೌದು; ಆತ ಬರೋದು—ಹೋಗೋದು ಏನಿದ್ರೂ, ಎಲ್ಲ, ಇದಕ್ಕೆ ಲಗತ್ತಾಗಿರೋ ಆ ಹಿಂದುಗಡೆ ಮನೆಗೆ—ಆ ಹಳೇ ಬಾಗಿಲ ಮೂಲಕ, ಅಷ್ಟೆ ಸ್ವಾಮಿ "

"ಸರಿ, ನಾನಿನ್ನು ಹೊರಡ್ತೇನೆ–ರಂಗಪ್ಪ "

"ಹೊರಡಿ–ಕೈಮುಗಿದೆ, ಸ್ವಾಮಿ"—ಎಂದ, ರಂಗಪ್ಪ.

ಲಾಯರು ಆ ಮನೆಯಿಂದ ಹೊರಟರು.

* * * *

ಡಾಕ್ಟರ್ ಹರಿವಿಠಲ್‌ರವರ ಮನೆಯಿಂದ ಹೊರಟ ಶಂಕರರಾಯರು, ಬಹು ಭಾರವಾದ ಹೃದಯದೊಡನೆ ಮನೆಯ ಕಡೆ ನಡೆಯುತ್ತಿದ್ದರು. ನಿಶ್ಶಬ್ದವೂ–ನಿರ್ಜನವೂ ಆಗಿದ್ದ ಆ ಹೊತ್ತಿನಲ್ಲಿ, ಮಿತ್ರರಾದ ಡಾಕ್ಟರ್

ವಿಠಲ್‌ರವರನ್ನು ಕುರಿತ ಅವರ ಯೋಚನೆಗಳು, ಬಹು ದಾರುಣವಾಗಿದ್ದವು. ........'ಆಹಾ ! ನಿರ್ಭಾಗ್ಯ ವಿಠಲ್ !– ಅವನು ಏನೋ ಹೇಳಿಕೊಳ್ಳಲಾರದ ಕಷ್ಟಕ್ಕೆ ಸಿಕ್ಕಿದ್ದಾನೇಂತ ನನಗೆ ಬಹಳ ಸಂಶಯವಾಗ್ತಿದೆ. ಚಿಕ್ಕಪ್ರಾಯದಲ್ಲಿ, ಹರಿ ಬಲು ಒರಟನಾಗಿದ್ದ–ದುಡುಕು ಸ್ವಭಾವದವನಾಗಿದ್ದ. ಅದು ಬಹಳ ಹಿಂದಿನ ಮಾತು. ಆದರೆ, ಪ್ರಕೃತಿ ನಿಯಮದಲ್ಲಿ, ಅಂತಹ ಸ್ವಭಾವಕ್ಕೆ ವಯಸ್ಸಿನ ಗಡು ನಿರ್ಬಂಧಗಳ ಶಾಸನವೇನೂ ಇಲ್ಲವಲ್ಲ !.........ಹೌದು—ಹೌದು, ಇದು ಹೀಗೇ ಆಗಿರುವುದರಲ್ಲಿ ಸಂಶಯವಿಲ್ಲ......ಏಕೆಂದರೆ, ಎಂದೋ ಮಾಡಿದ ಒಂದು ಹೀನಕೃತ್ಯವನ್ನ ಅಥವಾ ಅಪಮಾನಕರವಾದ ನಡತೆಯನ್ನ ಸ್ವಾಭಿಮಾನವೆನ್ನೋದು ಹಗುರವಾಗಿ ಕಂಡು ಮನ್ನಿಸಿಬಿಡುತ್ತೆ. ಕಾಲ ಕಳೆದ ಹಾಗೆ, ಅದು ನೆನಪಿನಿಂದ ಸಂಪೂರ್ಣವಾಗಿ ಅಳಿಸಿಹೋದಂತೆ ಭಾಸವಾಗುತ್ತೆ...........ಆದರೆ, ನಿಜವಾಗಿಯೂ ಅದು ಅಳಿಸಿಹೋಗಿರುವುದಿಲ್ಲ–ಹೋಗಲು ಸಾಧ್ಯವೂ ಅಲ್ಲ........ ಎಷ್ಟೋ ವರ್ಷಗಳ ಮೇಲೆ ಅದು, ನೆನಪಿನ ಆಳದಿಂದ, ಸಾವಧಾನವಾಗಿ ಮೇಲೆದ್ದು ಬಂದು, ಶಿಕ್ಷೆಯ ರೂಪವಾದ ತನ್ನ ಫಲವನ್ನ ಬಲಾತ್ಕಾರವಾಗಿ ತಿನ್ನಿಸುತ್ತದೆ ! ........... ವಿಠಲ ಇಂತಹ ಬಲಾತ್ಕಾರಕ್ಕೆ ಸಿಕ್ಕಿರುವುದರಲ್ಲಿ ಸಂದೇಹವಿಲ್ಲ !......' ಈ ಯೋಚನೆ ಮನಸ್ಸಿಗೆ ಬರಲು, ಲಾಯರ ಹೃದಯ ಭಯದಿಂದ ತುಂಬಿತು. ಕೆಲವು ಕ್ಷಣಗಳವರೆಗೆ ಅವರು, ನೆನಪು ಹಿಮ್ಮೆಟ್ಟುವವರೆಗೂ—ತಮ್ಮ ಹಿಂದಿನ ಜೀವನವನ್ನು ಕುರಿತು ಕೆದಕತೊಡಗಿದರು. ಎಲ್ಲಾದರೂ–ಯಾವುದಾದರೂ–ಹಳೆಯದಾದ ಅಕೃತ್ಯದ ಭೂತ ಹಟಾತ್ತನೆ ತಲೆ ಎತ್ತುವುದೇನೋ—ಎಂಬ ಶಂಕೆಯಿಂದ, ತಮ್ಮ ನೆನಪಿನ ಮೂಲೆ ಮೂಲೆಯಲ್ಲಿ ತಡಕಾಡಿದರು. ಅವರಿಗೆ, ತಮ್ಮ ಹಿಂದಿನ ಚರಿತ್ರೆ ತಕ್ಕಮಟ್ಟಿಗೆ ನಿರ್ದೋಷವಾಗಿಯೇ ಕಂಡಿತು. ಶಂಕರರಾಯರಷ್ಟು ನಿಶ್ಶಂಕೆಯಿಂದ–ನಿರ್ಲಿಪ್ತತೆಯಿಂದ, ತಮ್ಮ ಹಿಂದಿನ ಬಾಳಿನ ಹಾಳೆಗಳನ್ನು ತಿರುವಿಹಾಕಬಲ್ಲವರು, ಅತಿ ವಿರಳವಾಗಿದ್ದರು ಎಂದೇ ಹೇಳಬೇಕು. ಅವರ ಆತ್ಮವಿಮರ್ಶೆ, ಸ್ವಾಭಿಮಾನದಿಂದ ಪಕ್ಷಪಾತವಾಗಿರದೆ, ನಿರ್ದಾಕ್ಷಿಣ್ಯವಾಗಿತ್ತು. ಅವರ ಎಷ್ಟೋ ಕೃತ್ಯಗಳು–ಈಗ, ಅವನ್ನು ಮಾಡಿದಾಗಿನ ಸಂದರ್ಭ, ಸನ್ನಿವೇಶಗಳಿಂದ ದೂರವಾಗಿ ನಿಂತು ಪರೀಕ್ಷಿಸಿದಾಗ–ಮಾಡಬಾರದಾಗಿತ್ತೆನ್ನಿಸಿ, ಅವರ ಮನಸ್ಸು ನೆಲಕ್ಕೆ ಕುಸಿಯಿತು. ಹಾಗೆಯೇ, ಯಾವ ಯಾವುವೋ ಬಲಾತ್ಕಾರಗಳಿಗೊಳಗಾಗಿ ಅಕೃತ್ಯಕ್ಕೆ ಕೈ ಹಾಕುವುದರಲ್ಲಿದ್ದು – ಕಡೇ ಕ್ಷಣದಲ್ಲಿ–ದೈವವಶಾತ್–ಕೈ ತಡೆದಿದ್ದುದೂ ನೆನಪಾಗಿ, ಕುಸಿದ ಮನಸ್ಸು ಕೃತಜ್ಞತೆಯಿಂದ ಚೇತರಿಸಿಕೊಂಡು ಎದ್ದಿತು. ಅನಂತರ ಅವರು ಪುನಃ ಕಾಮೇಶ ಗುಪ್ತನ ವಿಷಯವಾಗಿ ಯೋಚಿಸತೊಡಗಿದರು. ಯೋಚಿಸುತ್ತ ಯೋಚಿಸುತ್ತ. ಅವರಿಗೆ ದೂರದಲ್ಲಿ ಭರವಸೆಯ ಕಿರಣವೊಂದು ಕಾಣಿಸಿತು. ಅವರು ಮನಸ್ಸಿನಲ್ಲೆ,

'ಈ ಕಾಮೇಶ ಗುಪ್ತ ಮಹಾಶಯನ ವಿಷಯ ತನಿಖೆ ನಡೆಸಬೇಕು. ಈ ಗುಪ್ತಜೀವಿಯ ಕಾಳ ರಹಸ್ಯಗಳನ್ನು ಭೇದಿಸಲೇಬೇಕು !........ನಿರ್ಭಾಗ್ಯ ವಿಠಲನ ಜೀವನದಲ್ಲೂ ಹಲವು ರಹಸ್ಯಗಳಿರಬೇಕು...........ಆದರೆ, ಆ ನಿಶಾಚರ ಪಿಶಾಚಿಸ್ವರೂಪನ ರಹಸ್ಯಗಳೊಡನೆ ಹೋಲಿಸಿದರೆ, ವಿಠಲನ ರಹಸ್ಯಗಳು ಸೂರ್ಯನ ಬೆಳಕಿನಂತೆ ಕಾಣುವುದರಲ್ಲಿ ಸಂದೇಹವಿಲ್ಲ............ ಹುಂ ! ಇವರಿಬ್ಬರ ಸ್ನೇಹಪ್ರಕರಣ ಇನ್ನು ಹೆಚ್ಚು ಕಾಲ ಈಗಿನಂತೆಯೇ ಮುಂದುವರಿಯಲಾರದು ! ...........ಹುಹ್ ! ಈ ವಿಕಟಪ್ರಾಣಿ ವಿಠಲನ ಹಾಸಿಗೆಯ ಬಳಿ ಕಳ್ಳನಂತೆ ಹೋಗುವುದನ್ನ ಭಾವಿಸಿಕೊಂಡರೇ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿದ ಹಾಗಾಗುತ್ತದೆ ! ...........ಆಹಾ ! ನಿರ್ಭಾಗ್ಯ ವಿಠಲಾ ! ಹಾಲು ಹಸುಳೆಯಂತೆ ಸುಖಸ್ವಪ್ನ ಕಾಣುತ್ತಿರುವ ನೀನು, ಕಣ್ಣು ತೆರೆದಾಗ ಆ–ಆ–ಅಸಹ್ಯ ಪಿಶಾಚಿಯ ಮುಸುಡಿಯನ್ನು ನೋಡುವುದು, ಎಷ್ಟು ಘೋರವಾಗಿದ್ದೀತು !–ಎಷ್ಟು ಅಪಾಯಕರವಾಗಿದ್ದೀತು ! !.....ಹೌದು ಹೌದು ! ಬಹಳ–ಬಹಳ ಅಪಾಯಕರ, ವಿಠಲ್ ! ...........ಏಕೆಂದರೆ, ಆ ಕೇಡಿಗನಿಗೆ ನಿನ್ನ ಉಯಿಲಿನ ವಿವರಣೆಗಳು ತಿಳಿದದ್ದೇ ಆದರೆ, ಅವನು ಅದರಲ್ಲಿ ದತ್ತವಾದ ಲಾಭಕ್ಕಾಗಿ ಅವಸರಪಡಬಹುದು–ಬಹುದು ಏನು !–ಅವಸರಪಟ್ಟೇ ಪಡುತ್ತಾನೆ !...........ಹುಂ ! ಸರಿ, ಕಾರ್ಯ ಮಿಂಚಿಹೋಗುವ ಮೊದಲೇ ಆದಷ್ಟು ಬೇಗ, ನಾನು ಈ ವ್ಯವಹಾರಕ್ಕೆ ಪ್ರವೇಶಿಸಿ ಹೆಗಲು ಕೊಡಬೇಕು. ಆದರೆ, ವಿಠಲ ನನಗೆ ಅವಕಾಶ ಕೊಟ್ಟರೆ ಮಾತ್ರ ಇದು ಸಾಧ್ಯ. ಆಹಾ ! ಅವನು ಅವಕಾಶ ಕೊಡಲು ಮನಸ್ಸು ಮಾಡಬಾರದೇ !'

—ಎಂದುಕೊಂಡರು. ಕಾಮೇಶ ಗುಪ್ತನ ಪರಿಚಯವಾದ ಮೇಲೆ, ಶಂಕರರಾಯರಿಗೆ ತಮ್ಮ ಮಿತ್ರನ ಭಯಾನಕ ಪರಿಸ್ಥಿತಿ, ಬಹು ಸ್ಪಷ್ಟವಾಗಿ ಕಂಡಿತು. ತಮ್ಮ ಮಿತ್ರ ಬರೆದಿದ್ದ ಉಯಿಲಿನ ಒಕ್ಕಣೆ, ಆತನ ಸ್ವನಾಶವನ್ನು ಕೂಗಿ ಕರೆಯುವಂತಿತ್ತು.

## ೩. ಪೂರ್ಣಸ್ವಸ್ಥರಾಗಿದ್ದ ಡಾಕ್ಟರ್ ವಿಠಲ್

ಹದಿನೈದು ದಿನಗಳು ಕಳೆದವು. ಆಗ ಬ್ಯಾರಿಸ್ಟರ್ ಶಂಕರರಾಯರಿಗೆ ಒಂದು ಸುಯೋಗ ಲಭಿಸಿತು. ಡಾ॥ ವಿಠಲ್‌ರವರು, ತಮ್ಮ ಮನೆಯಲ್ಲಿ ಐದಾರು ಹಳೆಯ ಆಪ್ತಮಿತ್ರರಿಗೆ, ಒಂದು ಭೋಜನ ಕೂಟವನ್ನೇರ್ಪಡಿಸಿದ್ದರು. ಮಿತ ಸಂಖ್ಯೆಯ ಆ ಆಹ್ವಾನಿತರೆಲ್ಲ ಬುದ್ಧಿಶಾಲಿಗಳೂ, ಸಮಾಜದಲ್ಲಿ ಹೆಸರಾದ ಗಣ್ಯರೂ ಆಗಿದ್ದರು. ಆ ಕೂಟಕ್ಕೆ ಬ್ಯಾರಿಸ್ಟರ್ ಶಂಕರರಾಯರೂ ಆಹ್ವಾನಿತರಾಗಿದ್ದರು. ಭೋಜನ. ಭೋಜನಾನಂತರದ ಮಾತು ಕಥೆ–ತಾಂಬೂಲ–ಚುಟ್ಟ ಸಿಗರೇಟು ಇತ್ಯಾದಿಗಳು ಮುಗಿಯುವ ವೇಳೆಗೆ, ರಾತ್ರಿ ಹನ್ನೊಂದು ಗಂಟೆಯಾಯಿತು. ಆಹ್ವಾನಿತರೆಲ್ಲ ಒಬ್ಬೊಬ್ಬರಾಗಿ ಹೊರಟರು. ಶಂಕರರಾಯರು ಮಾತ್ರ ಹೊರಡುವ ಅವಸರದಲ್ಲಿರಲಿಲ್ಲ. ಬೈಠಕುಖಾನೆಯಲ್ಲಿ ತಾವಿಬ್ಬರೇ ಉಳಿದಾಗ, ಶಂಕರರಾಯರು, ಡಾ॥ ವಿಠಲ್‌ರವರು ಕುಳಿತಿದ್ದ ದೊಡ್ಡ ಸೋಫಾದ ಇನ್ನೊಂದು ಬದಿಯಲ್ಲಿ ಒರಗಿ ಕುಳಿತು, ತಮ್ಮ ಮಿತ್ರರ ಕಡೆ ನೋಡುತ್ತ ,

"ವಿಠಲ್, ನಾನು ನಿನ್ನ ಕೂಡ ಸ್ವಲ್ಪ ಮಾತಾಡೋದಿತ್ತು" — ಎಂದರು.

"ಆಗಬಹುದು ಶಂಕರ್ ; ಕೆಲವು ದಿನಗಳ ಹಿಂದೆ ಒಂದು ರಾತ್ರಿ ನೀನು ಬಂದಿದ್ದೆ ಅಂತ ತಿಳೀತು. ಏನು ವಿಷಯ ತಿಳಿದುಕೊಳ್ಳೋಣಾಂತ, ನಿನಗೆ ಫೋನ್ ಮಾಡಬೇಕೆಂದಿದ್ದೆ ; ಕೆಲಸದ ಅವಸರದಲ್ಲಿ ಮರೆತುಬಿಟ್ಟೆ. ಏನು ವಿಷಯ ಶಂಕರ್ ?" — ಎಂದು ಕೇಳಿದರು, ಡಾ॥ ವಿಠಲ್.

"ಏನೂ ಇಲ್ಲ. ನಿನ್ನ ಆ ಉಯಿಲು ಜ್ಞಾಪಕ ಇದೆಯಷ್ಟೆ —ನಿನಗೆ ? ಅದರ ವಿಷಯ — ವಿಠಲ್"

ಲಾಯರು ಉಯಿಲಿನ ವಿಷಯ ಪ್ರಸ್ತಾಪಿಸಿದ್ದು ಡಾಕ್ಟರ್ ವಿಠಲ್‌ರವರಿಗೆ ಅಹಿತವಾಗಿತ್ತೆನ್ನುವುದು, ಅವರ ಮುಖದಲ್ಲಿ ಪ್ರಕಟವಾಯಿತು. ಆದರೂ ಅವರು ಅದನ್ನು ತೋರಿಸಿಕೊಳ್ಳದೆ, ಲಘುಹಾಸ್ಯದಿಂದಲೇ ಉತ್ತರ ಕೊಟ್ಟರು:

"ಅಯ್ಯಾ ಶಂಕರ್ರಾವ್, ನಿಜವಾಗಲೂ ನಿನ್ನನ್ನ ನೋಡಿದರೆ 'ಅಯ್ಯೋ ಪಾಪ !' ಅನ್ನಿಸುತ್ತೆ ಕಣಯ್ಯ ! ನನ್ನ ಉಯಿಲಿನ ವಿಷಯವಾಗಿ ನಿನ್ನಷ್ಟು ಪೇಚಾಡೋರು ಇನ್ನೊಬ್ಬರನ್ನ ಕಾಣೋದು ಕಷ್ಟ, ಮಹರಾಯ ! ನನ್ನ ಉಯಿಲಿನ ವಿಷಯದಲ್ಲಿ ನೀನು ಹೇಗೋ, ನನ್ನ ಸಂಶೋಧನೆ–ಸಿದ್ಧಾಂತಗಳ ವಿಷಯವಾಗಿ, ಆ ಜಗನ್ನಾಥ್ ಹಾಗೆ ! ಸರ್ಜರೀಲಿ ಅವನು ಪ್ರಚಂಡ ! — ನಿಸ್ಸೀಮ ! ನಾನು ಬಲ್ಲೆ , ಶಂಕರ್; ಆದರೆ, ಮಹಾ ಗರ್ವಿ ! ವೈದ್ಯಶಾಸ್ತ್ರ , ವಿಜ್ಞಾನದಲ್ಲಿ ಒಂದು ಭಾಗ; ಅದರಲ್ಲಿ ಒಂದು ಭಾಗ—ಸರ್ಜರಿ; ಇದು ಯಾರಿಗೆ ತಿಳಿಯೋದಿಲ್ಲ ? ಆದರೂ, ಅವನು ಮಾತ್ರ, ಸರ್ಜರೀಲಿ ಪಂಡಿತನಾದ ಮಾತ್ರಕ್ಕೇ ವಿಜ್ಞಾನದ ಸಮಸ್ತವೂ ತನ್ನ ಹಸ್ತಗತವಾದೋನ ಹಾಗೆ ವಾದಿಸ್ತಾನೆ ! ಅವನಂಥಾ ಮರದಲೆಯ ಮಂದ ಚರ್ಮದ ಪಾಂಡಿತ್ಯಗರ್ವಿ ಇನ್ನೊಬ್ಬನಿರಲಾರ ! ಅವನ ಪ್ರಕಾರ, ನನ್ನ ರಿಸರ್ಚಸ್ ಎಲ್ಲ ಶುದ್ಧ ಅನ್‌ಸೈಂಟಿಫಿಕ್ ! ಅಥವಾ ಆಂಟಿಸೈಂಟಿಫಿಕ್ ! ....... ಓ ! ನೀನು ಹುಬ್ಬುಗಂಟಿಕ್ಕಬೇಕಾಗಿಲ್ಲ, ಶಂಕರ್......ಅವನು ಒಳ್ಳೆಯವನೆಂದು ಬಲ್ಲೆ —ಬಹು ಒಳ್ಳೆಯವನು; ಆದರೇನು ? ಅಲ್ಪವಿದ್ಯಾ ಮಹಾಗರ್ವೀ–ಅಂದಹಾಗೆ, ಅವನ ಗರ್ವ ಅವನ ಒಳ್ಳೇತನವನ್ನ ಮುಚ್ಚಿಬಿಡುತ್ತೆ ! ಅವನ ಬುದ್ಧಿಗೆ ಮೀರಿದ ವಿಷಯಗಳಲ್ಲೇ ಅವನ ಬಾಯಿಬಡಕುತನ ಹೆಚ್ಚು ! – ಹುಂ ! ಜಗನ್ನಾಥನಷ್ಟು ಮತ್ಯಾರೂ ನನ್ನಲ್ಲಿ ನಿರಾಶೆಯನ್ನುಂಟುಮಾಡಿಲ್ಲ, ಶಂಕರ್"

—ಎಂದರು, ಡಾ॥ ವಿಠಲ್. ಆದರೆ, ಶಂಕರರಾಯರು ತಮ್ಮ ಮಿತ್ರರಾಡಿದ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ, ಪುನಃ ಉಯಿಲಿನ ಮಾತನ್ನೇ ಎತ್ತಿ ,

"ನೋಡು ವಿಠಲ್, ನನಗೆ ನಿನ್ನ ಉಯಿಲು ಸ್ವಲ್ಪವೂ ಒಪ್ಪಿಗೆಯಾಗಿಲ್ಲಾ–ಅನ್ನೋದು ನಿನಗೆ ಗೊತ್ತಷ್ಟೆ ?" — ಎಂದರು.

"ಓಹೋ. ಗೊತ್ತಿಲ್ದೇ ಏನು ? ಚೆನ್ನಾಗಿ ಗೊತ್ತು ! ಹಾಗಂತ ನೀನು ಬಾಯಿ ಬಿಟ್ಟು ಹೇಳೇ ಇದ್ದೀಯಲ್ಲ "

— ಎಂದು, ಡಾಕ್ಟರು ಸ್ವಲ್ಪ ಹುಬ್ಬುಗಂಟಿಕ್ಕಿಕೊಂಡೇ ಹೇಳಿದರು.

"ಈಗ ಪುನಃ ಬಾಯಿ ಬಿಟ್ಟು , ಅದನ್ನೇ, ಇನ್ನೂ ಒತ್ತಿ ಹೇಳಬೇಕಾಗಿದೆ — ವಿಠಲ್" — ಎಂದರು, ಲಾಯರು.

""ಆದೇನು–ಅಂತಹ ಅವಶ್ಯಕತೆ ?"

"ಏನೂಂದರೆ, ಈಚೆಗೆ ನಿನ್ನ ಉಯಿಲಿನ ಮಿತ್ರ ಕಾಮೇಶ ಗುಪ್ತನ ವಿಷಯ, ಕೆಲವು ಸಂಗತಿಗಳು ನನ್ನ ಗಮನಕ್ಕೆ ಬಂದಿವೆ–ಅದಕ್ಕೋಸ್ಕರ."

ಈ ಮಾತುಗಳನ್ನು ಕೇಳಿದೊಡನೆಯೇ ಡಾಕ್ಟರ್ ವಿಠಲ್‌ರವರು ಸೆಟೆದು ಕುಳಿತರು. ಅವರ ಸುಂದರವಾದ ದೊಡ್ಡ ಮುಖ ತಟ್ಟನೆ ಬೆಳ್ಳಗಾಯಿತು. ರಕ್ತಹೀನವಾದ ಅವರ ತುಟಿಗಳು ಬಿಗಿದುಕೊಂಡವು. ಕಣ್ಣುಗಳಲ್ಲಿ ಅಸಮಾಧಾನದ ಛಾಯೆ ತಲೆದೋರಿತು. ಲಾಯರ ಕಡೆ ನೋಡುತ್ತ ಅವರು,

"ನೋಡು ಶಂಕರ್, ಈ ವಿಷಯದಲ್ಲಿ ಇನ್ನು ಹೆಚ್ಚು ಕೇಳೋದಕ್ಕೆ ನನಗೆ ಸ್ವಲ್ಪವೂ ಇಷ್ಟವಿಲ್ಲ. ಉಯಿಲಿನ ಮಾತು ಪುನಃ ಚರ್ಚಿಸಕೂಡದೂಂತ, ನಮ್ಮಿಬ್ಬರ ಮಧ್ಯೆ ಒಪ್ಪಂದವಾಗಿತ್ತಲ್ವೆ ?"

—ಎಂದರು. ಆದರೂ ಲಾಯರು ಮಾತನ್ನು ಅಲ್ಲಿಗೇ ಬಿಡದೆ,

"ಅಯ್ಯಾ ವಿಠಲ, ನನ್ನ ಗಮನಕ್ಕೆ ಬಂದಿರೋ ನಿನ್ನ ಮಿತ್ರನ ಕಥೆ ಬಹಳ ಘೋರವಾಗಿದೆ! — ಅಸಹ್ಯವಾಗಿದೆ ! — ಗೊತ್ತೇನು ?" —ಎಂದರು.

"ಅದೇನೇ ಇರಲಿ ಶಂಕರ್‌ರಾವ್, ನನ್ನ ಮಟ್ಟಿಗೆ ಅದು ಯಾವ ವ್ಯತ್ಯಾಸವನ್ನೂ ಮಾಡಲಾರದೂಂತ ತಿಳಿದುಕೋ. ನೀನು ನನ್ನ ವಿಚಿತ್ರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲಾರೆ. ಅದು ನನಗೆ ಬಹು ದುರ್ಭರವಾಗಿದೆ ಮಿತ್ರಾ, ಬಹು ಯಾತನಾಮಯವಾಗಿದೆ. ಆದರೆ, ನಾನು ಚೆನ್ನಾಗಿ ಬಲ್ಲೆ, ನನ್ನ ಪರಿಸ್ಥಿತಿ, ಮಾತು ಕಥೆಯಿಂದ ನೆಟ್ಟಗಾಗೋದಲ್ಲಾಂತ, ನೀನು ನನ್ನ ಮಾತನ್ನ ನಂಬಬೇಕು — ಶಂಕರ್‌ರಾವ್"

—ಎಂದರು, ಡಾಕ್ಟರ್ ವಿಠಲ್. ತಮ್ಮ ಮಿತ್ರನ ರೀತಿ ಲಾಯರಿಗೆ ಅರ್ಥವಾಗಲಿಲ್ಲ. ಅವರು,

"ವಿಠಲ್, ನೀನು ನನ್ನನ್ನು ಬಲ್ಲೆ–ಚೆನ್ನಾಗಿ ಬಲ್ಲೇ —ಅಂತ ತಿಳಕೊಂಡಿದ್ದೇನೆ. ಆದ್ದರಿಂದ, ನಾನು ನಿನ್ನ ನಂಬಿಕೆಗೆ ಅರ್ಹನಾದ ಮನುಷ್ಯಾಂತ–ನಿನಗೆ ಹೇಳ ಬಯಸುತ್ತೇನೆ. ವಿಠಲ್–ವಿಠಲ್, ಇಲ್ಲಿ ಕೇಳು — ರಹಸ್ಯದಲ್ಲಿ , ನನ್ನೊಡನೆ ನಿನ್ನ ಪರಿಸ್ಥಿತಿ ಏನಿದೆಯೊ ಅದನ್ನೆಲ್ಲ ಮರೆಮಾಚದೆ ಬಿಚ್ಚಿ ಹೇಳು. ನಾನು ನಿನ್ನನ್ನು ಕಷ್ಟದಿಂದ ಪಾರುಮಾಡಬಲ್ಲೆ–ಖಂಡಿತ ಪಾರುಮಾಡಬಲ್ಲೆ–ಸಂದೇಹಪಡಬೇಡ" — ಎಂದರು.

"ಆಹಾ ! ಶಂಕರಾ, ನಿನ್ನ ಹೃದಯ ಬಹಳ ಒಳ್ಳೇದೂಂತ ನಾನು ಕಾಣೆನೇ ? ನನ್ನ ವಿಷಯದಲ್ಲಿ ನಿನಗಿಂತ ಹೆಚ್ಚಿನ ಹಿತಚಿಂತಕರು ಯಾರೂ ಇರಲಾರರು. ನಿನ್ನ ಒಳ್ಳೆಯತನ–ಹಿತಚಿಂತನೆಗಳಿಗೆ, ತಕ್ಕ ರೀತಿಯಲ್ಲಿ ಕೃತಜ್ಞತೆ ತೋರಿಸೋದಕ್ಕೆ ನಾನು ಕೇವಲ ಅಶಕ್ತನಾಗಿದ್ದೇನೆ. ನಿನ್ನಲ್ಲಿ ನನಗೆ ಪೂರ್ಣನಂಬಿಕೆಯಿದೆ–ಶಂಕರ್, ಅದರಲ್ಲಿ ಅನುಮಾನ ಪಡಬೇಡ. ನನ್ನ ಇಷ್ಟಾನುಸಾರವೇ ನಡೆಯೋಕೆ ಸಾಧ್ಯ ವಾದರೆ–ಅವಕಾಶವಾದರೆ– ಜೀವಂತವ್ಯಕ್ತಿಗಳಲ್ಲಿ, ಎಲ್ಲರಿಗಿಂತ ಮುಂದಾಗಿ, ನಿನ್ನನ್ನು ನಂಬುತ್ತೇನೆ. ಅಷ್ಟೇಕೆ ? – ನನ್ನನ್ನು ನಾನು ನಂಬುವುದಕ್ಕಿಂತ ಹೆಚ್ಚಾಗಿ ನಿನ್ನನ್ನ ನಂಬುತ್ತೇನೆ. ಆದರೆ, ಪರಿಸ್ಥಿತಿ ನಿನ್ನ ಕಲ್ಪನೆಯಂತೆ ಇಲ್ಲ – ನೀನು ಊಹಿಸಿರುವಷ್ಟು ವಿಷಮವಾಗಿಲ್ಲ. ನೀನು ನನ್ನಲ್ಲಿ ಅಪಾರ ವಿಶ್ವಾಸಿಯಾದುದರಿಂದ–ನಿನ್ನ ಮನಸ್ಸಿಗೆ ಸಮಾಧಾನವಾಗುವಂತಹ ಒಂದು ಮಾತನ್ನು ಹೇಳುತ್ತೇನೆ–ಕೇಳು ಶಂಕರ್ ; ನನಗೆ ಇಷ್ಟಬಂದ ಪಕ್ಷದಲ್ಲಿ, ನಾನು ಕಾಮೇಶ ಗುಪ್ತನ ಸಂಬಂಧವನ್ನು ಸಂಪೂರ್ಣವಾಗಿ ತೊರೆಯಬಲ್ಲೆ "

"ನಿಜವಾಗಲೂ, ವಿಠಲ್ ?"

"ಸತ್ಯವಾಗಿ–ಶಂಕರ್ ; ಇದೋ ನಿನ್ನ ಕೈ ಮೇಲೆ ಕೈ ಇಟ್ಟು ಹೇಳೋ ಮಾತು ಇದು !" — ಎಂದು ಡಾಕ್ಟರು, ತಮ್ಮ ಮಿತ್ರರ ಕೈ ಮುಟ್ಟಿ ,

"ಶಂಕರ್, ನನ್ನ ಕ್ಷೇಮದ ವಿಷಯದಲ್ಲಿ ನೀನು ತೋರಿಸಿರೋ ಆಸಕ್ತಿಗೆ, ವಿಶ್ವಾಸಕ್ಕೆ, ನಾನು ನಿನಗೆ ಎಂದೆಂದಿಗೂ ಋಣಿ. ಆದರೆ, ಇನ್ನೊಂದು ಮಾತು ಮಿತ್ರಾ, ಇದು ಎಷ್ಟು ಯೋಚಿಸಿದರೂ, ಕೇವಲ ನನ್ನ ಸ್ವಂತ ಬದುಕಿನ ವಿಚಾರ. ಆದ್ದರಿಂದ, ಇನ್ನು ಮುಂದೆ ಇದರ ಗೋಜಿಗೆ ಬರದೆ ಬಿಟ್ಟುಬಿಡು–ಅಂತ ನಿನ್ನನ್ನ ಬೇಡಿಕೋತೇನೆ. ನನ್ನ ಈ ಬೇಡಿಕೆಯಿಂದ ನಿನಗೆ ಅಸಮಾಧಾನವಾಗಲಾರದೂಂತ ಭಾವಿಸ್ತೇನೆ"— ಎಂದರು.

ಲಾಯರು ಕೆಲವು ಕ್ಷಣಗಳವರೆಗೆ ಚಿಂತಾಮಗ್ನರಾಗಿ, ಅನಂತರ ಎದ್ದು ನಿಂತು,

"ಹೌದು ವಿಠಲ್, ಹಾಗೇ ಯೋಚಿಸಿದರೆ, ನಿನ್ನ ವಿಷಯದಲ್ಲಿ ನಿನ್ನ ತೀರ್ಮಾನ–ಅಭಿಪ್ರಾಯ, ತೀರ ಸರಿಯಾದದ್ದೂಂತ ನನಗೆ ತೋರುತ್ತೆ. ನಾನು ಎಂದಿಗೂ ನಿನ್ನ ಇಷ್ಟಕ್ಕೆ ವಿರೋಧವಾಗಿ ನಡೆಯೋದಿಲ್ಲ. ನೀನು ಈ ವಿಷಯದಲ್ಲಿ ಪೂರ್ಣ ನೆಮ್ಮದಿಯಿಂದ ಇರಬಹುದು" — ಎಂದರು.

"ಒಳ್ಳೇದು ಶಂಕರ್, ನಾವು ಈ ವಿಷಯ ಮಾತಾಡಿದ್ದು ಇದೇ ಕಡೆಯ ಬಾರಿಯಾಗಲಿ. ಹೇಗೋ, ಈಗ ಮಾತು ಬಂದಿದ್ದರಿಂದ, ಇದರ ಸಂಬಂಧವಾಗಿ ನೀನು ತಿಳಿದಿರಬೇಕಾದ ವಿಷಯ ಒಂದಿದೆ."

"ಏನದು ?"

"ಪಾಪ, ಆ ನಿರ್ಭಾಗ್ಯ ಗುಪ್ತನ ವಿಷಯದಲ್ಲಿ ನನಗೆ ಅಪಾರವಾದ ಕುತೂಹಲವಿದೆ–ಮರುಕವಿದೆ, ಶಂಕರ್. ನೀನು ಅವನನ್ನ ನೋಡಿರುವೆ–ಅಂತ ನನಗೆ ಗೊತ್ತಾಯಿತು. ಅವನೇ ನಿನ್ನ–ಅವನ ಭೇಟಿಯ ವಿಷಯವನ್ನು ನನಗೆ ತಿಳಿಸಿದ. ಅವನು ನಿನ್ನ ಕೂಡ ಸ್ವಲ್ಪ ಒರಟುತನದಿಂದ ವರ್ತಿಸಿರಬಹುದೂಂತ ನನಗೆ ಶಂಕೆ. ಏನೇ ಆಗಲಿ, ಶಂಕರ್, ನಿನಗೆ ತಿಳಿಸಲು ಸಾಧ್ಯವಿಲ್ಲದ ಕೆಲವು ಕಾರಣಗಳಿಂದ, ನಾನು ಆ ತರುಣನ ವಿಷಯದಲ್ಲಿ ಬಹಳ ಆಸಕ್ತಿಯನ್ನು ವಹಿಸಿದ್ದೇನೆ."

"ಆಹಾ ! ಹೌದು, ಹೌದು, ಅದಕ್ಕೆ ನಿನ್ನ ಉಯಿಲೇ ಸಾಕ್ಷಿ !"

"ಆದ್ದರಿಂದ, ಶಂಕರ್, ನನಗೆ ಉಯಿಲಿನಂತೆ ಘಟನೆಗಳು ಸಂಭವಿಸಿದರೆ, ಆಗ ನೀನು ಗುಪ್ತನ ವಿಷಯದಲ್ಲಿ ಸ್ವಲ್ಪ ಸಹಾನುಭೂತಿಯಿಂದ ವರ್ತಿಸಿ, ಅವನಿಗೆ ಉಯಿಲಿನ ಪ್ರಕಾರ ಸಲ್ಲಬೇಕಾದ ಹಕ್ಕುಬಾಧ್ಯತೆಗಳನ್ನೆಲ್ಲ ದೂರಕಿಸಿಕೊಡೋದಾಗಿ ವಾಗ್ದಾನ ಮಾಡಬೇಕು. ವಿಷಯ ಪೂರ್ಣವಾಗಿ ನಿನಗೆ ತಿಳಿದಿದ್ದಿದ್ದರೆ, ನೀನು ಹಿಂದು ಮುಂದು ನೋಡದೆ ಮಾತು ಕೊಡುತ್ತಿದ್ದೆ–ಎಂದು ನಾನು ಬಲ್ಲೆ. ನೀನು ವಾಗ್ದಾನಮಾಡಿದರೆ, ನನ್ನ ಎದೇ ಮೇಲಿಂದ ಒಂದು ದೊಡ್ಡ ಭಾರವನ್ನು ಇಳಿಸಿದಂತಾಗುತ್ತೆ" ಎಂದರು, ಡಾಕ್ಟರು.

"ಅಯ್ಯಾ ವಿಠಲ್, ನಿನ್ನ–ಅವನ ವಿಶ್ವಾಸ ನಿಮನಿಮಗೆ ಸಂಬಂಧಪಟ್ಟದು. ಆದರೆ, ನನ್ನ ಮಟ್ಟಿಗೆ ಹೇಳೋದಾದರೆ, ಎಂದಿಗೇ ಆಗಲಿ, ನನಗೆ ಅವನಲ್ಲಿ ವಿಸ್ವಾಸವುಂಟಾಗುತ್ತೆ–ಅಂತ ನಟನೆಗೂ ಹೇಳಲಾರೆ ! " ಎಂದರು, ಲಾಯರು.

"ಛೆ ! ಛೆ ! ನಾನು ಅವನ ಪರವಾಗಿ ನಿನ್ನ ನಂಬಿಕೆ ವಿಶ್ವಾಸಗಳನ್ನ ಕೇಳುತ್ತಿಲ್ಲ, ಶಂಕರ್ರಾವ್. ಅವನಿಗೆ ನ್ಯಾಯವನ್ನು ಮಾತ್ರ ದೊರಕಿಸಿಕೊಡು–ಅಂತ ಕೇಳಿಕೊಳ್ಳುತ್ತೇನೆ, ಅಷ್ಟೆ . ನಾನು ಅವನ ಭಾಗಕ್ಕೆ ಇಲ್ಲವೇ ಇಲ್ಲದಂತಾದಾಗ, ನನ್ನ ಪರವಾಗಿ ನಿಂತು, ಉಯಿಲಿನ ಷರತ್ತುಗಳನ್ನು ಪಾಲಿಸಿಕೊಡೋ ಅಷ್ಟು ಸಹಾಯಮಾಡು–ಅಂತ ಬೇಡಿಕೊಳ್ತೇನೆ–ಅಷ್ಟೆ. ಇಷ್ಟು ಮಾತು ಕೊಡೋದು ನಿನಗೆ ಕಷ್ಟವೇ–ಶಂಕರ್ ?" ಎಂದು ಕೇಳಿದರು, ಡಾಕ್ಟರು. ಲಾಯರು ದೊಡ್ಡದಾಗಿ ನಿಟ್ಟುಸಿರು ಬಿಟ್ಟು,

"ಒಳ್ಳೇದು, ವಿಠಲ್–ನಿನ್ನ ಇಷ್ಟದಂತೆ ನಡೆಯೋದಾಗಿ ಮಾತು ಕೊಡುತ್ತೇನೆ' ' ಎಂದು ಹೇಳಿ, ಡಾಕ್ಟರ ಮನೆಯಿಂದ ಹೊರಟರು.

## ೪. ಹೊನ್ನಪ್ಪನವರ ಕೊಲೆ

ಸುಮಾರು ಒಂದು ವರ್ಷ ಕಳೆದಿತ್ತು. ೧೯೪೪— ನೇ ಇಸವಿಯ ಅಕ್ಟೋಬರ್ ತಿಂಗಳು. ಆಗ ಒಂದು ದಿನ, ಅತಿಭಯಾನಕವಾದ ಒಂದು ಕೊಲೆ ಪ್ರಕರಣದಿಂದ, ಇಡೀ ಲೋಕನಗರ ಅಲ್ಲೋಲ ಕಲ್ಲೋಲವಾಯಿತು. ಯಾವ ಸಂದರ್ಭದಲ್ಲೂ ಕೊಲೆ–ಎನ್ನುವುದೇ ವಿಷಾದಕರ. ಅಂಥಾದ್ದರಲ್ಲಿ ಕೊಲೆಗೆ ಬಲಿಯಾದ ವ್ಯಕ್ತಿ, ಸಮಾಜದಲ್ಲಿ ಗಣ್ಯರಾದವರೂ ಆಗಿದ್ದರೆ, ಅಂತಹವರ ಕೊಲೆ, ವಿಷಾದಕರವಾಗುವುದರ ಜೊತೆಗೆ ವಿಶೇಷವಾದ ಸಾರ್ವಜನಿಕ ಪ್ರಾಶಸ್ತ್ಯವನ್ನೂ ಪಡೆಯುತ್ತದೆ.

ಕೊಲೆಯ ತಿಳಿದುಬಂದ ವಿವರಗಳು ಕೆಲವೇ ಇದ್ದರೂ, ಅವುಗಳಲ್ಲಿ ವ್ಯಕ್ತವಾದ ಕ್ರೌರ್ಯದಿಂದ, ಘಟನೆ ಭೀಭತ್ಸವಾಗಿತ್ತು.

ಕೊಲೆ ನಡೆದ ದಿನ ಪೂರ್ಣಿಮೆ. ರಾತ್ರೆ ಸುಮಾರು ಹನ್ನೆರಡು ಗಂಟೆ ಸಮಯ. ನಗರದ ಜವಾಹಿರಿ ಪೇಟೆಗೆ ಬಂದು ಸೇರುವ ಒಂದು ಬೀದಿಯ ಮಹಡಿ ಮನೆಯೊಂದರ ಮೇಲಂತಸ್ತಿನಲ್ಲಿ, ಒಂದು ಸಣ್ಣ ಕುಟುಂಬ ವಾಸವಾಗಿತ್ತು. ಮನೆಯ ಯಜಮಾನ ಇನ್ನೂ ಮನೆಗೆ ಬಂದಿರಲಿಲ್ಲ. ಆತನ ಮಧ್ಯ ವಯಸ್ಸಿನ

ಹೆಂಡತಿ, ತನ್ನ ಪತಿಯ ಆಗಮನವನ್ನೇ ನಿರೀಕ್ಷಿಸುತ್ತ, ಮಹಡಿ ಮೇಲಿನ ಮುಂದುಗಡೆ ಕೊಠಡಿಯ ಕಿಟಕಿಯ ಬಳಿ ಕುಳಿತಿದ್ದಳು. ಇವಳ ಮನೆಯ ಮುಂದೆಯೇ, ಒಂದು ಪ್ರಕಾಶಮಾನವಾದ ಬೀದಿಕಂಭದ ದೀಪವಿತ್ತು. ಜೊತೆಗೆ, ಶುಭ್ರವಾದ ಆಕಾಶದಲ್ಲಿ ಬೆಳಗುತ್ತಿದ್ದ ಪೂರ್ಣಚಂದ್ರನ ಬೆಳಕೂ ಸೇರಿ ಬೀದಿಯೆಲ್ಲ ಪ್ರಕಾಶಮಾನವಾಗಿತ್ತು. ಬೀದಿಯಲ್ಲಿ ಜನಸಂಚಾರ ನಿಂತು ಆಗಲೇ ಒಂದು ಗಂಟೆಯಾಗಿ, ಸಮಯ ನಿಶ್ಶಬ್ದವಾಗಿತ್ತು. ಆಗ ಪತಿಯ ಆಗಮನಕ್ಕೆ ಕಾತರಳಾಗಿದ್ದ ಆ ಹೆಂಗಸಿನ ಕಿವಿಗೆ, ಇದ್ದಕ್ಕಿದ್ದಹಾಗೆಯೇ ಎರಡು ಹೆಜ್ಜೆ ಸದ್ದುಗಳು ಕೇಳಿಬಂದು — ಎರಡೂ, ಬರಬರುತ್ತ ಹತ್ತಿರವಾಗುತ್ತಿದ್ದಂತೆ ಭಾಸವಾಯಿತು. ಆಕೆ ಬೀದಿಯ ಕಡೆಗೇ ನಟ್ಟ ನೋಟದಿಂದ ನೋಡತೊಡಗಿದಳು. ಕೆಲವು ಕ್ಷಣಗಳಲ್ಲಿ, ಆಕೆಯ ಮನೆಯ ಮುಂದೆಯೇ, ನಡುಬೀದಿಯಲ್ಲಿ — ಎರಡು ವ್ಯಕ್ತಿಗಳು, ಎದುರುಬದುರಾಗಿ ಸಂಧಿಸಿದರು. ಅವರಲ್ಲಿ ಒಬ್ಬಾತ, ಸುಮಾರು ಅರವತ್ತು ವರ್ಷಗಳ ವೃದ್ಧನಾಗಿದ್ದ. ಆತ, ಕರೀಕೋಟು, ಪಂಚೆ, ಜರತಾರಿ ಅಂಚಿನ ರುಮಾಲು, ಮತ್ತು ಉತ್ತರೀಯಗಳನ್ನು ಧರಿಸಿದ್ದ. ಕಂಭದ ದೀಪದ ಬೆಳಕಿನಲ್ಲಿ ಆತನ ಮುಖ ಸ್ಪಷ್ಟವಾಗಿ ಕಾಣುತ್ತಿತ್ತು. ಪೂರ್ತಿ ಬೆಳ್ಳಗಾಗಿದ್ದ ದೊಡ್ಡಮೀಸೆ ಮತ್ತು ಹುಬ್ಬುಗಳಿಂದ ಕೂಡಿದ್ದ , ತಿಳಿವರ್ಣದ, ಸ್ವಲ್ಪ ಸುಕ್ಕುಸುಕ್ಕಾದ ಆತನ ಮುಖದಲ್ಲಿ , ಸಾತ್ವಿಕತೆ ಎದ್ದು ಕಾಣುತ್ತಿತ್ತು. ಬೀದಿಯಲ್ಲಿ ಈ ವೃದ್ಧ , ಹೆಂಗಸು ಕುಳಿತು ನೋಡುತ್ತಿದ್ದ ಮನೆಯ ಕಡೆ ಮುಖ ಮಾಡಿಕೊಂಡು ನಿಂತಿದ್ದ. ಈತನನ್ನು ಸಂಧಿಸಿದ ಇನ್ನೊಬ್ಬ ವ್ಯಕ್ತಿ ಕುಳ್ಳಾಗಿದ್ದ. ಈ ಕುಳ್ಳ, ಕಪ್ಪಾದ ಸೂಟನ್ನು ಧರಿಸಿದ್ದ. ಕಾಲಿನಲ್ಲಿ ಬೂಟ್ಸು ಮೆಟ್ಟಿದ್ದ. ತಲೆಯಲ್ಲಿ ಕಿವಿಯವರೆಗೂ ಎಳೆದುಕೊಂಡು ಉಣ್ಣೆಯ ಕುಲಾವಿತೋಪಿ ಇತ್ತು. ಕತ್ತಿನ ಸುತ್ತ, ಅಂಗಿಯ ಮೇಲೆ, ಮಫ್ಲರು ಸುತ್ತಿಕೊಂಡಿದ್ದ. ಕೈಲಿ ಒಂದು ದಪ್ಪನಾದ ದೊಣ್ಣೆ ಇತ್ತು.

ವೃದ್ಧನ ನೇರಕ್ಕೆ ಬಂದ ಕೂಡಲೇ ಕುಳ್ಳ, ತನ್ನ ಹಾದಿ ಬಿಟ್ಟು ವೃದ್ಧನನ್ನು ಸಮೀಪಿಸಿದ. ಯಾರೋ ಅಪರಿಚಿತ ವ್ಯಕ್ತಿ ತನ್ನ ಕಡೆ ಹೆಜ್ಜೆ ಇಟ್ಟು ಬಂದದ್ದನ್ನು ನೋಡಿ ವೃದ್ಧ , ಸ್ವಲ್ಪ ಸಂಶಯದಿಂದಲೂ, ಭಯದಿಂದಲೂ ನಿಂತು, “ಯಾರಪ್ಪಾ ನೀವು ?” ಎಂದು, ಬಹು ವಿನಯದಿಂದ ಕೇಳಿದ. ಹೀಗೆ ಕೇಳುವಾಗ ಆತ, ಒಂದು ಪಕ್ಕಕ್ಕೆ ಸರಿದು, ತನ್ನ ನಿಲುವನ್ನು ಬದಲಾಯಿಸಿದ. ಕುಳ್ಳನೂ ಅವನನ್ನು ಬಳಸಿ ಹೋಗಿ, ಹೆಂಗಸು ನೋಡುತ್ತಿದ್ದ ಕಿಟಕಿಯ ಕಡೆ ಮುಖಮಾಡಿ ನಿಂತು, ಮುದುಕನನ್ನು ಆಪಾದಮಸ್ತಕ ನೋಡತೊಡಗಿದ. ಆಗ ಹೆಂಗಸಿಗೆ ಆ ಕುಳ್ಳನ ಗುರುತು ಸಿಕ್ಕಿತು. ಆತ ಕಾಮೇಶ ಗುಪ್ತ ಎಂಬ ಮನುಷ್ಯನಾಗಿದ್ದ. ಆತ ಆ ಬೀದಿಯಲ್ಲಿ ಆಗಾಗ ತಿರುಗಾಡುತ್ತಿದ್ದ. ಹೆಸರಿಗೂ ರೂಪಕ್ಕೂ ಇದ್ದ ವಿರೋಧಾಭಾಸದಿಂದ, ಅವನು, ನೋಡಿದವರೆಲ್ಲರ ಕುತೂಹಲಕ್ಕೂ ಅಪಹಾಸ್ಯಕ್ಕೂ ಈಡಾದ ಮನುಷ್ಯನಾಗಿದ್ದ. ಅವನನ್ನು ಕಂಡಾಗಲೆಲ್ಲ (ಹೆಂಗಸಿನ ಹೇಳಿಕೆಯ ಪ್ರಕಾರ) ಆಕೆಗೆ ವಾಂತಿಯಾಗುವ ಹಾಗಾಗುತ್ತಿತ್ತಂತೆ ! ಅಷ್ಟು ಅಸಹ್ಯನಾಗಿದ್ದ, ಆ ಮನುಷ್ಯ !

ವೃದ್ಧನ ಸಾತ್ವಿಕವಾದ ಪ್ರಶ್ನೆಗೆ ಗುಪ್ತ ಏನೂ ಉತ್ತರ ಹೇಳದೆ, ತನ್ನ ಕೈಲಿದ್ದ ದೊಣ್ಣೆಯನ್ನೆತ್ತಿ, ಅವನ ಮೇಲೆ ಬೀಳುವವನಂತೆ ಮುಂದುವರಿದ. ಮುದುಕ ಭಯದಿಂದ ಮುದುಡಿ, ರಕ್ಷಣೆಗೆ ತಲೆಯ ಮೇಲೆ ಎರಡು ಕೈಗಳನ್ನೂ ಇಟ್ಟುಕೊಂಡು, “ಯಾರಪ್ಪಾ ನೀನು ? ಯಾಕಪ್ಪಾ ! –ಯಾಕಪ್ಪಾ !” ಎಂದು ಬಹು ದೈನ್ಯದಿಂದಲೂ, ಭೀತಿಯಿಂದಲೂ, ಕಂಪಿಸುವ ಧ್ವನಿಯಲ್ಲಿ ಕೇಳತೊಡಗಿದ. ಆದರೆ ಗುಪ್ತ, ವೃದ್ಧನ ವಯಸ್ಸನ್ನಾಗಲಿ, ದೈನ್ಯತೆಯನ್ನಾಗಲಿ ಲಕ್ಷಿಸದೆ, ಮಿತಿಮೀರಿದ ಕೋಪವನ್ನು ಪ್ರಕಟಿಸುತ್ತ , ತನ್ನ ಕೈಲಿದ್ದ ದೊಣ್ಣೆಯನ್ನೆತ್ತಿ ಹೊಡೆಯುವವನಂತೆ ವರ್ತಿಸಿದ. ವೃದ್ಧ, ತನಗೆ ಅಪರಿಚಿತನಾಗಿದ್ದ ಆ ವ್ಯಕ್ತಿಯ ಈ ವಿಪರೀತಚರ್ಯೆಯನ್ನು ಕಂಡು, ಭಯ–ಆಶ್ಚರ್ಯಗಳಿಂದ, ಒಂದು ಹೆಜ್ಜೆ ಹಿಮ್ಮೆಟ್ಟಿದ. ಕೂಡಲೆ ಗುಪ್ತ , ಪೈಶಾಚಿಕ ಕೋಪೋದ್ರೇಕದಿಂದ, ಆ ಹತಭಾಗ್ಯ ಮುದುಕನನ್ನು ತನ್ನ ದೊಣ್ಣೆಯಿಂದ ಬಡಿದು ನೆಲಕ್ಕುರುಳಿಸಿದ. ಮುದುಕ ನೆಲಕ್ಕೆ ಬಿದ್ದನೋ ಇಲ್ಲವೋ ಗುಪ್ತ , ಮತ್ತೂ ಉದ್ರಿಕ್ತನಾಗಿ ಆ ನಿರಪರಾಧಿ ವೃದ್ಧನ ದೇಹದ ಮೇಲೆ, ತನ್ನ ಬೂಟ್ಸು ಪಾದಗಳಿಂದ, ಕಾಡು ಕಪಿಯಂತೆ, ತುಳಿದು ತುಳಿದು ನರ್ತಿಸಿದ. ಅನಂತರ ಪುನಃ, ತನ್ನ ದೊಣ್ಣೆಯಿಂದ, ನಿಶ್ಚೇಷ್ಟಿತನಾಗಿ ಬಿದ್ದಿದ್ದ ಮುದುಕನ ಝುರ್ಝುರಿತವಾದ ದೇಹದ ಮೇಲೆ, ಭಡೀರ್–ಭಡೀರ್–ಎಂದು–ಏಟಿನ ಮಳೆಯನ್ನೇ ಕರೆದ. ಆ ಕೇಡಿಗನ ತುಳಿತಕ್ಕೂ–ಏಟಿಗೂ, ಮುದುಕನ ಮೂಳೆಗಳು ಲಟಲಟನೆ ಮುರಿದುದು ಕೇಳಿಸಿತು.

ತನ್ನ ಕಣ್ಣ ಮುಂದೆ ಕೆಲವೇ ಕ್ಷಣಗಳಲ್ಲಿ ನಡೆದು ಹೋದ ಈ ಭಯಾನಕ ದೃಶ್ಯವನ್ನು ನೋಡಿ, ಆ ಹೆಂಗಸು ಮೂರ್ಛೆಹೋದಳು.

ಆಕೆಯ ಗಂಡ ಮನೆಗೆ ಬಂದು, ಆಕೆಗೆ ಮೂರ್ಛೆ ತಿಳಿದು, ಆತ ಪೋಲೀಸಿಗೆ ಸುದ್ದಿ ಕೊಡುವ ವೇಳೆಗೆ, ಮಧ್ಯರಾತ್ರಿ ಕಳೆದು ಒಂದು ಗಂಟೆಯಾಗಿತ್ತು. ಪೊಲೀಸಿನವರು ಸ್ಥಳಕ್ಕೆ ಬಂದು ಮಹಜರು

ನಡೆಸುವ ವೇಳೆಗೆ, ಕೊಲೆಪಾತಕ ಪರಾರಿಯಾಗಿ ಬಹಳ ಹೊತ್ತಾಗಿತ್ತಾದರೂ, ಅವನಿಗೆ ಬಲಿಯಾಗಿದ್ದ ವೃದ್ಧನ ನುಜ್ಜುಗುಜ್ಜಾದ ಶವ ಬೀದಿಯಲ್ಲೇ ಬಿದ್ದಿತ್ತು. ಶವದಿಂದ ಸ್ವಲ್ಪ ದೂರ, ಬೀದಿಯ ಅಂಚಿನಲ್ಲಿ, ಮಧ್ಯಕ್ಕೆ ಸರಿಯಾಗಿ ಮುರಿದ ದೊಣ್ಣೆಯ ತುಂಡೊಂದು ಬಿದ್ದಿತ್ತು. ಈ ತುಂಡು, ಹಿಡಿಯ ಕಡೆ ಭಾಗವಾಗಿದ್ದು , ತುದಿಯಲ್ಲಿ ದಪ್ಪನಾದ ಬೆಳ್ಳಿ ಹಿಡಿಯಿತ್ತು. ದೊಣ್ಣೆ, ಯಾವುದೋ ಅಪರೂಪ ಜಾತಿಯ ಮರದ್ದಾಗಿ–ದಪ್ಪ ದಪ್ಪ ಗಂಟುಗಳಿಂದ ಕೂಡಿತ್ತು. ಇದು ಕೊಲೆಪಾತಕನ ದೊಣ್ಣೆಯ ತುಂಡು — ಎನ್ನುವುದಕ್ಕೆ, ಹೆಂಗಸು ಸಾಕ್ಷಿಯಾಗಿದ್ದುದಲ್ಲದೆ, ಅದರ ಮೇಲಿದ್ದ ರಕ್ತದ ಕಲೆಗಳೂ ಸಾಕ್ಷಿಯಾಗಿದ್ದವು. ಇನ್ನೊಂದು ತುಂಡು ದೊಣ್ಣೆಯನ್ನು ಆ ಘಾತುಕನೇ ತೆಗೆದುಕೊಂಡು ಹೋಗಿದ್ದನೆನ್ನುವುದರಲ್ಲಿ ಸಂಶಯವಿರಲಿಲ್ಲ.

ಮೃತನ ಅಂಗಿಯ ಒಳಜೇಬಿನಲ್ಲಿ ಬೆಲೆ ಬಾಳುವಂಥ, ಸೊಗಸಾದ ಚರ್ಮದಿಂದ ಮಾಡಿದ ಒಂದು ಹಣದ ಚೀಲವೂ, ಒಂದು ಚಿನ್ನದ ಗಡಿಯಾರವೂ, ಸರಪಳಿಯೂ ಇದ್ದವು. ಹೊರಗಡೆ ಜೇಬಿನಲ್ಲಿ ಒಂದು, ಸ್ಟಾಂಪು ಅಂಟಿಸಿದ ಲಕ್ಕೋಟೆಯಿತ್ತು. ಈ ಲಕ್ಕೋಟೆಯ ಮೇಲೆ ಬ್ಯಾರಿಸ್ಟರ್ ಶಂಕರರಾಯರ ಹೆಸರು–ವಿಳಾಸಗಳಿದ್ದವು. ಇವು ಹೊರತಾಗಿ, ಮೃತನ ದೇಹದ ಮೇಲೆ ಬೇರೆ ಯಾವ ಕಾಗದ ಪತ್ರಗಳೂ, ವಸ್ತುಗಳೂ ಇರಲಿಲ್ಲ.

ಕೊಲೆ ನಡೆದ ಅನಂತರದ ಪ್ರಾತಃಕಾಲ, ಮೇಲೆ ತಿಳಿಸಿದ ಲಕ್ಕೋಟೆಯನ್ನು ಪೊಲೀಸಿನವರು ಬ್ಯಾರಿಸ್ಟರ್ ಶಂಕರರಾಯರಲ್ಲಿಗೆ ಒಯ್ದರು. ಅವರು ಅದೇ ತಾನೆ ಎದ್ದು ಮುಖ ತೊಳೆದುಕೊಂಡಿದ್ದರು; ಇನ್ನೂ ಉಪಾಹಾರ ತೆಗೆದುಕೊಂಡಿರಲಿಲ್ಲ. ಲಕ್ಕೋಟೆಯನ್ನು ನೋಡಿ, ಅದರ ಕಥೆಯನ್ನು ಕೇಳಿದ ಕೂಡಲೆ, ಲಾಯರ ಮುಖ ಗಂಟಿಕ್ಕಿ ಗಂಭೀರವಾಯಿತು. ಅವರು, ಪೊಲೀಸಿನವರನ್ನು ಕುರಿತು,

"ನಾನು ದೇಹವನ್ನು ನೋಡುವತನಕ ಏನನ್ನೂ ಹೇಳಲಾರೆ. ಇದು ಬಹಳ ಗುರುತರವಾದ ಪ್ರಸಂಗವಾಗಿ ತೋರುತ್ತದೆ. ನಾನು ಸಿದ್ಧವಾಗುವುದಕ್ಕೆ ಸ್ವಲ್ಪ ಅವಕಾಶ ಕೊಡಿ"

— ಎಂದರು. ಪೊಲೀಸಿನವರು ಒಪ್ಪಿದರು. ಲಾಯರು, ಅವರನ್ನು ತಮ್ಮ ಆಫೀಸು ಕಟ್ಟಡದ ಕಕ್ಷಿಗಾರರ ಕೊಠಡಿಯಲ್ಲಿ ಬಿಟ್ಟು, ಮನೆಗೆ ಹೋಗಿ, ಬೇಗ ಬೇಗ ಉಪಾಹಾರ ತೆಗೆದುಕೊಂಡು, ಉಡುಪು ಧರಿಸಿ, ಪೋಲೀಸಿನವರು ತಂದಿದ್ದ ಕಾರಿನಲ್ಲಿ–ಅವರೊಡನೆ ಪೊಲೀಸ್ ಸ್ಟೇಶನ್ನಿಗೆ ಹೊರಟರು, ಉದ್ದಕ್ಕೂ ಅವರ ಮುಖ ಗಂಭೀರವಾಗಿ–ಚಿಂತೆಯಲ್ಲಿ ಮುಳುಗಿತ್ತು. ಪೊಲೀಸ್ ಸ್ಟೇಶನ್ನನ್ನು ತಲುಪಿ, ಅಲ್ಲಿ ವೃದ್ಧನ ಶವ ಇದ್ದ ಕೊಠಡಿಯನ್ನು ಪ್ರವೇಶಿಸುತ್ತಲೆ ಅವರು ತಲೆದೂಗಿ,

"ಆಹಾ ! ಇವರ ಪರಿಚಯ ನನಗೆ ಚೆನ್ನಾಗಿದೆ; ಧರ್ಮಸಿಂಧು ಸಾಹುಕಾರ್ ಹೊನ್ನಯ್ಯನವರೂಂತ ಇವರ ಹೆಸರು" — ಎಂದರು.

""ನಮಗೂ ಗೊತ್ತಿತ್ತು–ರಾಯರೇ. ಆದರೆ, ತಮ್ಮ ವಿಳಾಸವಿದ್ದ ಪತ್ರ ಇವರ ಮೈಮೇಲಿದ್ದದ್ದರಿಂದ–ಕಾನೂನು ಪ್ರಕಾರ——"

"ಸರಿ ಸರಿ–ನೀವು ನನ್ನ ಬಳಿಗೆ ಬರಬೇಕಾಯಿತು."

"ಹೌದು, ತಮಗೆ ತೊಂದರೆ ಕೊಡಬೇಕಾಯಿತು."

"ಆಹಾ ! ಎಂತಹ ಸಾತ್ವಿಕ ಮನುಷ್ಯನಿಗೆ ಎಂತಹ ಘೋರವಾದ ಮರಣ !"

"ಸ್ವಾಮೀ, ಈ ಸುದ್ದಿ ಈಗಾಗಲೇ ನಗರದಲ್ಲೆಲ್ಲಾ ಹಬ್ಬಿಬಿಟ್ಟಿದೆ—"

"ಅದರಲ್ಲಿ ಆಶ್ಚರ್ಯವಿಲ್ಲ–ಇನ್‌ಸ್ಪೆಕ್ಟರ್—ಈತನ ಲೇವಾದೇವಿ, ವರ್ಷಕ್ಕೆ ಇಪ್ಪತ್ತು ಲಕ್ಷ ರೂಪಾಯಿಗಳಾಗುತ್ತೆ. ಇದುವರೆಗೆ ಐದುಲಕ್ಷ ರೂಪಾಯಿಗಳ ದಾನಧರ್ಮ ಮಾಡಿದ್ದಾರೆ. ಇವರ ವ್ಯವಹಾರವೆಲ್ಲ ನನಗೆ ಗೊತ್ತು."

"ಹಾಗಾದರೆ ಇವರ ಕೊಲೆ ನಿಜವಾಗಲೂ ಬಹಳ ವಿಷಾದಕರ–ರಾಯರೇ. ಕೊಲೆಪಾತಕನನ್ನ ಪತ್ತೆಮಾಡೋಕೆ ತಾವೂ ಸಹಾಯ ಮಾಡಬಲ್ಲಿರೀಂತ ಕಾಣುತ್ತೆ."

"ಅಗತ್ಯವಾಗಿ — ಅಗತ್ಯವಾಗಿ. ಇರಲಿ, ಇದುವರೆಗೆ ಈ ಕೊಲೆ ಸಂಬಂಧವಾಗಿ ಏನೇನು ತಿಳಿದು ಬಂದಿದೆ ? ತಿಳಿಸಬಹುದಾದರೆ, ತಿಳಿಸಿ"

— ಎಂದರು, ಲಾಯರು. ಇನ್‌ಸ್ಪೆಕ್ಟರು, ಅವರನ್ನು ತಮ್ಮ ಆಫೀಸು ಕೊಠಡಿಗೆ ಕರೆದೊಯ್ದು ಕೂರಿಸಿಕೊಂಡು, ದುರಂತದ ಪ್ರತ್ಯಕ್ಷದರ್ಶಿಯಾಗಿದ್ದ ಹೆಂಗಸಿನಿಂದ ತಿಳಿದು ಬಂದ ವಿವರಗಳನ್ನೆಲ್ಲಾ ತಿಳಿಸಿ, ಆನಂತರ, ಬೀರುವಿನಲ್ಲಿದ್ದ ದೊಣ್ಣೆಯ ತುಂಡನ್ನು ತೆಗೆದು ತೋರಿಸಿದರು.

ಕಾಮೇಶ ಗುಪ್ತನ ಹೆಸರನ್ನು ಕೇಳಿದಾಗಲೇ ಶಂಕರರಾಯರು ನಡುಗಿದ್ದರು; ದೊಣ್ಣೆಯ ತುಂಡನ್ನು ನೋಡಿದ ಮೇಲಂತೂ, ಅವರಿಗೆ ಯಾವ ಅನುಮಾನವೂ ಉಳಿಯಲಿಲ್ಲ. ಈ ತುಂಡು ಅಷ್ಟರಿಂದಲೇ, ಅವರಿಗೆ ತಟ್ಟನೆ ಅದರ ಪೂರ್ಣಪರಿಚಯ ಆಯಿತು. ಅದು ಕೆಲವು ವರ್ಷಗಳ ಹಿಂದೆ, ಯಾರೋ ಕಕ್ಷಿಗಾರರೊಬ್ಬರ ಕಡೆಯಿಂದ ಅವರ ವಶಕ್ಕೆ ಬಂದಿತ್ತು. ಆಗ ಅವರ ಮಿತ್ರ ಡಾ॥ ಹರಿವಿಠಲ್‌ರವರು, ಅದರ ಅಪರೂಪತೆಯನ್ನೂ

ತೂಕ–ದಾರ್ಢ್ಯತೆಗಳನ್ನು ನೋಡಿ ಮೆಚ್ಚಿದ್ದರು. ಲಾಯರು ಅದನ್ನು ಡಾಕ್ಟರಿಗೆ, ಸ್ನೇಹದ ಕುರುಹಾಗಿ ಕೊಟ್ಟಿದ್ದರು. ಈಗ ಅವರು ನೋಡಿದ ತುಂಡು, ಆ ಕೈ ದೊಣ್ಣೆಯ ಒಂದು ಭಾಗವಾಗಿತ್ತು.

ಹೆಸರೊಂದರಿಂದಲೇ ವ್ಯಕ್ತಿತ್ವ ನಿಶ್ಚಯವಾಗುವುದಿಲ್ಲವೆಂದು ತಿಳಿದಿದ್ದ ಲಾಯರು, ಇನ್‌ಸ್ಪೆಕ್ಟರನ್ನು ಕುರಿತು,

"ಈ ಗುಪ್ತ ಎಂಬಾತ ಕುಳ್ಳನೋ ?" ಎಂದು ಕೇಳಿದರು.

"ಆಹಾ ! ಕುಳ್ಳ–ಸ್ಪಷ್ಟವಾಗಿ, ಪಕ್ಕಾ ಕುಳ್ಳ ! ಆ ಹೆಂಗಸಿನ ಹೇಳಿಕೆಯ ಪ್ರಕಾರ ಅವನು ಕುಳ್ಳನಷ್ಟೇ ಅಲ್ಲ, ಮಹಾ ಕುರೂಪಿ !–ಅಸಲ್ ಕೇಡಿ–ಸ್ವಾಮೀ !" ಎಂದರು, ಇನ್‌ಸ್ಪೆಕ್ಟರು.

ಬ್ಯಾರಿಸ್ಟರ್ ಶಂಕರರಾಯರು, ತಲೆತಗ್ಗಿಸಿಕೊಂಡು, ಗಲ್ಲ ಸವರಿಕೊಳ್ಳುತ್ತ , ಕೆಲವು ಕ್ಷಣಗಳು ಆಲೋಚಿಸಿ, ಅನಂತರ ತಲೆಯೆತ್ತಿ ಪೊಲೀಸ್ ಅಧಿಕಾರಿಯನ್ನುದ್ದೇಶಿಸಿ,

"ಸರಿ, ಇನ್‌ಸ್ಪೆಕ್ಟರ್, ನನಗೆ ಈ ಗುಪ್ತನ ವಿಳಾಸ ಗೊತ್ತು. ನನ್ನನ್ನ ಕಾರಿನಲ್ಲಿ ಕರೆದೊಯ್ದರೆ, ನಿಮಗೆ ಅವನ ಮನೆ ತೋರಿಸಬಲ್ಲೆ" ಎಂದರು.

ಲಾಯರೂ, ಇನ್‌ಸ್ಪೆಕ್ಟರೂ, ಇಬ್ಬರು ಪೊಲೀಸಿನವರೂ, ಕಾರಿನಲ್ಲಿ ಕುಳಿತು ಹೊರಟರು. ಆಗ ಬೆಳಿಗ್ಗೆ ಒಂಬತ್ತು ಗಂಟೆಯಾಗಿತ್ತು. ಕಾಮಾಟಿಪುರ ನಗರದ ಕೇಂದ್ರದಿಂದ ಸುಮಾರು ನಾಲ್ಕು ಮೈಲಿ ದೂರ, ಪೂರ್ವ ದಿಕ್ಕಿನಲ್ಲಿದ್ದ ಭಾಗವಾಗಿತ್ತು. ಈ ಭಾಗದಲ್ಲಿದ್ದ ಮನೆಗಳು, ಬೀದಿಗಳು–ಎಲ್ಲ, ಕೀಳು ದರ್ಜೆಯವಾಗಿ–ಕೊಳಕಾಗಿದ್ದವು. ಇಲ್ಲಿ ವಾಸಿಸುತ್ತಿದ್ದ ಜನರೂ ಅಷ್ಟೆ, ಕಡಿಮೆ ಸಂಪಾದನೆಯ ದಿನಗೂಲಿಯ — ಅಥವಾ ಕಾರ್ಖಾನೆಗಳ ಕಾರ್ಮಿಕರಾಗಿದ್ದರು.

ಕೆಲಹೊತ್ತು ಅಲ್ಲಿ ಇಲ್ಲಿ ವಿಚಾರಿಸಿ, ಎಂಟು ಹತ್ತು ಬೀದಿ–ಗಲ್ಲಿಗಳಲ್ಲಿ ಸುತ್ತಾಡಿ, ಕೊನೆಗೆ ಕಾರು, ತೀರ ಚಿಕ್ಕದೂ–ಕೊಳಕೂ ಆಗಿದ್ದ ಒಂದು ಓಣಿಯನ್ನು ಪ್ರವೇಶಿಸಿತು. ಈ ಬೀದಿಯಲ್ಲಿ ಒಂದು ಪಡಖಾನೆಯಿತ್ತು ; ಒಂದು "ಮಹಾರಾಷ್ಟ್ರ ಮಿಲ್ಟೇರಿ" ಹೋಟಲು ಇತ್ತು ; ಬೀಡಿ–ಸಿಗರೇಟ್–ಪಾನ್‌ಬೀಡಾ–ಸೋಡಾ ಇತ್ಯಾದಿಗಳನ್ನು ಮಾರುವ ಒಂದು ಚಿಲ್ಲರೆ ಅಂಗಡಿಯೂ ಇತ್ತು. ಓಣಿಯ ಉದ್ದಕ್ಕೂ, ಮನೆಯ ಮೆಟ್ಟಲುಗಳ ಮೇಲೆ, ಚಿಂದಿ ಬಟ್ಟೆಯ ಮಕ್ಕಳು ಕುಳಿತು ಆಡುತ್ತಿದ್ದರು.

ಈ ಓಣಿಯಲ್ಲಿ ಲಾಯರು ತಿಳಿಸಿದ ನಂಬರಿನ ಮನೆ ಮುಂದೆ ಕಾರು ನಿಂತಿತು. ತಮ್ಮ ಓಣಿಯಲ್ಲಿ ಕಾರು ಪ್ರವೇಶಿಸಿ ನಿಂತ ಕೂಡಲೆ, ಹುಡುಗರೆಲ್ಲ ಗುಂಪುಕೂಡಿ ಕಾರನ್ನು ಸುತ್ತುಗಟ್ಟಿದರು; ಒಳಗಿದ್ದ ಪೊಲೀಸಿನವರನ್ನು ಕಂಡು ಹೆದರಿ, ದೂರ ಸರಿದು, ಆಶ್ಚರ್ಯದಿಂದ ನೋಡತೊಡಗಿದರು.

ಇನ್‌ಸ್ಪೆಕ್ಟರು, ಇಬ್ಬರು ಪೊಲೀಸಿನವರೊಡನೆ ಕಾರಿನಿಂದ ಇಳಿದರು. ಲಾಯರು ಅವರನ್ನು ಹಿಂಬಾಲಿಸಿ ಇಳಿದರು. ನಾಲ್ಕು ಮಂದಿಯೂ — ಹರಿವಿಠಲ್‌ರವರ ಪರಮಾಪ್ತನಾಗಿ, ಅವರ ನಾಲ್ಕಾರು ಲಕ್ಷ ರೂಪಾಯಿಗಳ ಆಸ್ತಿಗೆ ಉತ್ತರಾಧಿಕಾರಿಯಾಗಿದ್ದ --- ಕಾಮೇಶ ಗುಪ್ತ ವಾಸವಾಗಿದ್ದ ಮನೆಯನ್ನು ಸಮೀಪಿಸಿದರು. ಇನ್‌ಸ್ಪೆಕ್ಟರು ಬಾಗಿಲನ್ನು ತಟ್ಟಿದರು.

ನರೆಗೂದಲ ಸುಕ್ಕುಮೋರೆಯ ಒಬ್ಬ ಮುದುಕಿ ಬಾಗಿಲನ್ನು ತೆರೆದಳು. ಒಟ್ಟಿಗೆ ನಾಲ್ಕು ಮಂದಿಯನ್ನು ನೋಡಿ ಮುದುಕಿ ಗಾಬರಿಯಾಗಿ ಒಂದು ಹೆಜ್ಜೆ ಹಿಮ್ಮೆಟ್ಟಿದಳು. ಇನ್‌ಸ್ಪೆಕ್ಟರು ತೆರೆದ ಬಾಗಿಲಲ್ಲಿ ನಿಂತು,

"ಇದೇಯೋ, ಕಾಮೇಶಗುಪ್ತ–ಅನ್ನೋರ ಮನೆ ?" ಎಂದು ಕೇಳಿದರು.

"ಅವುದರಯ್ಯ–ಇದೇಯ ಕಾಮೇಸ್ಗುಪ್ತಪ್ನೋರ ಮನೆ"

—ಎಂದು, ಕಂಪಿಸುವ ಧ್ವನಿಯಲ್ಲಿ ಉತ್ತರ ಕೊಟ್ಟಳು, ಮುದುಕಿ.

"ಅವರು ಮನೇಲಿ ಇದ್ದಾರೋ ?"

"ಇಲ್ಲ ನನ್ನೊಡ್ಯಾ"

"ಎಲ್ಲಿ ಹೋಗಿದ್ದಾರೆ ?"

"ಕೆಲಸ್ದಾಳು –ನಾಯೇನ ಬಲ್ಲೆ–ಯೇಳಿ"

"ಮನೆ ಬಿಟ್ಟು ಯಾವಾಗ ಹೋದರು ?"

"ನೆನ್ನಿ ರಾತ್ರಿ ಸರವತ್ತಿನ್ಯಾಗೆ ಬಂದ್ರು ; ಒಂದ್ಗಂಟೆ ಬಿಟ್ಕೊಂಡು ಮತ್ತೆ ಮನಿ ಬಿಟ್ ವೋದ್ರು ಬುದ್ದೀ."

"ಸರಿ, ಅವರು ದಿನಾ ಮನೆಗೆ ಬರೋದು ಎಷ್ಟೊತ್ತಿಗೆ ?"

"ನೋಡಿ ನನ್ನೊಡ್ಯಾ, ಅವರು ಬರಾಕೆ — ವೋಗಾಕೆ ವೊತ್ತೂಗೊತ್ತೂ ಏನೂ ಇಲ್ಲ. ಒಂದೊಂದ್ಸಲಾ ವೋಗ್ಬಿಟ್ರೊಂದ್ರೆ, ತಿಂಗಳಾನಾ ಇತ್ಕಡೆ ಮಖಾ ಇಡಾಕೇ ಇಲ್ಲ."

"ಊಹೂಮ್ ! ಹಾಗೇನು ?"

"ಹೌದು ಬುದ್ದೀ, ಅವರು ಹಂಗೇ. ನೋಡಿ, ನೆನ್ನೆ ಇಲ್ಲೀಗೆ ಬಂದ್ರಲ್ಲ–ಅದ್ಕಿಂತ ಹಿಂದೆ ಅವ್ರು ಇಲ್ಲೀಗ್ಬಂದು ಬರಾಬರಿ ಎಲ್ಡು ತಿಂಗ್ಳಾಗಿತ್ತು."

"ಎರಡು ತಿಂಗಳಿಂದ ಬಂದೇ ಇಲ್ಲಿಲ್ವೇ ?"

"ಇಲ್ಲ–ಬುದ್ದೀ ; ನೆನ್ನೆ ಬಂದಾಗ, ನನಗೆ ಎಲ್ಡು ತಿಂಗ್ಳ ಸಂಬ್ಳಾನೂ ಒಟ್ಗೆ ಕೊಟ್ಟು ವೋದ್ರು; ಮತ್ಯಾವಾಗ್ಲೋ ಅವ್ರನ್ನ ಕಾಣಾದು"

ಇಷ್ಟು ಮಾತು ಕಥೆ ಆದ ಮೇಲೆ, ಲಾಯರು,

"ಸರಿಯಮ್ಮ, ಅವರಿಲ್ಲದೆ ಇದ್ದರೆ ಪರವಾಗಿಲ್ಲ–ನಾವು ಅವರ ಕೊಠಡೀನ ನೋಡಬೇಕಂತಿದ್ದೇವೆ " — ಎಂದರು.

ತನ್ನ ಧಣಿ ಮನೆಯಲ್ಲಿಲ್ಲದಾಗ ಅದಕ್ಕೆ ಅವಕಾಶ ಕೊಡಲು ಮುದುಕಿ ಸಮ್ಮತಿಸಲಿಲ್ಲ. "ಅದೆಲ್ಲ ಆಗಾಕಿಲ್ಲ; ಧಣಿ ಮನೇಲಿಲ್ದಾಗ ಯಾರ್ನಾರಾ ಒಳಗ್ಬಿಟ್ರೆ ಅವ್ರು ನನ್ನ ಸುಮ್ಕೆ ಬಿಟ್ಟಾರಾ !" ಎನ್ನುತ್ತ, ಬಾಗಿಲನ್ನು ಹಾಕುವ ಪ್ರಯತ್ನ ಮಾಡಿದಳು. ಆಗ ಲಾಯರು, ಬಾಗಿಲನ್ನು ಮುಚ್ಚಲು ಅವಕಾಶ ಕೊಡದೆ,

"ನೋಡು, ನೀನು ನಮ್ಮನ್ನ ಒಳಕೆ ಬಿಡದೇ ಇದ್ದರೆ, ಇವರು ನಿನ್ನನ್ನ ಸ್ಟೇಶನ್ನಿಗೆ ಕರೆದೊಯ್ದು — ನಿನ್ನ ಮೇಲೆ ಕೇಸುಮಾಡ್ತಾರೆ ! ಆಮೇಲೆ ನಿನ್ನ ಯಜಮಾನನನ್ನು ಪತ್ತೇಮಾಡ್ತಾರೆ — ಗೊತ್ತೋ ? ಪೊಲೀಸ್ ಸ್ಟೇಶನ್ ನೋಡಬೇಕೂಂತಿದ್ರೆ ಅಡ್ಡಿ ಮಾಡು"

— ಎಂದರು. "ಪೊಲೀಸ್ ಸ್ಟೇಶನ್" – ಅನ್ನೋ ಮಾತು ಕೇಳಿದೊಡನೆಯೇ ಮುದುಕಿಯ ರೀತಿ ಬದಲಾಯಿಸಿತು. ಅವಳು ಕೈ ಮುಗಿಯುತ್ತ ,

"ತೆಪ್ಪಾಯ್ತು ಬುದ್ದೀ–ಕ್ಸಮ್ಸೀ, ತಿಳೀದ ಮುದ್ಕಿ. ಒಳಕ್ಬನ್ನಿ, ಅದೇನು ನೋಡೀರೋ ನೋಡ್ಕೊಂಡ್ಹೋಗಿ. ಉಪ್ತಿಂದಾವ ನೀರ್ಕುಡೀತಾನೆ ! –ನಂಗ್ಯಾಕಪ್ಪ ಟೇಸಂ ಗೀಸಂ ತಂಟೆ ! ಅಂಗಾರೇ ಗುಪ್ತಪ್ಪ ಏನ್ನೋ ಮಾಡವ್ನೆ — ಮಾಡ್ಬಾರ್ದು ! ಏನ್ಮಾಡವ್ನೆ ಬುದ್ದೀ ?"

— ಎಂದು ಕೇಳಿ, ಹಿಂದಕ್ಕೆ ಸರಿದು ದಾರಿ ಬಿಟ್ಟಳು. ಲಾಯರೂ ಇನ್‌ಸ್ಪೆಕ್ಟರೂ ಮನೆಯನ್ನು ಪ್ರವೇಶಿಸಿದರು. ಪೊಲೀಸಿನವರು ಹೊರಗೇ ಕಾವಲಿದ್ದರು.

ಕಾಮೇಶ ಗುಪ್ತ ವಾಸವಾಗಿದ್ದ ಮನೆ, ಹೊರ ನೋಟಕ್ಕೆ ಹೊಲಸಾಗಿದ್ದರೂ, ಒಳಗಡೆ ಚೊಕ್ಕಟ ಶುಭ್ರನಾಗಿತ್ತು. ಮುದುಕಿ, ಮನೆಗೆಲಸದವಳೂ, ಅಗತ್ಯವಿದ್ದಾಗ, ಅಡಿಗೆಮಾಡುವವಳೂ ಆಗಿದ್ದು , ಅವಳೂ ಮನೆಯಲ್ಲೇ ವಾಸಮಾಡುತ್ತಿದ್ದಳು. ಆ ಮನೆಯಲ್ಲಿ ಮುದುಕಿ ಹೊರತು ಬೇರೆ ವ್ಯಕ್ತಿಗಳ್ಯಾರೂ ಇರಲಿಲ್ಲ.

ಈ ಮನೆಯ ಎರಡು ಕೊಠಡಿಗಳನ್ನು ಮಾತ್ರ ಕಾಮೇಶ ಗುಪ್ತ ತನ್ನ ಸ್ವಂತ ಉಪಯೋಗಕ್ಕೆಂದು ಇಟ್ಟುಕೊಂಡಿದ್ದ. ಎರಡು ಕೊಠಡಿಗಳೂ ಒಳ್ಳೆಯ ಭೋಗಾಭಿರುಚಿಯಿಂದ ಸುಸಜ್ಜಿತವಾಗಿದ್ದವು. ಒಂದು ಗೋಡೆ ಬೀರುವಿನ ತುಂಬ ಬಹು ಬೆಲೆಬಾಳುವ ದ್ರಾಕ್ಷಾಮದ್ಯದ ಸೀಸೆಗಳಿದ್ದವು. ಈ ಕೊಠಡಿಗಳಲ್ಲಿ ಒಂದು ಅವನ ಬೈಠಕುಖಾನೆ – ಇನ್ನೊಂದು ಮಲಗುವ ಮನೆ. ಬೈಠಕುಖಾನೆಯಲ್ಲಿ ಸೊಗಸಾದ ಸೋಫಾಗಳೂ — ಮೇಜು, ಕುರ್ಚಿಗಳೂ — ರತ್ನಕಂಬಳಿಗಳೂ ಇದ್ದವು. ಗೋಡೆಯ ಮೇಲೆ ಒಂದು ಸೊಗಸಾದ ತೈಲವರ್ಣದ ಚಿತ್ರವಿತ್ತು. ಅದರಲ್ಲಿ ರಾಮಾಯಣದ ಕಾಂಚನಮೃಗ ಪ್ರಸಂಗ ಚಿತ್ರಿತವಾಗಿತ್ತು. ಪರ್ಣಕುಟೀರದ ಮುಂದುಗಡೆ, ಸೀತೆ ರಾಮನ ಹೆಗಲ ಮೇಲೆ ಕೈ ಇಟ್ಟು ದೂರದಲ್ಲಿರುವ ಕಾಂಚನಮೃಗವನ್ನು ತೋರಿಸುತ್ತಿದ್ದಾಳೆ. ಹಿಂಬದಿಯಲ್ಲಿ , ಒಂದು ದೊಡ್ಡ ಮರದ ಕಾಂಡದ ಹಿಂದೆ–ಸನ್ಯಾಸಿ ವೇಷದಲ್ಲಿ, ರಾವಣ ಹೊಂಚಿ ನೋಡುತ್ತಿದ್ದಾನೆ. ಶಂಕರರಾಯರು ಈ ಚಿತ್ರವನ್ನು ಡಾ॥ ಹರಿವಿಠಲರವರ ಬೈಠಕುಖಾನೆಯಲ್ಲಿ ನೋಡಿದ್ದರು.

ಶಂಕರರಾಯರೂ ಇನ್‌ಸ್ಪೆಕ್ಟರೂ ಪ್ರವೇಶಿಸಿದ ಸಮಯದಲ್ಲಿ ಬೈಠಕುಖಾನೆ ಬಹಳ ಅಸ್ತವ್ಯಸ್ತವಾಗಿತ್ತು. ಸೋಫ, ಕುರ್ಚಿ, ಮೇಜು ಮುಂತಾದುವು ತಮ್ಮ ಸ್ಥಳಗಳಲ್ಲಿರದೆ ಎಳೆದಾಡಲ್ಪಟ್ಟಿದ್ದವು. ಹಲವು ಉಡುಪಿನ ಬಟ್ಟೆಗಳು ನೆಲದ ಮೇಲೆ ಚೆಲ್ಲಾ ಪಿಲ್ಲಿಯಾಗಿ ಬಿದ್ದಿದ್ದವು. ಅಂಗಿ–ಷರಾಯಿ ಜೇಬುಗಳ ಒಳಮೈ ಹೊರಮೈಯಾಗಿದ್ದವು. ಬೀರು–ಪೆಟ್ಟಿಗೆ—ಟ್ರಂಕು ಮುಂತಾದುವುಗಳ ಬೀಗಗಳೆಲ್ಲ ತೆರೆಯಲ್ಪಟ್ಟಿದ್ದವು. ಕೊಠಡಿಯ ಒಂದು ಮೂಲೆಯಲ್ಲಿ , ಅನೇಕ ಕಾಗದ ಪತ್ರಗಳನ್ನು ಸುಟ್ಟ ಬೂದಿಯ ಗುಡ್ಡೆಯಿತ್ತು. ಇನ್‌ಸ್ಪೆಕ್ಟರು ಅದನ್ನು ಪರೀಕ್ಷಿಸಿದಾಗ, ಅವರಿಗೆ ಒಂದು ಹಸುರು ರಟ್ಟಿನ ಚೆಕ್‌ಬುಕ್ಕಿನ–ಪೂರ್ತಿ ಸುಡದೆ ಇದ್ದ —ಕೌಂಟರು ಫಾಯಿಲು ಭಾಗ ಸಿಕ್ಕಿತು. ಹಾಗೆಯೇ, ಅವರು ಕೊಠಡಿಯನ್ನೆಲ್ಲ ಸೂಕ್ಷ್ಮವಾಗಿ ಪರೀಕ್ಷಿಸಿದಾಗ, ಬಾಗಿಲ ಹಿಂದೆ, ಮುರಿದ ಕೈಗೋಲಿನ ಇನ್ನೊಂದು ಭಾಗ ಸಿಕ್ಕಿತು. ಇದನ್ನು ಕಂಡಕೂಡಲೆ ಇನ್‌ಸ್ಪೆಕ್ಟರಿಗೆ, ಯಾವ ಸಂಶಯವೂ ಉಳಿಯದೆ — ಬಹಳ ಸಂತೋಷವಾಯಿತು.

ಚೆಕ್ ಬುಕ್ಕಿನ ಕೌಂಟರು ಫಾಯಿಲು ಭಾಗದಿಂದ, ಗುಪ್ತನ ಬ್ಯಾಂಕು ಯಾವುದೆಂದು ಸುಲಭವಾಗಿ ಗೊತ್ತಾಯಿತು. ಗುಪ್ತನ ಮನೆಯಲ್ಲಿ ಅವರು ನೋಡಬೇಕಾದ್ದು ಇನ್ನು ಏನೂ ಇರಲಿಲ್ಲ. ಕೈಗೋಲಿನ ಮುರಿದ ತುಂಡನ್ನು ತೆಗೆದುಕೊಂಡು, ಲಾಯರೂ ಇನ್‌ಸ್ಪೆಕ್ಟರೂ ಅಲ್ಲಿಂದ ಹೊರಟರು.

ಗುಪ್ತನ ಮನೆಯಿಂದ, ನೇರವಾಗಿ ಅವನ ಬ್ಯಾಂಕಿಗೆ ಹೋದರು. ಬ್ಯಾಂಕಿನಲ್ಲಿ , ಗುಪ್ತನ ಹೆಸರಿಗೆ ಹಲವು ಸಹಸ್ರ ರೂಪಾಯಿಗಳ ಜಮಾ ಇದ್ದದ್ದು ಕಂಡುಬಂತು. ಈ ವಿಷಯ ತಿಳಿದ ಕೂಡಲೆ, ಇನ್‌ಸ್ಪೆಕ್ಟರಿಗೆ ಮತ್ತಷ್ಟು ಸಂತೋಷವಾಯಿತು. ಬ್ಯಾಂಕಿನಿಂದ ಹೊರಡುತ್ತ, ಅವರು ಲಾಯರನ್ನು ಕುರಿತು,

"ರಾಯರೇ, ಇನ್ನು ಅವನು ನನ್ನ ಕೈಲಿ ಇದ್ದ ಹಾಗೇ —ಅಂತ ಭಾವಿಸಬಹುದು ! ಕೃತ್ಯ ನಡೆಸಿದ ಮೇಲೆ ಮನುಷ್ಯ ಬಹಳ ಭಯಗೊಂಡಿದ್ದಾನೇಂತ ಕಾಣುತ್ತೆ. ಆ ಭಯದಲ್ಲಿ ಅವನಿಗೆ ದಿಕ್ಕು ತೋಚದಾಗಿರಬೇಕು. ಇಲ್ಲದೇ ಇದ್ದರೆ, ಅವನು ಕೊಲೆ ನಡೆಸಿದ ಕೋಲಿನ ಈ ತುಂಡನ್ನು ಸಾಕ್ಷಿಯಾಗಿ ಇಲ್ಲಿ ಬಿಡುತ್ತಿರಲಿಲ್ಲ. ಇದಕ್ಕೂ ಹೆಚ್ಚಾಗಿ, ಚೆಕ್ ಬುಕ್ಕನ್ನ ಸುಡುತ್ತಿರಲಿಲ್ಲ —" — ಎಂದಾಗ, ಲಾಯರು ಮಧ್ಯೆ ಬಾಯಿ ಹಾಕಿ,

"ಅದು, ಮುಗಿದುಹೋದ ಹಳೇ ಚೆಕ್ ಬುಕ್ಕಿನ ಕೌಂಟರ್ ಫಾಯಿಲಾಗಿರಬಹುದು —ಅಲ್ಲವೇ ?" — ಎಂದರು.

"ಹಾಗಾದರೆ, ಅವನು —ಅದು ಪೂರ್ತಿ ಸುಟ್ಟದ್ದನ್ನ ಖಾತ್ರಿ ಮಾಡಿಕೋಬೇಕಾಗಿತ್ತು-ಅಲ್ವೇ ? "— ಎಂದರು, ಇನ್‌ಸ್ಪೆಕ್ಟರು.

"ಹೌದು; ಆದರೆ, ನೀವು ಹೇಳಿದ ಹಾಗೆ — ಈ ಬೇಹುಷಾರಿಗೆ ಅವನ ಗಾಬರಿಯೇ ಕಾರಣ."

"ಸರಿ, ನಮ್ಮ ಊಹೆ ನಿಜವಾಗಿರೋದರಲ್ಲಿ ಸಂದೇಹವಿಲ್ಲ. ಅಂದಮೇಲೆ, ಅವನ ಬಳಿ ಬೇರೇ ಚೆಕ್‌ಬುಕ್ ಇರಲೇಬೇಕು; ಅಷ್ಟು ಹಣವನ್ನು ಯಾರು ಕೈಬಿಡ್ತಾರೆ ? ಹಣದ ಅವಶ್ಯಕತೆ ಯಾರಿಗಿರೋದಿಲ್ಲ ? ಬೇಗಲೋ — ನಿಧಾನವಾಗಿಯೋ, ಅವನು ಹಣಕ್ಕಾಗಿ ಬ್ಯಾಂಕಿಗೆ ಬಂದೇ ಬರಬೇಕು. ಈ ಕ್ಷಣದಿಂದ ಅದರ ಬಳಿ, ಬೇಡ್ರೆಸ್ಸಿನಲ್ಲಿ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಕಾವಲು ಹಾಕ್ತೀನಿ. ಇನ್ನು ಕಾಲುಗಂಟೇಲಿ ದಸ್ತಗಿರಿ ವಾರೆಂಟು ಪಡೀತೀನಿ. ಅವನು ಕಣ್ಣಿಗೆ ಬಿದ್ದಕೂಡಲೆ, ವಾರೆಂಟನ್ನು ಈಚೆಗೆ ತೆಗೆದು ಅವನ ಮುಖಕ್ಕೆ ಹಿಡಿಯೋದು ಹೊರತು, ನಾವು ಇನ್ನೇನೂ ಮಾಡಬೇಕಾಗಿಲ್ಲ"

— ಎಂದರು, ಇನ್‌ಸ್ಪೆಕ್ಟರು.

ಆದರೆ, ಈ ಕೊನೆಯ ಕೆಲಸ, ಇನ್‌ಸ್ಪೆಕ್ಟರು ಭಾವಿಸಿದಷ್ಟು ಸುಲಭಸಾಧ್ಯವಾಗಿರಲಿಲ್ಲ. ಏಕೆಂದರೆ, ಕಾಮೇಶ ಗುಪ್ತನ ಪರಿಚಯಸ್ಥರು ಯಾರೂ ಇರಲಿಲ್ಲ. ಅವನನ್ನು ನೋಡಿ ಬಲ್ಲವರೂ ಬಹಳ ಮಂದಿ ಇರಲಿಲ್ಲ. ಕೊಲೆಯ ಪ್ರತ್ಯಕ್ಷದರ್ಶಿಯಾಗಿದ್ದ ಹೆಂಗಸೂ ಅವನನ್ನು , ಎರಡು ಮೂರು ಬಾರಿ — ಅದೂ, ಅವನು ರಸ್ತೆಯಲ್ಲಿ ಹೋಗುತ್ತಿದ್ದಾಗ, ದೂರದಿಂದ-ಕೆಲವು ಕ್ಷಣಗಳವರೆಗೆ ಮಾತ್ರ-ನೋಡಿದ್ದಳು, ಅಷ್ಟೆ. ಪೊಲೀಸಿನವರು ಎಷ್ಟು ತನಿಖೆ ನಡೆಸಿದರೂ, ಗುಪ್ತನ ಹತ್ತಿರದ ಅಥವಾ ದೂರದ ಬಂಧುವರ್ಗಕ್ಕೆ ಸೇರಿದವರು ಯಾರೂ ಪತ್ತೆಯಾಗಲಿಲ್ಲ. ಅವನ ಫೋಟೋ ಏನಾದರೂ ಸಿಕ್ಕೀತೇನೊ- ಎಂದು, ಪೊಲೀಸಿನವರು ಅವನ ಮನೆಯನ್ನೆಲ್ಲ ಮತ್ತೊಮ್ಮೆ ಶೋಧಿಸಿದರು. ಅದು ಎಲ್ಲೂ ಪತ್ತೆಯಾಗಲಿಲ್ಲ. ಅವನನ್ನು ವರ್ಣಿಸಿದ ಕೆಲವೇ ಮಂದಿಯ ವರ್ಣನೆಗಳಲ್ಲಿ- ಇಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿರುವಂತೆ-ವಿಶೇಷ ವ್ಯತ್ಯಾಸಗಳಿದ್ದವು. ಆದರೆ, ಅವರೆಲ್ಲ ಒಂದು ವಿಷಯದಲ್ಲಿ ಮಾತ್ರ ಏಕಾಭಿಪ್ರಾಯವುಳ್ಳವರಾಗಿದ್ದರು. ಅವನದು, ವರ್ಣಿಸುವುದಕ್ಕಾಗದಿದ್ದರೂ, ನೋಡಿದ ಕೂಡಲೆ, ಕರುಳು ತಳಮೇಲಾಗಿ ಓಕರಿಕೆಯನ್ನುಂಟು ಮಾಡುವಂತಹ, ಮಾನಸಿಕ ಹಾಗೂ ದೈಹಿಕ ವಿಕಲತೆ- ಎಂದು ಎಲ್ಲರೂ ಒಪ್ಪುತ್ತಿದ್ದರು.

## ೫. ಪತ್ರ ಪ್ರಸಂಗ

ಆ ದಿನ ಶಂಕರರಾಯರು ಡಾ॥ ಹರಿವಿಠಲ್-ರವರ ಮನೆಗೆ ಹೋದಾಗ ಮಧ್ಯಾಹ್ನದ ಹೊತ್ತು ಮೀರಿತ್ತು.

ಅವರನ್ನು ಕಂಡ ಕೂಡಲೆ, ಡಾಕ್ಟರ ಸೇವಕ ರಂಗಪ್ಪ , ಅವರನ್ನು ಬರಮಾಡಿಕೊಂಡು, ಮನೆಯ ಮುಂದಿನ ಹಜಾರ, ದೊಡ್ಡ ಬೈಠಕುಖಾನೆ-ಅದರ ಹಿಂದಿನ ಉದ್ದವಾದ ಊಟದ ಮನೆ-ಇವುಗಳನ್ನು ಹಾಯ್ದು, ಹಿಂಭಾಗದ ಅಂಗಳಕ್ಕೆ ಹೋದ. ಈ ಅಂಗಳ ಒಂದು ಹಳೇ ಮಹಡಿಯ ಕಟ್ಟಡ. ಡಾಕ್ಟರ್

ವಿಠಲ್‌ರವರು ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಸ್ವದೇಶಕ್ಕೆ ಹಿಂತಿರುಗಿದ ಮೇಲೆ, ಅವರ ತಂದೆ, ಇದನ್ನು ಒಬ್ಬ ವರ್ತಕನಿಂದ ಕೊಂಡುಕೊಂಡು, ಮಗನ ಉಪಯೋಗಕ್ಕಾಗಿ, ಅದನ್ನು ಒಂದು ಪ್ರಯೋಗ ಶಾಲೆಯನ್ನಾಗಿ ಏರ್ಪಡಿಸಿದ್ದರು. ಮುಂದಿನ ಚೌಕದ ಮನೆಯೂ, ಅಂಗಳವೂ ಈ ಹಿಂದಿನ ಕಟ್ಟಡವೂ — ಈಗ ಏಕವಾಗಿ ಡಾಕ್ಟರ್ ಸ್ವತ್ತಾಗಿತ್ತು. ತಂದೆ ತೀರಿಕೊಂಡ ಮೇಲೆ, ಡಾಕ್ಟರ್ ವಿಠಲ್‌ರವರು ಈ ಪ್ರಯೋಗಶಾಲೆಯನ್ನು, ಇನ್ನೂ ಆಧುನಿಕ ರೀತಿಯಲ್ಲಿ ತಮ್ಮ ಸಂಶೋಧನೆಗಳಿಗೆ ಅವಶ್ಯಕವಾದ ವೈಜ್ಞಾನಿಕ ಸಲಕರಣೆಗಳಿಂದ ತುಂಬಿಕೊಂಡು, ಕೆಲಸವನ್ನು ಮುಂದುವರಿಸುತಿದ್ದರು.

ಲಾಯರು ತಮ್ಮ ಮಿತ್ರನ ಸ್ವತ್ತಿನ ಈ ಭಾಗಕ್ಕೆ ಕಾಲಿಟ್ಟಿದ್ದು ಇದೇ ಮೊದಲು. ಇದಕ್ಕೆ ಹಿಂದೆ, ಅವರವರ ಭೇಟಿ–ಕೂಟ–ಮಾತು–ಕಥೆ ಇಲ್ಲ, ಚೌಕಕ್ಕೆ ಎದುರಾಗಿದ್ದ ಮುಂಭಾಗದ ಕಟ್ಟಡದಲ್ಲೇ ನಡೆಯುತ್ತಿತ್ತು.

ಲಾಯರು ರಂಗಪ್ಪನೊಡನೆ ಪ್ರವೇಶಿಸಿದ ಹಿಂದುಗಡೆಯ ಹಳೇ ಕಟ್ಟಡ, ತಕ್ಕಮಟ್ಟಿಗೆ ದೊಡ್ಡದಾಗಿತ್ತು. ಕಟ್ಟಡದ ಕೆಳಭಾಗದ ದೊಡ್ಡ ಹಜಾರ, ಪಕ್ಕಾ ವೈಜ್ಞಾನಿಕ ರೀತಿಯ ರಸಾಯನಿಕ ಪ್ರಯೋಗಶಾಲೆಯಂತೆ ಸಜ್ಜಿತವಾಗಿತ್ತು. ಎಲ್ಲಿ ನೋಡಿದರೂ, ನಾನಾ ಗಾತ್ರದ ನೂರಾರು ಗಾಜಿನ ಪಾತ್ರೆಗಳು–ಸೀಸೆಗಳು–ಕೊಳವೆಗಳು–ಭಟ್ಟಿಗಳು, ಒಲೆಗಳು–ಚಿಕ್ಕಚಿಕ್ಕ, ಪುಡಿ ಮಾಡುವ, ಅರೆಯುವ, ಯಂತ್ರಗಳು–ಕಣ್ಣಿಗೆ ಬೀಳುತ್ತಿದ್ದವು. ಗೋಡೆಯ ಬದಿಗೆ ಸುತ್ತ, ಸಾಲು ಮೇಜುಗಳು; ಅವುಗಳ ಮೇಲೆ ಮರದ ಹಲಗೆಯ ಅಟ್ಟಲು; ಅವುಗಳ ತುಂಬ, ನಾನಾ ವರ್ಣದ, ಗಾತ್ರದ–ಸೀಸೆಗಳು; ಸೀಸೆಗಳಲ್ಲಿ ತರತರದ ಬಣ್ಣದ ದ್ರವಗಳು. ಈ ಪ್ರಯೋಗಶಾಲೆಗೆ ಇದ್ದ ಕಿಟಕಿಗಳೆಲ್ಲ ಕಿತ್ತುಹಾಕಲ್ಪಟ್ಟು, ಗೋಡೆಗಳಿಂದ ಮುಚ್ಚಲ್ಪಟ್ಟಿದ್ದವು. ಆಳೆತ್ತರಕ್ಕೂ ಮೇಲಿನ ಮಟ್ಟದಲ್ಲಿ, ದೂರ ದೂರಕ್ಕೆ, ಬೆಳಕು–ಗಾಳಿಗೆಂದು ಕೆಲವು ಗವಾಕ್ಷಗಳು ಮಾತ್ರ ಇದ್ದವು. ನೆಲದ ಮೇಲೆಲ್ಲ, ಅನೇಕ ಮರದ ಖಾಲಿ ಪೆಟ್ಟಿಗೆಗಳು ಅಸ್ತವ್ಯಸ್ತವಾಗಿ ಹರಡಿ ಬಿದ್ದಿದ್ದವು.

ಈ ಪ್ರಯೋಗಶಾಲೆಯ ದೂರದ ತುದಿಯಲ್ಲಿ ಒಂದು ಹಂತವಿತ್ತು. ಈ ಹಂತದ ಮೇಲು ಮಟ್ಟದಲ್ಲಿ ಒಂದು ಮೊಗಸಾಲೆಯೂ, ಮೊಗಸಾಲೆಯಲ್ಲಿ ಒಂದು ಬಾಗಿಲೂ ಇದ್ದವು. ಬಾಗಿಲಿಗೆ ಕೆಂಪು ಬಣ್ಣ ಬಳಿದಿತ್ತು. ಈ ಬಾಗಿಲು, ಡಾ॥ ಹರಿವಿಠಲ್ ರವರ ಕೇವಲ ಖಾಸಾ ಕೊಠಡಿಯದಾಗಿತ್ತು. ಲಾಯರು ಬಂದ ಸಮಯದಲ್ಲಿ ಈ ಬಾಗಿಲು ತೆರೆದಿತ್ತು. ಅವರು ಹಂತ ಹತ್ತಿ ಹೋಗಿ ಕೊಠಡಿಯನ್ನು ಪ್ರವೇಶಿಸಿದರು. ಈ ಕೊಠಡಿ ದೊಡ್ಡದಾಗಿದ್ದು, ಅಂಗಳದ ಕಡೆ ಇದ್ದ ಮೂರು ಕಿಟಕಿಗಳಿಂದ ಗಾಳಿ–ಬೆಳಕು ಬರುತ್ತಿತ್ತು. ಕೊಠಡಿಯ ಗೋಡೆಗಳ ಬದಿಯಲ್ಲಿ ಸುತ್ತ, ಹಲವು ಗಾಜಿನ ಬಾಗಿಲ ಬೀರುಗಳಿದ್ದವು. ಕಿಟಕಿಗಳ ಎದುರಿನ ಗೋಡೆಗೆ ಒತ್ತಿಕೊಂಡು, ಒಂದು ವಿಶಾಲವಾದ ಮೇಜು ಇತ್ತು. ಇದರ ಮೇಲೆ ಒಂದು, ತಕ್ಕಮಟ್ಟಿಗೆ ದೊಡ್ಡದಾದ–ಸ್ಟಾಂಡು ಕನ್ನಡಿ ಇತ್ತು. ಮೇಜಿನ ಪಕ್ಕದಲ್ಲೇ, ಗೋಡೆಯ ಬದಿಗೆ ಒಂದು ಮಂಚವೂ, ಅದರಿಂದ ಸ್ವಲ್ಪದೂರದಲ್ಲಿ, ಎರಡು ಸೋಫಾಗಳೂ ಇದ್ದವು.

ಶಂಕರರಾಯರು ಕೊಠಡಿಯನ್ನು ಪ್ರವೇಶಿಸಿದಾಗ, ಡಾಕ್ಟರ್ ಹರಿವಿಠಲ್‌ರವರು ಒಂದು ಸೋಫಾದ ಮೇಲೆ ಕಾಲುಚಾಚಿ–ಹಿಂದಕ್ಕೆ ಒರಗಿ, ತೋಳುಗಳೆರಡನ್ನೂ ಪಕ್ಕಕ್ಕೆ ಇಳೀಬಿಟ್ಟು, ಕುಳಿತಿದ್ದರು. ಈ ಸಮಯದಲ್ಲಿ ಅವರು ಒಂದು ನೇವೀ ಬ್ಲೂ ಷರಾಯನ್ನೂ ಬಿಳೀ ಷರಟನ್ನೂ ಧರಿಸಿದ್ದರು. ಕಾಲಿಗೆ ರಬ್ಬರು ಷೂಗಳನ್ನು ಹಾಕಿಕೊಂಡಿದ್ದರು. ಲಾಯರು ಕೊಠಡಿಯನ್ನು ಪ್ರವೇಶಿಸಿದ ಕೂಡಲೆ, ಎದೆಯ ಮೇಲೆ ಗಲ್ಲ ಇಟ್ಟುಕೊಂಡು ಕುಳಿತಿದ್ದ ಡಾಕ್ಟರು, ಕುಳಿತು ಹಾಗೆಯೇ, ತಲೆಯೆತ್ತಿ ನೋಡಿದರು. ಅವರ ಹುಬ್ಬುಗಳು ಗಂಟಿಕ್ಕಿದ್ದವು; ಹಣೆಯ ಮೇಲೆ ಗೆರೆಗಳು ಮೂಡಿದ್ದವು; ಇಡೀ ಮುಖದಲ್ಲಿ, ಏನೋ ದಾರುಣವಾದ ಮಾನಸಿಕ ಯಾತನೆಯ ಚಿಹ್ನೆ ಇತ್ತು. ಎಂದೂ, ಮನೆಗೆ ಬಂದ ಮಿತ್ರರನ್ನು ಕಂಡ ಕೂಡಲೇ ತಟ್ಟನೆ ಎದ್ದು ಹೋಗಿ ಆದರದಿಂದ ಕೈ ಕುಲುಕಿ ಸ್ವಾಗತಿಸುತ್ತಿದ್ದವರು, ಇಂದು ಏಳುವ ಪ್ರಯತ್ನ ಮಾಡದೆಯೇ, ಬಹು ಕಷ್ಟದಿಂದ — ಎಂಬಂತೆ, ಕೈ ಎತ್ತಿ ಸ್ವಾಗತಿಸಿ, ಖಾಲಿ ಇದ್ದ ಸೋಫಾದ ಕಡೆ ಕೈ ತೋರಿಸಿದರು. ಸಮಯೋಚಿತವಾಗಿ ಅವರು ಆಡಿದ ಎರಡು ಮಾತುಗಳಲ್ಲೂ ಧ್ವನಿಯ ಬದಲಾವಣೆಯಿತ್ತು. ಆ ಬದಲಾವಣೆ ಲಾಯರ ಕಿವಿಗೆ ಹಿತವಾಗಿರಲಿಲ್ಲ.

ತಮ್ಮನ್ನು ಕರೆತಂದಿದ್ದ ಸೇವಕ ರಂಗಪ್ಪ ಬಾಗಿಲನ್ನು ಹಾಕಿಕೊಂಡು ಹೊರಟುಹೋದ ಕೂಡಲೆ, ಲಾಯರು, ಕುಳಿತ ಹಾಗೆಯೇ ಮುಂದಕ್ಕೆ ಬಾಗಿ, ಡಾಕ್ಟರ ಕಡೆ ನೋಡುತ್ತ ,

"ವಿಠಲ್, ನಿನಗೆ ಸುದ್ದಿ ತಿಳಿಯಿತೇ ?"— ಎಂದು ಕೇಳಿದರು.

ಡಾಕ್ಟರು, ನಿಟ್ಟುಸಿರು ಬಿಟ್ಟು–ಉದ್ಗಾರದಿಂದ,

"ಅಯ್ಯೋ ! ತಿಳೀತಯ್ಯಾ–ತಿಳೀತು ! ಬೆಳಗಿನಿಂದ ಚೌಕದಲ್ಲಿ , ನ್ಯೂಸ್ ಪೇಪರ್ ಮಾರೋ ಹುಡುಗರದ್ದು–ಅದೇ ಕೂಗು ! ಅವರು ಕಿರಿಚುತ್ತಿದ್ದದ್ದು ನನ್ನ ಊಟದ ಮನೆಗೆ ಕೇಳಿಸ್ತಾ ಇತ್ತು — ಶಂಕರಾ !"

— ಎಂದು, ತಲೇ ಮೇಲೆ ಕೈ ಇಟ್ಟುಕೊಂಡರು. ಲಾಯರು ಕೆಲವು ಕ್ಷಣ ಮೌನವಾಗಿದ್ದು ಅನಂತರ,

"ಸರಿ ವಿಠಲ್, ಒಂದು ಮಾತು; ಸಾಹುಕಾರ್ ಹೊನ್ನಪ್ಪನವರು ನನಗೆ ಬಹಳ ಬೇಕಾದ ಕಕ್ಷಿಗಾರರಾಗಿದ್ದರು. ನೀನು ನನ್ನ ಸ್ನೇಹಿತನಲ್ಲದೆ, ಅವರಂತೆ ಒಬ್ಬ ಕಕ್ಷಿಗಾರನೂ ಹೌದು. ನನ್ನ ಆ ಕಕ್ಷಿಗಾರರ ಕೊಲೆಯ ಪ್ರಸಂಗಕ್ಕೆ ನಾನು ಕೈಹಾಕಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಹಿಂದುಮುಂದು ನೋಡಿ ಹೆಜ್ಜೆ ಇಡಬೇಕು. ನಿನ್ನಿಂದ ಒಂದು ವಿಷಯ ತಿಳಿದರೆ, ನನಗೆ ಎಷ್ಟೋ ನೆಮ್ಮದಿಯಾಗುತ್ತೆ , ವಿಠಲ್. ಅದಕ್ಕಾಗಿ, ಫೋನ್ ಮಾಡೋದಕ್ಕೂ ಹೆದರಿ, ಎಲ್ಲಾ ಕೆಲಸ ಬಿಟ್ಟು , ಅವಸರದಿಂದ ಇಲ್ಲಿಗೆ ಬಂದೆ " — ಎಂದರು.

"ನನ್ನಿಂದ ಏನು ವಿಷಯ ಬೇಕು ನಿನಗೆ –ಶಂಕರ್ ?"

— ಎಂದು ಹುಬ್ಬೆತ್ತಿ ಕೇಳಿದರು, ಡಾಕ್ಟರು.

"ಏನಿಲ್ಲ, ನೀನು ಈ — ಈ ಕೊಲೆಪಾತಕನನ್ನು ಬಚ್ಚಿಡೋ ಅಂಥಾ ಹುಚ್ಚು ಕೆಲಸ ಮಾಡಿಲ್ಲ ತಾನೇ ?"

— ಎಂದು ತಗ್ಗಿದ ಧ್ವನಿಯಲ್ಲಿ ಕೇಳಿದರು, ಲಾಯರು. ಕೂಡಲೆ ಡಾಕ್ಟರು ಸೆಟೆದು ಕುಳಿತು, ಉದ್ವೇಗದಿಂದ,

"ಶಂಕರಾ, ಶಂಕರಾ !–ದೇವರಾಣೆ ! –ದೇವರಾಣೆ ! ! –ಪುನಃ ನಾನು ಅವನನ್ನು ಈ ಕಣ್ಣುಗಳಿಂದ ನೋಡೋದಿಲ್ಲ — ಉಹುಂ ! ನೋಡೋದಿಲ್ಲ ! ! ಕೇಳು ಶಂಕರಾ, ಈ ಪ್ರಪಂಚದಲ್ಲಿ–ಈ ಜನ್ಮದಲ್ಲಿ ಇತಃಪರಃ ಅವನ ಹವ್ಯಾಸ ಕಟ್ಟಿಕೊಳ್ಳೋದಿಲ್ಲಾಂತ, ನನ್ನ ಕೀರ್ತಿ–ಆತ್ಮಗೌರವಗಳ ಪಣ ಇಟ್ಟು ನಿನಗೆ ಮಾತು ಕೊಡುತ್ತೇನೆ ! ಇನ್ನು , ನನಗೂ ಅವನಿಗೂ ಇದ್ದ ಋಣಾನುಬಂಧಾನ ಹರಿದು ಛಿದ್ರಮಾಡಿಬಿಟ್ಟೆ, ಶಂಕರಾ ! ದೇವರ ದಯದಿಂದ, ಅವನಿಗೂ ಇನ್ನುಮುಂದೆ, ನನ್ನ ಸಹಾಯದ ಅವಶ್ಯಕತೆ ಇಲ್ಲದಂತಾಗಿದೆ" — ಎಂದರು.

"ಅದೇನು ?" — ಎಂದು ಕುತೂಹಲದಿಂದ ಕೇಳಿದರು, ಲಾಯರು.

"ಇಲ್ಲ ಶಂಕರ್, ಅದನ್ನೆಲ್ಲ ವಿವರಿಸಲಾರೆ. ಆದರೆ, ಅವನ ವಿಷಯವನ್ನ ನಾನು ಬಲ್ಲಷ್ಟು ನೀನು ಕಾಣೆ — ಎಂದು ಮಾತ್ರ ಹೇಳಬಲ್ಲೆ. "

"ಅದು ಸರಿ ಅನ್ನು "

"ಆದ್ದರಿಂದ–ನನ್ನ ಮಾತನ್ನು ನೀನು ನಂಬಬೇಕು."

"ಏನು ಮಾತು ?"

"ಏನೂಂದ್ರೆ ಅವನು ಈಗ ನಿರಪಾಯಕಾರಿಯಾಗಿದ್ದಾನೆ–ಸಂಪೂರ್ಣವಾಗಿ ನಿರಪಾಯಕಾರಿಯಾಗಿದ್ದಾನೆ — ಶಂಕರ್"

"ನಿಜವಾಗಲೂ ?"

"ಸತ್ಯವಾಗಲೂ ! ಇನ್ನುಮುಂದೆ ಅವನ ಸುದ್ದಿ ಎಂದೆಂದಿಗೂ ಕೇಳಿಬರೋದಿಲ್ಲ ! ಶಂಕರಾ, ನೀನು ನನ್ನನ್ನು ನೋಡುತ್ತಿರೋದು ಎಷ್ಟು ಸತ್ಯವೋ –ಅವನ ವಿಷಯ ಈಗ ನಾನು ಹೇಳಿದ್ದೂ — ಅಷ್ಟೇ ಸತ್ಯ !"

ಡಾಕ್ಟರು ಅಷ್ಟು ಒತ್ತಿ ಹೇಳಿದರೂ, ಇಂತಹ ನೂರಾರು ವ್ಯವಹಾರಗಳಲ್ಲಿ ಮುಳುಗಿ ಎದ್ದಿದ್ದ ಶಂಕರರಾಯರಿಗೆ ಪೂರ್ಣ ನಂಬಿಕೆಯಾಗಲಿಲ್ಲ. ಅವರು ತಮ್ಮ ಮಿತ್ರನನ್ನು ಕುರಿತು,

"ಅಯ್ಯಾ ವಿಠಲ, ನೀನು ಅವನ ವಿಷಯದಲ್ಲಿ ಸ್ವಲ್ಪ ಮಿತಿಮೀರಿಯೇ ಖಾತ್ರಿಯಾಗಿರೋ ಹಾಗೆ ಕಾಣುತ್ತೆ ! ನಿನ್ನ ಕ್ಷೇಮಕ್ಕಾಗಿಯಾದರೂ, ಅವನ ವಿಷಯದಲ್ಲಿ ನೀನು ಹೇಳಿದ್ದೆಲ್ಲ ಸತ್ಯವಾಗಲೀಂತ ಹಾರೈಸ್ತೇನೆ"— ಎಂದರು.

"ನನ್ನ ಕ್ಷೇಮಕ್ಕೆ ?" — ಎಂದು, ಸ್ವಲ್ಪ ಆಶ್ಚರ್ಯದಿಂದ ಕೇಳಿದರು–ಡಾಕ್ಟರು.

"ಹೌದು, ನಿನ್ನ ಕ್ಷೇಮಕ್ಕೆ—ವಿಠಲ. ಏಕೆಂದರೆ, ಒಂದು ವೇಳೆ ಆಸಾಮಿ ಪತ್ತೆಯಾಗಿ ಕೊಲೆ ವಿಚಾರಣೆಗೆ ಬಂದರೆ — ಆಗ, ನಿನ್ನ ಹೆಸರು ಹೊರಕ್ಕೆ ಬರೋ ಹಾಗಾದೀತು — ಗೊತ್ತೇ ?"

"ಇಲ್ಲ ಶಂಕರಾ, ಅದಕ್ಕೆ ಅವಕಾಶ ದೊರೆಯೋ ಸಂಭವ ಇಲ್ಲ–ಖಂಡಿತ ಇಲ್ಲ !"

"ನೀನು ಏನೇ ಹೇಳು ವಿಠಲ, ಅವನು ಜೀವಂತವಾಗಿರೋವರೆಗೂ ನಿನ್ನ ಹೆಸರಿಗೆ ಅಪಾಯ ತಪ್ಪಿದ್ದಲ್ಲ."

"ಶಂಕರಾ, ಅವನ ವಿಷಯ ನನಗೆ ತಿಳಿದಿರೋ ಅಷ್ಟು ನಿನಗೆ ತಿಳಿದಿದ್ದಿದ್ದರೆ ನೀನು ಹಾಗೆ ಶಂಕೆಪಡ್ತಿರಲಿಲ್ಲ. ನಾನು ಪೂರ್ಣ ಆಧಾರದ ಮೇಲೆ ನಿನಗೆ ಈ ಭರವಸೇನ ಕೊಡ್ತಾ ಇದ್ದೇನೆ. ನನ್ನ ಆಧಾರಗಳೇನು–ಅನ್ನೋದನ್ನು ಮಾತ್ರ ನಾನು ಇನ್ನೊಬ್ಬರಿಗೆ ತಿಳಿಸೋ ಹಾಗಿಲ್ಲ–ಅಷ್ಟೆ. ಆದರೆ, ಒಂದು ವಿಷಯದಲ್ಲಿ ನೀನು ನನಗೆ ತಿಳಿವಳಿಕೆ ಕೊಡಬಹುದು"

"ಏನದು ?"

"ಏನೂಂದರೆ, ನನಗೆ ಒಂದು-ಒಂದು — ಪತ್ರ ಬಂದಿದೆ. ಅದನ್ನ ಪೊಲೀಸಿನೋರಿಗೆ ತೋರಿಸಬೇಕೋ ಬೇಡವೋ - ಅನ್ನೋ ವಿಷಯಕ್ಕೆ ನಿನ್ನ ಸಲಹೆ ಬೇಕಾಗಿದೆ. ನಾನೇ ಅದನ್ನ ತೀರ್ಮಾನಿಸಲು ಅಶಕ್ತ. ಆದ್ದರಿಂದ, ಆ ಪತ್ರವನ್ನು ನಿನ್ನ ಕೈಲಿಡಬೇಕೂಂತಿದ್ದೇನೆ. ಅದರ ಉಪಯೋಗದ ರೀತಿಯ ತೀರ್ಮಾನವನ್ನು ಪೂರ್ತಿ ನಿನಗೇ ಬಿಡ್ತೇನೆ. ನಿನ್ನ ತೀರ್ಮಾನ ಸೂಕ್ತವಾಗಿರುತ್ತೇಂತ ನನಗೆ ನಂಬಿಕೆ ಇದೆ. ನಿನ್ನಲ್ಲಿ ನಾನು ಇಟ್ಟುಕೊಂಡು ಬಂದಿರೋ ವಿಶ್ವಾಸಕ್ಕೆ ಇದೇ ಸಾಕ್ಷಿ — ಶಂಕರಾ."

"ಆ ಪತ್ರ, ಅವನ ಪತ್ತೆಗೆ ಯಾವ ರೀತೀಲಾದರೂ ಕಾರಣವಾದೀತೂಂತ ನಿನಗೆ ಭಯವೇ-ವಿಠಲಾ ?"

"ಇಲ್ಲ-ಇಲ್ಲ ಶಂಕರಾ, ಆ ಭಯವಿಲ್ಲ ನನಗೆ. ಈ ಕ್ಷಣದಿಂದ ಮುಂದೆ, ಗುಪ್ತನ ಗತಿ ಏನೇ ಆಗಲಿ, ಅದರಿಂದ ನಾನು ಪೂರ್ಣ ನಿರ್ಲಿಪ್ತ. ಇನ್ನು ನನಗೆ ಅವನೊಡನೆ ಸ್ನೇಹ-ಸಂಬಂಧ-ವ್ಯವಹಾರ ಎಲ್ಲ ಪೂರ್ತಿ ತಪ್ಪಿದ ಹಾಗೇಂತ ತಿಳಿಕೋ."

"ಹಾಗಾದರೆ, ಮತ್ತೇನು ?"

"ಈಗ ನನ್ನನ್ನ ಬಾಧಿಸುತ್ತಿರೋದು ಅವನ ವಿಷಯವಲ್ಲ, ನನ್ನ ಸ್ವಂತ ಗೌರವದ ವಿಷಯ-ಶಂಕರಾ. ಈ ಅಸಹ್ಯವಾದ ದುರಂತ ಘಟನೆಯ ದುರ್ವಾಸನೆ ನನ್ನ ಹೆಸರಿಗೂ ಅಂಟಿಕೊಂಡಿದೆ. ನನ್ನ ಹೃದಯವೇದನೆಗೆ ಇದೇ ಕಾರಣ."

ಡಾಕ್ಟರ ಈ ಮಾತುಗಳನ್ನು ಕೇಳಿ ಲಾಯರ ಮನಸ್ಸಿಗೆ ಆಶ್ಚರ್ಯವಾಯಿತು-ಹಗುರವೂ ಆಯಿತು. ಕಾಮೇಶ ಗುಪ್ತನಂತಹವನ ಸಹವಾಸ ಮಾಡಿಯೂ, ತನ್ನ ಗೌರವ ಮಾತ್ರ ಭದ್ರವಾಗಿರಬೇಕೆಂದು ಆಶಿಸುವ ತಮ್ಮ ಮಿತ್ರನ ಸ್ವಾರ್ಥ ಮನೋಧರ್ಮವನ್ನು ನೋಡಿ ಆಶ್ಚರ್ಯ; ಅವನಿಗೆ ಇನ್ನಾದರೂ ಆತ್ಮಗೌರವದ ಯೋಚನೆ ಬಂತಲ್ಲಾ-ಅದೇ ಒಂದು ಶುಭ ಸೂಚನೆ - ಎಂದು ಸಮಾಧಾನ. ಲಾಯರು ಕೆಲವು ಕ್ಷಣಗಳು ಮೌನವಾಗಿದ್ದು ಅನಂತರ,

"ಒಳ್ಳೇದು, ಆ ಪತ್ರವನ್ನ ಕೊಡು, ನೋಡೋಣ"

—ಎಂದರು. ಡಾಕ್ಟರು, ತಮ್ಮ ಷರಟಿನ ಜೇಬಿನಿಂದ ಒಂದು ಪತ್ರವನ್ನು ತೆಗೆದು ಲಾಯರ ಕೈಗೆ ಕೊಟ್ಟರು.

ಪತ್ರದ ಒಕ್ಕಣೆ, ಬರವಣಿಗೆ ಎಲ್ಲ ವಿಲಕ್ಷಣವಾಗಿದ್ದವು. ಅಕ್ಷರಗಳು ಕೆಲವು ಕಡೆ ಬಿಡಿ ಬಿಡಿಯಾಗಿದ್ದವು; ಕೆಲವು ಕಡೆ ಮೋಡಿಯಲ್ಲಿದ್ದವು. ಬರೆದವನು ತನ್ನ ಬರವಣಿಗೆಯ ವೈಶಿಷ್ಟ್ಯವನ್ನು ಮರೆ ಮಾಡಲು ಹವಣಿಸಿದ್ದಂತೆ ತೋರಿತು. ಕಾಗದದ ಕೊನೆಯಲ್ಲಿ "ಕಾಮೇಶ ಗುಪ್ತ" ಎಂದು ರುಜು ಇತ್ತು. ಸಂಕ್ಷೇಪವಾಗಿದ್ದ ಆ ಕಾಗದದ ತಾತ್ಪರ್ಯ ಇಷ್ಟೆ : ತನ್ನ ಪೋಷಕರಾಗಿ —ಸಾವಿರಾರು ರೀತಿಯಲ್ಲಿ ತನಗೆ ಔದಾರ್ಯವನ್ನು ತೋರಿಸಿರುವ ಡಾಕ್ಟರ್ ವಿಠಲ್‌ರವರ ಸೌಜನ್ಯಕ್ಕೆ ಪ್ರತಿಯಾಗಿ, ಉದ್ದಕ್ಕೂ ದುರ್ನಡತೆಯಿಂದ ಅನರ್ಹತೆಯನ್ನೇ ವ್ಯಕ್ತಪಡಿಸುತ್ತ ಬಂದಿರುವ ತಾನು, ತಪ್ಪಿಸಿಕೊಳ್ಳಲು ಬಹು ಖಾತ್ರಿಯಾದ ಮಾರ್ಗವನ್ನು ಕಂಡುಕೊಂಡಿರುವ ಕಾರಣ, ಅವರು ಇನ್ನು ಮುಂದೆ ತನ್ನ ಸುರಕ್ಷತೆಯ ವಿಷಯದಲ್ಲಿ ಯಾವ ರೀತಿಯ ಆತಂಕಕ್ಕೂ ಒಳಗಾಗಬಾರದು — ಎಂದು.

ಈ ಕಾಗದವನ್ನು ನೋಡಿ ಲಾಯರಿಗೆ ಎಷ್ಟೋ ಸಮಾಧಾನವಾಯಿತು. ಡಾಕ್ಟರ ಮತ್ತು ಗುಪ್ತನ ಮಧ್ಯೆ ಯಾವ ಸಲಿಗೆ-ಸಾಮೀಪ್ಯಗಳನ್ನು ತಾವು ಊಹಿಸಿಕೊಂಡಿದ್ದರೋ ಅವು ನಿರಾಧಾರವಾಗಿದ್ದವೆಂದೂ, ಅವರ ಸಂಬಂಧ ಅಷ್ಟು ಹೊಲಸಾಗಿರಲಿಲ್ಲವೆಂದೂ, ಒಳಗೇ ಸಂತೋಷಪಟ್ಟುಕೊಂಡರಲ್ಲದೆ, ತಮ್ಮ ಮಿತ್ರನ ವಿಷಯದಲ್ಲಿ ಸಲ್ಲದ ಊಹೆ ಮಾಡಿ ಸಂದೇಹಪಟ್ಟದ್ದಕ್ಕೆ, ತಮ್ಮನ್ನು ತಾವೇ ಬೈದುಕೊಂಡರು. ಕಾಗದ ಓದಿದ ಮೇಲೆ ಲಾಯರು,

"ಇದರ ಲಕ್ಕೋಟೆ ಇದೆಯೇ ?"—ಎಂದು ತಮ್ಮ ಮಿತ್ರನನ್ನು ಕೇಳಿದರು.

"ಇಲ್ಲ ಶಂಕರ, ಸುಟ್ಟುಹಾಕಿಬಿಟ್ಟೆ ; ಇಟ್ಟುಕೋಬೇಕಾಗಿತ್ತೂಂತ — ಆಮೇಲೆ ಅನ್ನಿಸಿತು. ಟಪಾಲು ಮುದ್ರೆ ನೋಡೋ ಇಚ್ಛೆಯಿಂದ ನೀನು ಹಾಗೆ ಕೇಳಿದ್ದರೆ, ಅದನ್ನು ನಾನು ಸುಟ್ಟದ್ದಕ್ಕೆ ನೀನು ವ್ಯಸನಪಡಬೇಕಾಗಿಲ್ಲ. ಅದರ ಮೇಲೆ ಸ್ಟಾಂಪು-ಮುದ್ರೆ ಏನೂ ಇರಲಿಲ್ಲ. ಅದು ಟಪ್ಪಾಲು ಮೂಲಕ ಬಂದದ್ದಲ್ಲ-ಯಾರೋ ಮುದ್ದಾಂ ತಂದುಕೊಟ್ಟು ಹೋದದ್ದು."

—ಎಂದರು, ಡಾಕ್ಟರು.

"ಸರಿ, ನಾನು ಈ ಕಾಗದವನ್ನು ಇಟ್ಟುಕೊಂಡು ಸ್ವಲ್ಪ ಕಾಲ ಯೋಚಿಸ ಬಹುದೇ ?"

"ಓಹೋ ! ಅಗತ್ಯವಾಗಿ ಇಟ್ಟುಕೋ -ಶಂಕರಾ. ಇದರ ವಿಷಯ ಏನು ಮಾಡಬೇಕೋ ಅದನ್ನ , ನನ್ನ ಪರವಾಗಿ ನೀನೇ ಪೂರ್ತಿ ತೀರ್ಮಾನಿಸಬೇಕೂಂತ ನನ್ನ ಇಷ್ಟ. ನನಗೆ ನನ್ನಲ್ಲಿ ನಂಬಿಕೆ ಇಲ್ಲವಾಗಿಬಿಟ್ಟಿದೆ !"

"ಒಳ್ಳೇದು, ಯೋಚನೆಮಾಡ್ತೇನೆ-ವಿಠಲ್. ಅದಿರಲಿ — ಹ್ಞಾ ! ಇನ್ನೊಂದು ಮಾತು ನೆನಪಾಯಿತು — "

"ಏನು ? ಏನದು ?"

"ನಿನ್ನ ಆ ಉಯಿಲಿನಲ್ಲಿ, ನೀನು ಕಣ್ಮರೆಯಾಗೋ ಸಂದರ್ಭವನ್ನು ಕುರಿತು ಹಾಕಿರೋ ಷರತ್ತುಗಳು, ನಿನ್ನ ಸ್ವಯಂ ಪ್ರೇರಣೆಯಲ್ಲ — ಗುಪ್ತ ಹೇಳಿ ಬರೆಸಿದ ಮಾತುಗಳು — ಅಂತ, ನನ್ನ ಊಹೆ. ಇದು ನಿಜವೆ?"

ಲಾಯರ ಈ ಪ್ರಶ್ನೆಯನ್ನು ಕೇಳಿ ಡಾಕ್ಟರ್ ವಿಠಲ್‌ರವರು, ಒಂದೆರಡು ಕ್ಷಣಗಳವರೆಗೆ, ಮೂರ್ಛೆಯ ಹಿಡಿತಕ್ಕೆ ಸಿಕ್ಕಿದವರಂತೆ-ಹಿಂದಕ್ಕೆ ಒರಗಿ, ಕಣ್ಣುಗಳನ್ನು ಮುಚ್ಚಿಕೊಂಡರು. ಅನಂತರ, ಕಣ್ಣು ಬಿಟ್ಟು, ತುಟಿಗಳನ್ನು ಬಿಮ್ಮನೆ ಒತ್ತಿಕೊಂಡು, ಲಾಯರ ಕಡೆ ನೋಡುತ್ತ ತಲೆದೂಗಿದರು. ಲಾಯರು,

"ಹ್ಞಾ ! ನನ್ನ ಊಹೆ ಸರಿ ! ನನಗೆ ಗೊತ್ತಿತ್ತು ! — ಅವನು ನಿನ್ನನ್ನು ಕೊಲ್ಲೋ ಯೋಚನೆ ಮಾಡಿಯೇ ಹೀಗೆ ಬರೆಸಿದ್ದಾಂತ ನನಗೆ ಗೊತ್ತಿತ್ತು ! - ವಿಠಲಾ ! ನಿಜವಾಗಲೂ ನೀನು ಭಾರಿ ಗಂಡಾಂತರದಿಂದ — ಹೆಚ್ಚೇನು ! — ಪ್ರಾಣಾಪತ್ತಿನಿಂದ — ಪಾರಾದೆ !"-ಎಂದರು. ಡಾಕ್ಟರು ಗಂಭೀರ ಧ್ವನಿಯಲ್ಲಿ,

"ಅಯ್ಯಾ ಮಿತ್ರಾ, ಪಾರಾದೆನೋ ಇಲ್ಲವೋ-ಅದನ್ನು ನಾನು ಕಾಣೆ. ಆದರೆ, ಪಾರಾದ್ದಕ್ಕಿಂತಲೂ ಹೆಚ್ಚಾಗಿ- ಬಲು ಒಳ್ಳೇ ಪಾಠ ಕಲಿತೆ ! ದೇವರಾಣೆ ! — ಶಂಕರಾ, ಬಲು ಒಳ್ಳೇ ಪಾಠ ಕಲಿತೆ !"

—ಎಂದು, ತಮ್ಮ ಕೈಗಳಿಂದ ಮುಖವನ್ನು ಮುಚ್ಚಿಕೊಂಡರು.

* * * *

ಲಾಯರು ಹೊರಡಲು ಎದ್ದರು. ಡಾಕ್ಟರ್ ವಿಠಲ್-ರವರು ಇಂದು ತಮ್ಮ ಮಿತ್ರರನ್ನು ಬೀಳ್ಕೊಳ್ಳಲೂ ಏಳಲಿಲ್ಲ. ಲಾಯರು, ಆ ಕಟ್ಟಡಕ್ಕೆ ಬಂದ ದಾರಿಯಲ್ಲೇ ವಾಪಸಾಗಿ, ಮನೆಯ ಮುಂಭಾಗವನ್ನು ತಲುಪಿದರು. ಅವರನ್ನು ಕಳಿಸಿಕೊಡಲು ರಂಗಪ್ಪ ಮುಂಬಾಗಿಲವರೆಗೂ ಬಂದ. ಮನೆ ಬಿಟ್ಟು ಹೊರಡುವಾಗ ಲಾಯರು ರಂಗಪ್ಪನನ್ನು ಕುರಿತು,

"ರಂಗಪ್ಪಾ, ಈ ದಿನ ಡಾಕ್ಟರಿಗೆ ಯಾರೋ ಒಂದು ಕಾಗದಾನ ತಂದು ಕೊಟ್ಟು ಹೋಗಿದ್ದಾರೆ. ಆ ಕಾಗದ ತಂದವನನ್ನ ನೀನೇನಾದರೂ ನೋಡಿದೆಯಾ ? ನೋಡಿದ್ದರೆ, ಅವನು ಹೇಗಿದ್ದ - ಹೇಳ್ತೀಯಾ ?"

—ಎಂದು ಕೇಳಿದರು.

"ಟಪ್ಪಾಲು ಮೂಲಕ ಕೆಲವು ಪ್ರಕಟನೆಗಳು ಹೊರತಾಗಿ ಬೇರೆ ಏನೂ ಕಾಗದ ಬರಲಿಲ್ಲ — ರಾಯರೇ"

"ಮುದ್ದಾಂ ಆಗಿ — ?"

"ಇಲ್ಲ ಸ್ವಾಮೀ, ಮುದ್ದಾಂ ಆಗಿ ಯಾರೂ ಬಂದಿರ್‍ಲಿಲ್ಲ ?"

"ಖಂಡಿತವೆ ?"

"ಖಂಡಿತ ಸ್ವಾಮೀ" — ಎಂದ, ರಂಗಪ್ಪ .

ಈ ಮಾತನ್ನು ಕೇಳಿ, ಶಂಕರರಾಯರ ಭೀತಿ, ಶಂಕೆಗಳು ಪುನಃ ತಲೆಎತ್ತಿದವು. ಕಾಗದ ಹಿಂದುಗಡೆಯ ಪ್ರಯೋಗಶಾಲೆಯ ಮೂಲಕವೇ ಬಂದಿರಬೇಕೆಂದು, ಅವರಿಗೆ ಈಗ ಸ್ಪಷ್ಟವಾಯಿತು. ಬಹುಶಃ, ಇದು ಡಾಕ್ಟರ ಖಾಸಾ ಕೊಠಡಿಯಲ್ಲೇ ಬರೆಯಲ್ಪಟ್ಟಿದ್ದರೂ ಇರಬಹುದೆಂದು ಅವರು ಊಹಿಸಿದರು. ಹಾಗಿದ್ದಪಕ್ಷದಲ್ಲಿ, ಈ ಪತ್ರವನ್ನು ಕುರಿತ ತೀರ್ಮಾನದ ಬಣ್ಣವೇ ಬದಲಾಯಿಸುತ್ತೆ ; ಅಲ್ಲದೆ, ಇದನ್ನ ಉಪಯೋಗಿಸುವ ವಿಷಯದಲ್ಲೂ ಬಹಳ ಎಚ್ಚರಿಕೆ ವಹಿಸಬೇಕಾಗುತ್ತೆ — ಎಂದುಕೊಂಡು, ಲಾಯರು ಆ ಮನೆಯಿಂದ ಹೊರಟರು.

ಚಿನಿವಾರ ಚೌಕದಲ್ಲಿ ಹಲವು ವೃತ್ತಪತ್ರಿಕೆ ಮಾರುವ ಹುಡುಗರ, "**ಭಯಂಕರ ಕೊಲೆ** !" ಎಂಬ ದಪ್ಪ ಅಕ್ಷರಗಳ ಜಾಹಿರಾತು ರಟ್ಟುಗಳನ್ನು ಹಿಡಿದುಕೊಂಡು,

"ಭಯಂಕರ ಕೊಲೆ !" — "ಮಧ್ಯ ರಾತ್ರಿಯ ದುರಂತ !" — "ಧರ್ಮಸಿಂಧುಗಳ ಘೋರ ಮರಣ! !" —"ಕಾಮೇಶ ಗುಪ್ತನ ಕರಾಳ ಕೃತ್ಯ ! ! !"

—ಎಂದು, ನಾನಾ ರೀತಿಯಲ್ಲಿ , ತಮ್ಮ ಶಕ್ತಿಯನ್ನೆಲ್ಲಾ ಬಿಟ್ಟು ಕಿರುಚುತ್ತ — ಪತ್ರಿಕೆಗಳನ್ನು ಮಾರುತ್ತಿದ್ದರು. ಚೌಕದಲ್ಲೆಲ್ಲ ಜನರು ಸಣ್ಣ ಸಣ್ಣ ಗುಂಪು ಕೂಡಿ, ಆತುರದಿಂದ ಪತ್ರಿಕೆಗಳನ್ನು ಕೊಂಡು ಓದುತ್ತಿದ್ದರು.

ತಮ್ಮ ಕಕ್ಷಿಗಾರರೊಬ್ಬರ ಜೀವನ ಸಮಾಪ್ತಿಯನ್ನು ಸೂಚಿಸುತ್ತಿದ್ದ ಆ ಹುಡುಗರ ಕೂಗನ್ನು ಕೇಳಿ ಲಾಯರು, ತಮ್ಮ ಇನ್ನೊಬ್ಬ ಕಕ್ಷಿಗಾರನ ಹೆಸರೂ ಎಲ್ಲಿ ಅಪಖ್ಯಾತಿಯ ಸುಳಿಗೆ ಸಿಕ್ಕುವ ದುರಂತಕ್ಕೀಡಾಗುವುದೋ—ಎಂದು ಸ್ವಭಾವವಾಗಿಯೇ ಶಂಕಿಸಿ ನಡುಗಿದರು. ಕೊಲೆಯಾದ ವ್ಯಕ್ತಿ, ನಗರದ ಶ್ರೀಮಂತರಲ್ಲಿ ಬಹು ಗಣ್ಯರಾಗಿದ್ದರಲ್ಲದೆ, ತಮ್ಮ ಕಕ್ಷಿಗಾರರೂ ಆಗಿದ್ದರು. ಕೊಲೆ ಮಾಡಿದ ವ್ಯಕ್ತಿ ಯಾರೆಂದು ಸ್ಪಷ್ಟವಾಗಿತ್ತು. ಆ ವ್ಯಕ್ತಿಯ ಹೆಸರು ತಮ್ಮ ಬಳಿ ಇದ್ದ ಒಂದು ಉಯಿಲಿನಲ್ಲಿತ್ತು ; ಆ ಉಯಿಲನ್ನು ಬರೆದಾತ, ತಮ್ಮ ಪರಮ ಆಪ್ತಸಖನಾಗಿದ್ದನಲ್ಲದೆ, ನಗರದ ಸುಪ್ರಸಿದ್ಧ — ಹಾಗೂ ಉದಾರಚರಿತನಾದ ವೈದ್ಯರೂ ಆಗಿದ್ದ. ಅಂದ ಮೇಲೆ, ಈ ಪ್ರಸಂಗ ಎಷ್ಟು ವಿಷಾದಕರವೂ ದುರಂತವೂ ಆಗಿತ್ತೋ, ಅಷ್ಟೇ ಸೂಕ್ಷ್ಮವೂ ಆಗಿತ್ತು. ಆದ್ದರಿಂದ, ಇದನ್ನು ಕುರಿತ ತೀರ್ಮಾನ ಸುಲಭ ಸಾಧ್ಯವಾಗಿರಲಿಲ್ಲ. ಪರ–ವಿರೋಧಗಳನ್ನು ಬಹು ಎಚ್ಚರಿಕೆಯಿಂದ ತೂಗಿ ನೋಡಬೇಕಾದ ಸನ್ನಿವೇಶ ಒದಗಿತ್ತು. ತೊಡಕಾದ ಈ ಘಟನೆಯ ಒಂದು ತುದಿಯಲ್ಲಿ, ಸಾಹುಕಾರ್ ಹೊನ್ನಪ್ಪನವರ ಮೃತ ಕಳೇಬರ; ಇನ್ನೊಂದು ತುದಿಯಲ್ಲಿ ಭಯ, ಪರಿತಾಪ, ಪಶ್ಚಾತ್ತಾಪಗಳಿಗೀಡಾಗಿದ್ದ ಡಾಕ್ಟರ್ ಹರಿವಿಠಲ್ ; ಇವರಿಬ್ಬರೊಡನೆಯೂ ತಮ್ಮ ವೈಯಕ್ತಿಕ ಸಂಬಂಧವಿತ್ತು. ಆದ್ದರಿಂದ, ತಾವೊಬ್ಬರೇ ಮಾಡುವ ಯಾವ ತೀರ್ಮಾನವೂ, ತಮ್ಮ ವೈಯಕ್ತಿಕ ಬಾಂಧವ್ಯದ ಪ್ರಭಾವಕ್ಕೊಳಗಾಗದೆ ಇರುವುದೂ, ನಿಷ್ಪಕ್ಷಪಾತವಾಗಿರುವುದೂ, ಮಾನವೀಯವಾಗಿ ಅಸಾಧ್ಯವೆಂದು ತೋರಿತು–ಲಾಯರಿಗೆ. ಈ ಘಟನೆಯ ಪಾತ್ರದೊಡನೆ ಯಾವ ವೈಯಕ್ತಿಕ ಸಂಬಂಧವಿರದ–ಸಮಸ್ಯೆಯನ್ನು ಕೇವಲ ನಿರ್ಲಿಪ್ತತೆಯಿಂದ ವಿಮರ್ಶಿಸಬಲ್ಲ–ಇನ್ನೊಬ್ಬನ ಸಲಹೆ, ಈ ಸಂದರ್ಭದಲ್ಲಿ ಲಾಯರಿಗೆ ಅವಶ್ಯಕವಾಗಿ ಕಂಡಿತು. ಆ ಇನ್ನೊಬ್ಬರು ರಹಸ್ಯವನ್ನು ಕಾಪಾಡಬಲ್ಲ, ನಂಬಿಕೆಗರ್ಹನಾದ ಮನುಷ್ಯನಾಗಿರಬೇಕು. ಇದಕ್ಕೆ ಕಾಳಿಂಗ ಶರ್ಮನೇ ಸರಿಯಾದ ಮನುಷ್ಯನೆಂದು ಅವರು ಮನಸ್ಸಿನಲ್ಲೇ ತೀರ್ಮಾನಿಸಿಕೊಂಡರು. ಕಾಳಿಂಗ ಶರ್ಮ, ಶಂಕರರಾಯರಿಗೆ ಸಹಾಯಕನಾಗಿ ಕೆಲಸಮಾಡುತ್ತಿದ್ದ ಒಬ್ಬ ಲಾಯರು. ಅವರ ಬಳಿ ಕೆಲಸಮಾಡುತ್ತಿದ್ದ ನಾಲ್ಕಾರು ಲಾಯರುಗಳ ಪೈಕಿ, ಕಾಳಿಂಗ ಶರ್ಮನೇ ಹಿರಿಯವನಾಗಿ, ಒಂದು ರೀತಿಯಲ್ಲಿ, ಅವರ ಪಟ್ಟ ಶಿಷ್ಯನಾಗಿದ್ದ. ಆತನಿಗೆ ಸುಮಾರು ನಲವತ್ತು ವರ್ಷಗಳ ವಯಸ್ಸು.

ಬ್ಯಾರಿಸ್ಟರ್ ಶಂಕರರಾಯರು ತಮ್ಮ ನೂರಾರು ವ್ಯವಹಾರಗಳಲ್ಲಿ, ಕಾಳಿಂಗ ಶರ್ಮನನ್ನು ತಮ್ಮ ಅಂತರಂಗಕ್ಕೆ ತೆಗೆದುಕೊಂಡಷ್ಟು ಮತ್ಯಾರನ್ನೂ ತೆಗೆದುಕೊಂಡಿರಲಿಲ್ಲ. ತಮ್ಮ ವೃತ್ತಿಯ ಅನೇಕ ರಹಸ್ಯ ವ್ಯವಹಾರಗಳಿಗೆ ಅವರು ಶರ್ಮನನ್ನು ಉಪಯೋಗಿಸಿಕೊಂಡಿದ್ದರು. ಆದರೆ, ತಮ್ಮ ಬಳಿ ಇದ್ದ ವಿಠಲ್–ರವರ ಉಯಿಲಿನ ವಿಷಯವನ್ನು ಕುರಿತು, ಅವರು ಕಾಳಿಂಗ ಶರ್ಮನೊಡನೆ ಇದುವರೆಗೆ ಚರ್ಚಿಸಿರಲಿಲ್ಲ. ಇದಕ್ಕೆ ಮುಖ್ಯವಾಗಿ, ಅದರ ವಿಷಯ ಚರ್ಚಿಸುವುದು ಏನೂ ಇಲ್ಲದಿದ್ದದ್ದೇ ಕಾರಣವಾಗಿತ್ತು. ಆ ಉಯಿಲು ವಿಚಿತ್ರವಾಗಿತ್ತೇ ಹೊರತು, ಚರ್ಚಾಸ್ಪದವಾಗಿರಲಿಲ್ಲ. ಆದರೆ, ಈಗ ಸಾಹುಕಾರ್ ಹೊನ್ನಪ್ಪನವರು ಕೊಲೆಯಾಗಿ— ಹರಿವಿಠಲರವರ ಉಯಿಲಿನಲ್ಲಿ ಅವರ ಆಸ್ತಿಪಾಸ್ತಿಗಳೆಲ್ಲಕ್ಕೂ ಉತ್ತರಾಧಿಕಾರಿಯಾಗಿ ನಿಯುಕ್ತನಾಗಿದ್ದ ಕಾಮೇಶ ಗುಪ್ತ ಕೊಲೆಪಾತಕನಾಗಿದ್ದ ಕಾರಣ, ಕೊಲೆಯ ಪ್ರಸಂಗ, ಉಯಿಲಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿತ್ತು. ಈಗ ಅವರ ಕೈಯಲ್ಲಿ, ಕೊಲೆಪಾತಕನ ಕೈಬರಹವೆಂದೇ ಹೇಳಲಾದ ಒಂದು ಪತ್ರವಿತ್ತು. ಕಾಳಿಂಗ ಶರ್ಮ ಹಸ್ತಾಕ್ಷರ ಪರೀಕ್ಷಣದಲ್ಲಿ ಹೆಚ್ಚಿನ ವ್ಯಾಸಂಗಮಾಡಿ ಪ್ರವೀಣನಾಗಿದ್ದದ್ದು ಶಂಕರರಾಯರಿಗೆ ತಿಳಿದಿತ್ತು. ಆದ್ದರಿಂದ ಅವರು ಪತ್ರವನ್ನೇ ಅವನಿಗೆ ತೋರಿಸಿ ಅವನ ಅಭಿಪ್ರಾಯವನ್ನು ಪಡೆಯುವ ಆಲೋಚನೆ ಮಾಡಿದರು.

ಆ ಸಂಜೆ ತಮ್ಮ ಆಫೀಸಿಗೆ ಕೆಲಸಕ್ಕೆ ಬಂದಿದ್ದ ಕಾಳಿಂಗ ಶರ್ಮನನ್ನು ಶಂಕರರಾಯರು ತಮ್ಮೊಡನೆ ರಾತ್ರಿಯ ಭೋಜನಕ್ಕೆಂದು ಉಳಿಸಿಕೊಂಡರು.

ರಾತ್ರಿ ಊಟವಾದ ಮೇಲೆ ಇಬ್ಬರೂ, ಶಂಕರರಾಯರ ಆಫೀಸು ಕಟ್ಟಡಕ್ಕೆ ಹೋಗಿ, ಅಲ್ಲಿ ಬೈಠಕುಖಾನೆಯಲ್ಲಿ ಕುಳಿತು ತಾಂಬೂಲ ಸೇವಿಸತೊಡಗಿದರು. ಶಂಕರರಾಯರು ಒಂದು ಚುಟ್ಟ ಹಚ್ಚಿಕೊಂಡು ಹೊಗೆ ಎಳೆಯುತ್ತ, "ಹುಂ ! ಹೊನ್ನಪ್ಪನವರ ಕೊಲೆ ಎಂಥಾ ಅನ್ಯಾಯ ಶರ್ಮಾ !"

— ಎಂದರು.

"ಆಹಾ ! ಏನಡ್ಡಿ ರಾಯರೇ ! ಈ ಕೊಲೆ ಇಡೀ ನಗರವನ್ನ ಅಲ್ಲೋಲ ಕಲ್ಲೋಲ ಮಾಡಿಬಿಟ್ಟಿದೆ !" — ಎಂದ, ಕಾಳಿಂಗ ಶರ್ಮ.

"ಅದರಲ್ಲಿ ಆಶ್ಚರ್ಯವಿಲ್ಲ ಶರ್ಮ. ನಮ್ಮ ಈ ನಗರದಲ್ಲಿ ಅವರಿಂದ ಉಪಕೃತವಾಗದ ಒಂದು ಸಾರ್ವಜನಿಕ ಸಂಸ್ಥೆಯಿಲ್ಲ. ಅವರ ಬಳಿಗೆ ಸಹಾಯಕ್ಕೆ ಹೋದವರು ಬರಿಗೈಲಿ ವಾಪಸಾದ್ದಿಲ್ಲ. ನನಗೆ ಇದರಲ್ಲಿ ಹೆಚ್ಚಿನ ವಿಷಾದವೇನೆಂದರೆ, ಎಷ್ಟೋ ಬಾರಿ, ನನ್ನ ಮಿತ್ರರಾದ ಡಾ॥ ಹರಿವಿಠಲ್‌ರವರು, ನಮ್ಮ ಈ ನಗರದಲ್ಲಿ, ಅತ್ಯಾಧುನಿಕ ವೈಜ್ಞಾನಿಕ ಸಲಕರಣೆಗಳಿಂದ ಕೂಡಿದ ಒಂದು ಭಾರಿ ಆಯುರ್ವೇದ ಸಂಶೋಧನಾ

ಕೇಂದ್ರವನ್ನು ಸ್ಥಾಪಿಸುವುದರ ವಿಷಯ ಚರ್ಚಿಸಿದ್ದರು. ನಾನು ಈ ವಿಷಯವನ್ನು ಸಾಹುಕಾರ್ ಹೊನ್ನಪ್ಪನವರೊಡನೆ ಚರ್ಚಿಸಿದೆ. ಕೇಂದ್ರದ ಸ್ಥಾಪನೆಗೆ ಹತ್ತು ಲಕ್ಷರೂಪಾಯಿ ಅಂದಾಜಾಗಿತ್ತು. ಸಾಹುಕಾರರು ಅರ್ಧ ಹಣವನ್ನು ತಾವು ಕೊಡೋದಾಗಿಯೂ, ಉಳಿದ ಅರ್ಧವನ್ನು ಸರ್ಕಾರದಿಂದ ಕೊಡಿಸೋದಾಗಿಯೂ ವಾಗ್ದಾನ ಮಾಡಿದ್ದರು. ಅಷ್ಟರಲ್ಲೇ ಈ ದುರ್ಘಟನೆ ನಡೆದು ಹೋಯಿತು" — ಎಂದರು, ಲಾಯರು.

"ಹುಂ ! ಹೊನ್ನಪ್ಪನವರ ವಾಗ್ದಾನ-ಎಂದರೆ, ಕೈಗೆ ಬಂದ ಹಾಗೇ ! ಅಂಥಾದ್ದು, ಯಾವನೋ ಕೊಲೆಪಾತಕನ ದೆಸೆಯಿಂದ ಬಾಯಿಗಿಲ್ಲವಾದ್ದು ಬಹಳ ಶೋಚನೀಯ, ರಾಯರೇ. ಈ ಲೋಕದಲ್ಲಿ ಶತ್ರುಗಳ್ಯಾರೂ ಇದ್ದಿರಲಾರದಂಥಾ ಮನುಷ್ಯನನ್ನು ಕೊಂದ ಆ ಕಾಮೇಶ ಗುಪ್ತ ನಿಜವಾಗಿಯೂ ಹುಚ್ಚನೇ ಇರಬೇಕು ! ನಗರದಲ್ಲೆಲ್ಲಾ ಅವನ ಮಾತೇ ಆದರೂ, ಆಸಾಮಿ ಮಾತ್ರ-ಗಾಳಿಯಲ್ಲಿ ಹೊಗೆ ತೂರಿಹೋದ ಹಾಗೆ ಮಾಯವಾಗಿ ಬಿಟ್ಟಿದ್ದಾನೆ ! ಆಹಾ ! ಗುಪ್ತ ಅಂದರೆ-ಗುಪ್ತನೇ ಆಗಿದ್ದಾನೆ ! ! " — ಎಂದ, ಕಾಳಿಂಗಶರ್ಮ.

"ಅಂದಹಾಗೇ ಶರ್ಮ, ಈ ರಾತ್ರಿ ಒಂದು ಉದ್ದೇಶದಿಂದ ನಿನ್ನನ್ನು ಉಳಿಸಿಕೊಂಡೆ."

"ನಾನೂ ಏನೋ ಇರಬೇಕೂಂತ ಊಹಿಸಿದ್ದೆ ; ಏನು ಸಮಾಚಾರ, ರಾಯರೇ ?"

"ಕಾಮೇಶ ಗುಪ್ತನ-ಅಂದರೆ, ಈ ಸಂದರ್ಭದಲ್ಲಿ ಕೊಲೆಗಾರನ — ಕೈ ಬರವಣಿಗೇದು —ಅಂತ ಹೇಳಲಾದ ಒಂದು ಪತ್ರ ನನ್ನ ಕೈಸೇರಿದೆ. ಆ ಪತ್ರಾನ ನಿನಗೆ ತೋರಿಸಿ ನಿನ್ನ ಸಲಹೆ-ಅಭಿಪ್ರಾಯ ಪಡೀಬೇಕೂಂತ ಇದ್ದೇನೆ-ಶರ್ಮಾ. ಆದರೆ, ಮೊದಲು ಒಂದು ಮಾತು-ನಿನಗೆ ಹೇಳೋದು ಅಗತ್ಯವಿರದಿದ್ರೂ- ಹೇಳಬೇಕಾಗಿದೆ; ಏನೂಂದ್ರೆ, ಇದರ ವಿಷಯ ನಮ್ಮಿಬ್ಬರಲ್ಲೇ ಇರತಕ್ಕದ್ದು, ಗೊತ್ತಾಯ್ತೋ ? ನಾನು ಏಕೆ ಹೀಗೆ ಹೇಳ್ತೀನಿ ಅನ್ನೋದು, ಕಾಗದ ನೋಡಿದರೆ ನಿನಗೇ ಗೊತ್ತಾಗುತ್ತೆ. ಮುಖ್ಯವಾಗಿ ನಾನು ಹೇಳಿದ ಪತ್ರ, ನನಗೆ ದಿಕ್ಕುತೋಚದ ಹಾಗೆ ಮಾಡಿಬಿಟ್ಟಿದೆ. ಎಷ್ಟೇ ಲಘುವಾಗಿ ನೋಡಲು ಪ್ರಯತ್ನಪಟ್ಟರೂ, ಈ ಪತ್ರದಲ್ಲಿ ತೀರ ಅವಲಕ್ಷಣವಾದ ವ್ಯವಹಾರದ ದುರ್ನಾತ, ಹೇಸಿಗೆಯನ್ನುಂಟುಮಾಡೋ ಹಾಗಿದೆ — ಶರ್ಮಾ ! ನೀನೂ ನೋಡು ಅದನ್ನ. ಹಸ್ತಾಕ್ಷರದ ವಿಮರ್ಶೆ ನಿನಗೆ ಸಂಬಂಧಪಟ್ಟದ್ದು ತಾನೇ"

—ಎಂದು, ಲಾಯರು ಎದ್ದು ಹೋಗಿ, ತಮ್ಮ ಆಫೀಸು ಕೊಠಡಿಯಿಂದ ಒಂದು ಪತ್ರವನ್ನು ತಂದು, ಶರ್ಮನ ಕೈಗೆ ಕೊಟ್ಟರು. ಅವನು ಪತ್ರವನ್ನು ಕೆಲವು ಕ್ಷಣಗಳವರೆಗೆ ಬಹು ಆಸಕ್ತಿಯಿಂದ ಸೂಕ್ಷ್ಮವಾಗಿ ಪರೀಕ್ಷಿಸಿ, ಅನಂತರ ರಾಯರ ಕಡೆ ನೋಡಿ,

"ಉಹುಂ ! ರಾಯರೇ, ನಾನು ಹೇಳಿದ್ದು ತಪ್ಪು....."

— ಎನ್ನುವಷ್ಟರಲ್ಲೇ, ಲಾಯರು ಕುತೂಹಲದಿಂದ,

"ಏನು — ಶರ್ಮಾ ?" — ಎಂದು ಕೇಳಿದರು.

"ಕೊಲೆ ಮಾಡಿದ್ದ ಆ ಗುಪ್ತ ಹುಚ್ಚನಿರಬೇಕು-ಅಂದದ್ದು. ಅವನು ಹುಚ್ಚನಾಗಿದ್ದರೆ, ಬಹಳ ಜಾಣಹುಚ್ಚನಾಗಿರಬೇಕು-ರಾಯರೇ ! ಬರವಣಿಗೆ ಸ್ವಲ್ಪ ವಿಲಕ್ಷಣವಾಗಿದೆ-ನಿಜ; ಆದರೆ ಅದು ಹುಚ್ಚಿನ ಲಕ್ಷಣವಲ್ಲ-ಖಂಡಿತ ಅಲ್ಲ" ಎಂದು ಒತ್ತಿ ಹೇಳಿದ, ಶರ್ಮ.

"ವಿಲಕ್ಷಣವಾಗಿರೋದು ಬರವಣಿಗೆ ಒಂದೇ ಅಲ್ಲ-ಶರ್ಮಾ, ಬರೆದವನೂ ವಿಲಕ್ಷಣ ಮನುಷ್ಯ-ತೀರ ವಿಲಕ್ಷಣ ಮನುಷ್ಯ; ಅವನ ಆಕಾರ-ರೂಪ-ಗುಣ ಎಲ್ಲ ವಿಲಕ್ಷಣವಾಗಿವೆ !"—ಎಂದರು, ಶಂಕರರಾಯರು.

ಈ ಸಮಯಕ್ಕೆ ಸರಿಯಾಗಿ ಒಬ್ಬ ಸೇವಕ ಪ್ರವೇಶಿಸಿ,

"ಡಾಕ್ಟರು ವಿಠಲರಾಯರ ಕಡೆಯಿಂದ ಈ ಕಾಜ್ಗ ಬಂತು ಬುದ್ಧೀ"

— ಎಂದು ಹೇಳಿ, ಲಾಯರಿಗೆ ಒಂದು ಕವರನ್ನು ಒಪ್ಪಿಸಿ ಹೊರಟುಹೋದ. ಶಂಕರರಾಯರು ಕವರಿನೊಳಗಿದ್ದ ಪತ್ರವನ್ನು ತೆಗೆದು ಓದಿ-ಹುಬ್ಬು ಗಂಟಿಕ್ಕಿದರು.

"ಏನು ಸಮಾಚಾರ ರಾಯರೇ ? ಈ ಪತ್ರಕ್ಕೆ ಸಂಬಂಧಪಟ್ಟದ್ದಾದರೆ-"

"ಉಹುಂ, ಅಂಥಾದ್ದೇನಿಲ್ಲ — ಶರ್ಮ , ಊಟಕ್ಕೆ ಆಹ್ವಾನ-ಅಷ್ಟೆ"

"ಆಹ್ವಾನ ಅಚ್ಚಿನಲ್ಲಿದೆಯೋ ಕೈ ಬರವಣಿಗೇದೋ ?"

"ಕೈ ಬರವಣಿಗೇಲಿದೆ; ಯಾಕೆ — ನೀನು ಅದನ್ನು ನೋಡಬೇಕೇನು ?"

"ನಿಮ್ಮ ಆಕ್ಷೇಪಣೆ ಇಲ್ಲದಿದ್ದರೆ-ಒಂದು ಕ್ಷಣ-ಅಷ್ಟೆ "

ಶಂಕರರಾಯರು ಡಾ॥ ವಿಠಲ್‌ರವರ ಆಹ್ವಾನ ಪತ್ರಿಕೆಯನ್ನು ಅವನ ಕೈಗೆ ಕೊಟ್ಟರು. ಶರ್ಮ, ಎರಡು ಪತ್ರಗಳನ್ನೂ ಅಕ್ಕಪಕ್ಕದಲ್ಲಿಟ್ಟುಕೊಂಡು, ಹಲವು ಕ್ಷಣಗಳವರೆಗೆ, ಎರಡರ ಮೇಲೂ ದೃಷ್ಟಿಯನ್ನು ಚಲಿಸುತ್ತ, ಬಹು ಎಚ್ಚರಿಕೆಯಿಂದ ಹೋಲಿಸಿ ಪರೀಕ್ಷಿಸಿದ, ಅನಂತರ, ಎರಡು ಪತ್ರಗಳನ್ನೂ ಲಾಯರಿಗೆ ವಾಪಸು ಕೊಡುತ್ತ,

"ಬಹಳ ಸ್ವಾರಸ್ಯವಾಗಿವೆ-ಬಹಳ-ಬಹಳ ಸ್ವಾರಸ್ಯವಾಗಿವೆ ! —ಪತ್ರಗಳು, ರಾಯರೇ !"

— ಎಂದ. ಲಾಯರು ತಲೆ ಬಗ್ಗಿಸಿಕೊಂಡು, ಹಲವು ಕ್ಷಣಗಳವರೆಗೆ, ಮೌನದಿಂದ ತಮ್ಮಲ್ಲೇ ಬಹು ತೀವ್ರವಾಗಿ ಚರ್ಚಿಸಿ, ಅನಂತರ ತಟ್ಟನೆ ತಲೆ ಎತ್ತಿ ಶರ್ಮನನ್ನು ನೋಡುತ್ತ ,

"ಶರ್ಮ, ಎರಡು ಪತ್ರಗಳನ್ನೂ ಯಾಕೆ ಹೋಲಿಸಿ ನೋಡಿದೆ-ಹೇಳು ?"

— ಎಂದರು.

"ಒಳ್ಳೇದು, ಹೇಳ್ತೇನೆ ಕೇಳಿ ರಾಯರೇ ; ಸುಮ್ಮನೆ ನೋಡಿದರೆ ಎರಡೂ ಬೇರೆ ಬೇರೆ ಕೈಗಳು ಬರೆದಂತೆ ತೋರುತ್ತವೆ. ಆದರೆ, ಅದು ನಿಜವಲ್ಲ."

"ಅಂದರೆ ?"

"ಎರಡರಲ್ಲೂ ಒಂದು ವಿಶಿಷ್ಟ ರೀತಿಯ ಹೋಲಿಕೆ ಇದೆ, ರಾಯರೇ. ಒಂದರಲ್ಲಿ ಕಾಣುವ ಅನೇಕ ಸೂಕ್ಷ್ಮ ಲಕ್ಷಣಗಳು, ಇನ್ನೊಂದರಲ್ಲೂ ಇಣುಕುತ್ತಿವೆ. ಅಕ್ಷರಗಳ ರೀತಿಯನ್ನು ನೋಡಿದರೆ, ಒಂದು, ಪ್ರಯತ್ನಪೂರ್ವಕವಾಗಿ ಮರಸುವ ಉದ್ದೇಶದಿಂದ ಬರೆದಿದ್ದು, ಇನ್ನೊಂದು ಆ ಉದ್ದೇಶವಿಲ್ಲದೆ ಸ್ವಭಾವವಾಗಿ ಬರೆದದ್ದು -ಅನ್ನೋದು ಸ್ಪಷ್ಟವಾಗುತ್ತೆ."

"ಶರ್ಮಾ , ನಿನ್ನ ಮಾತು ನಿಜವಾದರೆ, ಇದು ಬಹಳ ವಿಚಿತ್ರ !"

"ಎರಡೂ ನಿಜ — ರಾಯರೇ."

"ಯಾವ ಎರಡು ?"

"ನನ್ನ ಮಾತು-ನಿಮ್ಮ ಅಭಿಪ್ರಾಯ !"

"ಸರಿ, ಶರ್ಮ-ಈ ಪತ್ರದ ವಿಷಯ ಯಾರೊಡನೆಯೂ ಬಾಯಿ ಬಿಡೋದಿಲ್ಲಾ-ಅನ್ನೋದು, ಮತ್ತೂ ಸ್ಪಷ್ಟವಾಯಿತಲ್ವೇ ?"

— ಎನ್ನುತ್ತ , ಶಂಕರರಾಯರು ಎದ್ದರು.

"ಹೌದು ರಾಯರೇ, ಹೌದು-ಸಂದೇಹವಿಲ್ಲ"

— ಎನ್ನುತ್ತ , ಕಾಳಿಂಗಶರ್ಮನೂ ಎದ್ದ.

ಕಾಳಿಂಗ ಶರ್ಮ ಹೊರಟುಹೋಗಿ, ಲಾಯರು ಒಬ್ಬರೇ ಆದ ಕೂಡಲೆ, ಅವರು ಆ ಪತ್ರವನ್ನು ತಮ್ಮ ಆಫೀಸಿನ ಕಬ್ಬಿಣದ ಪೆಟ್ಟಿಗೆಯ ತೀರ ಒಳಗಿನ ಖಾನೆಯಲ್ಲಿಟ್ಟು ಬೀಗ ಹಾಕಿದರು. ಆ ಕ್ಷಣದಿಂದ ಮುಂದೆ ಎಂದೂ ಆ ಪತ್ರ ತನ್ನ ಸ್ಥಳವನ್ನು ಬಿಟ್ಟು ಕದಲಲಿಲ್ಲ. ಪತ್ರವನ್ನು ಇಡುವಾಗ ಶಂಕರರಾಯರಿಗೆ ಒಂದು ಯೋಚನೆ ಬಂತು ; ಏನು ? ಒಬ್ಬ ಕೊಲೆಪಾತಕನಿಗೆ ಶಾಮೀಲಾಗಿ, ಅವನಿಗೋಸ್ಕರ ಹರಿವಿಠಲ ಫೋರ್ಜರಿ ಮಾಡುವುದೇ ! — ಎಂದು. ಈ ಯೋಚನೆ ಬಂದ ಕ್ಷಣದಲ್ಲಿ ಶಂಕರರಾಯರ ನಾಡಿಗಳ ರಕ್ತವೆಲ್ಲ ಹೆಪ್ಪು ಗಟ್ಟಿದಹಾಗಾಯಿತು.

## ೬. ಡಾಕ್ಟರ್ ಜಗನ್ನಾಥ್ - ರವರ ವಿಚಿತ್ರಾನುಭವ

ದಿನಗಳು ಉರುಳಿಹೋದವು. ಧರ್ಮಸಿಂಧು ಸಾಹುಕಾರ್ ಹೊನ್ನಪ್ಪನವರ ಕ್ರೌರ್ಯಪೂರ್ವಕ ಹತ್ಯೆ ಸಾರ್ವಜನಿಕ ಆಘಾತವೆಂದು ಪರಿಗಣಿತವಾಗಿ, ಹಾಹಾಕಾರವೆದ್ದಿತು. ಕೊಲೆಗಡುಕನ ಪತ್ತೆಗೆ ಸಹಸ್ರಾರು ರೂಪಾಯಿಗಳ ಬಹುಮಾನ ಕೊಡಲ್ಪಡುವುದೆಂದು, ಸರ್ಕಾರದಿಂದಲೂ ಖಾಸಗಿಯವರಿಂದಲೂ ಪ್ರಕಟನೆಗಳೂ-ಪ್ರಸಿದ್ಧ ಪತ್ರಿಕೆಗಳೂ ಹೊರಟವು. ಅವನ ಪತ್ತೆಗೆ, ಸಾರ್ವಜನಿಕರಲ್ಲಿ ನೂರಾರು ಮಂದಿ, ಹಿಂದೆಂದೂ ಇಲ್ಲದ ರೀತಿಯಲ್ಲಿ ಪೊಲೀಸಿನವರೊಡನೆ ಉತ್ಸಾಹದಿಂದ ಸಹಕರಿಸಲು ಮುಂದೆ ಬಂದರು. ಹಂತಕನ ಫೋಟೋ ಒಂದು ಇಲ್ಲದ್ದು, ಅವರ ಪತ್ತೆ-ತರದೂದಿಗೆ ಬಹು ದೊಡ್ಡ ಕೊರತೆಯಾಗಿತ್ತು. ಅಂತೂ, ಅನೇಕ ದಿನಗಳು ಕಳೆದರೂ, ಕಾಮೇಶ ಗುಪ್ತನ ಕಥೆ ಅವರ ಪಾಲಿಗೆ ಬಿಸಿಲ್ಗುದುರೆಯಾಗಿ ಪರಿಣಮಿಸಿತು. ಯಾವ ಜಾಡನ್ನು ಹಿಡಿದು ಮುಂದುವರಿದರೂ ಅದು, ನೀರಿನ ಮೇಲೆ ಎಳೆದ ಗೆರೆಯಂತೆ, ಬಹು ಬೇಗ ಮಾಯವಾಗಿಬಿಡುತ್ತಿತ್ತು. ಕೊನೆಯಲ್ಲಿ ಕೇಳುತ್ತಿದ್ದುದು- ಭಗ್ನಮನೋರಥರಾದ ಪೊಲೀಸು ಅಧಿಕಾರಿಗಳು ಕಡಿಯುತ್ತಿದ್ದ ಹಲ್ಲುಗಳ ಕಟಕಟ ಶಬ್ದ ಮಾತ್ರ! ಒಟ್ಟಿನಲ್ಲಿ ಹೇಳೋದಾದರೆ, ಪೊಲೀಸಿನವರಿಗೆ ಅತ್ಯವಸರವಾಗಿ ಬೇಕಾಗಿದ್ದ ಕಾಮೇಶ ಗುಪ್ತ ಮಹಾಶಯ-

ತಾಯಿಯೊಬ್ಬಳ ಹೊಟ್ಟೆಯಲ್ಲಿ ಹುಟ್ಟಿಯೇ ಇರಲಿಲ್ಲವೇನೋ ಎಂದು ಶಂಕಿಸುವ ಮಟ್ಟಿಗೆ-ಎಲ್ಲರ ಕಣ್ಣಿಗೂ ಮಣ್ಣೆರಚಿ ಮಾಯವಾಗಿಬಿಟ್ಟಿದ್ದ !

ಕಾಮೇಶ ಗುಪ್ತನ ಹಿಂದಿನ ಚರಿತ್ರೆಯ ವಿಷಯದಲ್ಲಿ ಸಾಧ್ಯವಾದಷ್ಟು ಪೂರ್ಣವಾದ ತನಿಖೆ ನಡೆಯಿತು. ಅದರಿಂದ ತಿಳಿದುಬಂದ ಎಲ್ಲ ಅಂಶಗಳೂ ಕಳಂಕಪೂರ್ಣವಾಗಿದ್ದವು. ತೀರ ನಿರ್ಲಜ್ಜವೂ-ಅತಿ ನೀಚವೂ ಆದ ಅವನ ವ್ಯಭಿಚಾರಗಳು; ಘೋರವಾದ ಅವನ ಕ್ರೌರ್ಯದಾಹ; ಅಕಾರಣವಾಗಿ ಕೆರಳುವ ಅವನ ಸುಲಭ ಕೋಪ; ಅವನಷ್ಟೇ ವಿಷಯಲಂಪಟರೂ, ನಾಚಿಕೆಗೆಟ್ಟವರೂ ಆದ ಅವನ ಸಹವಾಸಿಗಳು; ಅವನ ಕೊಳಕುತನ; ಅವನ ಅಸಹ್ಯಜೀವನ, ಅವನ ವಿಷಯವಾಗಿ ಸಾರ್ವತ್ರಿಕವಾದ ವಿದ್ವೇಷ—ಇವುಗಳನ್ನು ಕುರಿತು, ನೂರಾರು ಕಥೆಗಳು ಪುಂಖಾನುಪುಂಖವಾಗಿ ಈಚೆಗೆ ಬಂದವು. ಆದರೆ, ಅವು ಪೊಲೀಸಿನವರ ಕೈಮೇಲಿದ್ದ ಪ್ರಸಕ್ತ ಘಟನೆಗೆ ಸಂಬಂಧಿಸದೆ-ದೂರ ದೂರದ ವಿಷಯಗಳಾಗಿದ್ದವು. ಅವನ ಪತ್ತೆಗೆ ಸಹಾಯಕವಾಗುವಂತಹ ಒಂದು ಪಿಸುಮಾತು ಸಹ ಎಲ್ಲೂ ಕೇಳಿಸಲಿಲ್ಲ.

ಕೊಲೆಯಾದ ದಿನ ಮುಂಜಾನೆಯಲ್ಲಿ, ಕಾಮೇಶ ಗುಪ್ತ , ಕಾಮಾಟಿಪುರಂ-ನಲ್ಲಿದ್ದ ತನ್ನ ಮನೆಯನ್ನು ಬಿಟ್ಟು ಹೊರಟ ಕ್ಷಣದಿಂದ, ಗುರುತಿಲ್ಲದಂತೆ ಅಳಿಸಿಹೋಗಿದ್ದ. ಬ್ಯಾರಿಸ್ಟರ್ ಶಂಕರರಾಯರು, ಕಾಲಕ್ರಮದಲ್ಲಿ-ತಮ್ಮ ಮನಸ್ಸಿನ ಗಾಢವಾದ ಭೀತಿ-ಶಂಕೆಗಳಿಂದ ಬಹುಮಟ್ಟಿಗೆ ಚೇತರಿಸಿಕೊಂಡು-ಸ್ವಸ್ಥಚಿತ್ತರಾಗಿ, ತಮ್ಮ ವೃತ್ತಿಗೆ ಮನಗೊಡುವಂತಾ ಯಿತು.

ಧರ್ಮಸಿಂಧು ಹೊನ್ನಪ್ಪನವರ ಕೊಲೆಗೆ ಯಥಾರ್ಥವಾದ ಪರಿಹಾರವೆಂದರೆ, ಕೊಲೆಗಡುಕನ ಪತ್ತೆ , ಶಿಕ್ಷೆ — ಎನ್ನುವುದು ನಿಜವಾದರೂ, ಈ ಸಂದರ್ಭದಲ್ಲಿ , ಕಾಮೇಶ ಗುಪ್ತ ಕಣ್ಮರೆಯಾದದ್ದು, ಬೇರೊಂದು ದೃಷ್ಟಿಯಿಂದ ಒಳ್ಳೆಯದೇ ಆಯಿತೆಂದೂ-ಶಂಕರರಾಯರು ಯೋಚಿಸಿದರು. ಮಾನವನ ಎಲ್ಲ ದುರ್ಗುಣಗಳ ಭಂಡಾರವಾಗಿದ್ದ ಕಾಮೇಶ ಗುಪ್ತನ ಸಹವಾಸ ಮತ್ತು ಅವನ ಪ್ರಭಾವದಿಂದ, ತಮ್ಮ ಮಿತ್ರರಾದ ಹರಿವಿಠಲ್ ರವರು ಸದ್ಯ ಮುಕ್ತರಾದರಲ್ಲಾ—ಎಂದು, ಅವರಿಗೆ ಸಂತೋಷವೂ-ಸಮಾಧಾನವೂ ಆಯಿತು.

ಹೊನ್ನಪ್ಪನರವ ಕೊಲೆಯ ದುರ್ಘಟನೆ ನಡೆದು, ಕಾಮೇಶ ಗುಪ್ತ ಸುಳುವಿಲ್ಲ ದಂತೆ ಪರಾರಿಯಾದ ಕ್ಷಣದಿಂದ, ಡಾ॥ ಹರಿವಿಠಲ್‌ರವರ ಜೀವನ ಕ್ರಮ ಮಾರ್ಪಾಟು ಹೊಂದಿತ್ತು. ಅಂದಿನಿಂದ, ಅವರ ಜೀವನಕಥೆಯ ಬಹು ಕಹಿಯಾದ ಅಧ್ಯಾಯ ಮುಗಿದು, ಹೊಸ ಹಾಗೂ ಮಧುರವಾದ ಅಧ್ಯಾಯ ಪ್ರಾರಂಭವಾಗಿತ್ತು. ಕೆಲವು ವರ್ಷಗಳಿಂದ, ಬಹು ಹತ್ತಿರದ ಗೆಳೆಯರಿಂದಲೂ ಆದಷ್ಟು ದೂರವಾಗಿ, ಬಹುಮಟ್ಟಿಗೆ ಏಕಾಂತದ ರಹಸ್ಯದಲ್ಲಿರುತ್ತಿದ್ದ ಡಾಕ್ಟರು, ತಮ್ಮ ಏಕಾಂತವಾಸವನ್ನು ಬಿಟ್ಟು ಈಚೆಗೆ ಬಂದು, ಗೆಳೆಯರೊಡನೆ ಪೂರ್ವದಂತೆಯೇ ವಿಶ್ವಾಸದಿಂದ ಬೆರಯತೊಡಗಿದ್ದರು. ಅವರ ಮನೆಗಳಲ್ಲಿ ಆದರದ ಅತಿಥಿಯಾಗತೊಡಗಿದ್ದರು ; ಅವರನ್ನು ಆದರದಿಂದ ತಮ್ಮಲ್ಲಿಗೆ ಬರಮಾಡಿಕೊಂಡು, ಮುಕ್ತಹಸ್ತದಿಂದ ಸತ್ಕರಿಸತೊಡಗಿದ್ದರು. ದಾನ-ಉಪಕಾರಗಳಿಗೆ ಹೆಸರುಗಳಿಸಿದ್ದ ಅವರು ಧಾರ್ಮಿಕ ವಿಷಯಗಳಲ್ಲೂ ಶ್ರದ್ಧೆವಹಿಸ ತೊಡಗಿದ್ದರು. ತಮ್ಮ ಪುಸ್ತಕ ಭಂಡಾರಕ್ಕೆ ವಿವಿಧ ಧರ್ಮಗಳ ಹಲವು ಗ್ರಂಥಗಳನ್ನು ಸೇರಿಸಿಕೊಂಡರು. ಹಿಂದೆ ತಮ್ಮ ವಿದ್ಯದ ಸಂಶೋಧನೆಯಲ್ಲೇ ಸದಾ ನಿರತರಾಗಿದ್ದ ವರು, ಈಗ ಅದನ್ನು ಹೆಚ್ಚುಕಡಿಮೆ ಬಿಟ್ಟೇಬಿಟ್ಟು, ವೃತ್ತಿಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿ, ತಮ್ಮ ಬಳಿಗೆ ಬರುವ ರೋಗಿಗಳಿಗಾಗಿ, ವಿಶ್ರಾಂತಿಯೆಂಬುದನ್ನು ಕಾಣದೆ, ದುಡಿಯತೊಡಗಿದರು. ತಮ್ಮ ವೈದ್ಯವೃತ್ತಿಯನ್ನು ಜೀವನೋಪಾಯಕ್ಕಿಂತ ಮಿಗಿಲಾಗಿ ಸೇವೆಯೆಂದು ನಡೆಸತೊಡಗಿದ ಅವರ ಅಗತ್ಯ ಜನರಿಗೆ ದಿನೇದಿನೇ ಹೆಚ್ಚಾಗಿ, ಡಾಕ್ಟರು ದಿನದ ಹೆಚ್ಚುಕಾಲ ಮನೆಯಿಂದ ಹೊರಗೇ ಇರುವಂತಾಯಿತು. ಈ ಎಲ್ಲ ಮಾರ್ಪಾಡುಗಳಿಂದ, ಅವರ ಮುಖದಲ್ಲಿ ಸಾತ್ವಿಕ ತೇಜಸ್ಸು ಅರಳಿದಂತೆ ತೋರುತ್ತಿತ್ತು. ಅವರು ಈ ರೀತಿ, ಹೊಸಬಾಳನ್ನು ಪ್ರಾರಂಭಿಸಿ, ಶಾಂತಿ-ಸೌಖ್ಯ-ಸ್ನೇಹ—ಆದರಣೆಗಳನ್ನನುಭವಿಸುತ್ತ , ಎರಡು ತಿಂಗಳ ಮೇಲಾಗಿತ್ತು.

ಆಗ ಜನವರಿ ತಿಂಗಳ ಪ್ರಾರಂಭ. ಆ ತಿಂಗಳ ೮ನೇ ತಾರೀಕಿನ ದಿನ ರಾತ್ರಿ, ಡಾ॥ ವಿಠಲ್‌ರವರು ತಮ್ಮ ಮನೆಯಲ್ಲಿ ಒಂದು ಸಣ್ಣ ಭೋಜನ ಕೂಟವನ್ನೇರ್ಪಡಿಸಿ ದ್ದರು. ಅದಕ್ಕೆ ಬ್ಯಾರಿಸ್ಟರ್ ಶಂಕರರಾಯರೂ, ಡಾ॥ ಜಗನ್ನಾಥ್-ರವರೂ ಆಹ್ವಾನಿತ ರಾಗಿದ್ದರು. ಡಾಕ್ಟರ್ ವಿಠಲ್‌ರವರು, ಇವರಿಬ್ಬರೊಡನೆ, ಹಿಂದೆ ಅಗಲಲಾರದ ಗೆಳೆಯರಾಗಿದ್ದಾಗ ಯಾವ ಸಲಿಗೆ ಸೌಜನ್ಯಗಳಿಂದ ವರ್ತಿಸುತ್ತಿದ್ದರೋ, ಇಂದೂ ಅವರ ಅತಿಥೇಯರಾಗಿ ಹಾಗೇ ವರ್ತಿಸಿದರು. ಈ ಭೋಜನಕೂಟ ನಡೆದ ಮೇಲೆ, ಅದೇ ತಿಂಗಳ ೧೨ ಮತ್ತು ೧೪ನೇ ತಾರೀಕುಗಳಲ್ಲಿ, ಶಂಕರರಾಯರು ವಿಠಲ್‌ರವರನ್ನು ಭೇಟಿಯಾಗಲು ಅವರ ಮನೆಗೆ ಹೋಗಿದ್ದಾಗ, ಅವರಿಗೆ ಡಾಕ್ಟರ ಮನೆಯ ಪ್ರವೇಶ ದೊರಕಲಿಲ್ಲ. "ಡಾಕ್ಟರ ಮೈಯಲ್ಲಿ ಸ್ವಸ್ಥವಿಲ್ಲ-ಹಾಸಿಗೆಯಲ್ಲಿ ಮಲಗಿದ್ದಾರೆ—ಯಾರನ್ನೂ ಕಾಣಬಯಸುವುದಿಲ್ಲವಂತೆ"-ಎಂದು ರಂಗಪ್ಪ ತಿಳಿಸಿದ. ೧೫ನೇ ತಾರೀಕಿನ ದಿನ ಲಾಯರು,

ತಮ್ಮ ಮಿತ್ರರನ್ನು ಭೇಟಿಯಾಗಲು ಪುನಃ ಪ್ರಯತ್ನಿಸಿ ವಿಫಲರಾದರು. ಅವರ ಮನಸ್ಸು ಕಳವಳಕ್ಕೀಡಾಯಿತು. ಡಾಕ್ಟರ್ ವಿಠಲ್-ರವರ ಜೀವನ ಕ್ರಮದಲ್ಲಿ ಮಾರ್ಪಾಟಾಗಿದ್ದ ಕಳೆದ ಎರಡು ತಿಂಗಳ ಕಾಲ, ಶಂಕರರಾಯರು, ಹೆಚ್ಚು ಕಡಿಮೆ ನಿತ್ಯವೂ ತಮ್ಮ ಮಿತ್ರರನ್ನು ಭೇಟಿಯಾಗಿದ್ದರು. ಈಗ, ಇದ್ದಕ್ಕಿದ್ದಹಾಗೆಯೇ, ಒಟ್ಟಿಗೆ ಮೂರು ಸಲ ಡಾಕ್ಟರು ಅವರನ್ನು ನೋಡಲು ನಿರಾಕರಿಸಿದ್ದರು. ದೇಹಾಲಸ್ಯ—ಹತ್ತಿರದ ಗೆಳೆಯನೊಬ್ಬನನ್ನು ನೋಡಲು ನಿರಾಕರಿಸುವಂಥಾದ್ದೇನಲ್ಲ ; ಏಕಾಂತದಲ್ಲಿರಲು ದೇಹಾಲಸ್ಯ ಒಂದು ನೆವವಾಗಿರಬೇಕು---ಎಂದು ಶಂಕಿಸಿದರು, ಲಾಯರು. ತಮ್ಮ ಮಿತ್ರನಲ್ಲಿ, ಏಕಾಂತದ ರಹಸ್ಯಜೀವನದ ಬಯಕೆ ಪುನಃ ತಲೆದೋರಿದುದು, ಲಾಯರಿಗೆ ಒಂದು ಹೊಸ ಸಮಸ್ಯೆಯಾಗಿ, ಅವರ ಹೃದಯವನ್ನು ಕ್ಷೋಭೆಗೀಡುಮಾಡಿತು. ತಮ್ಮ ಮಿತ್ರರನ್ನು ಭೇಟಿಯಾಗಲು ಮೂರನೇ ಬಾರಿ ವಿಫಲವಾದ ತರುಣದಲ್ಲೇ ಲಾಯರು, ತಮ್ಮ ಸಹೋದ್ಯೋಗಿ ಕಾಳಿಂಗ ಶರ್ಮನನ್ನು ಒಂದು ರಾತ್ರಿ ಊಟಕ್ಕೆ ಕರೆದಿದ್ದರು. ಇದಾದ ಕೂಡಲೆ ಒಂದು ರಾತ್ರಿ ಅವರು, ಡಾಕ್ಟರ್ ಜಗನ್ನಾಥ್-ರವರನ್ನು ನೋಡಲು ಅವರ ಮನೆಗೆ ಹೋದರು.

ಶಂಕರರಾಯರು, ಜಗನ್ನಾಥ್-ರವರ ಮನೆಯನ್ನು ಪ್ರವೇಶಿಸಿ, ಬೈಠಕು ಖಾನೆಯಲ್ಲಿ ಕುಳಿತಿದ್ದ ಅವರನ್ನು ನೋಡಿದೊಡನೆಯೇ, ಡಾಕ್ಟರಲ್ಲಿ ಉಂಟಾಗಿದ್ದ ಆಶ್ಚರ್ಯಕರವಾದ ಬದಲಾವಣೆಯನ್ನು ಕಂಡು ಚಕಿತರಾಗಿಹೋದರು. ಮೃತ್ಯುದೇವತೆಯ ಆಹ್ವಾನ, ಅವರ ಮುಖಕ್ಕೆ ಅಂಟಿಸಿದಷ್ಟು ಸ್ಪಷ್ಟವಾಗಿತ್ತು. ಆರೋಗ್ಯದೃಢಕಾಯರಾಗಿ ಮೈತುಂಬಿಕೊಂಡು ಕೆಂಚಗಿರುತ್ತಿದ್ದ ಆ ಮನುಷ್ಯನ ಮುಖದ ಚರ್ಮವೆಲ್ಲ ಸುಕ್ಕುಬಿದ್ದು, ಬಿಳೀಬಟ್ಟೆಯ ಹಾಗೆ ಬಿಳಿಚಿಕೊಂಡುಬಿಟ್ಟಿತ್ತು. ಅವರ ಉಡುಪು ಜಳ್ಳಾಗಿದ್ದದ್ದನ್ನು ನೋಡಿದರೆ, ಅವರ ತುಂಬಿದ ಮೈಯೂ ಕರಗಿ ತೆಳ್ಳಗಾಗಿದ್ದಂತೆ ತೋರಿತು. ಅವರ ತಲೆಯಲ್ಲಿನ ಕೂದಲು ಇನ್ನೂ ಹೆಚ್ಚಾಗಿ ಉದುರಿ, ಬಟ್ಟದಲೆ ದೀಪದ ಬೆಳಕಿನಲ್ಲಿ ಹೊಳೆಯುತ್ತಿತ್ತು. ಅವರನ್ನು ನೋಡಿದರೆ, ಇದ್ದಕ್ಕಿದ್ದಹಾಗೆಯೇ ಹಲವು ವರ್ಷಗಳ ವಯಸ್ಸಾದಂತೆ ಭಾಸವಾಗುತ್ತಿತ್ತು. ಆದರೂ, ಲಾಯರ ಗಮನವನ್ನು ಹಿಡಿದು ನಿಲ್ಲಿಸಿದ್ದು-ಡಾಕ್ಟರ್ ಜಗನ್ನಾಥ್-ರವರಲ್ಲಿ ಉಂಟಾಗಿದ್ದ ಹಟಾತ್ತನೆಯ ದೈಹಿಕ ಶೈಥಿಲ್ಯದ ಚಿನ್ಹೆಗಳಿಗಿಂತ ಹೆಚ್ಚಾಗಿ-ದಿಗ್ಭ್ರಾಂತರಾಗಿದ್ದಂತೆ ಅವರು ನೋಡುತ್ತಿದ್ದ ರೀತಿ ಮತ್ತು ಅವರ ವಿಲಕ್ಷಣ ನಡೆವಳಿಕೆ. ಇವೆರಡೂ, ಅವರ ಮನಸ್ಸಿನ ಗಂಭೀರವಾದ ಆಳದಲ್ಲಡಗಿದ್ದ ಯಾವುದೋ ಭಯಾತಿರೇಕದ ಸಾಕ್ಷಿ ಗಳಾಗಿದ್ದವು.

ಡಾಕ್ಟ್ರರು ಮರಣಭೀತಿಗೊಳಗಾಗಿರುವುದು ಅಸಂಭವನೀಯವಾಗಿತ್ತು. ಆದರೂ ಶಂಕರರಾಯರಿಗೆ ಆ ಅನುಮಾನವುಂಟಾಯಿತು. ಅವರು ತಮ್ಮಲ್ಲಿ ತಾವೇ —'ಆಹಾ ! ಇವನು ಡಾಕ್ಟರು ; ತನ್ನ ದೇಹಸ್ಥಿತಿಯ ಅರಿವಿನಿಂದ, ಇವನಿಗೆ ಇನ್ನು ಹೆಚ್ಚು ದಿನಗಳು ಬದುಕಿರಲಾರೆನೆಂದು ತಿಳಿದಿರಬೇಕು; ಬಹುಶಃ ಈ ತಿಳಿವು, ಇವನಿಗೆ ದುರ್ಭರವಾಗಿದೆ !' –ಎಂದುಕೊಂಡರು.

ಆದರೂ ಲಾಯರು, ಅವರಲ್ಲಿ ಕಂಡ ವಿಪರೀತ ಲಕ್ಷಣಗಳನ್ನು ಕುರಿತು ಸ್ವಭಾವವಾಗಿಯೇ ಪ್ರಸ್ತಾಪಿಸಿ, ಅವರ ದೇಹ ಸ್ಥಿತಿಯನ್ನು ವಿಚಾರಿಸಿದಾಗ, ಡಾಕ್ಟರು ನಿರುದ್ವಿಗ್ನರಾಗಿ, ದೃಢನಂಬಿಕೆ ಹೊಂದಿದವರ ಧೋರಣೆಯಿಂದ ಉತ್ತರ ಕೊಟ್ಟರು. ಲಾಯರ ಯೋಗಕ್ಷೇಮ ಪ್ರಶ್ನೆಗೆ ಅವರು,

"ಅಯ್ಯಾ ಶಂಕರ್ರಾವ್, ನನ್ನ ಜೀವನದ ಕಥೆ ಮುಗೀತಾ ಬಂದಿದೆ' '

—ಎಂದರು. ಲಾಯರು ಕೂಡಲೆ,

"ಛೆ-ಛೆ ! ಅಂಥಾದ್ದೇನಯ್ಯ ಆಗಿರೋದು ? ಮನುಷ್ಯಾಂದಮೇಲೆ ಆಲಸ್ಯ-ಗೀಲಸ್ಯ ಡಾಕ್ಟರಿಗೂ ತಪ್ಪಿದ್ದಲ್ಲ' '

—ಎಂದು ಉತ್ತರ ಕೊಟ್ಟರು.

"ಇಲ್ಲ, ಶಂಕರ್ರಾವ್ ನಿನಗೆ ಗೊತ್ತಿಲ್ಲ, ನನಗೆ ಭಯಂಕರವಾದ ಸಿಡಿಲು ತಾಗಿದಂತಾಗಿದೆ ! ನಾನು ಅದರಿಂದ ಎಂದಿಗೂ ಚೇತರಿಸಿಕೊಳ್ಳಲಾರೆ ! – ಅಂಥಾ ಅನಿರೀಕ್ಷಿತ ಘಾತದಿಂದ, ನನ್ನ ದೇಹ-ಮನಸ್ಸು ಎರಡೂ ಹರಿದು ಹಿಂಜಿ ಹೋಗಿವೆ, ಶಂಕರಾ ! ಇನ್ನು ಒಂದೋ ಎರಡೋ ವಾರ ಅಷ್ಟೆ ; ಅಷ್ಟರಲ್ಲಿ ನನ್ನ ಕಥೆ ಮುಗಿದುಹೋಗಿಬಿಡುತ್ತೆ , ಮುಗಿದೇ ಹೋಗಿಬಿಡುತ್ತೆ ! .......ಹುಮ್ ! ಹುಟ್ಟಿದುದಕ್ಕೆ ವ್ಯಸನವಿರಲಿಲ್ಲ ; ಇಷ್ಟು ದಿನ ಬದುಕಿದ್ದಕ್ಕೆ ವ್ಯಸನವಿರಲಿಲ್ಲ. ನನ್ನ ಜೀವನ ಸುಖಮಯವಾಗಿ, ಸಂತೋಷಕರವಾಗಿತ್ತು. ಇದುವರೆಗೂ ಚೆನ್ನಾಗಿಯೇ ಬಾಳಿದೆ. ಆದರೆ, ಮಾನವ ಜೀವನವನ್ನು ಪೂರ್ಣವಾಗಿ ತಿಳಿದದ್ದೇ ಆದರೆ, ಬದುಕಿಗಿಂತ ಸಾವೇ ಮೇಲಾಗಿ ತೋರಿ, ನಾವು ಸಂತೋಷವಾಗಿ ಮನುಷ್ಯಜನ್ಮದಿಂದ ಪಾರಾಗಬಯಸುತ್ತೇವೆಯೇನೋ-ಎಂದು, ಒಮ್ಮೊಮ್ಮೆ ಯೋಚಿಸುತ್ತೇನೆ, ಶಂಕರಾ !"

— ಎಂದು, ಜಗನ್ನಾಥ್-ರವರು ಭಾರವಾದ ದನಿಯಲ್ಲಿ ಹೇಳಿ ಸುಮ್ಮನಾದರು. ಲಾಯರು ಡಾಕ್ಟರ ಮಾತಿಗೆ ಉತ್ತರ ಕೊಡದೆ,

“ವಿಠಲ್ —ಸಹ ಅಸ್ವಸ್ಥನಾಗಿರೋ ಹಾಗಿದೆ, ಜಗನ್ನಾಥ್. ನೀನು ಈಚೆಗೆ ಅವನನ್ನು ಭೇಟಿಯಾಗಿದ್ದೆಯೇನು ?” — ಎಂದು ಕೇಳಿದರು.

ಜಗನ್ನಾಥ್‌ರವರು ಕೂಡಲೆ ಉತ್ತರ ಕೊಡಲಿಲ್ಲ. ಅವರ ಮುಖದ ವ್ಯಥೆಯ ಮುದ್ರೆ ಬದಲಾಯಿಸಿತು; ಕಣ್ಣುಗಳು ಅರಳಿ ಹೊಳೆದವು; ಹುಬ್ಬುಗಳು ಗಂಟಿಕ್ಕಿದವು; ಬಲತೋಳನ್ನೆತ್ತಿ, ಹಸ್ತವನ್ನು ಕಂಪಿಸುತ್ತ , ಅಸ್ಥಿರವಾದರೂ, ಎತ್ತಿದ ಸ್ವರದಲ್ಲಿ ಹೇಳಿದರು:

“ಉಹುಮ್ ! ಇನ್ನು ವಿಠಲನ ಮಾತು ಸಾಕು, ಶಂಕರಾ ! ಇನ್ನುಮೇಲೆ ನಾನು, ಅವನನ್ನು ನೋಡೋದಕ್ಕಾಗಲಿ, ಅವನ ವಿಷಯ ಕೇಳೋದಕ್ಕಾಗಲಿ, ಎಳ್ಳಷ್ಟೂ ಇಷ್ಟಪಡೋದಿಲ್ಲ ! ನನ್ನ ಅವನ ಸ್ನೇಹ, ಸಂಪೂರ್ಣವಾಗಿ ಕಡಿದುಹೋಗಿದೆ ! ನನ್ನ ಮಟ್ಟಿಗೆ ಅವನು ಮೃತಪ್ರಾಯ, ಗೊತ್ತಾಯ್ತೇ ? ಆದ್ದರಿಂದ, ಇತಃಪರಃ ನನ್ನ ಮುಂದೆ ಅವನ ವಿಷಯಾನ ಎತ್ತಬೇಡಾಂತ ನಿನ್ನನ್ನು ಪ್ರಾರ್ಥಿಸಿಕೊಳ್ತೇನೆ, ಶಂಕರ್ರಾವ್.”

“ಛೆ ! ಛೆ !–ಅನ್ಯಾಯ–ಅನ್ಯಾಯ !”—ಎಂದು, ಶಂಕರರಾಯರು ಸ್ವಲ್ಪ ಕಾಲ ಮೌನವಾಗಿದ್ದು , ಅನಂತರ ಜಗನ್ನಾಥ್–ರವರನ್ನುದ್ದೇಶಿಸಿ,

“ಜಗನ್ನಾಥ್, ನಿಮ್ಮಿಬ್ಬರ ನಡುವೆ ಪುನಃ ಏನು ನಡೆದಿದೆಯೋ ನಾನು ಕಾಣೆ. ಆದರೂ, ನನ್ನಿಂದ ಏನಾದರೂ ಸಹಾಯ ಆಗೋದಿದ್ದರೆ, ಹೇಳು–ಸಂತೋಷದಿಂದ ಮಾಡ್ತೇನೆ. ಯಾಕೇಂತೀಯೋ, ನಾವು ಮೂರು ಮಂದೀನೂ ಬಾಲ್ಯದಿಂದ ಒಟ್ಟಿಗೆ ಆಡಿ–ಓಡಿ–ಬೆಳೆದ ಹಳೇ ಗೆಳೆಯರು. ಇನ್ನು ಹೊಸ ಗೆಳೆಯರನ್ನು ಮಾಡಿಕೊಳ್ಳೋ ಕಾಲ ಕಳೆದುಹೋಗಿದೆ. ಹಿಂದಿನಿಂದ ಬೆಳೆದು ಬಂದದ್ದನ್ನು ಉಳಿಸಿಕೊಳ್ಳೋ ಪ್ರಯತ್ನಮಾಡಬೇಕು–ಅಲ್ವೇ ?” —ಎಂದರು.

“ನನಗೆ ತೋರೋಮಟ್ಟಿಗೆ, ಯಾರ ಸಹಾಯವೂ ಕೆಲಸಕ್ಕೆ ಬಾರದಷ್ಟು ಕೈ ಮೀರಿಹೋಗಿದೆ, ನಮ್ಮ ಒಡಕು–ಶಂಕರ್ರಾವ್. ಬೇಕಾದರೆ ನೀನು ಅವನನ್ನೇ ಕೇಳಬಹುದು” — ಎಂದರು, ಡಾಕ್ಟರ್ ಜಗನ್ನಾಥ್.

“ಆ ಕೆಲಸ ಅಗತ್ಯವಾಗಿ ಮಾಡ್ತಿದ್ದೆ , ಜಗನ್ನಾಥ್; ಆದರೆ ಏನು ಮಾಡಲಿ, ಅವನು ನನ್ನನ್ನು ನೋಡೋಕೇ ಇಷ್ಟಪಡ್ತಾ ಇಲ್ಲ. ಮೂರು ದಿನ ಹೋದೆ —ಅವನನ್ನು ನೋಡೋಣಾಂತ; ಮೂರು ದಿನವೂ, ದೇಹಾಲಸ್ಯದ ನೆವ ಹೇಳಿ–ನೋಡೋದಕ್ಕಾಗೋ ಲ್ಲಾಂತ ಆಳಿನ ಕೈಲಿ ಹೇಳಿಕಳಿಸಿಬಿಟ್ಟ—ನನಗೆ ಬಹಳ ಆಶ್ಚರ್ಯವಾಯಿತು” — ಎಂದರು, ಶಂಕರರಾಯರು.

“ಈ ವಿಷಯ ಕೇಳಿ ನನಗೇನೂ ಆಶ್ಚರ್ಯವಾಗ್ತಾ ಇಲ್ಲ , ಶಂಕರ್. ಒಂದು ದಿನ–ಅಂದರೆ, ನಾನು ಸತ್ತ ಮೇಲೆ ಒಂದು ದಿನ, ನೀನು, ಏನು ನಡೆದಿದೆಯೋ ಅದರ ಸರಿ–ತಪ್ಪುಗಳನ್ನ ಬಹುಶಃ ತಿಳಿಯುವಂತಾದೀತು–ಅಷ್ಟೇ ಹೊರತು, ನಾನು ಮಾತ್ರ ಹೇಳಲಾರೆ. ಇನ್ನು ಅವನ ಮಾತು ಸಾಕು, ಶಂಕರ್ರಾವ್–ದೇವರಾಣೆ ಸಾಕು ! ಬೇರೆ ಏನಾದರೂ ಮಾತಿದ್ದರೆ, ಬೆಳಗತನಕ ಹೀಗೇ ಕೂತ್ಕೊಂಡು ಮಾತಾಡೋಣ. ನಿನಗೆ ಅವನ ವಿಷಯ ಹೊರತು ಮಾತಾಡೋಕೆ ಬೇರೆ ವಿಷಯವಿಲ್ದೇ ಇದ್ದರೆ, ನೀನು ಈ ಕೂಡಲೆ ಹೊರಟುಬಿಡೂಂತ, ಇದೋ ನಿನ್ನ ಕಾಲಿಗೆ ಬಿದ್ದು ಕೇಳಿಕೊಳ್ತೇನೆ, ಶಂಕರ್ರಾವ್ ! ಏಕೆಂದರೆ, ನೀನು ಅವನ ಮಾತೆತ್ತಿದರೆ, ನನಗೆ, ಸಾಯ್ತಿರೋನ ಕತ್ತು ಹಿಸುಕಿದ ಹಾಗಾಗುತ್ತೆ ! ನನ್ನ ಸಾವಿನ ಸೂತಕ ನಿನಗೂ ಅಂಟಬೇಕೇ ?” —ಎಂದರು, ಡಾಕ್ಟರ್ ಜಗನ್ನಾಥ್–ರವರು.

ಶಂಕರರಾಯರು ಆ ರಾತ್ರಿ ಮನೆ ತಲುಪಿದ ಕೂಡಲೆ, ಡಾ॥ ಹರಿವಿಠಲ್‌ರವರಿಗೆ ಒಂದು ಪತ್ರವನ್ನು ಬರೆದು ಮಾರನೇ ದಿನದ ಟಪಾಲಿಗೆ ಹಾಕಿದರು. ಅದರಲ್ಲಿ ಅವರು, ತಮ್ಮನ್ನು ಆತ ತನ್ನ ಮನೆಯನ್ನು ಪ್ರವೇಶಿಸಗೊಡದೆ ಇದ್ದದ್ದಕ್ಕೂ, ಮೂರು ಸಲ ಬಂದರೂ ಭೇಟಿಯಾಗಲು ಇಷ್ಟಪಡದೇ ಇದ್ದದ್ದಕ್ಕೂ ತಮ್ಮ ವಿಷಾದವನ್ನು ಸೂಚಿಸಿ, ಡಾಕ್ಟರ್ ಜಗನ್ನಾಥ್ ರವರೊಡನೆ ಅವರ ಸ್ನೇಹ ಕಡಿದುಹೋದ ವಿಷಾದ ಪ್ರಸಂಗಕ್ಕೆ ಕಾರಣವೇನೆಂದು ಕೇಳಿ ಬರೆದಿದ್ದರು. ಈ ಕಾಗದ ಬರೆದು ಹಾಕಿದ ಮಾರನೇ ದಿನದ ಮೊದಲ ಟಪಾಲಿಗೆ, ಡಾ॥ವಿಠಲ್–ರವರಿಂದ ಒಂದು ದೀರ್ಘವಾದ ಉತ್ತರ ಬಂತು. ಉತ್ತರದ ಒಕ್ಕಣೆ ಬಹುಮಟ್ಟಿಗೆ ಕರುಣಾಜನಕವಾಗಿತ್ತು; ಮತ್ತು ಕೆಲವು ಕಡೆಗಳಲ್ಲಿ ಮಾತಿನ ಧಾಟಿ, ಅರ್ಥವೇ ಆಗದಷ್ಟು ಜಟಿಲವೂ ಗಂಭೀರವೂ ಆಗಿತ್ತು. ಆದರೆ ಒಂದು ವಿಷಯ ಸ್ಪಷ್ಟವಾಗಿತ್ತು : ಡಾ॥ ಜಗನ್ನಾಥ್‌ರವರೊಡನೆ ಉಂಟಾಗಿದ್ದ ಅವರ ಜಗಳಕ್ಕೆ ಪರಿಹಾರವಿರಲಿಲ್ಲ ; ಅದು ಎಂದಿಗೂ ಬಗೆಹರಿಯದ ವ್ಯಾಜ್ಯವಾಗಿತ್ತು. ಕಾಗದದಲ್ಲಿ ಡಾಕ್ಟರ್ ವಿಠಲ್‌ರವರು,

“ನಾನು ನಮ್ಮ ಹಳೆಯ ಸ್ನೇಹಿತ ಜಗನ್ನಾಥನನ್ನು ಆಕ್ಷೇಪಿಸುವುದಿಲ್ಲ– ದೂಷಿಸುವುದೂ ಇಲ್ಲ. ಆದರೆ ನಾವು–ಅಂದರೆ, ನಾನು–ಅವನು, ಪರಸ್ಪರ ಇನ್ನೆಂದೆಂದಿಗೂ ಭೇಟಿಯಾಗಕೂಡದು —ಎಂದು ಅವನ ಅಭಿಪ್ರಾಯ. ಅವನ ಈ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಮ್ಮತಿಯಿದೆ. ನಾನು ಇನ್ನುಮೇಲೆ, ತೀರ

ಏಕಾಂತವಾದ ಜೀವನವನ್ನು ನಡೆಯಿಸಿಕೊಂಡಿರಲು ಇಷ್ಟವುಳ್ಳವನಾಗಿದ್ದೇನೆ—ಶಂಕರ್ರಾವ್. ಇನ್ನುಮೇಲೆ—ಅನೇಕ ವೇಳೆ—ನನ್ನ ಮನೆಯ ಬಾಗಿಲು ನಿನಗೂ ತೆರೆಯಲ್ಪಡದಿದ್ದರೆ, ನೀನು ಆಶ್ಚರ್ಯಪಡಕೂಡದು, ಅಸಮಾಧಾನ ಪಡಕೂಡದು ಮತ್ತು ಈ ಕಾರಣದಿಂದ ನನ್ನ ಸ್ನೇಹ ವಿಶ್ವಾಸ-ಗೌರವಗಳ ವಿಷಯಗಳಲ್ಲಿ ಸಂದೇಹವನ್ನೂ ಪಡಕೂಡದು. ಶಂಕರಾ, ಅನಿವಾರ್ಯವಾಗಿ ನನ್ನ ಬದುಕು, ಘೋರಾಂಧಕಾರವಾದ ಯಾವುದೋ ಹಾದಿಯಲ್ಲಿ ಸಾಗತೊಡಗಿದೆ; ನೀನು ಅದಕ್ಕೆ ಅಡ್ಡಿ ಬರುವ ಯೋಚನೆ ಮಾಡದೆ-ಬಿಟ್ಟುಕೊಡಬೇಕು.

"ಪ್ರಿಯಮಿತ್ರನೇ, ಬಾಯಿ ಬಿಟ್ಟು ಹೇಳಿಕೊಳ್ಳಲಾರದಂತಹ ಘೋರವಾದ ಶಿಕ್ಷೆಯನ್ನೂ, ನಿಶ್ಚಯವಾದ ಗಂಡಾಂತರವನ್ನೂ ನನ್ನ ತಲೆಯ ಮೇಲೆ ನಾನೇ ಎಳೆದುಕೊಂಡಿದ್ದೇನೆ. ನನ್ನ ಪಾಪಕ್ಕೆ ಪಾರವಿಲ್ಲ-ನನ್ನ ಸಂಕಟಕ್ಕೂ ಪಾರವಿಲ್ಲ. ಪಾಪಿಗಳಲ್ಲಿ ಅಗ್ರಗಣ್ಯನಾಗಿರುವ ನಾನು ಸಂಕಟಪಡುವುದರಲ್ಲೂ ಅಗ್ರಗಣ್ಯನಾಗಿದ್ದೇನೆ ! ಆಹಾ ! ನನ್ನ ಅನುಭವಕ್ಕೆ ಬಂದಂತೆ, ಎದೆಯ ರಕ್ತವನ್ನೆಲ್ಲಾ ಇಷ್ಟರಮಟ್ಟಿಗೆ ಹಿಂಡಿ ಬಸಿದು ನಿರ್ವೀರ್ಯವನ್ನಾಗಿ ಮಾಡುವಂತಹ, ವರ್ಣನಾತೀತವಾದ ಭೀತಿಗಳಿಗೂ ಸಂಕಟಗಳಿಗೂ, ಈ ಭೂಮಿಯ ಮೇಲೆ ಸ್ಥಳವಿದೆಯೆಂಬುದು—ನನ್ನ ಕಲ್ಪನೆಗೆ ಮೀರಿದ ವಿಷಯವಾಗಿತ್ತು ! ಶಂಕರಾ, ನನ್ನ ಪಾಲಿನ ವಿಧಿ ನನ್ನನ್ನು, ಯಾವ ದುರ್ಗಮ್ಯವೂ ಘೋರಾಂಧಕಾರವೂ ಆದ ಹಾದಿಯಲ್ಲಿ ದೂಡುತ್ತಿದೆಯೋ ಆ ಹಾದಿಯ ದುರ್ಭರತೆಯನ್ನು ಹಗುರ ಮಾಡಲು, ನೀನು ಈ ಸಂದರ್ಭದಲ್ಲಿ ಮಾಡಬಹುದಾದ ಒಂದೇ ಒಂದು ಸಹಾಯವೆಂದರೆ-ನಿನ್ನ ಈ ನಿರ್ಭಾಗ್ಯ ಸ್ನೇಹಿತನ ಮೌನವನ್ನು ಗೌರವಿಸುವುದು"—ಎಂದು ಬರೆದಿದ್ದರು.

ಶಂಕರರಾಯರಿಗೆ, ಈ ಪತ್ರವನ್ನೋದಿ ಅತ್ಯಾಶ್ಚರ್ಯವಾಯಿತು, ಕಳವಳವೂ ಆಯಿತು. ಡಾ॥ ವಿಠಲ್‌ರವರಿಗೆ ಕಾಮೇಶ ಗುಪ್ತನ ವಿಷಪ್ರಾಯವಾದ ಸಂಪರ್ಕ ತಪ್ಪಿ , ಅವನೊಡನೆ ಅವನ ಕರಾಳ ಪ್ರಭಾವವೂ ಮಾಯವಾಗಿ, ಅವರು ಪೂರ್ವದಂತೆ ತಮ್ಮವೃತ್ತಿಯಲ್ಲಿ ನಿರತರಾಗಿ, ಎಂದಿಗಿಂತ ಸೌಜನ್ಯದಿಂದಲೂ ಸೇವಾ ಮನೋಭಾವದಿಂದಲೂ-ಔದಾರ್ಯದಿಂದಲೂ ಕೆಲಸ ಮಾಡತೊಡಗಿದ್ದರು. ಕೇವಲ ಒಂದು ವಾರದ ಹಿಂದೆ, ಇನ್ನು ಮೇಲೆ ಅವರ ಭವಿಷ್ಯವು ಸುಖ-ನೆಮ್ಮದಿ-ಸಂತೋಷಗಳಿಂದ ಕೂಡಿರುವುದೆಂದು ಭಾವಿಸಬಹುದಾಗಿತ್ತು. ಸರ್ವರಿಂದಲೂ ಗೌರವಿಸಲ್ಪಡುವಂತಹ ಇಳಿವಯಸ್ಸನ್ನು ಅವರು ಕಾಣುವ ಪೂರ್ಣ ಭರವಸೆಯಿತ್ತು. ಆದರೆ ಈಗ ? ಈಗ ಹಟಾತ್ತನೆ, ಅವರ ಬಹುಕಾಲದ ಒಂದು ಸ್ನೇಹ, ಅವರ ಮನಸ್ಸಿನ ಶಾಂತಿ-ಹಾಗೂ ಅವರ ಇಡೀ ಜೀವನದ ಸ್ಥಿತಿ-ಗತಿ-ಎಲ್ಲವೂ ಭಗ್ನವಾಗಿದ್ದಂತೆ ತೋರಿತು. ಅವರಲ್ಲಿ ಆಗಿದ್ದ ಇಷ್ಟು ದೊಡ್ಡ ಮತ್ತು ಹಟಾತ್ತನೆಯ ಮಾರ್ಪಾಟಿನಲ್ಲಿ, ಅವರ ಬುದ್ಧಿವೈಕಲ್ಯದ ಸೂಚನೆ ಕಂಡುಬರುತ್ತಿತ್ತು. ಆದರೆ, ಡಾ॥ಜಗನ್ನಾಥ್-ರವರು ಆಡಿದ ಮಾತುಗಳನ್ನೂ ಅವರ ನಡವಳಿಕೆಗಳನ್ನೂ ನೆನಸಿಕೊಂಡಾಗ, ಶಂಕರರಾಯರು, ಇದಕ್ಕೆ ಇನ್ನೂ ಗಂಭೀರವಾದ ಏನೋ ರಹಸ್ಯವು ಕಾರಣವಾಗಿರಬೇಕೆಂದು ಯೋಚಿಸಿದರು.

* * * *

ಒಂದು ವಾರದ ತರುವಾಯ ಡಾ॥ ಜಗನ್ನಾಥ್-ರವರು ರೋಗಪೀಡಿತರಾಗಿ ಹಾಸಿಗೆ ಹಿಡಿದು ಮಲಗಿದರು. ಅಲ್ಲಿಂದ ಮುಂದೆ, ಕೇವಲ ಹದಿನೈದು ದಿನಗಳಿಗೆ ಸ್ವಲ್ಪ ಮುಂಚೆ, ರೋಗ ಬಲಿತು ಸತ್ತೂಹೋದರು.

ಶಂಕರರಾಯರು ತಮ್ಮ ಈ ಬಾಲ್ಯ ಸ್ನೇಹಿತನ ಮರಣದಿಂದ ಬಹಳ ವ್ಯಥೆಪಟ್ಟರು. ಅವರ ಶವಸಂಸ್ಕಾರಕ್ಕೆ ಹೋಗಿ ಬಂದ ದಿನ ರಾತ್ರೆ ಅವರು, ತಮ್ಮ ಆಫೀಸು ರೂಮನ್ನು ಪ್ರವೇಶಿಸಿ ಒಳಗಿನಿಂದ ಅಗಳಿ ಬೀಗ ಹಾಕಿ-ತಮ್ಮ ಮೇಜಿನ ಬಳಿ ಕುಳಿತು, ಜೇಬಿನಿಂದ ಒಂದು ಲಕ್ಕೋಟೆಯನ್ನು ತೆಗೆದು-ಮೇಜಿನ ದೀಪದ ಬೆಳಕಿನಲ್ಲಿಟ್ಟುಕೊಂಡರು. ಅದರ ಮೇಲಿನ ವಿಳಾಸ, ಮೃತಿ ಹೊಂದಿದ್ದ ಅವರ ಸ್ನೇಹಿತರು ಡಾ॥ ಜಗನ್ನಾಥ್-ರವರ ಸ್ವಂತ ಹಸ್ತಾಕ್ಷರದಲ್ಲಿದ್ದು , ಲಕ್ಕೋಟೆಯು, ಅವರ ಸ್ವಂತ ಅಂಕಿತದ ಮುದ್ರೆಯಿಂದ, ಅರಗಿನಲ್ಲಿ ಮೊಹರು ಮಾಡಲ್ಪಟ್ಟಿತ್ತು. ಲಕ್ಕೋಟೆಯ ಮೇಲೆ ಒಂದು ಕಡೆ ಕೆಂಪು ಶಾಯಿನಲ್ಲಿ,

"**ಅಂತರಂಗ ವಿಚಾರ :** ಬ್ಯಾರಿಸ್ಟರ್ ಶಂಕರರಾಯರ ಖುದ್ದು ಅವಗಾಹನೆಗೆ ಮಾತ್ರ---ಮತ್ತು ಅವರು ಓದುವ ಮೊದಲೇ ಕಾಲವಾದ ಪಕ್ಷದಲ್ಲಿ, ಇದನ್ನು **ಓದದೆ ನಾಶಮಾಡಲ್ಪಡತಕ್ಕದ್ದು**"

—ಎಂಬುದಾಗಿ, ವಿಶೇಷ ಸೂಚನೆಯಿತ್ತು. ಲಕ್ಕೋಟೆಯ ಒಳಗಿನ ಪತ್ರವನ್ನು ತೆಗೆದು ಓದಲು ಲಾಯರು ಭಯಪಟ್ಟರು. "ನಾನು ಈ ದಿನ ಒಬ್ಬ ಗೆಳೆಯನನ್ನು ಚಿತೆಗಿಟ್ಟು ಬಂದಾಯ್ತು ; ಇದರಿಂದ ಇನ್ನೊಬ್ಬನನ್ನೂ ಕಳೆದುಕೊಳ್ಳುವಂತಾದರೆ ಏನು ಗತಿ !" ಎಂದು, ಅವರು ಚಿಂತಿಸಿದರು.

ಆದರೆ, ಓದಿದರೆ ಏನೋ-ಎಂತೋ-ಎಂದು ಭಯಪಟ್ಟು ಓದದೆ ಇದ್ದರೆ, ತಮ್ಮ ಮೃತಮಿತ್ರನ ವಿಶ್ವಾಸವನ್ನು ಪಾಲಿಸಿದಂತಾಗುವುದಿಲ್ಲವೆಂದು ಬಗೆದು, ಲಕ್ಕೋಟೆಯ ಮೊಹರನ್ನು ಒಡೆದರು. ಆ ಲಕ್ಕೋಟೆಯೊಳಗೆ ಅದರಂತೆಯೇ ಮೊಹರಾದ ಇನ್ನೊಂದು ಲಕ್ಕೋಟೆಯಿತ್ತು. ಈ ಒಳ ಲಕ್ಕೋಟೆಯ ಮೇಲೆ "ಡಾಕ್ಟರ್ ಹರಿವಿಠಲ್-ರವರ ಮರಣದ ಅಥವಾ ಅವರು ಕಣ್ಮರೆಯಾಗುವ-ತನಕ ಒಡೆದು ನೋಡತಕ್ಕದ್ದಲ್ಲ" ಎಂದು ಲಿಖಿತವಿತ್ತು.

ಶಂಕರರಾಯರು ತಮ್ಮ ಕಣ್ಣುಗಳನ್ನೇ ನಂಬದಾದರು. ಕಣ್ಮರೆಯಾಗುವ ತನಕ ! -ಕಣ್ಮರೆಯಾಗುವುದು ! ! ಆ ಹುಚ್ಚು ಉಯಿಲಿನಲ್ಲಿದ್ದಂತೆ ಇಲ್ಲಿಯೂ ಪುನಃ, ಕಣ್ಮರೆಯಾಗುವ-ಎಂಬ ಮಾತು ಡಾಕ್ಟರ್ ವಿಠಲ್‌ರವರ ಹೆಸರಿಗೆ ಅಂಟಿಕೊಂಡಿತ್ತು ! ಆದರೆ ಉಯಿಲಿನಲ್ಲಿ ಅದು, ಆ ಕೇಡಿಗ ಮನುಷ್ಯ ಕಾಮೇಶ ಗುಪ್ತನ ದುರಭಿಸಂಧಿಮೂಲವಾದ ಸಲಹೆಯಿಂದ ಕಾಣಿಸಿದ ಮಾತಾಗಿತ್ತು. ಭಯಾನಕವಾದ ಅದರ ಉದ್ದೇಶ ತೀರ ಪ್ರಕಟವಾಗಿ ಕಾಣಿಸುತ್ತಿತ್ತು. ಆದರೆ, ಈಗ ಅದೇ ಮಾತು ಡಾ॥ ಜಗನ್ನಾಥ್-ರವರ ಸ್ವಹಸ್ತದಿಂದ ಬರೆಯಲ್ಪಟ್ಟಿದ್ದರೆ-ಅದರ ಅರ್ಥ ಏನಿರಬೇಕು ?

ಈಗ ಪತ್ರದ ಪಾಲಕರೂ ಧರ್ಮದರ್ಶಿಗಳೂ ಆಗಿದ್ದ ಶಂಕರರಾಯರಿಗೆ, ಒಳಲಕ್ಕೋಟೆಯ ಮೇಲಿದ್ದ ನಿಷೇಧವನ್ನು ಉಲ್ಲಂಘಿಸಿ, ಕೂಡಲೆ, ಈ ಗಂಭೀರ ರಹಸ್ಯಗಳ ತಳ ಏನೋ ಅದನ್ನು ಪರೀಕ್ಷಿಸಿಯೇ ಬಿಡಬೇಕೆಂದು ಬಲವಾದ ಕುತೂಹಲವುಂಟಾಯಿತು. ಆದರೆ ವೃತ್ತಿಗೌರವವೂ, ಮೃತಿಹೊಂದಿದ್ದ ಆತ್ಮೀಯ ಗೆಳೆಯನ ಕಡೆಯುಸಿರಿನ ವಿಶ್ವಾಸವೂ, ಅತಿ ಕಟ್ಟುನಿಟ್ಟಾದ ನಿರ್ಬಂಧಗಳಾಗಿದ್ದವು. ಆದಕಾರಣ ಆ ಲಕ್ಕೋಟೆಯೂ, ಲಾಯರ ಸ್ವಂತ ಕಬ್ಬಿಣದ ಪೆಟ್ಟಿಗೆಯ ಗುಪ್ತಖಾನೆಯ ಮೂಲೆಯಲ್ಲಿ ನಿದ್ರಿಸಬೇಕಾಯಿತು.

ಕುತೂಹಲವನ್ನು ತುಳಿದಿಡುವುದು ಒಂದು ಬಗೆಯಾದರೆ, ಅದನ್ನು ಜಯಿಸುವುದು ಬೇರೊಂದು ಬಗೆ. ಎರಡಕ್ಕೂ ಬಹಳ ವ್ಯತ್ಯಾಸವಿದೆ. ಮೊದಲನೇ ರೀತಿಯಲ್ಲಿ , ಯಾವುದಾದರೂ ದುರ್ಬಲ ಕ್ಷಣದಲ್ಲಿ ಅದಕ್ಕೆ ಬಲಿಯಾಗುವ ಸಂಭವ ಇದ್ದೇ ಇರುತ್ತದೆ. ಎರಡನೇ ರೀತಿಯಲ್ಲಿ ಆ ಭಯವಿರುವುದಿಲ್ಲ. ಶಂಕರರಾಯರು, ತಮ್ಮ ಮಿತ್ರರಾದ ಡಾ॥ ವಿಠಲ್‌ರವರಿಗೆ ಸಂಬಂಧಿಸಿದ ಆ ಲಕ್ಕೋಟೆಯನ್ನು ಓದದೆ ಹಾಗೆಯೇ ತಮ್ಮ ಕಬ್ಬಿಣದ ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿದ ಮೇಲೆ, ಜೀವಂತರಾಗಿದ್ದ ಆ ತಮ್ಮ ಸ್ನೇಹಿತರ ಸಂಗಕ್ಕೆ, ಮೊದಲಿನಷ್ಟೇ ಆತುರರಾಗಿದ್ದರೇ—ಎನ್ನುವುದು ಸಂದೇಹಾಸ್ಪದವಾಗಿತ್ತು. ಈಗ ಅವರು ತಮ್ಮ ಮಿತ್ರರಿಂದ ದೂರವಾಗಿದ್ದರೂ, ಪದೇ ಪದೇ ಅವರ ವಿಷಯವಾಗಿ, ಮೃದು ಹೃದಯದಿಂದ ಆಲೋಚಿಸುತ್ತಿದ್ದರು, ಮರುಗುತ್ತಿದ್ದರು, ವಿಷಾದಪಡುತ್ತಿದ್ದರು. ತಮ್ಮ ಮಿತ್ರನಲ್ಲಿ ಆಕ್ಷೇಪಕರವಾದ ಗುಣ ಏನಾದರೂ ಇದ್ದೀತು-ಎಂದು ಭಾವಿಸಿಕೊಳ್ಳಲೂ ಲಾಯರ ಮನಸ್ಸು ಒಪ್ಪುತ್ತಿರಲಿಲ್ಲ. ಸ್ನೇಹಿತರ ವಿಷಯದಲ್ಲಿ ಅಷ್ಟು ದಯಾರ್ದ್ರವಾಗಿತ್ತು- ಲಾಯರ ಹೃದಯ.

ಲಾಯರು ಡಾ॥ವಿಠಲ್ ರವರ ಭೇಟಿಯಾಗಲು ಮೂರು ಸಲ ಪ್ರಯತ್ನಪಟ್ಟು, ಮೂರು ಸಲವೂ, ತಮ್ಮ ಮಿತ್ರರ ಮನೆಯ ಪ್ರವೇಶಕ್ಕೂ ಅವಕಾಶ ಸಿಕ್ಕದೆ ಹೋದಾಗ ಅವರು, ಬಹುಶಃ ಮನಸ್ಸು ಹಗುರವಾಗಿ, ಸರಿ, ಒಳ್ಳೆಯದೇ ಆಯಿತು —ಎಂದುಕೊಂಡಿರ ಬೇಕು. ವಿಠಲ್‌ರವರಲ್ಲಿ ಏಕಾಂತಪ್ರಿಯತೆ ಹಟಾತ್ತನೆ ಮರುಕಳಿಸಿದ್ದು , ಲಾಯರಿಗೆ ಬಿಡಿಸಲಾಗದ ಬಹು ದೊಡ್ಡ ಸಮಸ್ಯೆಯಾಗಿತ್ತು. ಡಾಕ್ಟರ ಪರಿಸ್ಥಿತಿ ಹೀಗಿದ್ದಾಗ, ಅವರೊಡನೆ ಭೇಟಿ ಮಾತು-ಕಥೆ ಅಷ್ಟು ಹಿತಕರವಾಗಿರಲಾರದು ಎಂದು ತೋರಿ, ಭೇಟಿಯ ಅವಕಾಶ ಸಿಕ್ಕದೇ ಹೋದದ್ದಕ್ಕೆ, ವಿಷಾದಕ್ಕಿಂತ ಹೆಚ್ಚಾಗಿ ನೆಮ್ಮದಿಯನ್ನೇ ಅನುಭವಿಸಿದ್ದರು. ಭೇಟಿಯಾಗಲು ಹೋದಾಗ, ಮನೆಯ ಮುಂಬಾಗಿಲಲ್ಲೇ ನಿಂತು, ತಮ್ಮ ಮಿತ್ರರ ವಿಷಯವಾಗಿ, ಅವರ ಆಪ್ತ ಸೇವಕ ರಂಗಪ್ಪನನ್ನೇ ವಿಚಾರಿಸಿದ್ದರು. ಆದರೆ, ಅವನು ಲಾಯರಿಗೆ ಸಂತೋಷಕರವಾದ ಸುದ್ದಿ ಏನನ್ನೂ ತಿಳಿಸಲಸಮರ್ಥನಾಗಿದ್ದ. ಅವನಿಂದ ತಿಳಿದುಬಂದ ಸುದ್ದಿ ಇಷ್ಟು : ಡಾಕ್ಟರು, ಮೊದಲಿಗಿಂತಲೂ ಹೆಚ್ಚಾಗಿ ಈಗ, ಮನೆ ಹಿಂಬದಿಯ ಅಂಗಳದಾಚಿನ ಹಳೇ ಕಟ್ಟಡದಲ್ಲಿ, ಪ್ರಯೋಗಶಾಲೆಯ ಮೇಲಿನ ತಮ್ಮ ಖಾಸಾ ಕೊಠಡಿಯಲ್ಲಿ, ಸದಾ ಬಾಗಿಲು ಹಾಕಿಕೊಂಡಿರುತ್ತಿದ್ದರು. ತೀರ ನಿರುತ್ಸಾಹಿಗಳಾಗಿದ್ದಂತೆ ತೋರುತ್ತಿದ್ದರು. ಸದಾ ಮೌನವಾಗಿಯೇ ಇರುತ್ತಿದ್ದರು. ಈಚೀಚೆಗೆ, ವೃತ್ತಪತ್ರಿಕೆ-ಪುಸ್ತಕ ಇತ್ಯಾದಿಗಳ ಓದುವಿಕೆಯೂ ನಿಂತಿತ್ತು , ಅವರ ಮನಸ್ಸು , ಯಾವುದೋ ಅಗಾಧವಾದ ಚಿಂತೆಗೆ ಸಿಕ್ಕು ತೊಳಲಾಡುತ್ತಿತ್ತು.

ಲಾಯರು ಎಷ್ಟು ಸಲ ವಿಚಾರಿಸಿದರೂ ಅವರಿಗೆ, ತಮ್ಮ ಮಿತ್ರನ ವಿಷಯವಾಗಿ, ಇದೇ ತೆರನ ವಿವಿಧ ಸುದ್ದಿಗಳನ್ನು ಕೇಳಿ ಕೇಳಿ ಒಗ್ಗಿಹೋಗಿತ್ತು. ಸರಿ, ಹೋದರೆ ಭೇಟಿ ದೊರಕುವುದಿಲ್ಲ; ಆದ್ದರಿಂದ, ಅಲ್ಲಿಗೆ ಹೋಗಿ ಏನು ಪ್ರಯೋಜನ ? - ಎಂದು ತಮಗೆ ತಾವೇ ಹೇಳಿಕೊಂಡು, ತಮ್ಮ ಮಿತ್ರರ ಮನೆಗೆ ಪದೇ ಪದೇ ಹೋಗುತ್ತಿದ್ದುದನ್ನು ಕ್ರಮೇಣ ಕಡಿಮೆ ಮಾಡಿದರು.

## ೭. ಕಿಟಕಿಯಲ್ಲಿ ಕಂಡ ಘಟನೆ

ಒಂದು ಭಾನುವಾರ. ಅಂದು ಸಂಜೆ ಬ್ಯಾರಿಸ್ಟರ್ ಶಂಕರರಾಯರೂ, ಲಕ್ಷ್ಮೀಪತಯ್ಯನವರೂ, ಪದ್ಧತಿಯ ಪ್ರಕಾರ, ಗಾಳಿ ಸಂಚಾರ ಹೊರಟಿದ್ದರು. ಎಷ್ಟೋ ದಿನಗಳ ಮೇಲೆ ಪುನಃ ಅವರಿಬ್ಬರೂ, ಆಕಸ್ಮಿಕವಾಗಿ, ಆ ಹಳೇ ಬಾಗಿಲ ಕಟ್ಟಡವಿದ್ದ ಬೀದಿಯಲ್ಲಿ ಈ ದಿನವೂ ನಡೆದು ಹೋಗುತ್ತಿದ್ದರು.

ಹಳೇ ಬಾಗಿಲ ನೇರಕ್ಕೆ ಬಂದೊಡನೆಯೇ ಇಬ್ಬರೂ ಅದನ್ನೇ ದಿಟ್ಟಿಸಿ ನೋಡುತ್ತ ನಿಂತರು.

"ಆಹಾ ! ಸದ್ಯ ಕಡೆಗೂ ಆ ಹಾಳು ಕಥೆ ಮುಗೀತಲ್ಲ ! ಇನ್ನು ಕಾಮೇಶ ಗುಪ್ತನ ಆಟ ಮುಗಿದ ಹಾಗೇಂತ ಕಾಣುತ್ತೆ !" ಎಂದರು ಲಕ್ಷ್ಮೀಪತಯ್ಯ.

"ಹೌದು, ಇನ್ನು ಯಾರಿಗೂ ಅವನ ಮುಖದರ್ಶನವಾಗದೆ ಇರೋದೇ ಒಂದು ದೊಡ್ಡ ಪುಣ್ಯ — ಲಕ್ಷ್ಮೀಪತೀ !"—ಎಂದರು, ಲಾಯರು.

"ಅಲ್ಲವೇ ! ಅಲ್ಲವೇ ! ಒಂದು ಸಲ ನೋಡಿದರೆ ಸಾಕು, ಜನ್ಮಾಂತರಕ್ಕೆ ಬೆನ್ನಟ್ಟಿ ಬರೋ ಮುಖ–ಅದು !"

"ನಿಜ ನಿಜ ! ನನಗೂ ಹಾಗೇ ಅನ್ನಿಸಿತು —ಅವನನ್ನು ನೋಡಿದಾಗ !"

"ಆಹಾ ? ನೀನೂ ನೋಡಿದೆಯಾ ? ಮತ್ತೇ —ನನಗೆ ಹೇಳಲೇ ಇಲ್ಲವಲ್ಲಾ ?"

""ಹೇಳಲಿಲ್ಲವೇ ?–ಹೇಳಿದೆ ಅಂದುಕೊಂಡಿದ್ದೆ."

"ಇಲ್ಲ–ಇಲ್ಲ ; ಹೇಳು, ನಿನಗೆಲ್ಲಿ ಕಣ್ಣಿಗೆ ಬಿದ್ದ ಅವನು ?"

ಶಂಕರರಾಯರು, ತಾವು ಹೊಂಚಿ ಕಾದುದನ್ನೂ , ಕೊನೆಗೆ–ಅನೇಕ ದಿನಗಳ ಮೇಲೆ–ಅವನ ಭೇಟಿಯಾದ್ದನ್ನೂ ವಿವರಿಸಿ,

"ನೋಡು, ಲಕ್ಷ್ಮೀಪತಿ, ಅವನನ್ನು ನೋಡಿದಾಗ, ನಿನಗೆ ಏನೇನಾಯಿತು ಎಂದು ವರ್ಣಿಸಿದೆಯೋ–ಅದೆಲ್ಲ ನನಗೂ ಆಯಿತು, ಅವನ ಆ ಕೆಟ್ಟಮೋರೆ ನೋಡಿದಾಗ"— ಎಂದರು.

"ಯಾರಿಗೇ ಆಗಲಿ ಅವನ ಮುಸುಡಿ ನೋಡಿದರೆ ಹಾಗಾಗೋದು ಅನಿವಾರ್ಯ, ಶಂಕರರಾವ್. ಅಂದ ಹಾಗೆ, ಈ ಕಟ್ಟಡಾನೂ ಡಾ॥ ವಿಠಲ್–ರವರದ್ದು ಅಂತ ನನಗೆ ಗೊತ್ತೇ ಇರಲಿಲ್ಲ. ಇದು, ಆಚೆ ಚಿನಿವಾರ ಚೌಕದಲ್ಲಿರೋ ಅವರ ಮನೆಗೆ ಲಗತ್ತಾಗೇ ಇದೆ. ಇದು ಅವರ ಮನೆಗೆ ಹಿಂಭಾಗದ ಪ್ರವೇಶ–ಅಂತ ಪತ್ತೆ ಮಾಡಿದೆ"

"ಆಹಾ ! ಪತ್ತೆ ಮಾಡಿಬಿಟ್ಟೇಯಾ ?"

""ಓಹೋ ! ಮಾಡಿಬಿಟ್ಟೆ —ಶಂಕರ್ರಾವ್; ಅದಕ್ಕೆ ಸ್ವಲ್ಪಮಟ್ಟಿಗೆ ನೀನೇ ಕಾರಣ"

"ನಾನೇ ಕಾರಣ ? ಹೇಗೆ – ಹೇಗೆ ಹೇಳು ?"

"ಹೇಗೆಂದರೆ, ನಾನು ಚಕ್ಕಿನ ಮಾತು ಹೇಳ್ತಾ, ಅದರಲ್ಲಿ ರುಜುಮಾಡಿದ್ದೋರ ಹೆಸರನ್ನು ಹೇಳೋಲ್ಲಾಂದೆ. ಈ ಹಳೇ ಬಾಗಿಲ ವಿಚಾರ ನಾನು ಮುಂದೆ ವಿಚಾರಣೆ–ಗಿಚಾರಣೆ ಮಾಡ್ಲಿಲ್ವೇಂತ ನೀನು ಕೇಳಿದೆ. ಆಮೇಲೆ ಸ್ವಲ್ಪ ಹೊತ್ತು ಬಿಟ್ಟುಕೊಂಡು, ಆ ಹೆಂಗಸಿಗೆ ಢಿಕ್ಕಿ ಹೊಡೆದು ತುಳಿದನಲ್ಲಾ ಅವನ ಹೆಸರೇನೂಂತಾನೂ ಕೇಳಿದೆ. ನಾನು ಅವನ ಹೆಸರನ್ನು ನಿನಗೆ ತಿಳಿಸಿದೆ. ಕೊನೇಲಿ ನೀನು, ಅವನು ಬೀಗದ ಕೈನ ಉಪಯೋಗಿಸಿದ್ದು ನನಗೆ ಖಾತ್ರಿಯೇಂತ ಕೇಳ್ದೆ. ಆಮೇಲೆ, ನಾನು ಹೇಳ್ದೇ ಇದ್ರೂ, ಚಕ್ಕಿನಲ್ಲಿ ರುಜುಮಾಡಿದ್ದೋರ ಹೆಸರು ಗೊತ್ತಾಗಿಬಿಟ್ಟಿತ್ತು —ಅದಕ್ಕೇ ಪುನಃ ಅದನ್ನು ಕೇಳ್ಲಿಲ್ಲಾಂತ–ಅಂದೆ. ನೀನು ಬೀಗದಕೈ ವಿಷಯಾನ ಒತ್ತಿ ಕೇಳಿದ್ದೂ–ಈ ಮಾತೂ, ನನ್ನ ಪತ್ತೆಗೆ ದಾರಿ ಮಾಡಿಕೊಟ್ಟವು."

"ಸರಿ, ಹಾಗಾದರೆ ಬಾ, ಅಂಗಳದೊಳಕ್ಕೆ ಹೋಗಿ, ಆ ಪಕ್ಕಕ್ಕಿರೋ ಕಿಟಕಿಗಳ ಕಡೆ ನೋಡೋಣ, ನಿಜವಾಗಿಯೂ ಹೇಳ್ತೀನಿ ಲಕ್ಷ್ಮೀಪತಿ, ನನಗೆ ಡಾ॥ ವಿಠಲನ ವಿಷಯವಾಗಿ ಬಹಳ ಚಿಂತೆಯಾಗಿದೆ. ನಿನಗೆ ಅವನ ವಿಚಿತ್ರ ವರ್ತನೇನ ಹೇಳಿದೇನಲ್ಲ. ಸರ್ವನಾಶವಾದೋನ ಹಾಗೆ ಆಡ್ತಾ ಇದ್ದಾನೆ. ತನ್ನ ಸ್ನೇಹಿತರು ತನ್ನನ್ನು ಮರೆತಿಲ್ಲ–ಮರೆಯೋರಲ್ಲ –ಅಂತ ಗೊತ್ತಾದರೆ, ಅವನ ಮನಸ್ಸು ಸ್ವಲ್ಪ ಹಗುರವಾದೀತು" —ಎಂದರು, ಲಾಯರು.

ಇಬ್ಬರು ಗೇಟಿನ ಮೂಲಕ ಅಂಗಳವನ್ನು ಪ್ರವೇಶಿಸಿ, ಹಳೇ ಕಟ್ಟಡದ ಮಹಡಿಯಲ್ಲಿ ಕಿಟಕಿಗಳಿದ್ದ ಪಾರ್ಶ್ವಕ್ಕೆ ಹೋದರು. ಈ ವೇಳೆಗೆ ಅಂಗಳವೆಲ್ಲ, ಸುತ್ತಮುತ್ತಲ ಕಟ್ಟಡಗಳಿಂದ ನೆರಳಾಗಿದ್ದರೂ–ಇನ್ನೂ ಬೆಳಕಾಗಿತ್ತು.

ಮೂರರಲ್ಲಿ, ಮಧ್ಯದ ಕಿಟಕಿಯ ಒಂದು ಕದ ಮಾತ್ರ ತೆರೆದಿತ್ತು. ಆ ಕಿಟಕಿಯ ಸಮೀಪದಲ್ಲಿ, ಡಾ॥ ವಿಠಲ್‌-ರವರು, ಹತಾಶನಾದ ಖೈದಿಯಂತೆ, ಅಪಾರವಾದ ದುಃಖಸೂಚಕ ಮುಖಮುದ್ರೆಯುಳ್ಳವರಾಗಿ, ಗಾಳಿ ಸೇವಿಸುತ್ತ ಕುಳಿತಿದ್ದರು. ಅವರನ್ನು ಕಂಡೊಡನೆಯೇ ಲಾಯರು,

"ಓಹೋ ! ವಿಠಲ್, ಈಗ ಹೇಗಿದೆಯಯ್ಯಾ ನಿನ್ನ ದೇಹಸ್ಥಿತಿ ?"

—ಎಂದು ವಿಶ್ವಾಸದಿಂದ ಕೇಳಿದರು.

"ಅಯ್ಯೋ-ಶಂಕರ್ರಾವ್, ಏನು ಹೇಳ್ಲಿ ! ಜೀವ ಕುಗ್ಗಿಹೋಗಿದೆ—ತೀರ ಕುಗ್ಗಿ ಹೋಗಿದೆ ! ಸದ್ಯ, ದೇವರ ದಯ —ಇದು ಇನ್ನು ಹೆಚ್ಚುಕಾಲ ಹೀಗೇ ಇರೋದಿಲ್ಲ"— ಎಂದು ಬೇಸರದ ಧ್ವನಿಯಲ್ಲಿ ಉತ್ತರ ಕೊಟ್ಟರು, ಡಾ॥ ವಿಠಲ್.

"ಅಯ್ಯಾ, ಡಾಕ್ಟರಾಗಿ, ಒಳ್ಳೆ ಗಾಳಿ-ಬೆಳಕು-ವ್ಯಾಯಾಮ ಎಷ್ಟು ಆರೋಗ್ಯಕರ— ಅಂತ ನಿನಗೆ ಚೆನ್ನಾಗಿ ತಿಳಿದಿರಬೇಕು. ಅಂಥಾದ್ದರಲ್ಲಿ , ಸದಾ ಬಾಗಿಲುಗಳನ್ನು ಮುಚ್ಚಿಕೊಂಡು ಮನೇಲೇ ಕೂತಿದ್ದರೆ-ಆರೋಗ್ಯ ಉತ್ತಮವಾಗುತ್ತೆಯೇ ? ಹೊರಗೆ ಬಂದು, ಇದೋ ನಮ್ಮ ಹಾಗೆ, ಗಾಳೀಲಿ ಸ್ವಲ್ಪ ಸುತ್ತಾಡಿದರೆ ಎಷ್ಟೋ ಒಳ್ಳೇದಾಗುತ್ತೆ-ಬಾ. ಅಂದಹಾಗೆ, ವಿಠಲ್,-ಈತ ನನ್ನ ಬಂಧು-ಲಕ್ಷ್ಮೀಪತಯ್ಯ-ಅಂತ; ಲಕ್ಷ್ಮೀಪತೀ, ಅವರೇ ನನ್ನ ಹಳೇ ಸ್ನೇಹಿತರು, ಡಾ॥ ವಿಠಲ್-ಅಂತ"

—ಎಂದು ಲಾಯರು, ಇಬ್ಬರಿಗೂ ಪರಿಚಯ ಮಾಡಿಕೊಟ್ಟರು. ಇಬ್ಬರೂ ಪರಸ್ಪರ ಅಭಿನಂದಿಸಿದರು. ಅನಂತರ ಲಾಯರು,

"ಏಳಯ್ಯ-ಬಟ್ಟೆ ಹಾಕಿಕೊಂಡು-ಬಾ; ಹಾಗೇ ಸ್ವಲ್ಪ ಸುತ್ತಾಡಿಕೊಂಡು ಬರೋಣ"

— ಎಂದು, ಪುನಃ ಆಹ್ವಾನಿಸಿದರು. ಡಾಕ್ಟರು ತಲೆ ಅಲ್ಲಾಡಿಸುತ್ತ,

"ಇಲ್ಲ ಶಂಕರ್ರಾವ್, ನೀನೇನೋ ಬಹಳ ವಿಶ್ವಾಸದಿಂದ ಕರೀತಿದ್ದೀಯ; ನನಗೂ ಬಹಳ ಆಸೆಯಾಗ್ತಾ ಇದೆ. ಆದರೆ-ಉಹುಂ-ಇಲ್ಲ , ನಾನು ಹೊರಗೆ ಕಾಲಿಡೋ ಸ್ಥಿತೀಲೂ ಇಲ್ಲ, ನಿಮ್ಮನ್ನ ಒಳಗೆ ಬರಮಾಡಿಕೊಳ್ಳೋ ಸ್ಥಿತೀಲೂ ಇಲ್ಲ. ಆದ್ದರಿಂದ ದಯವಿಟ್ಟು ಕ್ಷಮಿಸಿ. ಹಾಗಿದೆ, ನನ್ನ ಅವಸ್ಥೆ. ನಾನು ಭಯಂಕರವಾದ ರೋಗಕ್ಕೆ ತುತ್ತಾಗಿದ್ದೇನೆ-ಮಿತ್ರಾ ! ಆದ್ದರಿಂದ, ಹೊರಗೆ ತಲೆಹಾಕೋದು ಬಹಳ ಅಪಾಯ; ನನ್ನ ಧೈರ್ಯವನ್ನೆಲ್ಲಾ ಪುಡಿ ಪುಡಿ ಮಾಡಿ ಹಾಕಿಬಿಟ್ಟಿದೆ —ಈ ರೋಗ" — ಎಂದರು.

"ವಿಠಲಾ, ನಾನು ಡಾಕ್ಟರಲ್ಲ—ನಿನ್ನ ರೋಗ ಏನು—ಅಂತ ತಿಳಿಕೊಳ್ಳೋ ಶಕ್ತಿ ನನಗಿಲ್ಲ. ಆದರೂ, ನಿನ್ನ ಮಾತನ್ನು ನಂಬ್ತೀನಿ ಮತ್ತು ನಿನ್ನ ಬಹಳ ಹತ್ತಿರದ ಸ್ನೇಹಿತನಾಗಿ ಕೇಳ್ತೀನಿ-ನಿನಗೆ ಚಿಕಿತ್ಸೆ ಯಾರು ಮಾಡ್ತಿದ್ದಾರೆ —ಹೇಳು ?" —ಎಂದು ಕೇಳಿದರು ಲಾಯರು.

"ನಾನೇ ಮಾಡಿಕೊಳ್ತಾ ಇದ್ದೀನಿ"

"ನೀನೇ ! —ಆಶ್ಚರ್ಯ !"

"ಯಾಕೆ ಆಶ್ಚರ್ಯ—ಶಂಕರಾ ?"

"ಡಾಕ್ಟರುಗಳು ತಮ್ಮ ಕಾಯಿಲೆಗೆ ತಾವೇ ಚಿಕಿತ್ಸೆ ಮಾಡಿಕೊಳ್ಳಲ್ಲ —ಬೇರೆ ಡಾಕ್ಟರ ಕೈಲಿ ಮಾಡಿಸಿಕೊಳ್ತಾರೇಂತ —ಕೇಳಿದ್ದೆ."

"ನಿಜ ನಿಜ, ಆದರೆ, ನನ್ನ ರೋಗಕ್ಕೆ ಚಿಕಿತ್ಸೆ ಮಾಡೋ ಅಂಥಾ ಡಾಕ್ಟರು-ಇಂಡಿಯ ಅಲ್ಲ-ಇಡೀ ಪ್ರಪಂಚದಲ್ಲೇ ! ಯಾರೂ ಇಲ್ಲ, ಶಂಕರ್ರಾವ್."

"ಆಹಾ ! ಹಾಗಾದರೆ, ಇದೆಂಥಾ ಕಾಯಿಲೆಯಯ್ಯ-ನಿಂದು ?"

"ಇದಕ್ಕೆ ಹೆಸರಿಲ್ಲ . ನನಗೆ ತಿಳಿದಿರೋಮಟ್ಟಿಗೆ, ಇದಕ್ಕೆ ತುತ್ತಾಗಿರೋನು ನಾನೊಬ್ಬನೇ-ಇಡೀ ಪ್ರಪಂಚದಲ್ಲಿ-ನಾನೊಬ್ಬನೇ ! ವಿಜ್ಞಾನಿಯಾಗಿ ಇದರ ಹುಟ್ಟು-ಬೆಳವಣಿಗೆ-ಲಕ್ಷಣ ಎಲ್ಲವನ್ನೂ ಬಲ್ಲೆ , ಶಂಕರಾ. ಆದರೆ ವೈದ್ಯನಾಗಿ, ಇದರ ವಿಷಯದಲ್ಲಿ ಬೆಳಕು ಕಂಡೆ-ಅಂದ್ಕೊಳ್ತಿದ್ದಾಗ-ಕತ್ತಲೆ ! —ಕತ್ತಲೆ ! -ಘೋರವಾದ ಕತ್ತಲೆ ಕವಿದಿದೆ-ಶಂಕರಾ ! ಆಫ್ರಿಕಾ ಖಂಡವನ್ನು 'ಡಾರ್ಕ್ ಕಾಂಟಿನೆಂಟ್' (ಕತ್ತಲು ಖಂಡ) ಅಂತ ಕರೀತಾರೆ ! ಆದರೆ-ನನ್ನ ಮಾತು ಕೇಳು-ಶಂಕರಾ, ಮನುಷ್ಯ ಅದಕ್ಕಿಂತಲೂ ಕತ್ತಲಾದ-ಕಾಳ ಕರಾಳ ಖಂಡ !!"

"ನಿನ್ನ ಮಾತುಗಳು ಒಂದಕ್ಕಿಂತ ಒಂದು ಒಗಟೆಯಾಗಿವೆ-ವಿಠಲಾ; ನನಗೆ ಅರ್ಥವೇ ಆಗ್ತಾ ಇಲ್ಲ" — ಎಂದರು ಲಾಯರು, ಹುಬ್ಬುಗಂಟಿಕ್ಕಿ.

"ಒಗಟೆ !–ಹೌದು ಒಗಟೆ !!–ಮನುಷ್ಯ ತನಗೆ ತಾನೇ ಒಗಟೆ, ಮಿತ್ರಾ ! —ಬಹುಶಃ —ಬಹು ದೊಡ್ಡ ಒಗಟೆ !!"

ಈ ಮಾತುಗಳನ್ನಾಡುತ್ತಿದ್ದಾಗ ಚಿಂತಾಕುಲವಾದ ಡಾಕ್ಟರ ಮುಖದ ಮೇಲೆ ಕ್ಷೀಣವಾದ ಮುಗುಳ್ನಗೆ ಮೂಡಿತು. ಕಡೆಯ ಮಾತನ್ನು ಉಚ್ಚರಿಸುತ್ತಿದ್ದ ಹಾಗೆಯೇ, ಇದ್ದಕ್ಕಿದಂತೆ, ಆ ಮುಗುಳ್ನಗೆಯನ್ನು ಯಾವುದೋ ಅಗೋಚರವಾದ ಕೈ ಅಳಿಸಿದಂತಾಯಿತು. ಇಡೀ ಮುಖದಲ್ಲಿ, ಉತ್ಕಟವಾದ ಭಯ —ನಿರಾಶೆ–ಸಂಕಟಗಳ ಮಿಶ್ರಭಾವ ತಲೆದೋರಿತು. ಹುಬ್ಬುಗಳು ಕುಣಿಯತೊಡಗಿದವು; ಬಿಟ್ಟ ಬಾಯಿನ ತುಟಿಗಳು ಕಂಪಿಸತೊಡಗಿದವು; ಮುಖದ ಮಾಂಸಖಂಡಗಳೆಲ್ಲ ಬಿಗಿದುಕೊಂಡವು. ಕೆಲವೇ ಕ್ಷಣಗಳಲ್ಲಿ ಇಷ್ಟೆಲ್ಲ ನಡೆದುಹೋಯಿತು. ಕೆಳಗೆ, ಲಾಯರೂ ಲಕ್ಷ್ಮೀಪತಯ್ಯನವರೂ, ಬೆಕ್ಕಸ ಬೆರಗಾಗಿ ನೋಡುತ್ತಿದ್ದಹಾಗೆಯೇ, ಡಾಕ್ಟರು ಕಿಟಕಿಯ ಬಾಗಿಲನ್ನು ರಪ್ಪನೆ ಬಡಿದು ಮುಚ್ಚಿ ಬಿಟ್ಟರು !

ಲಾಯರೂ ಅವರ ಸ್ನೇಹಿತರೂ, ಕೆಲವು ಕ್ಷಣಗಳವರೆಗೆ, ಇದ್ದಲ್ಲೇ ಬೇರು ಬಿಟ್ಟವರಂತೆ ಕದಲದೆ ನಿಂತು, ಒಬ್ಬರ ಮುಖವನ್ನೊಬ್ಬರು ನೋಡಿದರು. ಇಬ್ಬರೂ, ತಾವು ಕಂಡ ದೃಶ್ಯವನ್ನು ನೋಡಿ, ಹುಟ್ಟು ಮೂಕರಂತಾಗಿದ್ದರು. ಅವರು ಹೀಗೆ ನಿಂತಿದ್ದುದು ಅರೆ ನಿಮಿಷ–ಅಷ್ಟೆ ; ಆದರೂ ಎಷ್ಟೋ ಕಾಲ ಕಳೆದಂತೆ ಭಾಸವಾಯಿತು–ಅವರಿಗೆ. ಶಂಕರರಾಯರು ಭಾರವಾದ ನಿಟ್ಟುಸಿರು ಬಿಟ್ಟು,

"ಬಾ, ಲಕ್ಷ್ಮೀಪತಿ, ಹೋಗೋಣ"— ಎಂದರು.

ಇಬ್ಬರೂ ಅಂಗಳದಿಂದ ಈಚೆಗೆ ಬಂದು, ಬೀದಿಯಲ್ಲಿ ನಡೆದರು. ಮೌನವಾಗಿಯೇ ನಡೆಯುತ್ತ , ಈ ಸ್ನೇಹಿತರು ಆ ಬೀದಿಯನ್ನು ದಾಟಿ–ಅದಕ್ಕೆ ಅಡ್ಡವಾಗಿದ್ದ ದೊಡ್ಡ ರಸ್ತೆಯಲ್ಲಿ ತಿರುಗಿದರು. ಹೆಜ್ಜೆ ಹೆಜ್ಜೆಗೂ ಅವರು ಆ ಅಂಗಳದಿಂದ ದೂರವಾಗುತ್ತಿದ್ದರೂ, ಅವರ ಮನೋನಯನಗಳು, ಇನ್ನೂ ಆ ಕಿಟಕಿಯಲ್ಲಿ ಕಂಡ ಭಯಾನಕ ದೃಶ್ಯವನ್ನು ಕಾಣುತ್ತಿದ್ದವು. ಎಷ್ಟೋ ದೂರ ನಡೆದ ಮೇಲೆ, ಶಂಕರರಾಯರು ತಿರುಗಿ, ತಮ್ಮ ಸ್ನೇಹಿತರ ಮುಖ ನೋಡಿದರು. ಇಬ್ಬರ ಮುಖಗಳೂ–ರಕ್ತಹೀನವಾಗಿ ಬಿಳಿಚಿಕೊಂಡಿದ್ದವು. ಇದಕ್ಕೆ ಕಾರಣವಾಗಿದ್ದ ಅಪಾರ ಭೀತಿ, ಇಬ್ಬರ ಕಣ್ಣುಗಳಲ್ಲೂ ಪ್ರಕಟವಾಗಿತ್ತು.

"ಆಹಾ !–ಅಯ್ಯೋ–ಭಗವಂತಾ !–ಭಗವಂತಾ !–ನೀನೇ ಗತಿ !!"—ಎಂದರು, ಉದ್ಗಾರದಿಂದ–ಶಂಕರರಾಯರು.

ಲಕ್ಷ್ಮೀಪತಯ್ಯ ಮಾತ್ರ ಮೌನವನ್ನು ಬಿಡದೆ, ಗಂಭೀರವಾಗಿ ತಲೆದೂಗಿದರು.

## ೮. ಕಡೆಯ ರಾತ್ರಿ

ಒಂದು ರಾತ್ರಿ, ಶಂಕರರಾಯರು ಊಟ ಮುಗಿಸಿ–ತಮ್ಮ ಆಫೀಸು ಕಟ್ಟಡದ ಬೈಠಕುಖಾನೆಯಲ್ಲಿ ಕುಳಿತು, ಆ ದಿನ ಸಂಜೆಯ ವೃತ್ತಪತ್ರಿಕೆಯನ್ನೋದುತ್ತಿದ್ದರು. ಆಗ, ಡಾಕ್ಟರ್ ವಿಠಲರಾಯರ ಆಪ್ತ ಸೇವಕ ಅವರನ್ನು ನೋಡಲು ಬಂದ. ಅವನ ಆಗಮನ ಲಾಯರಿಗೆ ಆಶ್ಚರ್ಯವನ್ನುಂಟುಮಾಡಿತು. ಅವನನ್ನು ಕಂಡೊಡನೆಯೇ,

"ಓ, ಏನು ರಂಗಪ್ಪ ಬಂದೆ ?—ಏನು ಸಮಾಚಾರ ?....ಇದೇನು —ರಂಗಪ್ಪ ಹೀಗಿದ್ದೀ ? ಮೈಯಲ್ಲಿ ಸ್ವಸ್ಥವಿಲ್ವೇನು ? ಡಾಕ್ಟರ ದೇಹಾಲಸ್ಯ ಹೇಗಿದೆ ?"—ಎಂದು ಕೇಳಿದರು.

"ಅಯ್ಯಾ, ನನಗೇನೂ ಆಗಿಲ್ಲ–ಸ್ವಲ್ಪ ಭಯವಾಗಿದೆ, ಅಷ್ಟೆ"—ಎಂದ ರಂಗಪ್ಪ.

"ಭಯ ? ಯಾಕೆ ಭಯ, ರಂಗಪ್ಪ–ಏನು ಭಯ ?"

“ನನಗೇನೂ ತೋಚ್ತಾ ಇಲ್ಲ, ರಾಯರೇ; ಆದರೆ, ನನ್ನ ಧಣಿಗಳ ವಿಷಯ ಹೀಗೇಂತ ಹೇಳೋಕೆ ಗೊತ್ತೇ ಆಗ್ತಿಲ್ಲ ; ನನಗಂತೂ ಕಾಲೇ ಬಿದ್ದುಹೋದ ಹಾಗಾಗಿದೆ.”

“ಏನಾಗಿದೆ ಹೇಳು-ರಂಗಪ್ಪ.”

“ನನ್ನ ಧಣಿಗಳ ವಿಚಾರ, ಅಧೆಂಗೋ ಏನೋ, ಬಹಳ ಹದಗೆಟ್ಟಿಟ್ಟಿದೆ-ರಾಯ್ರೇ, ದಿಂದಿನಕ್ಕೆ ಹದಗೆಟ್ಟಿಟ್ಟಿದೆ !”

“ಕೂತ್ಕೋ ರಂಗಪ್ಪಾ , ಕೂತ್ಕೊಂಡು ನಿಧಾನವಾಗಿ ಎಲ್ಲಾನೂ ಹೇಳು-ಏನಾಗ್ಬೇಕು-ಹೇಳು”—ಎಂದರು, ಲಾಯರು.

ರಂಗಪ್ಪ ಅವರ ಮುಂದೆ, ಜಮಖಾನೆಯ ಮೇಲೆ ಕೂತುಕೊಂಡು,

“ತಮಗೆ ನಮ್ಮ ಧಣಿಗಳ ಈಚಿನ ವಿಚಾರ ಎಲ್ಲ ತಿಳಿದೇ ಇದೆ —ಅಂದ್ರೆ, ಅವರ ಸ್ವಭಾವ, ಹಿಂದ್ಗಡೇ ಮನೇಲಿ, ತಮ್ಮ ಖಾಸಾ ರೂಮ್ನಲ್ಲಿ ಅವರು ಬಾಗಿಲು ಮುಚ್ಚಿ ಅಗಳಿ ಹಾಕ್ಕೊಂಡು ಒಳ್ಗೇ ಇರ್ತಾ ಇದ್ದದ್ದು-ಎಲ್ಲಾ ಗೊತ್ತೇ ಇದೆಯಲ್ಲ”—ಎಂದ.

“ಗೊತ್ತು , ಗೊತ್ತು ; ಸರಿ, ಮುಂದೆ ?” —ಎಂದು, ಮುಂದಕ್ಕೆ ಬಾಗಿ ಕೇಳಿದರು, ಲಾಯರು.

“ಈಗ್ನೋಡಿ, ಮತ್ತೆ ಆ ರೂಮ್ನೊಳಗೆ ಹೊಕ್ಕೊಂಡು ಬಾಗಿಲು ಹಾಕ್ಕೊಂಡ್ಬಿಟ್ಟಿದ್ದಾರೆ. ನಿಜವಾಗ್ಲೂ ಹೇಳ್ತೀನಿ ಅಯ್ಯಾ, ಇಷ್ಟಿನ್ನಾನೂ ಒಂದು ತರಾ ಇತ್ತು ; ಈ ಸಲ ನೋಡೋದ್ರಲ್ಲಿ ಬಲು ಭಯವಾಗ್ತಿದೆ-ಸತ್ಯವಾಗ್ಲೂ ಬಲು ಭಯವಾಗ್ತಿದೆ !”

“ಅಯ್ಯಾ ರಂಗಪ್ಪ-ಸ್ಪಷ್ಟವಾಗಿ ಹೇಳು, ಅದೇನು ಭಯ ನಿನಗೇಂತ. ಎಷ್ಟಿನವಾಯ್ತು-ಅವರು ಆ ರೂಮಿಗೆ ಹೋಗಿ ಬಾಗಿಲು ಹಾಕ್ಕೊಂಡು ?”

“ಒಂದು ವಾರವಾಗ್ತಾ ಬಂತರಯ್ಯ; ಒಂದ್ವಾರ್ದಿಂದ ನನಗೆ ತಡೆಯೋಕಾಗ್ದಷ್ಟು ಭಯ ಹುಟ್ಟಿಟ್ಟಿದೆ ! ”

—ಎಂದು ಪುನಃ ತನ್ನ ಭಯವನ್ನೇ ಕುರಿತು ಆಡಿದ, ರಂಗಪ್ಪ. ಅವನಲ್ಲಿ ಕಂಡ ಲಕ್ಷಣಗಳು, ಅವನ ಮಾತಿಗೆ ಸಾಕ್ಷಿಗಳಾಗಿದ್ದವು. ಅವನು ನೇರವಾಗಿ ಲಾಯರ ಮುಖ ನೋಡದೆ —ಎಲ್ಲೋ ನೋಡುತ್ತ —ತಡೆ ತಡೆದು ಮಾತಾಡುತ್ತಿದ್ದ. ಮುಂದೆ ಏನು ಹೇಳಬೇಕೋ ತೋಚದೆ ಅವನು ಮೌನವಾಗಿದ್ದುದನ್ನು ಕಂಡು, ಲಾಯರು,

“ಬಾ, ಬಾ, ರಂಗಪ್ಪ, ನಿನ್ನ ಭಯ ನಿಜ—ಅಂತ ನಿನ್ನ ಮುಖದಲ್ಲಿ ಚೆನ್ನಾಗಿ ಕಾಣುತ್ತೆ. ಏನೋ ಭಾರಿ ಎಡವಟ್ಟಾಗಿರಬೇಕು-ಅದೇನು ಹೇಳು, ನಿರಾತಂಕವಾಗಿ ಹೇಳು”—ಎಂದು.

“"ಸ್ವಾಮೀ, ಏನೋ ಅನ್ಯಾಯ, ಆಗಬಾರದ ಅನ್ಯಾಯ !-ನಡೆಧೋಗಿದೇಂತ ನನಗೇನೋ ಸತ್ಯವಾಗಿ ಅನ್ನಿಸ್ತಾ ಇದೆ”

—ಎಂದು ಒಣಗಿದ ಗಂಟಲಲ್ಲಿ ಹೇಳಿದ, ರಂಗಪ್ಪ.

“ಏನಂದೇ ರಂಗಪ್ಪಾ ? ನಿನ್ನೀ ಮಾತಿನ ಅರ್ಥ ಏನು ?”

—ಎಂದು ಗಾಬರಿಗೊಂಡು ಕೇಳಿದರು, ಲಾಯರು.

“ಅದೇನೂಂತ ಬಾಯಿ ಬಿಟ್ಟು ಹೇಳೋ ಧೈರ್ಯ ನನಗಿಲ್ಲ-ರಾಯ್ರೇ. ತಾವೇ ನನ್ನೊಡನೆ ಬಂದು ಅಜಮಾಯಿಷಿ ಮಾಡಿದರಾದೀತು”—ಎಂದ, ರಂಗಪ್ಪ.

ಲಾಯರು ಮರುಮಾತಾಡದೆ ಎದ್ದು , ಉಡುಪು ಧರಿಸಿ ಅವನೊಡನೆ ಹೊರಡಲು ಸಿದ್ಧರಾದರು. ತಮ್ಮ ಗ್ಯಾರೇಜಿನ ಪಕ್ಕದಲ್ಲೇ ಡ್ರೈವರಿಗೆ ವಸತಿ ಕಟ್ಟಿಸಿಕೊಟ್ಟಿದ್ದುದರ ಉಪಯೋಗ ಎಂದಿಗಿಂತಲೂ ಹೆಚ್ಚಾಗಿ ಇಂದು ಕಂಡಿತು-ಅವರಿಗೆ.

ಐದೇ ನಿಮಿಷಗಳಲ್ಲಿ ಕಾರು ಆಫೀಸು ಕಟ್ಟಡದ ಮುಂದೆ ಬಂದು ನಿಂತಿತು. ಲಾಯರೂ, ರಂಗಪ್ಪನೂ ಅದರಲ್ಲಿ ಕುಳಿತು ಹೊರಟರು.

ಆಗ ಮಾರ್ಚಿ ತಿಂಗಳ ಬೆಳದಿಂಗಳ ಕಾಲ. ಶುಭ್ರವಾದ ಆಕಾಶವನ್ನು ಚಂದ್ರನ ಮಾಯೆ ತುಂಬಿತ್ತು. ಸುಮಾರು ಇಪ್ಪತ್ತು ನಿಮಿಷ ಬೇಕಾಯ್ತು-ಕಾರು ಚಿನಿವಾರ ಚೌಕವನ್ನು ತಲುಪಿ ಡಾ॥ ವಿಠಲ್-ರವರ ಮನೆ ಮುಂದೆ ನಿಲ್ಲುವ ವೇಳೆಗೆ.

ಲಾಯರೂ ರಂಗಪ್ಪನೂ ಕಾರಿನಿಂದ ಇಳಿದು, ಚಿಕ್ಕ ಗೇಟಿನ ಮೂಲಕ, ಮನೆಯ ಮುಂಬಾಗಿಲನ್ನು ತಲುಪುತ್ತಿದ್ದಾಗ, ರಂಗಪ್ಪ ,

“ದೇವರೇ-ನನ್ನ ಭಯಕ್ಕೆ ಕಾರಣ ಇಲ್ಲದ ಹಾಗಾಗಲೀ !”

—ಎಂದು, ನಿಟ್ಟುಸಿರು ಬಿಟ್ಟ .

"ನನಗೂ ಹಾಗೇ ಅನ್ನಿಸ್ತಾ ಇದೆ–ರಂಗಪ್ಪಾ"—ಎಂದರು ಲಾಯರು.

ರಂಗಪ್ಪ ಮನೆ ಬಾಗಿಲನ್ನು ಸಮೀಪಿಸಿ, ಬಹಳ ಎಚ್ಚರಿಕೆಯಿಂದ ಅದನ್ನು ಎರಡು ಮೂರು ಸಲ ತಟ್ಟಿದ.

"ಯಾರು–ರಂಗಪ್ಪನೇ ?"

—ಎಂದು, ಒಳಗಿನಿಂದ ಮೆಲ್ಲನೆ ಕೇಳಿಬಂತು, ಒಂದು ಧ್ವನಿ.

"ಹೌದು—ಬಾಗಿಲು ತೆಗಿ"—ಎಂದ, ರಂಗಪ್ಪ.

ಬಾಗಿಲು ತೆರೆಯಿತು. ಲಾಯರು, ರಂಗಪ್ಪ–ಇಬ್ಬರೂ ಮನೆಯನ್ನು ಪ್ರವೇಶಿಸಿ, ಮುಂಗೋಣೆಯನ್ನು ದಾಟಿ, ಬೈಠಕು ಖಾನೆಯನ್ನು ಹೊಕ್ಕರು. ಅಲ್ಲಿ ತಾರಸಿಯಿಂದ ಬಹು ಪ್ರಕಾಶಮಾನವಾದ ಒಂದು ವಿದ್ಯುದ್ದೀಪ ತೂಗಾಡುತ್ತಿತ್ತು. ಅದರ ಕೆಳಗೆ, ಡಾಕ್ಟರ ಅಡಿಗೆಯ ಮಾಣಿ, ಮನೆಗೆಲಸದ ಸೇವಕ–ಅವರ ಔಷಧಾಲಯದಲ್ಲಿ ಕೆಲಸ ಮಾಡುತ್ತಿದ್ದ ಕಾಂಪೌಂಡರು—ಇಬ್ಬರು ಹೆಣ್ಣಾಳುಗಳು–ಎಲ್ಲ ಕುರಿಗಳಂತೆ ಒಟ್ಟುಗೂಡಿ ನಿಂತು, ಭಯದಿಂದ ಪರಸ್ಪರ ಪಿಸುಗುಟ್ಟುತ್ತಿದ್ದರು. ಇವರನ್ನು ಕಂಡೊಡನೆಯೇ ಹೆಣ್ಣಾಳುಗಳ ಪೈಕಿ ಒಬ್ಬಳು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಇನ್ನೊಬ್ಬಳು–ಅವಳಿಗಿಂತ ಹಿರಿಯವಳು, ಎರಡು ಕೈಗಳಿಂದಲೂ ಹಣೆ ಮುಟ್ಟಿಕೊಳ್ಳುತ್ತ , ಗದ್ಗದ ಕಂಠ ದಿಂದ,

"ಅಯ್ಯಾವರೇ, ಸದ್ಯ ದೇವರ ದಯದಿಂದ ತಾವು ಬಂದ್ರಲ್ಲ !–ಏನಾದ್ರೂ ಮಾಡಿ ! —ಏನಾದ್ರೂ ಮಾಡಿ !"

—ಎಂದು, ಮುಂದೆ ಬಂದು ಅಂಗಲಾಚಿದಳು. ಲಾಯರು,

"ಛೇ ! ಛೆ ! ಯಾಕೆ ಸುಮ್ನೆ ಇಲ್ಲಿ ಸೇರಿ ಗಲಾಟೆ ಮಾಡ್ತಿದ್ದೀರಿ ? ಡಾಕ್ಟರಿಗೆ ಗೊತ್ತಾದರೆ–ನಿಮ್ಮನ್ನ ಸುಮ್ನೆ ಬಿಡ್ತಾರೇನು ?"

—ಎಂದು, ಸ್ವಲ್ಪ ಕೋಪದಿಂದಲೇ ನುಡಿದರು. ವಯಸ್ಸಾದ ಹೆಣ್ಣಾಳು,

"ಅಯ್ಯಾ, ಅವರು ನಮ್ಮನ್ನ ಕೊಂದ್ರೂ ಸರಿ !–ಆ ರೂಮ್ನಿಂದ ಈಚೆಗೆ ಬಂದು ಕಾಣಿಸ್ಕೊಂಡ್ರೆ ಸಾಕು !" —ಎಂದಳು. ರಂಗಪ್ಪ ಲಾಯರ ಕಡೆ ತಿರುಗಿ,

"ಅಯ್ಯಾ, ಇವರೆಲ್ಲರಿಗೂ ನನ್ನ ಹಾಗೇ ಭಯವಾಗಿದೆ. ನಮ್ಮ ಧಣಿ ನಮ್ಮನೆಲ್ಲ ಮಕ್ಕಳ ಹಾಗೆ ಕಾಣ್ತಾ ಇದ್ರು" —ಎಂದ.

ಸ್ವಲ್ಪ ಕಾಲ ಯಾರೂ ಮಾತಾಡದೆ ನಿಶ್ಶಬ್ದವಾಗಿತ್ತು. ಕಿರಿವಯಸ್ಸಿನ ಕೆಲಸದ ಹೆಣ್ಣಾಳು ಮಾತ್ರ ಇದ್ದಕ್ಕಿದ್ದ ಹಾಗೆ, ಗೊಳೋ–ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು. ರಂಗಪ್ಪ ಅವಳ ಕಡೆ ತಿರುಗಿ–ಕೋಪದಿಂದ "ಏ ! ಮುಚ್ಚುಬಾಯಿ ! ಇಲ್ಯಾರೂ ಸತ್ತಿಲ್ಲ, ನೀನು ಹಂಗೆ ಬಡ್ಕೊಳ್ಳೋಕೆ !" ಎಂದು ಗದರಿಸಿದ. ಈ ಹೊತ್ತಿನಲ್ಲಿ ಅವನು ನರಗಳ ಬಿಗಿತಕ್ಕೆ ಪೂರ ಒಳಗಾಗಿದ್ದನೆಂದು, ಅವನ ಕೋಪ–ಮಾತು–ಧ್ವನಿಗಳಿಂದ ವ್ಯಕ್ತವಾಗುತ್ತಿತ್ತು. ಎಲ್ಲರಿಗಿಂತ ವಯಸ್ಸಾಗಿದ್ದವನೂ, ಡಾಕ್ಟರ ಖಾಸಾ ಸೇವಕನೂ ಆಗಿದ್ದ ರಂಗಪ್ಪನ ಗದರಿಕೆಯಿಂದ ಉಳಿದ ಸೇವಕರೂ, ಸೇವಕಿಯರಿಬ್ಬರೂ, ಮನೆಯ ಒಳಬಾಗಿಲ ಕಡೆ ಒಟ್ಟಾಗಿ ಸರಿದರು. ಆಗ ರಂಗಪ್ಪ ಮನೆಗೆಲಸದ ಹುಡುಗನನ್ನು ಕರೆದು,

"ಎಲ್ಲಿ , ಬೇಗ ಒಂದು ಟಾರ್ಚನ್ನು ತಗೊಂಡು ಬಾ; ಆದಷ್ಟು ಬೇಗ ಬಂದ ಕೆಲಸಕ್ಕೆ ಕೈಹಾಕಿ ಪೂರೈಸಿಬಿಡೋಣ"

—ಎಂದ. ಹುಡುಗ ಹೋಗಿ ಕೆಲವು ಕ್ಷಣಗಳಲ್ಲೇ ಒಂದು ಎಲೆಕ್ಟ್ರಿಕ್ ಟಾರ್ಚನ್ನು ತಂದುಕೊಟ್ಟ. ಕೂಡಲೆ ರಂಗಪ್ಪ ಲಾಯರ ಕಡೆ ತಿರುಗಿ, "ಹೀಗೆ ದಯಮಾಡಿಸಿ—ಅಯ್ಯಾ" ಎಂದು ದಾರಿ ತೋರಿಸುತ್ತ ,–ಮನೆಯ ಹಿಂಭಾಗದ ತೋಟದ ಅಂಗಳದ ಕಡೆ ಹೊರಟ. ದಾರಿಯಲ್ಲಿ ಲಾಯರನ್ನುದ್ದೇಶಿಸಿ, ತಗ್ಗಿದ ಧ್ವನಿಯಲ್ಲಿ,

"ಅಯ್ಯಾ, ಆದಷ್ಟು ಮೆಲ್ಲನೆ ಹೆಜ್ಜೆ ಹಾಕ್ತಾ ಬನ್ನಿ. ತಾವು ಕಿವಿಗೊಟ್ಟು ಕೇಳ್ಬೇಕು. ತಾವು ಬಂದದ್ದು ಕೇಳಿಸ್ಬಾರ್ದೂಂತ ನನ್ನಿಷ್ಟ. ಆಮೇಲೆ, ಇನ್ನೊಂದು ಮಾತು ಅಯ್ಯಾ–ನಮ್ಮ ಧಣಿ ಏನಾದ್ರೂ ರೂಮಿನ ಬಾಗಿಲು ತೆರೆದು ಒಳಗೆ ಬನ್ನೀಂತ ಕರೆದರೆ, ತಾವು ಖಂಡಿತ ಒಳಗೆ ಹೋಗಬಾರ್ದು"—ಎಂದ.

ತಮ್ಮ ಆಪ್ತಮಿತ್ರನನ್ನು ಕುರಿತ ವಿಷಯಗಳು ಅನಿರೀಕ್ಷಿತ ಗುರಿಯ ಕಡೆ ಸಾಗುತ್ತಿದ್ದುದನ್ನು ಗಮನಿಸಿ, ಶಂಕರರಾಯರ ದೇಹದ ನರಗಳೆಲ್ಲ ಏಕಕಾಲದಲ್ಲಿ ತಟ್ಟನೆ ಜಗ್ಗಿದಂತಾಯಿತು. ಇನ್ನೇನು ಉರುಳಿಬೀಳುವಂತಾದವರು, ಹೇಗೋ ಬಹು ಸಾಹಸದಿಂದ ಚೇತರಿಸಿಕೊಂಡು, ರಂಗಪ್ಪನನ್ನು ಹಿಂಬಾಲಿಸಿ,

ಅಂಗಳವನ್ನು ದಾಟಿ, ಹಿಂದುಗಡೆ ಕಟ್ಟಡದ ಪ್ರಯೋಗಶಾಲೆಯನ್ನು ಪ್ರವೇಶಿಸಿದರು. ರಂಗಪ್ಪ ಬಾಗಿಲ ಹಿಂದಿದ್ದ ಸ್ವಿಚ್ ಹಾಕಿದ. ಒಂದು ವಿದ್ಯುದ್ದೀಪ ಹತ್ತಿ ಪ್ರಯೋಗಶಾಲೆ ಬೆಳಕಾಯಿತು. ಪ್ರಯೋಗಶಾಲೆಯ ತುಂಬ ಹರಡಿದ್ದ ಮೇಜು-ಬೆಂಚು-ಕುರ್ಚಿ-ಪೆಟ್ಟಿಗೆ-ಬುಟ್ಟಿ ಮೊದಲಾದವುಗಳ ಮೂಲಕ ಹೆಜ್ಜೆ ಇಡುತ್ತ, ಇಬ್ಬರೂ, ಆಚೆ ತುದಿಯಲ್ಲಿದ್ದ ಹಂತವನ್ನು ಸಮೀಪಿಸಿದರು. ಇಲ್ಲಿ, ಒಂದು ಪಕ್ಕದಲ್ಲಿ ನಿಂತು ಆಲೈಸಿ ಕೇಳುವಂತೆ — ಲಾಯರಿಗೆ ರಂಗಪ್ಪ ಸಂಜ್ಞೆ ಮಾಡಿದ ಅನಂತರ ತನ್ನ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿಕೊಂಡು, ಮೆಲ್ಲಗೆ ಹಂತವನ್ನು ಹತ್ತಿ ಹೋಗಿ, ಸ್ವಲ್ಪ ಹಿಂಜರಿಯುತ್ತಲೇ, ಡಾಕ್ಟರ ಖಾಸಾ ಕೊಠಡಿಯ ಕೆಂಪು ಬಾಗಿಲನ್ನು ತಟ್ಟಿ ,

"ಬ್ಯಾರಿಸ್ಟರು ಶಂಕರ್ರಾಯ್ರು ತಮ್ಮನ್ನ ಕಾಣ್ಬೇಕೂಂತ ದಯಮಾಡಿಸಿದ್ದಾರೆ-ಅಯ್ಯಾ"

—ಎನ್ನುತ್ತ-ಆಲಿಸಿ ಕೇಳುವಂತೆ, ಪುನಃ ಶಂಕರರಾಯರಿಗೆ ಸಂಜ್ಞೆ ಮಾಡಿದ. ಕೊಠಡಿಯೊಳಗಿನಿಂದ ಒಂದು ಧ್ವನಿ-ಈ ವೇಳೆಯಲ್ಲಿ ಒದಗಿದ್ದ ತೊಂದರೆಗೆ ಆಕ್ಷೇಪಿಸಿತೋ—ಎಂಬಂತೆ—

"ನಾನು ಯಾರನ್ನೂ ನೋಡೋಹಾಗಿಲ್ಲಾಂತ ಅವರಿಗೆ ಹೇಳಿಬಿಡು"

—ಎಂದಿತು.

"ಒಳ್ಳೇದರಯ್ಯ."

—ಎಂದು, ರಂಗಪ್ಪ ಹಂತ ಇಳಿದು ಬಂದು, ಶಂಕರರಾಯರ ಕೂಡ ಆ ಕಟ್ಟಡವನ್ನು ಬಿಟ್ಟು, ಅಂಗಳವನ್ನು ದಾಟಿ, ಪುನಃ ಮುಂದಿನ ಮನೆಯ ಭೋಜನ ಶಾಲೆಯನ್ನು ಪ್ರವೇಶಿಸಿದ. ಅದುವರೆಗೂ ಮೌನವಾಗಿದ್ದವನು ಆಗ ಶಂಕರರಾಯರನ್ನುದ್ದೇಶಿಸಿ,

"ಅಯ್ಯಾ, ಆ ರೂಮಿನೊಳಗಿನಿಂದ ಬಂದ ಧ್ವನಿ ಕೇಳಿಸಿತಲ್ವೇ ?"—ಹೇಳಿ ಅಯ್ಯಾ, ಅದು ತಮಗೆ ನಮ್ಮ ಧಣಿಗಳ ಧ್ವನಿ ಹಾಗೆ ಕಂಡಿತೇ ?"—ಎಂದು ಕೇಳಿದ.

"ಧ್ವನೀಲಿ ತೀರ ಬದಲಾವಣೆಯಾಗಿರೋ ಹಾಗೆ-ತೋರಿತು-ರಂಗಪ್ಪಾ"—ಎಂದಷ್ಟೇ ಉತ್ತರ ಕೊಟ್ಟರು, ಲಾಯರು.

"ತೀರ ಬದಲಾವಣೆ-ಅಂತೀರಾ ! ಹುಂ-ಹೌದು—ಬದಲು ಏನೋ ಆಗಿದೆ-ಅಂತ ನನಗೂ ತೋರುತ್ತೆ , ಅಯ್ಯಾ. ಆದರೆ ಅದು, ಬರೀ ಧ್ವನಿಯ ಬದಲಾವಣೆಯೇ—ಅಂತ ನನಗೆ ಗುಮಾನಿ" —ಎಂದ, ರಂಗಪ್ಪ.

ಲಾಯರು ಸ್ವಲ್ಪ ಆಶ್ಚರ್ಯದಿಂದ ಹುಬ್ಬೆತ್ತಿ ,

"ಅಂದರೆ ?"—ಎಂದು ಕೇಳಿದರು.

"ಅಯ್ಯಾ, ತಾವು ಕಂಡ್ಹಾಗೇ ಇಪ್ಪತ್ತು ವರ್ಷ ಆಯ್ತು —ನಾನಿಲ್ಲಿ ಕೆಲಸಕ್ಕೆ ಸೇರಿ; ಅಂಥಾವನು ತನ್ನ ಧಣಿಯ ಧ್ವನೀ ವಿಚಾರ್ದಲ್ಲಿ-ಮೋಸಹೋಗೋದು ಸಾಧ್ಯವೇಂತ —ತಾವೇ ಯೋಚಿಸಿ. ಇಲ್ಲ ಅಯ್ಯ, ಈ ಕಿವಿಗಳು ತನ್ನ ಒಡೆಯರ ಧ್ವನಿಗೆ ಬಹಳ ಪಳಗಿವೆ —ಧ್ವನೀಲಿ ಎಷ್ಟೇ ವ್ಯತ್ಯಾಸವಿದ್ರೂ ಮೋಸಹೋಗೋವಲ್ಲ"

"ಹಾಗಾದರೆ ? —ಅದೇನು —ಸ್ಪಷ್ಟವಾಗಿ ಹೇಳು, ರಂಗಪ್ಪ ?"

"ಇನ್ನೇನಿಲ್ಲ ಅಯ್ಯಾ, ಏನೋ ಆಗಬಾರದ್ದಾಗಿ-ನನ್ನ ಧಣಿಗಳು ಎಲ್ಲಿಗೋ ಸಾಗಿಸಲ್ಪಟ್ಟಿದ್ದಾರೆ. ಎಂಟು ದಿನಗಳ ಹಿಂದೆ ಅವರು-ಹೌದು ಅವರದ್ದೇ ಕಂಠ-ದೇವರಾಣೇ ಹಾಕಿ, ಏನೇನೋ ಮೊರೆಯಿಟ್ಟು ಕೂಗಾಡಿದರು. ಇದು ನಡೆದ ಕೂಡಲೆ, ಆ ದಿನವೇ ಏನೋ ಆಗಿ, ಅವರ ಗೈರುವಿಲೆಯಾಗಿಬಿಟ್ಟಿದೆ ! ಈಗ ಆ ರೂಮಿನಲ್ಲಿರೋರು ನಮ್ಮ ಧಣಿಯಲ್ಲ, ಯಾರೋ ಬೇರೆ ಆಸಾಮಿ. ಆ ಆಸಾಮಿ ಯಾರು ? ಅಲ್ಯಾಕಿದ್ದಾರೆ ? ನನಗೊಂದೂ ದಿಕ್ಕು ತೋಚದಾಗಿದೆ, ರಾಯರೇ. ಈ ಪ್ರಶ್ನೆಗಳಿಗೆ ದೇವರೇ ಉತ್ತರ ಹೇಳಬೇಕು"—ಎಂದ, ರಂಗಪ್ಪ.

ಶಂಕರರಾಯರು ಗಲ್ಲ ಸವರಿಕೊಳ್ಳುತ್ತ,

"ರಂಗಪ್ಪ, ನೀನು ಹೇಳ್ತಿರೋದು ಬಹಳ ವಿಚಿತ್ರ-ಅಲ್ಲ-ಅಲ್ಲ ! ಬಹಳ ಭಯಾನಕವಾಗಿದೆ ! ಒಳ್ಳೇದು, ನೀನು ಅನುಮಾನಪಡೋದೇ ನಿಜಾಂತ ಇಟ್ಕೊಳ್ಳೋಣ; ಅಂದರೆ, ಡಾ॥ ವಿಠಲ್-ರವರು ಕೊಲೆಯಾಗಿದ್ದಾರೆ-ಅಂತಾನೇ ಭಾವಿಸೋದಾದರೆ, ಈಗ ಆ ರೂಮಿನಲ್ಲಿರೋನು ಕೊಲೆಪಾತಕನೇ ? ಹಾಗಾದರೆ, ಅವನು ಅಲ್ಲೇ ಇರೋದು ಆಶ್ಚರ್ಯವಲ್ಲವೆ ?—ಅಸ್ವಾಭಾವಿಕವಲ್ಲವೇ ? ಯಾವ ಕಾರಣದಿಂದ ಅವನು ಇನ್ನೂ ಅಲ್ಲೇ ಇದ್ದಾನು ?-ಇಲ್ಲ-ರಂಗಪ್ಪ , ಕೊಲೆ ನಡೆದಿದೆ-ಅಂತ ತೀರ್ಮಾನಕ್ಕೆ ಬರೋದು ಅಷ್ಟು ಸರಿಯಾಗಿ ಕಾಣೋದಿಲ್ಲ" —ಎಂದರು.

"ಅಯ್ಯಾ, ತಾವು ಲಾಯರು. ತಮ್ಮನ್ನ ಒಪ್ಪಿಸೋದು ಕಷ್ಟ. ಆದ್ರೂ, ತಮ್ಮನ್ನ ಒಪ್ಪಿಸಬಲ್ಲೆ–ಅಂತ ನನಗೆ ಖಾತ್ರಿ. ನೋಡಿ, ಆ ರೂಮಿನಲ್ಲಿರೋನು ನಮ್ಮ ಧಣಿಯಂತೂ ಅಲ್ಲ. ಒಳಗಿರೋ, ಆ ಬೇರೇ ಮನುಷ್ಯನೋ, ಮೃಗವೋ, ಪಿಶಾಚಿಯೋ–ಏನೇ ಆಗಿರಲಿ–ಅದು. ಕಳೆದ ಒಂದು ವಾರದಿಂದ, ಯಾವುದೋ ಒಂದು ಔಷಧಿನ ಜ್ಞಾಪಿಸಿಕೊಳ್ಳೋಕೆ, ಹಗಲೂ ರಾತ್ರಿ ಕೂಗಾಡ್ತಾ ಇದೆ. ಅದಕ್ಕೊ, ಅವನಿಗೋ–ಅದು ನೆನಪಾಗ್ತಾ ಇಲ್ಲ. ನನ್ನ ಧಣಿಗಳು ಬಾಗಿಲು ಹಾಕ್ಕೊಂಡು ರೂಮಿನಲ್ಲೇ ಇದ್ರೂ, ಹೀಗೆಲ್ಲ ಕೂಗಾಡ್ತಾ ಇರ್ಲಿಲ್ಲ. ಕೆಲವು ವೇಳೆ ಅವರಿಗೆ ಏನಾದ್ರೂ ಬೇಕಾಗಿದ್ರೆ, ಒಂದು ಚೀಟೀಲಿ ಗುರುತು ಮಾಡಿ, ಅದನ್ನ ಬಾಗಿಲಾಚೆ ಎಸೆದಿರುತ್ತಿದ್ರು. ಇದೇ ಅವರ ಮಾಮೂಲು ಪದ್ಧತಿಯಾಗಿತ್ತು. ಕಳೆದ ಒಂದು ವಾರದಲ್ಲಿ, ಇಂಥಾ ಚೀಟಿಗಳು ಹೊರತು ಬೇರೆ ಏನೂ ಇಲ್ಲವಾಗಿದೆ. ಮುಚ್ಚಿದ ಬಾಗಿಲೀಚೆ — ಚೀಟಿಗಳು ! ಚೀಟಿಗಳು ! ಅವರಿಗೇಂತ, ಬಾಗಿಲ ಬಳಿ ಬಡಿಸಿಟ್ಟ ಊಟದ ತಟ್ಟೆಯನ್ನ ಮಾತ್ರ, ಯಾರೂ ನೋಡ್ದೇ ಇದ್ದ ಯಾವುದೋ ವೇಳೇಲಿ, ಪತ್ತೆಯಾಗದ ಹಾಗೆ ಒಳಗೆ ತೆಗೆದುಕೊಂಡುಬಿಡ್ತಿದ್ರು. ಒಂದು ವಾರದಿಂದ, ಪ್ರತಿ ದಿನ ಇಂಥ ಚೀಟಿಗಳು ಎರಡು ಮೂರು ಹೊರಗೆ ಬಿದ್ದಿರ್ತಾ ಇದ್ದುವು. ಅವುಗಳಲ್ಲಿ ಹುಕುಂಗಳು ಇರ್ತಿದ್ವು; ಅಥವಾ, "ಸರಿಯಲ್ಲ" —"ತಪ್ಪು" —"ಮುಟ್ಠಾಳ ಕೆಲಸ"–ಅಂತ ಆಕ್ಷೇಪಣೆಗಳಿರ್ತಿದ್ವು. ನಾನು ಆ ಚೀಟಿಗಳನ್ನೆತ್ತಿಕೊಂಡು, ಸಣ್ಣದು, ಪುಟ್ಟದು, ದೊಡ್ಡದು–ಅಂತ ನೋಡದೆ, ಈ ನಗರದಲ್ಲಿರೋ ಎಲ್ಲಾ ಚಿಲ್ರೆ ಮತ್ತು ಒಟ್ಟು ವ್ಯಾಪಾರದ ಕೆಮಿಸ್ಟುಗಳ ಅಂಗಡಿಗಳಿಗೆ ದೌಡಾಯಿಸಿ ಸುತ್ತೋದಾಗಿದೆ. ಅವರಿಗೆ ಯಾವುದೋ ಒಂದು ಲವಣ ಬೇಕಾಗಿದೆ. ಊರೆಲ್ಲಾ ಹುಡುಕಿದರೂ ಅದೊಂದು ಮಾತ್ರ ಸಿಕ್ಕಿಲ್ಲ. ಪ್ರತಿ ಸಲ ನಾನು ಚೀಟಿ ತೋರಿಸಿ ಅಂಗಡಿಯೋರು ಕೊಟ್ಟ ಲವಣ ತಂದಾಗಲೂ, ಅದು "ಶುದ್ಧವಾದ ಲವಣ ಅಲ್ಲ —ವಾಪಸು ಮಾಡಿ ಬೇರೆ ಅಂಗಡೀಲಿ ಹುಡುಕು"–ಅಂತ, ಇನ್ನೊಂದು ಚೀಟಿ ಹೊರಗೆ ಬೀಳ್ತಿತ್ತು. ಅದ್ಯಾಕೋ ಏನೋ–ಅಂತು, ಅವರಿಗೆ ಯಾವುದೋ ಒಂದು ಶುದ್ಧವಾದ ಔಷಧ ಲವಣ, ಬಹಳ ಅವಸರವಾಗಿ ಬೇಕಾಗಿತ್ತು–ಅಯ್ಯಾ."

ರಂಗಪ್ಪ ಹೇಳುತ್ತಿದ್ದುದನ್ನೆಲ್ಲಾ ಏಕಾಗ್ರಚಿತ್ರದಿಂದ ಕೇಳುತ್ತಿದ್ದ ಶಂಕರರಾಯರು, ಅವನು ಹೇಳಿ ಮುಗಿಸಿದ ಮೇಲೆ,

"ಒಳ್ಳೇದು ರಂಗಪ್ಪ, ಅವರು ಬರೆದು ಎಸೆದಿದ್ದ ಚೀಟಿಗಳಲ್ಲಿ ಯಾವುದಾದರೂ ನಿನ್ನ ಬಳಿ ಇದೆಯೇನು ?"—ಎಂದು ಕೇಳಿದರು.

ರಂಗಪ್ಪ ಜೇಬಿಗೆ ಕೈಹಾಕಿ, ಮುದುರಿಹೋಗಿದ್ದ ಒಂದು ಕಾಗದವನ್ನು ಅವರ ಕೈಗೆ ಕೊಟ್ಟ. ಲಾಯರು ದೀಪದ ಬಳಿ ಹೋಗಿ, ಅದನ್ನು ಬಿಚ್ಚಿ ಬಹಳ ಎಚ್ಚರಿಕೆಯಿಂದ ಪರೀಕ್ಷಿಸಿದರು. ಅದರಲ್ಲಿ ಬರವಣಿಗೆ ಹೀಗಿತ್ತು :

"ಮೆಸ್ಸರ್ಸ್ ಕವಿರಾಜ್ ಕಂಪೆನಿಯ ಶ್ರೀ—ಅವರಿಗೆ, ಡಾ॥ ವಿಠಲ್‌ರವರ ಅಭಿನಂದನೆಗಳು—

ಶ್ರೀಯುತರು ಹಿಂದಿನ ಸಲ ಕಳಿಸಿದ ಔಷಧ ಲವಣದ ಮಾದರಿ ಅಶುದ್ಧವಾಗಿದೆಯಾದ್ದರಿಂದ, ಡಾಕ್ಟರರ ಪ್ರಕೃತ ಉಪಯೋಗಕ್ಕೆ ಅದು ಕೇವಲ ಅಪ್ರಯೋಜಕವೆಂದು, ಅವರ ಖಂಡಿತವಾದ ಅಭಿಪ್ರಾಯ. ೧೯೪೪–ನೇ ಇಸವಿಯಲ್ಲಿ ಡಾ॥ ವಿಠಲ್‌ರವರು, ಮೆ॥ ಕವಿರಾಜ್ ಕಂಪನಿಯವರಿಂದ ಈ ಲವಣವನ್ನು ಸ್ವಲ್ಪ ಹೆಚ್ಚಾಗಿಯೇ ಕೊಂಡುಕೊಂಡರು. ಈಗ ಅದೇ–ಮತ್ತು ಅಷ್ಟೇ ಶುದ್ಧವಾದ ಲವಣ, ಮತ್ತಷ್ಟು ಬಹಳ ಅವಸರವಾಗಿ ಬೇಕಾಗಿದೆ. ಆದ್ದರಿಂದ, ಅವರು ದಯವಿಟ್ಟು ಕೂಲಂಕಷವಾಗಿ ಹುಡುಕಿಸಿ, ಅದೇ ಮಾದರಿಯ ಲವಣ ಎಲ್ಲಾದರೂ ಇರೋದು ಪತ್ತೆಯಾದರೆ–ಅಷ್ಟನ್ನೂ ಈ ಕೂಡಲೆ ಕೊಂಡು ಕಳಿಸತಕ್ಕದು. ಅದರ ಬೆಲೆ ಎಷ್ಟೇ ಆಗಲಿ ಯೋಚಿಸಬೇಕಾದ್ದಿಲ್ಲ – ಕೊಡಲಾಗುತ್ತದೆ. ಡಾ॥ ವಿಠಲ್ ರವರಿಗೆ ಈಗ ಅದರ ಅವಸರ–ಅಗತ್ಯ ಎಷ್ಟು ಹೇಳಿದರೂ ಕಡಿಮೆಯೇ."

ಇಲ್ಲಿಯತನಕ ಕಾಗದದಲ್ಲಿನ ಬರವಣಿಗೆ ತಕ್ಕಮಟ್ಟಿಗೆ ಸರಿಯಾಗಿಯೇ ಇತ್ತು. ಇಲ್ಲಿಂದ ಮುಂದೆ, ಬರೆದವರ ಲೇಖನಿ, ಎದ್ವಾತದ್ವ ತತ್ತರಿಸಿ ಓಡಿ, ಅವರು ಏನೋ ಅತಿಯಾದ ಉದ್ವೇಗಕ್ಕೊಳಗಾಗಿದ್ದರೆಂದು ಸೂಚಿಸುತ್ತಿತ್ತು. ಅದರಲ್ಲೂ "ಓ ಮಹಾಶಯರೇ! ದೇವರ ಹೆಸರಿನಲ್ಲಿ ನಿಮ್ಮ ಕಾಲು ಹಿಡಿದು ಬೇಡುತ್ತೇನೆ ! –ಈ–ಈ–ನಿರ್ಭಾಗ್ಯನಿಗೆ–ಆ ಹಳೇ ಲವಣವನ್ನು ಸ್ವಲ್ಪ ಪತ್ತೆಮಾಡಿ ಕೊಡಿ ! ಸಾವಿನ ದವಡೆ ಯಿಂದ ಕೂಗಿ ಪ್ರಾರ್ಥಿಸುತ್ತಾ ಇದ್ದೇನೆ !!" ಎಂಬ ಕಡೇ ವಾಕ್ಯದಲ್ಲಿ, ಈ ಅಂಶ ಚೆನ್ನಾಗಿ ವ್ಯಕ್ತವಾಗಿತ್ತು.

"ಹಮ್ ! ಬರವಣಿಗೆ ಬಹಳ–ಬಹಳ ವಿಚಿತ್ರವಾಗಿದೆ —ರಂಗಪ್ಪ !"

—ಎಂದರು, ಲಾಯರು. ರಂಗಪ್ಪ ಕೂಡಲೆ ಏನೂ ಉತ್ತರ ಕೊಡಲಿಲ್ಲ. ಆಮೇಲೆ ಶಂಕರರಾಯರು, ತಟ್ಟನೆ ಅವನ ಕಡೆ ನೋಡಿ, ಸ್ವಲ್ಪ ಹರಿತವಾದ ಧ್ವನಿಯಲ್ಲೇ,

"ರಂಗಪ್ಪಾ , ಇದು ಬೇರೆಯವರಿಗೆ ಬರೆದ ಕಾಗದ —ನಿನ್ನ ಬಳಿ ಹೇಗೆ ಬಂತು !" —ಎಂದು ಕೇಳಿದರು.

"ಕವಿರಾಜ ಕಂಪೆನಿಯ ಅಂಗಡೀಲಿದ್ದ ಮನುಷ್ಯ ಇದನ್ನ ನೋಡಿ ಬಹಳ ಕೋಪಗೊಂಡ–ಅಯ್ಯಾ. ನೋಡಿದವನೇ, ಅದನ್ನು ಮುದುರಿ ಉಂಡೆ ಮಾಡಿ–ಕಸದ ಬುಟ್ಟಿಗೆ ಎಸೆದ ಹಾಗೆ —ನನ್ನ ಕಡೆ ಎಸೆದುಬಿಟ್ಟ"

—ಎಂದು, ವಿವರಣೆ ಕೊಟ್ಟ —ರಂಗಪ್ಪ.

"ರಂಗಪ್ಪಾ , ಇದು ಡಾಕ್ಟರ ಕೈ ಅಕ್ಷರ ಅನ್ನೋದರಲ್ಲಿ ಸಂದೇಹವಿಲ್ಲ–ಗೊತ್ತೇ ?" —ಎಂದರು, ಲಾಯರು. ರಂಗಪ್ಪ ,

"ಹೌದರಯ್ಯ —ನನಗೂ ಹಾಗೇ ಅನ್ನಿಸಿತು; ಆದರೆ, ಕೈ ಅಕ್ಷರ ಕಟ್ಟಿ ಕೊಂಡೇನು ? ಅವರನ್ನೇ ಕಣ್ಣಾರೆ ನೋಡಿದ್ದೇನೆ —ಅಯ್ಯಾ" —ಎಂದ.

""ಹ್ಞಾ !–ಅವರನ್ನ ನೋಡಿದ್ದೀಯಾ ? ಯಾವಾಗ ?–ಹೇಗೆ ನೋಡ್ದೆ ರಂಗಪ್ಪಾ ?"

—ಎಂದು, ಆಶ್ಚರ್ಯ—ಕುತೂಹಲಗಳಿಂದ ಕೇಳಿದರು, ಲಾಯರು.

"ಹೌದರಯ್ಯ —ನೋಡಿದೆ. ನಾನು ನೋಡಿದ ಸಂದರ್ಭ ಹೀಗಿತ್ತು : ಈಚೆಗೆ, ಅವರು ರೂಂ ಸೇರಿ ಬಾಗಿಲು ಹಾಕ್ಕೊಂಡಿರೋಕೆ ಶುರುಮಾಡಿದ ಮೇಲೆ —ಒಂದ್ಸಲ ನಾನು, ಅಂಗಳದ ತೋಟದಲ್ಲಿದ್ದೋನು, ಯಾತಕ್ಕೋ ತಟ್ಟನೆ ಪ್ರಯೋಗಶಾಲೇನ ಪ್ರವೇಶಿಸಿದೆ. ಅವರು ಆಗ ಪ್ರಯೋಗಶಾಲೆಯ ಆಚೆ ತುದೀಲಿ, ಬಾಗಿ, ಪೆಟ್ಟಿಗೆಗಳ ನಡುವೆ ತಡಕಾಡ್ತಾ ಇದ್ದರು. ಬಹುಶಃ, ಈ ಔಷಧಿಗಾಗಿಯೇ ಅಥವಾ ಇನ್ಯಾತಕ್ಕೋ ಅವರು, ಯಾರೂ ಇಲ್ಲಾಂತ ಭಾವಿಸಿ, ರೂಮ್ನಿಂದ ಈಚೆಗೆ ಬಂದು, ಹಂತ ಇಳಿದು ಅಲ್ಲಿ ಹುಡುಕಾಡ್ತಾ ಇದ್ರೂಂತ ಕಾಣುತ್ತೆ. ಹಂತದ ಮೇಲುಗಡೆ ರೂಮಿನ ಬಾಗಿಲು ತೆರೆದಿತ್ತು. ನಾನು ಪ್ರಯೋಗಶಾಲೇನ ಪ್ರವೇಶಿಸಿದ ಸದ್ದನ್ನ ಕೇಳಿ ಅವರು ತಲೆ ಎತ್ತಿ ನನ್ನ ಕಡೆ ನೋಡಿದರು; ನೋಡಿದೋರೇ, ಒಂದು ತರಹಾ ಕೆಟ್ಟದಾಗಿ ಚೀರಿ, ಮುಖಾ ಮರೆಸಿಕೊಂಡು, ಸರಸರಾಂತ ಹಂತ ಹತ್ತಿ ಹೋಗಿ, ರೂಮ್ನೊಳಗೆ ಸೇರ್ಕೊಂಡು, ಬಾಗಿಲು ಧಡೀರ್ —ಅಂತ ಬಡಿದು, ಬೋಲ್ಟ್ ಹಾಕ್ಕೊಂಡುಬಿಟ್ರು. ಅಯ್ಯಾ, ನನಗೆ ಅವರ ಮುಖ, ಕೆಟ್ಟ–ಅಸಹ್ಯವಾದ —ಮುಖವಾಡದ ಹಾಗಿತ್ತು. ಅವರು ನನ್ನ ಧಣಿಗಳೇ ಆಗಿದ್ದರೆ, ಮುಖವಾಡದ ಹಾಗೆ ಏಕಿತ್ತು ಅವರ ಮುಖ ? ನನ್ನನ್ನ ಕಂಡ ಕೂಡ್ಲೆ ಅದ್ಯಾಕೆ ಹಾಗೆ, ಕಿರಚಿಕೊಂಡು ಓಡಿ, ಇಲಿ ಬಿಲ ಸೇರ್ಕೊಳ್ಳೋ ಹಾಗೆ ರೂಮಿನಲ್ಲಿ ಸೇರ್ಕೊಂಡ್ರು ? ನಾನು ಇವರ ಸೇವೇಲಿರ್ತಾ ತಕ್ಕಷ್ಟು ವರ್ಷಗಳಾಗಿವೆ ರಾಯರೇ. ಅಲ್ವೇ—"

ಎಂದವನು, ಮುಂದಕ್ಕೆ ಮಾತಾಡಲಾರದೆ, ಮುಖದ ಮೇಲೆ ಕೈ ಆಡಿಸಿಕೊಂಡ–ರಂಗಪ್ಪ. ಲಾಯರು ಕೆಲವು ಕ್ಷಣಗಳು ಮೌನವಾಗಿದ್ದು ಅನಂತರ, ರಂಗಪ್ಪನ ಕಡೆ ನೋಡುತ್ತ ,

"ರಂಗಪ್ಪಾ , ನೀನು ಹೇಳಿದ್ದೆಲ್ಲ ಒಂದಕ್ಕಿಂತ ಒಂದು ವಿಚಿತ್ರವಾಗಿದೆ ! ಕೇಳಿದರೆ ಆಶ್ಚರ್ಯವಾಗುತ್ತೆ ! ಆದರೆ, ನೀನು ಹೇಳಿರೋ ವಿಷಯಗಳ್ನೆಲ್ಲ ವಿಂಗಡಿಸಿ, ಸರಿಯಾಗಿ ಜೋಡಿಸಿ ಯೋಚಿಸಿದರೆ, ಬೆಳಕು ಮೂಡೋ ಸೂಚ್ನೆ ಕಾಣ್ತಾ ಇದೆ. ಕೆಲವು ಅಪೂರ್ವವಾದ–ವಿಚಿತ್ರವಾದ ರೋಗಗಳಿವೆ, ರಂಗಪ್ಪಾ . ಅವುಗಳಿಗೆ ತುತ್ತಾದೋರು ಬಹಳ ಸಂಕಟಪಡ್ತಾರೆ; ತುದಿಗಾಲಿಂದ ನೆತ್ತೀವರೆಗೆ ಅವರ ಮೈನೆಲ್ಲ ವಿರೂಪಗೊಳಿಸಿಬಿಡುತ್ತೆ–ಅಂಥಾ ಭಯಂಕರವಾದ ರೋಗಗಳು–ಅವು ! ನನಗೆ ತೋರೋದೇನೆಂದರೆ, ನಿನ್ನ ಧಣಿಗಳು ಅಂಥಾ ಯಾವುದೋ ರೋಗಕ್ಕೆ ಬಲಿಯಾಗಿದ್ದಾರೆ. ನೀನು ಇದೇ ತಾನೆ ಹೇಳಿದ್ದನ್ನ ಕೇಳಿದರೆ, ಹೀಗೇ ಇರಬೇಕು–ಅನ್ನೋದು, ಸ್ಪಷ್ಟವಾಗಿದೆ. ಆದ್ದರಿಂದಲೇ, ಅವರ ಧ್ವನಿ ಬದಲಾವಣೆ–ಮುಖದ ವಿಕಾರ; ಆದ್ದರಿಂದಲೇ, ಯಾರಿಗೂ ಮುಖ ತೋರಿಸೋಕೆ ಅವರು ಇಷ್ಟಪಡದೆ ಇರೋದು; ಆದ್ದರಿಂದಲೇ–ಇದ್ಯಾವದೋ ಔಷಧಿ–ಅಂದೆಯಲ್ಲ–ಅದಕ್ಕೆ ಅವರ ಪರದಾಟ. ಬಹುಶಃ, ಈ ಔಷಧಿಯಿಂದ ಕಡೆಗೂ ವಾಸಿಮಾಡಿಕೊಳ್ಳೋ ಆಸೆ ಇರಬಹುದು–ಸಂಕಟಪಡ್ತಿರೋ ಅವರ ಹೃದಯದಲ್ಲಿ. ಆಹಾ ! ದೇವರು ಅವರ ಆಸೇನ ಪೂರೈಸಿಕೊಡಲಿ–ರಂಗಪ್ಪಾ. ಏನೇ ಆಗಲಿ, ಇಲ್ಲೀವರೆಗೆ ನಡೆದಿರೋದಕ್ಕೆ ನಾನು ಯೋಚಿಸಿದ ವಿವರಣೆಯೇ ಸರಿ—ಅಂತ ತೋರುತ್ತೆ , ಅಲ್ವೇ ರಂಗಪ್ಪಾ ?" —ಎಂದರು.

"ಹುಂ ಹೌದರಯ್ಯ, ನನಗೂ ಹಾಗೇ ತೋರುತ್ತೆ"

—ಎಂದು ತಲೆದೂಗಿದ, ರಂಗಪ್ಪ.

"ನನ್ನ ವಿವರಣೆ ವಿಷಾದಕರವಾಗಿದೆ–ಭಯಾನಕವಾಗಿದೆ. ಕೊಲೆ–ಗಿಲೆ ಅಂತ ನಿಷ್ಕಾರಣವಾಗಿ ಊಹಿಸಿಕೊಂಡು ಮಿತಿಮೀರಿ ಗಾಬರಿಪಡೋಕಾರಣವಿಲ್ಲ"—ಎಂದರು, ಲಾಯರು.

ಇದನ್ನು ಕೇಳುತ್ತಿದ್ದ ರಂಗಪ್ಪನ ಮುಖ ವಿವರ್ಣವಾಗಿತ್ತು. ಅವನು ತಲೆ ಅಲ್ಲಾಡಿಸುತ್ತ ,

"ಅಯ್ಯಾ, ತಾವು ಏನೇ ಹೇಳಿ, ಪ್ರಯೋಗಶಾಲೇಲಿ ನಾನು ಕಂಡ ಅದು, ಆ ಪ್ರಾಣಿ–ನನ್ನ ಧಣಿಗಳಾಗಿರಲಿಲ್ಲ–ಖಂಡಿತ ಇಲ್ಲ !—ನಾನು ತಮ್ಮ ವಿವರಣೇಗೆ ಪ್ರತಿ ಹೇಳ್ತಿರೋದಕ್ಕೆ ದಯವಿಟ್ಟು ಮಾಫ್‌ಮಾಡಿ; ಆದರೆ, ನನ್ನ ಮಾತು ಸತ್ಯ ಅಯ್ಯಾ, ಸತ್ಯ !!" —ಎಂದ.

"ಸರಿ, ರಂಗಪ್ಪಾ , ಆದರೆ, ಅದಕ್ಕೇನು ರುಜುವಾತು ?"—ಎಂದು ಪ್ರಶ್ನಿಸಿದರು, ಲಾಯರು.

ರಂಗಪ್ಪ ಸುತ್ತ ಮುತ್ತ ನೋಡಿ, ತಗ್ಗಿದ ದನಿಯಲ್ಲಿ,

"ನೋಡಿ, ಅಯ್ಯಾ, ತಮಗೇ ತಿಳಿದ ಹಾಗೆ, ನನ್ನ ಧಣಿಗಳು ಎತ್ತರವಾದ ಆಳು. ಅವರದ್ದು ಒಳ್ಳೇ ಕಟ್ಟುಮಸ್ತಾದ ಮೈ; ನನಗಿಂತ–ಎತ್ತರ–ಧಡೂತಿ; ಆದರೆ, ನಾನು ಪ್ರಯೋಗಶಾಲೇಲಿ ನೋಡಿದ ಮನುಷ್ಯ ನನಗಿಂತ ಕುಳ್ಳಾಗಿದ್ದ ; ಅವನ ಮೈಕಟ್ಟೂ ಕಿರಿದಾಗಿತ್ತು. ಅಂದ್ಮೇಲೆ, ಅವನು ನಮ್ಮ ಧಣಿಗಳಿಗಿಂತ ಬಹಳ ಕುಳ್ಳು, ಕಿರಿಮೈನ ಆಸಾಮಿ, ಅನ್ನೋದು ಸ್ಪಷ್ಟವಾಗಿತ್ತು, ರಾಯರೇ"—ಎಂದ.

"ರಂಗಪ್ಪಾ, ನೀನು ಅವರನ್ನ ದೂರದಿಂದ ನೋಡಿದೆ. ದೂರಕ್ಕೆ ಕಿರಿದಾಗಿ ಕಂಡಿರಬಹುದು ಅವರು. ಅಲ್ಲದೆ, ನೀನು ನೋಡಿದಾಗ ಅವರು ಬಗ್ಗಿಕೊಂಡು ಏನನ್ನೊ ಹುಡುಕಾಡ್ತಾ ಇದ್ರು —ಅಂದೆಯಲ್ಲ ; ಆದ್ದರಿಂದ —ಅವರ ಎತ್ತರ ಪೂರ್ತಿ ಕಾಣದೆ ಹೋಗಿ, ಕುಳ್ಳಾಗಿ ತೋರಿರಬಹುದು"

—ಎಂದು ಲಾಯರು, ಅವನ ಆಕ್ಷೇಪಣೆಗಳಿಗೆ ವಿವರಣೆ ಕೊಡುವ ಪ್ರಯತ್ನ ಮಾಡಿದರು. ರಂಗಪ್ಪ ಅವರ ವಿವರಣೆಯನ್ನು ಒಪ್ಪಲು ಸಿದ್ಧನಾಗಿರಲಿಲ್ಲ. ಅವನು ತಲೆ ಅಲ್ಲಾಡಿಸುತ್ತ,

"ಅಯ್ಯಾ, ಒಂದಲ್ಲ–ಎರಡಲ್ಲ–ಇಪ್ಪತ್ತು ವರ್ಷಗಳಿಂದ ಈ ಮನೇಲಿ ಸೇವೆ ಮಾಡ್ತಾ ಬಂದಿರೋನಿಗೆ, ತನ್ನ ದಣಿಗಳ ಗುರುತು ಸಿಕ್ಕಲಿಲ್ಲಾಂದ್ರೆ ಒಪ್ಪೋಕಾಗುತ್ತೆಯೇ ? ಅವರು ತಮ್ಮ ರೂಮಿನ ಬಾಗಿಲಲ್ಲಿ ಹೋಗ್ತಾ ಬರ್ತಾ ಇದ್ರೆ —ಅವರ ತಲೆ ಬಾಗಿಲಲ್ಲಿ ಯಾವ ಮಟ್ಟಕ್ಕಿರುತ್ತೇಂತ, ಇಪ್ಪತ್ತು ವರ್ಷಗಳಿಂದ ದಿನಬೆಳಗಾದರೆ ನೋಡಿದ ನಾನು, ಅವರ ಎತ್ತರದ ವಿಷಯದಲ್ಲಿ ಮೋಸಹೋದೇನೇ ? ಇಲ್ಲ ಅಯ್ಯಾ ಇಲ್ಲ , ಕೆಟ್ಟ ಮುಖವಾಡದ ಹಾಗಿದ್ದ ಆ ಮುಖ, ಎಂದಿಗೂ ನನ್ನ ಧಣಿಗಳದ್ದಾಗಿರಲಿಲ್ಲ. ಅದು ಏನು–ಆಗಿತ್ತೋ ದೇವರೇ ಬಲ್ಲ ! ಆದರೆ ನನ್ನ ಧಣಿಗಳದ್ದಂತೂ ಅಲ್ಲ"— ಎಂದ.

"ಹಾಗಾದರೆ ?"—ಎಂದು, ಹುಬ್ಬು ಗಂಟಿಕ್ಕಿ ಕೇಳಿದರು, ಲಾಯರು.

"ಹಾಗಾದರೆ, ಇನ್ನೇನೂ ಇಲ್ಲ–ಅಯ್ಯಾ, ನನ್ನ ಧಣಿಗಳು ಖೂನಿಯಾಗಿದ್ದಾರೆ–ಅಂತ ನನಗೆ ಪೂರ್ತಿ ನಂಬಿಕೆಯಾಗಿಬಿಟ್ಟಿದೆ. ತಾವೂ ಕಣ್ಣಾರೆ ಆ ಮುಖಾನ ನೋಡಿದ್ದರೆ–ತಮಗೂ ನಂಬಿಕೆಯಾಗ್ತಿತ್ತು"—ಎಂದ, ರಂಗಪ್ಪ.

"ರಂಗಪ್ಪ, ನಿನ್ನ ಮಾತು ಒಪ್ಪಿದೆ; ನಿನಗೆ ಅಷ್ಟು ಖಾತ್ರಿಯಾಗಿದ್ದರೆ–ಅದು ನಡೆದಿರೋದು ಉಂಟೋ—ಇಲ್ವೋಂತ ಗೊತ್ತುಮಾಡಿಕೊಳ್ಳಲೇಬೇಕು–ಬೇರೆ ಮಾರ್ಗವಿಲ್ಲ. ಅದು ನಮ್ಮ ಕರ್ತವ್ಯ. ಈ ಕಾಗದ ನನಗೊಂದು ತೊಡಕಾಗಿದೆ. ಅವರು ಬದುಕಿದ್ದಾರೆ–ಅನ್ನೋದಕ್ಕೆ ಈ ಕಾಗದವೇ ಸಾಕ್ಷಿಯಾಗಿದೆ. ಅವರ ಇಷ್ಟಕ್ಕೆ ವಿರೋಧವಾಗಿ ವರ್ತಿಸಿ ಅವರ ಮನಸ್ಸಿಗೆ ನೋವು ಮಾಡೋಕೆ ನನಗೆ ಸ್ವಲ್ಪವೂ ಇಷ್ಟವಿಲ್ಲ. ಆದರೂ, ಈ ಸಂದರ್ಭದಲ್ಲಿ ಇನ್ನು ಹೆಚ್ಚು ಚರ್ಚಿಸದೆ, ಆ ರೂಮಿನ ಬಾಗಿಲನ್ನ ಒಡೆದಾದರೂ ಪರೀಕ್ಷಿಸೋದು, ನಮ್ಮ ಕರ್ತವ್ಯ" — ಎಂದರು, ಲಾಯರು.

"ಹ್ಞಾ ! ಅಯ್ಯಾ, ಈ ಮಾತು ಒಪ್ಪಿದೆ ! ಏನೂ ಮಾಡದೆ ಸುಮ್ನೇ ಕಳವಳ ಪಡೋಕಿಂತ, ಏನಾದ್ರೂ ಮಾಡೋದು ಮೇಲು, ಅಲ್ವೇ ಅಯ್ಯಾ ?"

—ಎಂದು, ಲವಲವಿಕೆಯಿಂದ ಹೇಳಿದ ರಂಗಪ್ಪ.

"ಸರಿ, ಈಗ ಎರಡನೇ ಪ್ರಶ್ನೆ : ಈ ಕೆಲಸ ಯಾರು ಮಾಡಬೇಕು ?"

"ಯಾರು, ಅಂದರೆ ? ಅನುಮಾನವೇಕೆ ? ತಾವು–ತಾನು, ಅಯ್ಯಾ !–ನಾವೇ ಧೈರ್ಯಮಾಡಬೇಕು"—ಎಂದ ರಂಗಪ್ಪ ; ಸ್ವಲ್ಪವೂ ಅನುಮಾನಿಸದೆ.

"ಬಹಳ ಸರಿಯಾದ ಮಾತು ರಂಗಪ್ಪ , ಹೌದು, ನಾವೇ ಮಾಡಬೇಕಾದ ಕೆಲಸ ಇದು. ಇದರ ಪರಿಣಾಮ ಏನೇ ಆಗಲಿ, ರಂಗಪ್ಪ —ನಿನಗೆ ಏನೂ ತೊಂದರೆಯಾಗದಂತೆ ನೋಡಿಕೊಳ್ಳೋ ಭಾರ ನನ್ನದು"

—ಎಂದು ಭರವಸೆ ಕೊಟ್ಟರು, ಶಂಕರರಾಯರು.

"ಸರಿ, ಅಯ್ಯಾ. ಹಾಗಾದರೆ ಇನ್ನು ಕೆಲಸಕ್ಕೆ ಶುರುಮಾಡಬಹುದು. ಪ್ರಯೋಗಶಾಲೇಲಿ ಒಂದು ಕೊಡಲಿ ಇದೆ. ಅದು ನನಗಾಗುತ್ತೆ. ತಾವು ಇಲ್ಲೇ–ಅಡಿಗೆ ಮನೇಲಿರೋ ಹಾರೆ ತೆಗೆದುಕೊಳ್ಳಿ' '

—ಎಂದು, ಅಡಿಗೆ ಮನೆಗೆ ಹೋಗಿ, ಒಂದು ಕಬ್ಬಿಣದ ಹಾರೆಯನ್ನು ತಂದುಕೊಟ್ಟ. ಲಾಯರು ಅದನ್ನು ಕೈಯಲ್ಲಿ ತೂಗುತ್ತ ,

"ರಂಗಪ್ಪ , ಈಗ ನಾವು ಸ್ವಲ್ಪ ಅಪಾಯಕರವಾದ ಕೆಲಸಕ್ಕೆ ಕೈಹಾಕೋದರಲ್ಲಿದ್ದೇವೇಂತ ನಿನಗೆ ಗೊತ್ತೋ ? " —ಎಂದು ಕೇಳಿದರು.

"ಓಹೋ, ಗೊತ್ತು ರಾಯರೇ" —ಎಂದ, ರಂಗಪ್ಪ.

"ಆದ್ದರಿಂದ, ಇನ್ನೊಂದು ವಿಷಯ ಬಾಯಿ ಬಿಟ್ಟು ಸ್ಪಷ್ಟಮಾಡಿಕೊಳ್ಳಬೇಕಾಗಿದೆ. ಇದುವರೆಗೆ ನಾನೂ ಅದರ ಮಾತು ಎತ್ತಿಲ್ಲ, ನೀನೂ ಎತ್ತಿಲ್ಲ."

"ಅದೇನು ಹೇಳಿ ಅಯ್ಯಾ."

"ಅದೇನು ಅಂದರೆ, ನೀನು ಪ್ರಯೋಗಶಾಲೇಲಿ ಕಂಡ ಮುಖ ನಿನ್ನ ಧಣಿಗಳದ್ದಲ್ಲ–ಎಂದೆ. ಒಪ್ಪೋಣ. ಹಾಗಾದರೆ, ಅದಕ್ಕೂ, ನೀನು ಕಂಡಿರಬಹುದಾದ ಇನ್ನ್ಯಾರಿಗಾದರೂ ಹೋಲಿಕೆ ಇರಲಿಲ್ವೇ —ಸ್ವಲ್ಪ ಯೋಚಿಸಿನೋಡು" —ಎಂದರು, ಲಾಯರು.

"ನೋಡಿ, ಅಯ್ಯಾ ಹೋಲಿಕೆ ವಿಚಾರ, ನಾನು ಪ್ರಮಾಣ ಮಾಡಿ ಹೇಳೊ ಅಷ್ಟು ಸ್ಪಷ್ಟವಾಗಿಲ್ಲ. ನಾನು ಆ ಮುಖ ನೋಡಿದ್ದು, ತಾವು ಹೇಳಿದ ಹಾಗೆ, ದೂರದಿಂದ–ಒಂದೋ ಎರಡೋ ಕ್ಷಣ–ಅಷ್ಟೆ. ಅದು ನನ್ನನ್ನು ಕಂಡು ಓಡಿಹೋಗುವಾಗಲೂ ಮೈಯನ್ನು ಪೂರ ಮುದುರಿಕೊಂಡಿತ್ತು. ಆದರೂ, ಆತ ಒಂದು ವೇಳೆ ಕಾಮೇಶ ಗುಪ್ತನಾಗಿರಬಹುದೇ—ಂತ ತಾವು ಊಹಿಸೋದಾದರೆ—ಮುಚ್ಚು ಮರೆ ಏಕೆ ?–ನನಗೆ ಅವನು ಕಾಮೇಶ ಗುಪ್ತನೇ ಆಗಿರಬೇಕೂಂತ ಅನ್ನಿಸುತ್ತೆ. ನೋಡಿ, ಎತ್ತರ–ಗಾತ್ರ–ನಡಗೆ —ಚುರುಕು, ಎಲ್ಲದರಲ್ಲೂ, ಕಾಮೇಶ ಗುಪ್ತನ ಹೋಲಿಕೆ ಬಹಳವಾಗಿತ್ತು. ಅಲ್ಲದೆ, ಪ್ರಯೋಗಶಾಲೆಗೆ, ಹಿಂದುಗಡೆ ಬೀದೀಲಿ ಇರೋ ಬಾಗಿಲಿಂದ ಇನ್ನ್ಯಾರು ತಾನೆ ಒಳಗೆ ಬರಲು ಸಾಧ್ಯ ? ಖೂನಿಯ ಸಮಯದಲ್ಲಿ, ಆ ಹಿಂದುಗಡೆ ಬಾಗಿಲ ಬೀಗದ ಕೈ ಅವನ ಬಳಿಯೇ ಇತ್ತು–ಅನ್ನೋದನ್ನ ತಾವು ಮರೆತಿರಲಾರಿರಿ. ಅಷ್ಟೇ ಅಲ್ಲ–ರಾಯರೇ, ತಾವು ಎಂದಾದರೂ ಈ ಕಾಮೇಶ ಗುಪ್ತನನ್ನ ಭೇಟಿಯಾಗಿದ್ದೀರೊ ಇಲ್ಲೋ ನಾನು ಕಾಣೆ."

"ಓಹೋ, ಒಂದು ಸಲ ಭೇಟಿಯಾಗಿದ್ದೇನೆ–ರಂಗಪ್ಪ ; ಅಷ್ಟೇ ಅಲ್ಲ –ಅವನ ಕೂಡ ಸ್ವಲ್ಪ ಮಾತನ್ನೂ ಆಡಿದ್ದೇನೆ."

"ಹಾಗಾದರೆ, ನಮ್ಮೆಲ್ಲರಿಗೂ ಅನ್ನಿಸಿದ ಹಾಗೇ —ತಮಗೂ ಅನ್ನಿಸಿರಬೇಕು."

"ಏನಂತ ?"

"ಏನಂತ–ಅಂದರೆ, ಆ ಮನುಷ್ಯನಲ್ಲಿ ಏನೋ ವಿಚಿತ್ರವಾದ–ವಿಲಕ್ಷಣವಾದ ಗುಣ–ಅಂದರೆ, ನೋಡಿದೋರಲ್ಲಿ ಓಕರಿಕೆ ಹುಟ್ಟಿಸೊ ಅಂತಹ ಅಸಹ್ಯ ಕಳೆ ಇದೆ–––ಅಂತ. ಅದನ್ನು ಸರಿಯಾಗಿ ವರ್ಣಿಸೋ ಶಕ್ತಿ ನನಗಿಲ್ಲ, ಅಯ್ಯ. ಆದರೆ ಇಷ್ಟು ಹೇಳಬಲ್ಲೆ , ನೋಡಿದ ತಕ್ಷಣಾನೆ, ಆ ಮಹಾರಾಯನ ಪ್ರಭಾವ ಮೂಳೆಗೂ ನಾಟಿ, ಅದರೊಳಗಿನ ನೆಣವನ್ನೂ ಹೆಪ್ಪುಗಟ್ಟಿಸಿಬಿಡುತ್ತೆ !"

"ನಿನ್ನ ಮಾತು ಬಹಳ ನಿಜ ರಂಗಪ್ಪ —ಅಕ್ಷರಶಃ ಸತ್ಯ ! ! ನನಗೂ ಅವನನ್ನ ನೋಡಿದಾಗ ಹಾಗೆಯೇ ಆಯಿತು."

"ನನ್ನನ್ನ ಕಂಡಕೂಡಲೆ, ಆ ಹೊಲಸು ಮೋರೆಯ ಪ್ರಾಣಿ, ಸರ್ರನೆ ತಿರುಗಿ, ನೆಗೆದು, ಭರ ಭರಾಂತ, ಹಂತಾನ ಹತ್ತಿ ಹೋದ್ದನ್ನ ನೋಡಿ —ಬೆತ್ತಲೆ ಮೈಮೇಲೆ ಮಂಜುಗಡ್ಡೆ ರಾಶೀನ ಸುರಿದ ಹಾಗಾಯ್ತು–ರಾಯರೇ ! ಈಗಲೂ, ನೆನಸಿಕೊಂಡರೆ ಮೂಳೆಯಿಂದಲೂ ಶುರುವಾಗುತ್ತೆ —ನಡುಕ !"

"ಅದು ನಿನ್ನ ಸ್ವಂತ ಅನುಭವ ಅಷ್ಟೆ , ರಂಗಪ್ಪ. ಅದನ್ನ ರುಜುವಾತು–ಅಂತ ಯಾವ ಕೋರ್ಟೂ ಒಪ್ಪೊಲ್ಲ"

"ತಮ್ಮ ಮಾತು ಒಪ್ತೀನಿ ರಾಯರೇ. ಆದರೂ ನನ್ನ ಅನುಭವ ನನಗೆ ಸ್ಪಷ್ಟವಾಗಿ ಇದ್ದೇ ಇದೆ. ಆದ್ದರಿಂದ, ನಮ್ಮನಮ್ಮಲ್ಲಿ ಹೇಳೋದಾದ್ರೆ, ಅಯ್ಯಾ, ನಾನು ನೋಡಿದ ಆ ಮನುಷ್ಯ ಕಾಮೇಶ ಗುಪ್ತನೇ ಆಗಿದ್ದಾಂತ–ಬೇಕಾದರೆ, ತಮ್ಮ ಪಾದದಾಣೆ ಹೇಳಬಲ್ಲೆ."

"ನಿನ್ನ ಮಾತನ್ನ ನಂಬ್ತೇನೆ–ರಂಗಪ್ಪ ; ಏಕೆಂದರೆ, ನನ್ನ ಗುಮಾನಿಯೂ ಅವನ ಕಡೆಗೇ ಇದೆ. ಹುಂ! ಮುಖ್ಯವಾಗಿ ಸಹವಾಸದೋಷ ! ಸೆಗಣೀಲಿ ಕೈಯ್ಯಾಡಿದೋನ ಹತ್ತಿರ ಸೆಗಣಿ ವಾಸನೆ ಬರೋದು ಅನಿವಾರ್ಯ —ಅಲ್ವೇ ?....ರಂಗಪ್ಪ. ಈಗ ನನಗೆ ನಿನ್ನ ಮಾತಿನಲ್ಲಿ ಪೂರ್ತಿ ನಂಬಿಕೆಯಾಗಿದೆ. ನನ್ನ ಸ್ನೇಹಿತರಾದ ನಿರ್ಭಾಗ್ಯ ಹರಿವಿಠಲ್–ರವರು ಕೊಲ್ಲಲ್ಪಟ್ಟಿದ್ದಾರೆನ್ನುವುದರಲ್ಲಿ ನನಗೆ ಯಾವ ಸಂಶಯವೂ ಉಳಿದಿಲ್ಲ.

ಮತ್ತು, ಅವರನ್ನ ಕೊಂದ ಮನುಷ್ಯ ಇನ್ನೂ ಅವರ ಕೊಠಡಿಯಲ್ಲೇ ಇದ್ದಾನೋ–ದೇವರೇ ಬಲ್ಲ. ಅಂತೂ ಅಲ್ಲೇ ಇದ್ದಾನೆ–ಅನ್ನೋದು ಖಂಡಿತ. ಒಳ್ಳೇದು, ರಂಗಪ್ಪ , ನಿನ್ನ ಧಣಿಗಳೂ ನನ್ನ ಪರಮ ಆಪ್ತಸ್ನೇಹಿತರೂ ಆಗಿದ್ದ ಡಾ॥ ಹರಿವಿಠಲ್‌ರವರ ಕೊಲೆಗೆ ಪ್ರತೀಕಾರ ಮಾಡಿದ ಕೀರ್ತಿ ನಮ್ಮದಾಗಲಿ —ಸಿದ್ದೋಜಿಯನ್ನು ಬರಮಾಡು" —ಎಂದರು, ಲಾಯರು.

ರಂಗಪ್ಪನ ಕರೆಯನ್ನು ಕೇಳಿ ಸಿದ್ದೋಜಿ ಬಂದ. ಅವನು ಡಾಕ್ಟರ ಮನೆ ಮುಂಬಾಗಿಲು ಕಾಯುವ ಆಳು. ಲಾಯರ ಮುಂದೆ ಬಿಳುಪೇರಿದ ಮುಖದಿಂದ ನಡುಗುತ್ತ ನಿಂತಿದ್ದ ಅವನನ್ನು ನೋಡಿ, ಅವರು,

"ಧೈರ್ಯ ತಂದುಕೋ ಸಿದ್ದೋಜಿ. ಒಂದು ವಾರದಿಂದ ನೀವೆಲ್ಲ ಬಹಳ ಗಾಬರಿಯಾಗಿದ್ದೀರೀಂತ ಬಲ್ಲೆ. ಇರಲಿ, ಈ ದಿವಸ, ಈಗಲೇ–ಇದರ ಕೊನೇ ಘಟ್ಟವನ್ನ ನೋಡಿಬಿಡಬೇಕೂಂತ ಮನಸ್ಸು ಮಾಡಿಬಿಟ್ಟಿದೇವೆ ನಾನು ಮತ್ತು ರಂಗಪ್ಪ, ನಿಮ್ಮ ಧಣಿಗಳ ರೂಮಿನ ಬಾಗಿಲನ್ನು ಒಡೆದಾದರೂ ಒಳಗೆ ಹೋಗೋರಿದ್ದೇವೆ. ಇದರಿಂದ ನೀವೇನೂ ಹೆದರಬೇಕಾಗಿಲ್ಲ. ಎಲ್ಲಾ ನೆಟ್ಟಗಿದ್ದರೆ, ನಾವು ಮಾಡಿದ ತಪ್ಪು ಕೆಲಸದ ಹೊಣೆಗಾರಿಕೆ ಹೊರೋಕೆ ನಾನು ಸಿದ್ಧನಾಗಿದ್ದೇನೆ. ಹಾಗಲ್ಲದೆ, ರೂಮಿನೊಳಗೆ ಏನಾದರೂ ಆಗಬಾರದ್ದು ಆಗಿದ್ದರೆ, ಮುಂದೆ ಏನು ಮಾಡಬೇಕೋ ಅದನ್ನ ಮಾಡಲಾಗುತ್ತೆ. ಹಂತಕಾರಿ ರೂಮಿನೊಳಗೆ ಇದ್ದಾನೆಂದು ನಮಗೆ ಗುಮಾನಿ ಇದೆ. ನಾವು ಬಾಗಿಲು ಒಡೆಯೋ ಪ್ರಯತ್ನಮಾಡಿದರೆ, ಅವನು ಬೇರೆ ದಾರಿಯಿಂದ ತಪ್ಪಿಸಿಕೊಂಡು, ಹಿಂದುಗಡೆ ಬಾಗಿಲಿಂದ ಪರಾರಿಯಾಗಬಹುದು. ಆದ್ದರಿಂದ, ಅದಕ್ಕೆ ಅವಕಾಶ ಕೊಡದಂತೆ, ನೀನೂ ಇನ್ನೊಬ್ಬ ಆಳೂ, ಒಂದು ಜೊತೆ ಬಲವಾದ ದೊಣ್ಣೆಗಳನ್ನು ಹಿಡಿದುಕೊಂಡು, ಮನೆಯನ್ನು ಬಳಸಿ ಹೋಗಿ, ಹಿಂದುಗಡೆ ಬೀದಿಯಲ್ಲಿ ಪ್ರಯೋಗಶಾಲೆಯ ಬಾಗಿಲ ಬಳಿ ಕಾವಲಿರಬೇಕು. ನೀವು ಆ ಸ್ಥಳವನ್ನ ತಲುಪೋದಕ್ಕೆ ಹತ್ತು ನಿಮಿಷ ಕಾಲ ಕೊಡ್ತೇನೆ" —ಎಂದರು.

ಸಿದ್ದೋಜಿ ಇನ್ನೊಬ್ಬ ಸೇವಕನೊಡನೆ ಹೊರಟ ಕೂಡಲೆ, ಲಾಯರು ಗಡಿಯಾರ ನೋಡಿಕೊಂಡು, ಅನಂತರ, ರಂಗಪ್ಪನ ಕಡೆ ತಿರುಗಿ,

"ರಂಗಪ್ಪ ಬಾ, ಈಗ ನಾವು ನಮ್ಮ ಕೆಲಸಕ್ಕೆ ಹೋಗೋಣ"

—ಎಂದು, ಹಾರೆಯನ್ನು ಬಗಲಲ್ಲಿಟ್ಟುಕೊಂಡು ಹೊರಟರು. ರಂಗಪ್ಪ ಅವರನ್ನು ಹಿಂಬಾಲಿಸಿದ. ಇಬ್ಬರೂ ಅಂಗಳವನ್ನು ಹೊಕ್ಕರು. ಭಾರಿ ಮೋಡವೊಂದು, ಚಂದ್ರನಿಗೆ ಅಡ್ಡವಾಗಿದ್ದದ್ದರಿಂದ, ಅಂಗಳ ಕತ್ತಲಾಗಿತ್ತು. ಟಾರ್ಚಿನ ಬೆಳಕಿನಲ್ಲಿ ಇಬ್ಬರೂ ಅಂಗಳವನ್ನು ದಾಟಿ, ಪ್ರಯೋಗಶಾಲೆಯನ್ನು ಪ್ರವೇಶಿಸಿ, ಮೌನವಾಗಿ ಕಾಯುತ್ತ ಕುಳಿತರು. ಆ ಹೊತ್ತಿನಲ್ಲಿ ಸುತ್ತಿನ ವಾತಾವರಣ ನಿಶ್ಶಬ್ದವಾಗಿತ್ತು. ಅದನ್ನು ಒಂದು ಶಬ್ದ ಮಾತ್ರ ಭಂಗಗೊಳಿಸುತ್ತಿತ್ತು ; ಅದು, ಪ್ರಯೋಗಶಾಲೆಯ ಮಹಡಿ ಮೇಲಿನ ಆ ಕೊಠಡಿಯಿಂದ ಕೇಳಿಬರುತ್ತಿದ್ದ ಹೆಜ್ಜೆಯ ಸದ್ದು. ರಂಗಪ್ಪ ಪಿಸುಮಾತಿನಲ್ಲಿ,

"ಅಯ್ಯಾ, ಕೇಳಿ —ಆ ಸದ್ದನ್ನು. ಆ ನರಪಿಶಾಚಿ, ಹಗಲೆಲ್ಲ ಮತ್ತು ರಾತ್ರಿ ಬಹಳ ಹೊತ್ತಿನವರೆಗೆ, ಹೀಗೇ ರೂಮ್ನಲ್ಲಿ ಹಿಂದಕ್ಕೆ ಮುಂದಕ್ಕೆ, ಹಿಂದಕ್ಕೆ ಮುಂದಕ್ಕೆ, ಬೋನಿಗೆ ಸಿಕ್ಕ ಹುಲಿ ಹಾಗೆ, ತಿರುಗಾಡ್ತಾ ಇರುತ್ತೆ. ಕಳೆದ ವಾರದಿಂದ, ಹೀಗೇ ಬಿಡುವಿಲ್ದೆ, ಆ ರೂಮ್ನಲ್ಲೇ ಮೈಲಿಗಟ್ಟಲೆ ಓಡಾಡಿದೆ ! ಕೆಮಿಸ್ಟ್‌ನಿಂದ ಹೊಸ ಮಾದರಿ ಲವಣ ತಂದುಕೊಟ್ಟಾಗ ಮಾತ್ರ–ಓಡಾಟ ನಿಂತು ಸ್ವಲ್ಪ ಬಿಡುವಾಗಿರುತ್ತೆ , ಅಷ್ಟೆ . ಅಯ್ಯಾ ಹೇಳಿ, ಆ ಮನುಷ್ಯನೋ–ಪ್ರಾಣಿಯೋ–ಅದಕ್ಕೆ, ಇಷ್ಟರಮಟ್ಟಿಗೆ ಶಾಂತಿ ಇಲ್ಲದೇ ಇರಬೇಕಾದರೆ, ಅದರ ಹೃದಯ ಎಷ್ಟು ಕೆಟ್ಟದಾಗಿರಬೇಕು ! ಕೆಟ್ಟ ಹೃದಯಾನೇ ಶಾಂತಿಗೆ ಪರಮ ಶತ್ರು —ಅಲ್ವೇ ರಾಯರೇ ? ಅದರ ಪ್ರತಿ ಹೆಜ್ಜೇನೂ ಅನ್ಯಾಯವಾದ ರಕ್ತಪಾತದ ಸುದ್ದೀನ ಹೇಳ್ತಾ ಇರೋ ಹಾಗಿದೆ ! ಇರಲಿ, ಕಿವಿಗೊಟ್ಟು ಕೇಳಿ–ಆ ಸದ್ದನ್ನ ; ಆಮೇಲೆ ನನಗೆ ಹೇಳಿ —ಅದು ಡಾಕ್ಟರ ಹೆಜ್ಜೆ ಸದ್ದೇ —ಅಂತ" —ಎಂದ.

ಶಂಕರರಾಯರು ಪ್ರತಿ ಹೆಜ್ಜೆಯನ್ನೂ ಆಲಿಸಿ ಕೇಳಿದರು. ಅವರಿಗೆ ಕೇಳಿಬಂದ ಸದ್ದು ಬಹಳ ವಿಚಿತ್ರವಾಗಿತ್ತು. ಅದಕ್ಕೆ ಕಾರಣವಾಗಿದ್ದ ವ್ಯಕ್ತಿ , ಪಾದಗಳನ್ನು ನೆಲದ ಮೇಲೆ ಬಹು ಹಗುರವಾಗಿ ಇಡುತ್ತಿದ್ದಂತೆಯೂ, ಬಹು ನಿಧಾನವಾಗಿ, ಒಂದು ರೀತಿಯ ತೂಗಾಟದಿಂದ ನಡೆಯುತ್ತಿದ್ದ ಹಾಗೂ ಭಾಸವಾಯಿತು. ಈಗ ಕೇಳುತ್ತಿದ್ದ ಸದ್ದು, ಹರಿವಿಠಲ್ ರವರ ಭಾರವಾದ ಹೆಜ್ಜೆ ಸದ್ದಿನಿಂದ ತೀರ ಪ್ರತ್ಯೇಕವಾಗಿತ್ತು. ಶಂಕರರಾಯರು, ಕೇಳುವಷ್ಟು ಕಾಲ ಆಲೈಸಿ ಕೇಳಿ ಅನಂತರ, ನಿಟ್ಟುಸಿರು ಬಿಟ್ಟು ಪಿಸು ಮಾತಿನಲ್ಲೇ,

"ರಂಗಪ್ಪಾ , ಈ ಓಡಾಟದ ಸದ್ದು ಹೊರತು, ಆ ರೂಮ್ನಿಂದ ಇನ್ನೇನೂ ಕೇಳಿಸೋದೇ ಇಲ್ವೇ ?" —ಎಂದು, ಕೇಳಿದರು. ರಂಗಪ್ಪ ತಲೆದೂಗುತ್ತ ,

"ಒಂದು ಸಲ–ಅದು ಅಳ್ತಾ ಇದ್ದದ್ದನ್ನೂ ಕೇಳಿದೆ ?"

—ಎಂದ. ಇದನ್ನ ಕೇಳಿ, ಭಯೋದ್ವೇಗದಿಂದ ಶಂಕರರಾಯರಿಗೆ, ಕೊರೆಯುವ ನೀರಿನಲ್ಲಿ ತಟ್ಟನೆ ಅದ್ದಿದಹಾಗಾಯಿತು. ಅವರು, ಮುಂದಕ್ಕೆ ಬಾಗಿ,

"ಏನಂದೇ ರಂಗಪ್ಪ ? —ಅಳ್ತಾ ಇತ್ತು–ಅಂದೆಯಾ ! ಹೇಗೆ ? — ಏನಂತ ಅಳ್ತಾ ಇತ್ತು ?" —ಎಂದು ಕೇಳಿದರು.

"ಹೆಂಗಸಿನ ಹಾಗೆ–ಅಯ್ಯಾ, ಅಥವಾ —"

"ಅಥವಾ ?"

"ಎಲ್ಲಾ ಕಳಕೊಂಡು ದಿಕ್ಕೆಟ್ಟ ಪ್ರಾಣಿಯ ರೋದನ, ಅಯ್ಯಾ ! ಕೇಳಿದರೆ, ಹೊಟ್ಟೆ ಕರುಳು ತಲೆಕೆಳಗಾಗೋ ಅಂಥಾ ರೋದನ ! ಕೇಳಿದೋರಿಗೂ ಅದರ ಸಂಕಟ ತಟ್ಟಿ ಅಳೋ ಹಾಗೆ ಮಾಡೋ ಅಂಥಾ ರೋದನ ಧ್ವನಿ ! ಅದನ್ನ ಕೇಳಲಾರದೆ ಈಚೆಗೆ ಬಂದೆ —ಅಯ್ಯಾ ; ಇಲ್ದೇ ಇದ್ದರೆ ನಾನೂ ಅತ್ತುಬಿಡ್ತಿದ್ದೆನೋ ಏನೋ ! "

ಈ ವೇಳೆಗೆ, ಲಾಯರು ಸಿದ್ದೋಜೀಗೆ ಕೊಟ್ಟಿದ್ದ ಹತ್ತು ನಿಮಿಷಗಳ ಅವಧಿ ಮುಗಿದಿತ್ತು. ರಂಗಪ್ಪ , ಅಲ್ಲಿ ಹೇರಳವಾಗಿ ಬಿದ್ದಿದ್ದ ಖಾಲಿ ಪೆಟ್ಟಿಗೆಗಳ ಮಧ್ಯೆ ಇದ್ದ ಪ್ಯಾಕು ಮಾಡುವ ಒಣ ಹುಲ್ಲಿನ ರಾಶಿಯಿಂದ, ಒಂದು ಕೊಡಲಿಯನ್ನು ಈಚೆಗೆ ತೆಗೆದ. ಇಬ್ಬರೂ ಮೆಲ್ಲಗೆ ಹಂತ ಹತ್ತಿ ಹೋದರು. ಹಂತದ ಮೊಗಸಾಲೆಯಲ್ಲಿ ಡಾಕ್ಟರ ಕೊಠಡಿ ಬಾಗಿಲ ಎದುರಿಗೆ, ಒಂದು ಮೇಜಿತ್ತು. ರಂಗಪ್ಪ , ಬಾಗಿಲ ಮೇಲೆ ಬೆಳಕು ಬೀರುವಂತೆ, ಟಾರ್ಚನ್ನು ಮೇಜಿನ ಮೇಲಿಟ್ಟ. ಅನಂತರ ಇಬ್ಬರೂ ತುದಿಗಾಲ ಮೇಲೆ ಆ ಮುಚ್ಚಿದ್ದ ಬಾಗಿಲನ್ನು ಸಮೀಪಿಸಿದರು. ಆ ನಿಶ್ಶಬ್ದವಾದ ರಾತ್ರಿಯಲ್ಲಿ, ಬಾಗಿಲ ಆಚೆ ಪಕ್ಕದಿಂದ ಹೆಜ್ಜೆಯ ಸದ್ದು (ಬಹು ತಾಳ್ಮೆಯಿಂದ ನೆಲವನ್ನು ಅಳೆಯುತ್ತಿರುವುದೋ ಎಂಬಂತೆ, ಹಿಂದಕ್ಕೂ ಮುಂದಕ್ಕೂ, ಹಿಂದಕ್ಕೂ ಮುಂದಕ್ಕೂ, ಓಡಾಡುವ ಸದ್ದು) ಹೊರತು, ಬೇರೆ ಏನೂ ಕೇಳಿಸುತ್ತಿರಲಿಲ್ಲ. ಬಾಗಿಲನ್ನು ಸಮೀಪಿಸುತ್ತಲೇ ಶಂಕರರಾಯರು, ಗಂಭೀರ ಧ್ವನಿಯಲ್ಲಿ ಗಟ್ಟಿಯಾಗಿ,

"ವಿಠಲ್, ನಾನು ನಿನ್ನನ್ನು ಅತ್ಯವಶ್ಯಕವಾಗಿ ನೋಡಲೇಬೇಕಾಗಿದೆ !"

—ಎಂದು ಹೇಳಿ, ಕ್ಷಣಕಾಲ ಸುಮ್ಮನಿದ್ದರು. ಒಳಗಿನಿಂದ ಏನೂ ಉತ್ತರ ಬರದಿರಲು ಅವರು ಪುನಃ,

"ನಿನಗೆ ನ್ಯಾಯವಾದ ಎಚ್ಚರಿಕೆ ಕೊಡುತ್ತೇನೆ–ಕೇಳು; ನಿನ್ನ ಯೋಗಕ್ಷೇಮದ ವಿಚಾರವಾಗಿ ನಮ್ಮಲ್ಲಿ ನಾನಾ ಅನುಮಾನಗಳು ತಲೆ ಎತ್ತಿವೆ. ಆದ್ದರಿಂದ ನಾನು ನಿನ್ನನ್ನು ನೋಡಲೇಬೇಕು– ನೋಡಿಯೇ ತೀರುತ್ತೇನೆ ! ನೀನು ಒಪ್ಪಿಗೆ ಕೊಡದ ಪಕ್ಷದಲ್ಲಿ , ಬಲಪ್ರಯೋಗ ಮಾಡಿ ನನ್ನ ಕೆಲಸವನ್ನ ಸಾಧಿಸಿಕೊಳ್ಳುತ್ತೇನೆ ! –ಗೊತ್ತಾಯಿತೋ ?"

—ಎಂದು, ಒಂದೊಂದು ಮಾತನ್ನು ಒತ್ತಿ ಒತ್ತಿ ಹೇಳಿದರು. ಆಗ ರೂಮಿನ ಒಳಗಿನಿಂದ ಒಂದು ಕಾತರ ಧ್ವನಿ,

"ಶಂಕರ್ರಾವ್ ! ಶಂಕರ್ರಾವ್ ! ದುಡುಕಬೇಡ ! ಸ್ವಲ್ಪ ಕರುಣೆ ತೋರಿಸು !–ದೇವರಾಣೆ–ದುಡುಕಬೇಡ !"

—ಎಂದು, ಕೂಗಿ ಮೊರೆಯಿಟ್ಟಿತು. ಆ ಧ್ವನಿಯನ್ನು ಕೇಳಿದ ಕೂಡಲೆ, ಶಂಕರರಾಯರ ಕೋಪ ಭುಗ್ಗನೆ ಹತ್ತಿಉರಿಯಿತು. ಅವರು,

"ಆಹಾ ! ಅದು ವಿಠಲನ ಧ್ವನಿಯಲ್ಲ–ಗುಪ್ತನ ಧ್ವನಿ ! ರಂಗಪ್ಪಾ , ಒಡೆದುಹಾಕು– ಬಾಗಿಲ್ನ !! ಹುಂ !!" —ಎಂದು ಘರ್ಜಿಸಿದರು.

ಕೂಡಲೆ, ರಂಗಪ್ಪ ಕೈಲಿದ್ದ ಕೊಡಲಿಯನ್ನು ಎತ್ತಿ , ಆ ಕೆಂಪು ಕದದ ಮೇಲೆ ಬಲವಾಗಿ ಅಪ್ಪಳಿಸಿದ. ಆ ಏಟಿನ ಶಬ್ದಕ್ಕೆ ಇಡೀ ಕಟ್ಟಡ ನಡುಗಿತೋ–ಎಂಬಂತೆ ತೋರಿತು. ಏಟಿಗೆ ಗುರಿಯಾಗಿದ್ದ ಕದದ ಹಲಗೆಗಳು ಲಟ–ಲಟ ಎಂದವು. ಕೊಠಡಿಯ ಒಳಗಿನಿಂದ, ಪ್ರಾಣಿ ಮಾತ್ರಕ್ಕೆ ಸಹಜವಾದ ಜೀವಭಯದ ಭೀಕರವಾದ ಕಿರುಚುಧ್ವನಿ ಕೇಳಿಬಂತು. ಕದದ ಮೇಲೆ ಪುನಃ ಕೊಡಲಿ ಏಟು ಬಿತ್ತು. ಆಗ, ಅದರ ಹಲಗೆಗಳು ಸೀಳಿ, ಬಾಗಿಲ ಚೌಕಟ್ಟು ಸಡಿಲಕೊಂಡು ಅಲುಗಾಡಿತು. ರಂಗಪ್ಪ ನಾಲ್ಕು ಬಾರಿ ಕೊಡಲಿಯಿಂದ ಹೊಡೆದ. ಆದರೂ ಕದ ಜಗ್ಗಲಿಲ್ಲ. ಅದು, ಯಾವುದೋ ಬಹು ಗಟ್ಟಿಜಾತಿಯ ಮರದ ಮಂದವಾದ ಹಲಗೆಗಳಿಂದ ಭದ್ರವಾಗಿ ಜೋಡಿಸಿದ ಕದವಾಗಿತ್ತು. ರಂಗಪ್ಪ ಸ್ವಲ್ಪ ಚೇತರಿಸಿಕೊಂಡು, ಐದನೇ ಸಲ, ಹಿಂದಿನ ಏಟುಗಳಿಗಿಂತ ಬಲವಾಗಿ ಕೊಡಲಿಯನ್ನು ಪ್ರಯೋಗಿಸಿದ. ಆಗ, ಕದದ ಕೀಲು–ಕೊಂಡಿಗಳೆಲ್ಲ ಕಿತ್ತು, ಏಟುಗಳಿಂದ ತುಮುಲು ತುಮುಲಾಗಿದ್ದ ಅದು ಕೊಠಡಿಯ ಒಳಪಕ್ಕದ ಜಮಖಾನೆಯ ಮೇಲೆ ಧೊಪ್ಪನೆ ಬಿತ್ತು.

ಬಾಗಿಲ ಮೇಲೆ ದಾಳಿಯಿಟ್ಟ ಈ ಇಬ್ಬರು, ತಾವು ನಡೆಸಿದ ದಾಂಧಲೆಯಿಂದ ಮತ್ತು ದಾಳಿ ಮುಗಿದ ಕೂಡಲೆ ನೆಲೆಸಿದ ನಿಶ್ಶಬ್ದತೆಯಿಂದ, ತಾವೇ ದಿಗಿಲು ಬಿದ್ದರು. ಸ್ತಂಭಿತರಾಗಿ ಬಾಗಿಲಲ್ಲೇ ನಿಂತು, ಕೊಠಡಿಯ ಒಳಭಾಗವನ್ನು ಇಣಿಕಿ ನೋಡಿದರು. ವಿದ್ಯುದ್ದೀಪದ ಬೆಳಕಿನಿಂದ, ವಿಶಾಲವಾಗಿದ್ದ ಆ ಕೊಠಡಿ

ಪ್ರಕಾಶಮಾನವಾಗಿತ್ತು. ಕೊಠಡಿಯ ಒಂದು ಗೋಡೆಯ ಬದಿಯಲ್ಲಿದ್ದ ಮೇಜಿನ ಮೇಲೆ, ಒಂದು ಎಲೆಕ್ಟ್ರಿಕ್ ಸ್ಟೋವ್ ಉರಿಯುತ್ತಿತ್ತು. ಅದರ ಮೇಲೆ ಇಡಲ್ಪಟ್ಟದ್ದ ಒಂದು ಕೆಟಲಿನಿಂದ, ಆವಿ ಹೊರಡುತ್ತಿದ್ದ ಸದ್ದು ಕೇಳಿಬರುತ್ತಿತ್ತು. ಮೇಜು–ಬೀರುಗಳ ಕೆಲವು ಡ್ರಾಯರುಗಳು ಹೊರಗೆಳೆಯಲ್ಪಟ್ಟಿದ್ದವು. ಡಾಕ್ಟರು ಕುಳಿತು ಬರೆಯಲು ಉಪಯೋಗಿಸುತ್ತಿದ್ದ ದೊಡ್ಡ ಮೇಜಿನ ಮೇಲೆ, ಕಾಗದ ಪತ್ರಗಳು ಅಚ್ಚುಗಟ್ಟಾಗಿ ಜೋಡಿಸಲ್ಪಟ್ಟಿದ್ದವು. ಒಂದು ಸೋಫಾದ ಪಕ್ಕದಲ್ಲಿ ಸಣ್ಣ ಟೀಪಾಯೊಂದರ ಮೇಲೆ, ಟೀ ಸಾಮಗ್ರಿಗಳ ತಟ್ಟೆ ಸೇವನೆಗೆ ಸಿದ್ಧವಾಗಿತ್ತು. ಸಾಮಾನ್ಯವಾಗಿ ಇಂಥ ಕೊಠಡಿಗಳಿಗೆ ತಕ್ಕ ಸಜ್ಜಿಕೆ ವಸ್ತುಗಳಿಂದ ಕೂಡಿದ್ದ ಈ ಕೊಠಡಿಯಲ್ಲಿ , ವಿಶೇಷವೆಂದರೆ– ದೊಡ್ಡ ಮೇಜಿನ ಅಕ್ಕಪಕ್ಕಗಳಲ್ಲಿ, ಅನೇಕಾನೇಕ ರಾಸಾಯನಿಕ ಲವಣ–ದ್ರವ್ಯ–ಆಮ್ಲ ಇತ್ಯಾದಿಗಳು ತುಂಬಿದ್ದ, ಹಲವು ಗಾತ್ರ–ವರ್ಣ–ಆಕಾರಗಳ ಸೀಸೆ–ಡಬ್ಬಗಳಿಂದ ಭರ್ತಿಯಾಗಿದ್ದ ಗಾಜಿನ ಬೀರುಗಳು. ಕೊಠಡಿಯ ಈ ವಿವರಗಳೆಲ್ಲ, ಶಂಕರರಾಯರು ಅನಂತರ ನಿಧಾನವಾಗಿ ಗಮನಿಸಿದ ವಿಷಯಗಳು. ಅವರ ಕಣ್ಣಿಗೆ ಮೊಟ್ಟಮೊದಲು ಬಿದ್ದದ್ದು ಒಂದು ಭಯಾನಕ ದೃಶ್ಯ.

ಕೊಠಡಿಯ ಮಧ್ಯದಲ್ಲಿ ಸರಿಯಾಗಿ, ತೂಗುದೀಪದ ಕೆಳಗೆ, ಕೈಕಾಲುಗಳನ್ನು ವಕ್ರವಕ್ರವಾಗಿ ಬೀಸಿ ಚಾಚಿ, ಒಂದು ಮನುಷ್ಯ ದೇಹ ಬೋರಲಾಗಿ ಬಿದ್ದಿತ್ತು. ಇವರು ನೋಡಿದಾಗ, ಆ ದೇಹದಲ್ಲಿ ಕುಟುಕು ಜೀವ ಇನ್ನೂ ಸ್ಪಂದಿಸುತ್ತಿದ್ದಂತೆ ತೋರಿತು. ಲಾಯರೂ ರಂಗಪ್ಪನೂ, ಮುರಿದು ಬಿದ್ದಿದ್ದ ಬಾಗಿಲನ್ನು ದಾಟಿ, ತುದಿಗಾಲ ಮೇಲೆ, ಆ ದೇಹದ ಬಳಿ ಹೋದರು. ಇಬ್ಬರೂ ಸೇರಿ, ಬಾಗಿ, ಆ ದೇಹವನ್ನು ಬೆನ್ನಮೇಲೆ ಹೊರಳಿಸಿ ನೋಡಿದರು. ಕಾಮೇಶ ಗುಪ್ತನ ಅಸಹ್ಯ ಕರಾಳ ಮುಖ !

ಕಾಮೇಶ ಗುಪ್ತ ಆ ಸಮಯದಲ್ಲಿ , ತನ್ನ ಎತ್ತರ ಗಾತ್ರಗಳಿಗೆ ತೀರ ಮೀರಿದ ಅಳತೆಯ ಉಡುಪನ್ನು ಧರಿಸಿದ್ದ. ಈ ಉಡುಪು ಡಾಕ್ಟರ ಅಳತೆಗೆ ಸರಿಯಾಗಬಹುದಾಗಿತ್ತು. ಇವರು ಅವನ ಮುಖ ಹೊರಳಿಸಿದಾಗ, ಅದರ ಮಾಂಸಖಂಡಗಳು ಸ್ವಲ್ಪಮಟ್ಟಿಗೆ ಅದುರುತ್ತ ಜೀವದ ಲಕ್ಷಣ ಕಂಡುಬಂದರೂ, ಅದು ನಿಜವಾಗಿಯೂ ಕಡೆಯುಸಿರಿನ ಚಿಹ್ನೆಯಾಗಿತ್ತು. ಇವರು ನೋಡುತ್ತಿದ್ದ ಹಾಗೆಯೇ ಅದೂ ನಿಂತುಹೋಯಿತು. ಅವನ ಬಿಗಿದ ಬಲ ಮುಷ್ಟಿಯಲ್ಲಿ ಒಂದು ಚಿಕ್ಕ ಸೀಸೆಯಿತ್ತು. ಅವನ ಸಮೀಪದಲ್ಲಿ ಯಾವುದೋ ವಿಷದ ಕಟುವಾದ ವಾಸನೆಯಿತ್ತು. ಶಂಕರರಾಯರಿಗೆ, ಅವನು ಆತ್ಮಹತ್ಯೆ ಮಾಡಿಕೊಂಡಿದ್ದನೆಂದು ಊಹಿಸುವುದು ಕಷ್ಟವಾಗಲಿಲ್ಲ. ಅವರು ಗಂಭೀರವಾಗಿ,

"ಹುಮ್ ! ರಕ್ಷಿಸೋಕೇ ಆಗಲಿ —ಶಿಕ್ಷಿಸೋಕೇ ಆಗಲಿ, ನಾವು ತೀರ ತಡವಾಗಿ ಬಂದ ಹಾಗಾಯಿತು– ರಂಗಪ್ಪಾ. ಗುಪ್ತ ಸತ್ತುಹೋಗಿದ್ದಾನೆ. ಈಗ ನಮಗೆ ಉಳಿದಿರೋದು, ನಿನ್ನ ಧಣಿಗಳ ದೇಹಾನ ಪತ್ತೆಮಾಡೋದು ಮಾತ್ರ" —ಎಂದರು.

ಈಗ ಇವರಿದ್ದ ಕಟ್ಟಡದ ನೆಲಮಟ್ಟದ ಭಾಗವೆಲ್ಲ , ಹೆಚ್ಚು ಕಡಿಮೆ, ಪ್ರಯೋಗಶಾಲೆ ಯಾಗಿತ್ತು. ಈ ಪ್ರಯೋಗಶಾಲೆಗೆ, ಮೊದಲೇ ತಿಳಿಸಿದಂತೆ, ಎತ್ತರದ ಮಟ್ಟದಲ್ಲಿ, ಗಾಳಿ–ಬೆಳಕಿನ ಗವಾಕ್ಷಗಳು ಮಾತ್ರ ಇದ್ದವು. ಪ್ರಯೋಗಶಾಲೆಯ ಒಂದು ತುದಿಯ ಮೂಲೆಯ ಕಡೆಗೇ ಹಂತವಿದ್ದದ್ದು. ಈ ಹಂತದ ಮೇಲು ಮಟ್ಟದಲ್ಲೇ ಡಾಕ್ಟರ ಖಾಸಾ ಕೊಠಡಿ; ಈ ಕೊಠಡಿಗೆ, ಒಳಅಂಗಳದ ಪಾರ್ಶ್ವಕ್ಕೆ, ಮೂರು ಕಿಟಕಿಗಳಿದ್ದವೆಂದೂ ತಿಳಿಸಿಯಾಗಿದೆ. ಈಗ ಪತ್ತೆಯಾದ ಇನ್ನು ಕೆಲವು ವಿಷಯಗಳೆಂದರೆ, ಹಿಂದಿನ ಬೀದಿಯ ಹಳೇ ಬಾಗಿಲಿಂದ ಪ್ರಯೋಗಶಾಲೆಯನ್ನು ಪ್ರವೇಶಿಸುವುದಕ್ಕೆ ಇದ್ದ ಒಂದು ಒಳ ಓಣಿಮಾರ್ಗ; ಮತ್ತು ಡಾಕ್ಟರ ಕೊಠಡಿಯಿಂದ ಈ ಓಣಿಗೆ ಇಳಿಯಲು ಇದ್ದ ಇನ್ನೊಂದು ಹಂತ. ಇವಲ್ಲದೆ, ಈ ಕಟ್ಟಡದಲ್ಲಿ , ಕೆಲವು ಕತ್ತಲಾದ ಚಿಕ್ಕ ಕೊಠಡಿಗಳೂ, ಒಂದು ಪಕ್ಕದಲ್ಲಿ ವಿಶಾಲವಾದ ಒಂದು ನೆಲಮಾಳಿಗೆಯೂ ಇದ್ದವು.

ಲಾಯರೂ ರಂಗಪ್ಪನೂ ಜೊತೆಯಾಗಿ, ಈ ಸ್ಥಳಗಳನ್ನೆಲ್ಲ ಕೂಲಂಕಷವಾಗಿ ಪರೀಕ್ಷಿಸಿದರು. ಚಿಕ್ಕ ಕೊಠಡಿಗಳೆಲ್ಲ ಖಾಲಿಯಾಗಿದ್ದವು. ಅಲ್ಲದೇ ಅವುಗಳು ಬಹುಕಾಲದಿಂದ ತೆರೆಯಲ್ಪಟ್ಟಿರಲಿಲ್ಲವೆನ್ನುವುದಕ್ಕೆ, ಅವುಗಳ ಬಾಗಿಲ ಮೇಲಿನ ಮಂದವಾದ ಧೂಳಿನ ಪೊರೆಯೇ ಸಾಕ್ಷಿಯಾಗಿತ್ತು. ಆದ್ದರಿಂದ, ಅವುಗಳ ಪರೀಕ್ಷೆಗೆ ಬಹಳ ಕಾಲ ಹಿಡಿಸಲಿಲ್ಲ.

ನೆಲಮಾಳಿಗೆ ಕೆಲಸಕ್ಕೆ ಬಾರದ ನಾನಾತರದ ಸಾಮಾನುಗಳಿಂದ ಕಿಕ್ಕಿರಿದು ತುಂಬಿತ್ತು. ಇವು, ಡಾ॥ ವಿಠಲ್‌ರವರಿಗೆ ಮುಂಚೆ ಈ ಕಟ್ಟಡದ ಒಡೆಯರಾಗಿದ್ದವರ ಕಾಲದಿಂದ ಕೂಡಿಬಂದು ಮರೆತದ್ದಾಗಿದ್ದವು. ನೆಲಮಾಳಿಗೆಗೆ ಇಳಿಯಲು ಒಂದು ಹಂತವಿತ್ತು. ಹಂತದ ಕೆಳಮಟ್ಟದಲ್ಲಿ ನೆಲಮಾಳಿಗೆಗೆ ಹೋಗುವ ಬಾಗಿಲಿತ್ತು. ಟಾರ್ಚಿನ ಬೆಳಕಿನಲ್ಲಿ ಇಬ್ಬರೂ ಹಂತ ಇಳಿದು ಆ ಬಾಗಿಲನ್ನು ತೆರೆದರು. ತೆರೆಯುತ್ತಿದ್ದ ಹಾಗೆಯೇ ಜೇಡನ ಒಂದು ಭಾರಿ ಅಖಂಡವಾದ ಬಲೆ —ಹಲವು ವರ್ಷಗಳಿಂದ ಬಾಗಿಲ ಹಿಂದೆ ಅಡ್ಡವಾಗಿದ್ದದ್ದು –ಕಿತ್ತುಬಿತ್ತು.

ಅದನ್ನು ನೋಡಿದೊಡನೆಯೇ, ಅಲ್ಲಿ ಇನ್ನು ಹುಡುಕುವುದು ವ್ಯರ್ಥವೆಂದು ಸ್ಪಷ್ಟವಾಯಿತು. ಹೀಗೆ, ಬದುಕಿರಲಿ–ಸತ್ತಿರಲಿ–ಹರಿವಿಠಲರವರ ಕುರುಹು ಎಲ್ಲೂ ಕಾಣಿಸಲಿಲ್ಲ.

ನೆಲಮಾಳಿಗೆಯಿಂದ ಈಚೆಗೆ ಮೇಲಕ್ಕೆ ಬಂದು, ಇಬ್ಬರೂ ಒಳಓಣಿಯನ್ನು ಪ್ರವೇಶಿಸಿದರು. ಅಲ್ಲಿಗೆ ಬಂದಾಗ, ರಂಗಪ್ಪ , ನೆಲಕ್ಕೆ ಹಾಸಿದ್ದ ಕಲ್ಲು ಚಪ್ಪಡಿಗಳ ಮೇಲೆ ಹೆಜ್ಜೆ ಕುಟ್ಟಿದ. ಟೊಳ್ಳುಸದ್ದು ಕೇಳಿದಂತಾಗಲು, ಶಂಕರರಾಯರ ಕಡೆ ತಿರುಗಿ,

"ಅಯ್ಯಾ, ಅವರು ಇಲ್ಲಿ ಹೂಳಲ್ಪಟ್ಟಿರಬಹುದು —ಅಲ್ವೇ ?"

—ಎಂದ. ಲಾಯರು,

"ಅಥವಾ, ಅವರು ಪರಾರಿಯಾಗಿರಬಹುದು !"

—ಎಂದು, ಮಾತು ಜೋಡಿಸಿ, ಹಿಂದಿನ ಬೀದಿಗೆ ತೆರೆಯುತ್ತಿದ್ದ ಆ ಹಳೇ ಬಾಗಿಲಿನ ಒಳಪಾರ್ಶ್ವವನ್ನು ಟಾರ್ಚಿನ ಬೆಳಕಿನಲ್ಲಿ ಪರೀಕ್ಷಿಸಿದರು. ಒಳಗಿನಿಂದ ಬಾಗಿಲ ಬೀಗ ಹಾಕಿತ್ತು. ಹಾಗೇ ಬೆಳಕನ್ನು ನೆಲಕ್ಕೆ ತಿರುಗಿಸಿದಾಗ, ಅಲ್ಲಿ ಬಾಗಿಲ ಬುಡದಲ್ಲಿ, ಒಂದು ತುಕ್ಕುಹಿಡಿದ ದೊಡ್ಡ ಬೀಗದ ಕೈ, ಎರಡು ತುಂಡಾಗಿ ಬಿದ್ದಿತ್ತು. ಲಾಯರು ಬಾಗಿ ಅವನ್ನು ಕೈಗೆ ತೆಗೆದುಕೊಂಡು,

"ಇವನ್ನು ನೋಡಿದರೆ, ಬಹಳ ಕಾಲದಿಂದ ಇದರ ಉಪಯೋಗವಾಗಿಲ್ಲ ಅಂತ ಕಾಣುತ್ತೆ" —ಎಂದರು.

"ಯಾಕಿಲ್ಲ —ರಾಯರೇ ? ನೋಡಿ, ಯಾರೋ ಕಾಲಿನಿಂದ ಇದನ್ನ ಬೇಕಂತಲೇ ತುಳಿದು ಮುರಿದ ಹಾಗೆ ಕಾಣೊಲ್ವೇ ?" —ಎಂದ, ರಂಗಪ್ಪ.

"ಹ್ಞಾ ! ಸರಿಯಾಗಿ ನೋಡು ರಂಗಪ್ಪಾ , ತುಂಡಾದ ಪಕ್ಕಗಳೂ ತುಕ್ಕುಹಿಡಿದಿದೆ" —ಎಂದರು, ಲಾಯರು.

ಭೀತಿಯಿಂದ–ಇಬ್ಬರೂ, ಒಬ್ಬರ ಮುಖ ಒಬ್ಬರು ನೋಡಿದರು. ಅನಂತರ ಲಾಯರು,

"ಇದು ನನಗೆ ಅರ್ಥವೇ ಆಗ್ತಾ ಇಲ್ಲ–ರಂಗಪ್ಪಾ ; ಬಾ, ಡಾಕ್ಟರ ಕೊಠಡಿಗೆ ಹೋಗೋಣ" —ಎಂದರು.

ಇಬ್ಬರೂ ಮೌನವಾಗಿ ಪ್ರಯೋಗಶಾಲೆಗೆ ಹಿಂತಿರುಗಿ, ಹಂತ ಹತ್ತಿ ಡಾಕ್ಟರ ಕೊಠಡಿಯನ್ನು ಪ್ರವೇಶಿಸಿದರು. ಅಲ್ಲಿ, ಇನ್ನೂ ಅಲ್ಲೇ ಬಿದ್ದಿದ್ದ ಗುಪ್ತನ ಶವದ ಕಡೆ ಮಧ್ಯೆ ಮಧ್ಯೆ ಭಯಗ್ರಸ್ತದೃಷ್ಟಿಯನ್ನು ಹೊರಳಿಸುತ್ತ, ಆ ಕೊಠಡಿಯನ್ನು ಕೂಲಂಕಷವಾಗಿ ಪರೀಕ್ಷಿಸತೊಡಗಿದರು. ಒಂದು ಮೇಜಿನ ಮೇಲೆ ಕೆಲವು ರಸಾಯನಿಕ ಲವಣಗಳಿದ್ದವು. ಇವಲ್ಲದೆ, ಹಲವು ಗಾಜಿನ ತಟ್ಟೆಗಳಲ್ಲಿ —ಬೇರೆ ಬೇರೆ ಪ್ರಮಾಣದಲ್ಲಿ ಅಳತೆಮಾಡಿ ಗುಡ್ಡೆ ಮಾಡಿಟ್ಟ —ಯಾವುದೋ ಒಂದು ಸ್ವಚ್ಛ ಬಿಳೀ ಲವಣ ಇತ್ತು. ಇವಲ್ಲದೆ, ಹತ್ತಿರದಲ್ಲೇ ಕೆಲವು ಗಾಜಿನ ಕೊಳವೆಗಳೂ, ಬುಡ್ಡಿಗಳೂ, ಅಳತೆ ಗ್ಲಾಸೂ–ತೊಳಸುವ ಗಾಜಿನ ಕಡ್ಡಿಗಳೂ ಇದ್ದವು. ಇವುಗಳೆಲ್ಲ ಆ ಮೇಜಿನ ಮೇಲೆ ಹರಡಿಕೊಂಡಿದ್ದ ರೀತಿಯನ್ನು ನೋಡಿದರೆ–ಆ ನಿರ್ಭಾಗ್ಯ ಮನುಷ್ಯ, ಯಾವುದೋ ರಾಸಾಯನಿಕ ಪ್ರಯೋಗವನ್ನು ನಡೆಸುತ್ತಿದ್ದು , ಅದಕ್ಕೆ ಅಡ್ಡಿ ಬಂದು–ಕೆಲಸ ಅರ್ಧಕ್ಕೇ ನಿಂತ ಹಾಗೆ ತೋರುತ್ತಿತ್ತು.

ರಂಗಪ್ಪ , ಬಿಳೀ ಲವಣದ ರಾಶಿಗಳ ತಟ್ಟೆಗಳನ್ನು ತೋರಿಸುತ್ತ ,

"ಅಯ್ಯಾ —ಇದೇ ಲವಣ– —ಡಾಕ್ಟರು ಯಾವಾಗಲೂ ನನ್ನಿಂದ ತರಿಸಿಕೊಳ್ತಾ ಇದ್ದದ್ದು"

–––ಎಂದ, ಅವನು ಮಾತು ಮುಗಿಸುತ್ತಿದ್ದ ಹಾಗೆಯೇ, ಸ್ಟೋವ್–ಮೇಲೆ ಕಾಯುತ್ತಿದ್ದ ಕೆಟಲು ತಟ್ಟನೆ ಶಬ್ದ ಮಾಡತೊಡಗಿತು. ಅದರಲ್ಲಿ ಕಾಯುತ್ತಿದ್ದ ದ್ರವ ಉಕ್ಕಿಬಂದು, ಬಿಸಿ ಸ್ಟೋವ್ ಮೇಲೆ ಚೆಲ್ಲಿ ಬಿದ್ದ ಶಬ್ದವಾಗಿದ್ದಿತು, ಅದು. ಅದರಿಂದ ಆಕರ್ಷಿತರಾಗಿ ಇಬ್ಬರೂ ಸ್ಟೋವನ್ನು ಸಮೀಪಿಸಿದರು. ಅದರ ಪಕ್ಕದಲೇ ಸೋಫಾ, ಟೀ ತಟ್ಟೆ ಎಲ್ಲ ಇದ್ದದ್ದು. ಟೀ ತಟ್ಟೆಯಲ್ಲಿ ಒಂದು ಕಪ್ಪಿನೊಳಕ್ಕೆ ಸಕ್ಕರೆ ಹಾಕಿದ್ದುದು ಕಂಡಿತು. ಸೋಫಾದ ಇನ್ನೊಂದು ಪಕ್ಕದಲ್ಲಿ —ಕೈಗೆ ಎಟಕುವ ಹಾಗೆ, ಒಂದು ಪುಸ್ತಕಗಳ ಅಟ್ಟಲು ಇತ್ತು. ಅದರಲ್ಲಿ ಅನೇಕ ಪುಸ್ತಕಗಳಿದ್ದವು. ಒಂದು ತೆರೆದ ಪುಸ್ತಕ. ಸೋಫಾದ ಕೈಪಿಡಿಯ ಮೇಲೆ ಬೋರಲಾಗಿ ಇಡಲ್ಪಟ್ಟಿತ್ತು. ಶಂಕರರಾಯರು ಅದನ್ನು ಎತ್ತಿ ನೋಡಿದರು. ಅದು, ರಾಮಕೃಷ್ಣಾಶ್ರಮದವರು ಪ್ರಕಟಿಸಿದ್ದ "ವಿವೇಕವಾಣಿ" ಎಂಬ –ವಿವೇಕಾನಂದರ ಧರ್ಮಬೋಧೆಗಳ ಗ್ರಂಥವಾಗಿತ್ತು. ಈ ಗ್ರಂಥದ ವಿಷಯವಾಗಿ , ಶಂಕರರಾಯರು ಡಾ॥ ವಿಠಲ್‌ರವರ ಬಾಯಿಂದ ಅನೇಕ ಸಲ ಪ್ರಶಂಸೆಯನ್ನು ಕೇಳಿದ್ದರು. ಆದ್ದರಿಂದ, ಈಗ —ಈ ಪುಸ್ತಕದ ಪುಟಗಳ ಅಂಚಿನಲ್ಲಿ, ತಮ್ಮ ಮಿತ್ರನ ಸ್ವಹಸ್ತಾಕ್ಷರಗಳಲ್ಲಿ , ತೀರ ಅಸಹ್ಯವಾದ ಅವಾಚ್ಯಶಬ್ದಗಳೂ–ಟಿಪ್ಪಣಿಗಳೂ ಇದ್ದದ್ದನ್ನು ನೋಡಿ, ಶಂಕರರಾಯರಿಗೆ ದಂಗು ಬಡಿದ ಹಾಗಾಯಿತು.

ಹಾಗೆಯೇ, ಕೊಠಡಿಯ ಸಾಮಾನುಗಳನ್ನೆಲ್ಲ ಪರೀಕ್ಷಿಸುತ್ತ, ಅವರಿಬ್ಬರೂ, ಎರಡು ಕಿಟಕಿಗಳ ನಡುವೆ ಗೋಡೆ ಪಕ್ಕದಲ್ಲಿ ಇದ್ದ ಒಂದು ನಿಲುವುಗನ್ನಡಿಯ ಹತ್ತಿರ ಬಂದರು. ಇಬ್ಬರೂ ಕನ್ನಡಿಯಲ್ಲಿ ನೋಡಿದರು. ಅದರಲ್ಲಿ ಪ್ರತಿಬಿಂಬಿತವಾದ ತಮ್ಮ ಭಯಗ್ರಸ್ತ ವಿವರ್ಣ ಮುಖಗಳನ್ನು ನೋಡಿ, ಇಬ್ಬರೂ, ತಮ್ಮ ಪ್ರಯತ್ನವಿಲ್ಲದೆಯೇ ನಡುಗಿದರು.

"ಆಹಾ ! ಅಯ್ಯಾ, ಈ ಕನ್ನಡಿ —ನಿಜವಾಗಲೂ, ಏನೇನು ವಿಚಿತ್ರ ನೋಡಿದೆಯೋ!" — ಎಂದ ರಂಗಪ್ಪ.

"ಅಡ್ಡಿಯೇನು ! —ಅಡ್ಡಿಯೇನು ! ರಂಗಪ್ಪಾ ; ಆದರೆ, ನನಗನ್ನಿಸುತ್ತೆ."

"ಏನಂತ —ಅಯ್ಯಾ !"

"ಈ ಕನ್ನಡಿ, ತನಗಿಂತ ವಿಚಿತ್ರವಾದದ್ದು ಏನನ್ನೂ ನೋಡಿರಲಾರದೂಂತ !"

"ಅದೂ ನಿಜಾನ್ನಿ"

"ಅದ್ಸರಿ —ರಂಗಪ್ಪ , ಈ ಕನ್ನಡಿ ಡಾಕ್ಟರಿಗೆ ಏಕೆ ಬೇಕಾಗಿತ್ತು ?–ಅಲ್ಲ —ಅಲ್ಲ ! —ಅವರಿಗೆ ಏಕೆ ಬೇಕಾಗಿ–ದೆ ?"

— ಎಂದು, ಕಡೇ ಶಬ್ದ ಉಚ್ಚರಿಸಿದಾಗ, ತಟ್ಟನೆ ಎಚ್ಚರಗೊಂಡು—ತಿದ್ದಿಕೊಂಡರು.

'ಹೌದು, ಹೌದು, ಕೇಳಬೇಕಾದ ಪ್ರಶ್ನೇನೇ —ಅದು"—ಎಂದ, ರಂಗಪ್ಪ.

ಕನ್ನಡಿ ಹತ್ತಿರದಿಂದ ಲಾಯರೂ ರಂಗಪ್ಪನೂ, ಡಾಕ್ಟರು ಬರವಣಿಗೆಗೆ ಉಪಯೋಗಿಸುತ್ತಿದ್ದ ದೊಡ್ಡ ಮೇಜಿನ ಬಳಿಗೆ ಹೋದರು. ಅದರ ಮೇಲೆ, ಅಚ್ಚುಗಟ್ಟಾಗಿ ಜೋಡಿಸಿಟ್ಟಿದ್ದ ಕಾಗದ ಪತ್ರಗಳ ಗುಂಪಿನಲ್ಲಿ, ಮೇಲೆ ಕಾಣುವ ಹಾಗೆಯೇ, ಒಂದು ದೊಡ್ಡ — ಉದ್ದವಾದ ಲಕ್ಕೋಟೆ ಇತ್ತು. ಅದರ ಮೇಲೆ, ಡಾಕ್ಟರ ಹಸ್ತಾಕ್ಷರಗಳಲ್ಲಿ, ಶಂಕರರಾಯರ–ಹೆಸರು–ವಿಳಾಸಗಳು ಲಿಖಿತವಾಗಿದ್ದವು. ಅರಗಿನ ಮುದ್ರೆಯಿಂದ ಮೊಹರು ಮಾಡಲ್ಪಟ್ಟಿದ್ದ ಆ ಲಕ್ಕೋಟೆಯನ್ನು ಶಂಕರರಾಯರು ಒಡೆದು ನೋಡಿದರು. ಅದರ ಒಳಗಡೆ ಅನೇಕ ಕಾಗದ ಪತ್ರಗಳಿದ್ದವು. ಅವರು ನೋಡಿದ ಮೊದಲನೇ ಪತ್ರವೇ, ಒಂದು ಹೊಸ ಉಯಿಲು ಆಗಿತ್ತು. ಅದರಲ್ಲಿ, ಲಾಯರು ಡಾಕ್ಟರಿಗೆ ಆರು ತಿಂಗಳ ಹಿಂದೆ ವಾಪಸು ಮಾಡಿದ ಅವರ ಉಯಿಲಿನಲ್ಲಿದ್ದಂತೆಯೇ, "ಈ ಪತ್ರವನ್ನು ಬರೆದವರು ಮೃತರಾದ ಪಕ್ಷದಲ್ಲಿ ಇದನ್ನು ಮೃತಿಪತ್ರವೆಂದೂ —ಅದೃಶ್ಯರಾದ ಪಕ್ಷದಲ್ಲಿ, ದಾನಪತ್ರವೆಂದೂ" ಪರಿಗಣಿಸಲ್ಪಡಬೇಕೆಂದು– ವಿಚಿತ್ರವಾದ ಸೂಚನೆಯಿತ್ತು. ಈ ಹೊಸ ಉಯಿಲಿನಲ್ಲಿ ಬಹು ಮುಖ್ಯವಾದ ಒಂದು ವ್ಯತ್ಯಾಸವಿತ್ತು. ಹೆಚ್ಚು ಕಡಿಮೆ ಎಲ್ಲ ಅಂಶಗಳಲ್ಲೂ ಹಳೇ ಉಯಿಲನ್ನೇ ಹೋಲುತ್ತಿದ್ದ ಈ ಪತ್ರದಲ್ಲಿ, ಕಾಮೇಶ ಗುಪ್ತನ ಹೆಸರಿಗೆ ಬದಲಾಗಿ, ಬ್ಯಾರಿಸ್ಟರ್–ಗಜೇಂದ್ರಪುರದ ಜಯರಾಯರ ಮಕ್ಕಳು –ಶಂಕರರಾವ್–––ಎಂದಿತ್ತು. ಪತ್ರದಲ್ಲಿ ತಮ್ಮ ಹೆಸರನ್ನು ಕಂಡು, ಲಾಯರಿಗೆ ದಿಗ್ಭ್ರಾಂತಿಯಾಯಿತು ! ಆಶ್ಚರ್ಯಚಕಿತರಾದ ಅವರ ಕಣ್ಣುಗಳಿಗೆ ಕ್ಷಣಕಾಲ ಕತ್ತಲು ಕವಿದಂತಾಯಿತು ! ತಮ್ಮ ಕಣ್ಣುಗಳನ್ನು ತಾವೇ ನಂಬದಾದರು. ಈ ಹೊಸ ಝಳುಕಿನಿಂದ ಚೇತರಿಸಿಕೊಂಡು ಪುನಃ ಪತ್ರವನ್ನು ನೋಡಿದರು; ಹೌದು — ಅವರದೇ ಹೆಸರು ! ! ಲಾಯರು ಬಿಡುಗಣ್ಣಾಗಿ, ರಂಗಪ್ಪನ ಕಡೆ ನೋಡಿದರು ; ಕೈಲಿದ್ದ ಪತ್ರದ ಕಡೆ ನೋಡಿದರು; ಅನಂತರ, ನೆಲಕ್ಕೆ ಹಾಸಿದ್ದ ಜಮಖಾನೆಯ ಮೇಲೆ ಚಾಚಿಬಿದ್ದಿದ್ದ ಘಾತುಕನ ಶವದ ಕಡೆ ನೋಡಿದರು. ನೋಡಿ, ನಿಟ್ಟುಸಿರು ಬಿಟ್ಟು —ಕರವಸ್ತ್ರದಿಂದ ಹಣೆಯ ಬೆವರನ್ನು ಒರಸಿಕೊಳ್ಳುತ್ತ ,

"ರಂಗಪ್ಪಾ , ನನ್ನ ತಲೆ ಸುತ್ತುತ್ತಾ ಇದೆ ! ಉಸಿರು ಕಟ್ಟಿದ ಹಾಗಾಗ್ತಾ ಇದೆ ! ಆಶ್ಚರ್ಯ ! ಆಶ್ಚರ್ಯ ! ರಂಗಪ್ಪಾ, ಪರಮಾಶ್ಚರ್ಯ !!!" —ಎಂದರು.

"ಏನು ರಾಯರೇ, ಹೊಸದು ಏನು ಪತ್ತೆಮಾಡಿದಿರಿ ?' '

—ಎಂದು, ಭಯ —ಕುತೂಹಲಗಳಿಂದ ಕೇಳಿದ, ರಂಗಪ್ಪ.

"ನೀನೇ ನೋಡು" —ಎಂದು. ಪತ್ರವನ್ನು ಅವನ ಕೈಗೆ ಕೊಟ್ಟರು. ರಂಗಪ್ಪ ಪತ್ರವನ್ನೋದಿ — ನಿಧಾನವಾಗಿ ತಲೆದೂಗಿದ.

"ನೋಡು, ರಂಗಪ್ಪಾ, ಈ ಪತ್ರ ಇಷ್ಟು ದಿನಗಳೂ ಈ ಪಾಪಿ ಘಾತುಕನ ವಶದಲ್ಲಿತ್ತು. ಇವನಿಗೆ ನನ್ನಲ್ಲಿ ವಿಶ್ವಾಸ ಇರೋಕೆ ಯಾವ ಕಾರಣವೂ ಇರಲಿಲ್ಲ. ಹಿಂದೆ, ನಿನ್ನ ಧಣಿಗಳು ಒಂದು ಉಯಿಲು ಬರೆದಿದ್ದರು. ಅದೂ ಇದರ ಹಾಗೇ ಇತ್ತು. ಆದರೆ, ಅದರಲ್ಲಿ ನನ್ನ ಹೆಸರಿಗೆ ಬದಲಾಗಿ ಇವನ ಹೆಸರಿತ್ತು. ಈ ವಿಷಯ ನನಗೆ ಗೊತ್ತಿತ್ತು ; ಇವನಿಗೂ ಗೊತ್ತಿತ್ತು. ಈಗ, ಈಚೆಗೆ ಬರೆದ ಈ ಪತ್ರದಲ್ಲಿ , ಇವನ ಹೆಸರಿಗೆ ಬದಲಾಗಿ ನನ್ನ ಹೆಸರಿದೆ. ಅಂದಮೇಲೆ, ರಂಗಪ್ಪಾ, ಈ ಪತ್ರಾನ ನೋಡಿ ಇವನಿಗೆ ಎಷ್ಟು ಹೊಟ್ಟೆ ಉರಿದಿರಬೇಕು !!

ಆದರೂ, ಇವನು ತನ್ನ ವಶದಲ್ಲಿದ್ದ ಈ ಪತ್ರಾನ ನಾಶಮಾಡದೆ ಇಟ್ಟಿದ್ದನಲ್ಲ ! —ಅದೇ ನನಗೆ ಆಶ್ಚರ್ಯ–ಬಹಳ ಆಶ್ಚರ್ಯ ! !"

–––ಎಂದು, ಲಾಯರು, ಲಕ್ಕೋಟೆಯೊಳಗಿಂದ ಇನ್ನೊಂದು ಕಾಗದವನ್ನೆಳೆದು ನೋಡಿದರು. ಅದೂ ಡಾಕ್ಟರ ಹಸ್ತಾಕ್ಷರದಲ್ಲೇ ಬರೆದ ಒಂದು ಚಿಕ್ಕ ಪತ್ರವಾಗಿತ್ತು. ಕಾಗದದ ಮೇಲಿನ ಬಲಮೂಲೆಯಲ್ಲಿ, ಪತ್ರ ಬರೆದ ತಾರೀಕಿನ ಗುರುತಿತ್ತು. ಅದನ್ನು ನೋಡಿ ಲಾಯರು, ಪುನಃ ಆಶ್ಚರ್ಯದಿಂದ,

"ಓ–ರಂಗಪ್ಪಾ ! ಈ ಕಾಗದದ ತಾರೀಕು ನೋಡು ! ನಿನ್ನ ಧಣಿಗಳು ಈ ದಿನ – ಇಲ್ಲೇ–ಜೀವಂತರಾಗಿದ್ದರು–ರಂಗಪ್ಪಾ ! —ಕೆಲವೇ ಗಂಟೆಗಳ ಕೆಳಗೆ–ಜೀವಂತರಾಗಿ ದ್ದರು ! ಅಂದಮೇಲೆ, ಇಷ್ಟು ಸ್ವಲ್ಪ ಕಾಲಾವಕಾಶದಲ್ಲಿ ಅವರನ್ನ ಕೊಂದು–ಹೆಣವನ್ನ ಪತ್ತೆಯೇ ಆಗದ ಹಾಗೆ ಗೈರುವಿಲೇ ಮಾಡೋದು ಸಾಧ್ಯವಲ್ಲದ ಮಾತು, ರಂಗಪ್ಪಾ" —ಎಂದರು. ರಂಗಪ್ಪ ಗಲಿಬಿಲಿಗೊಂಡು,

"ಹಾಗಾದರೆ ?" —ಎಂದು ಕೇಳಿದ. ಲಾಯರು ಈಗ ಧ್ವನಿ ತಗ್ಗಿಸಿ.

"ರಂಗಪ್ಪಾ , ಹಾಗಾದರೆ ಇಷ್ಟೆ —ಡಾಕ್ಟರು ಇನ್ನೂ ಬದುಕಿರಲೇಬೇಕು; ಬದುಕಿದ್ದು–ಪರಾರಿಯಾಗಿರಬೇಕು ! ಇದು ನಿಜವಾದರೆ, ಪರಾರಿ ಏಕೆ ? — ಹೇಗೆ ಪರಾರಿ ಯಾಗಿದ್ದಾರೆ? ಅವರು ಪರಾರಿಯಾಗಿರೋದು ನಿಜವಾದರೆ, ಈ ಕಾಮೇಶ ಗುಪ್ತನ ಮರಣವನ್ನು ಆತ್ಮಹತ್ಯ–ಅಂತ ಯಾವ ಧೈರ್ಯದಿಂದ ಹೇಳಬಹುದು ? ರಂಗಪ್ಪಾ–ರಂಗಪ್ಪಾ! —ನಾವು ಈಗ ಬಹಳ –ಬಹಳ ಎಚ್ಚರಿಕೆಯಿಂದ ಕೆಲಸಮಾಡಬೇಕು–ಗೊತ್ತಾಯ್ತೇ ? ಹಾಗಲ್ಲದೆ ದುಡುಕಿದರೆ, ನಮ್ಮಿಂದ ನಿನ್ನ ಧಣಿಗಳಿಗೆ ಉಪಕಾರವಾಗೋದರ ಬದಲು, ಘೋರವಾದ ವಿಪತ್ತೇ ಸಂಭವಿಸಬಹುದು–ಅಂತ, ನನಗೀಗಲೇ ತೋರ್ತಾ ಇದೆ'—ಎಂದರು. ರಂಗಪ್ಪ,

"ಅಯ್ಯಾ, ತಾವಿನ್ನೂ ಕಾಗದಾನ ಓದಿಲ್ಲ ; ಬರೀ ತಾರೀಕಷ್ಟನ್ನೇ ನೋಡಿದ್ದೀರಿ; ಕಾಗದಾನೂ ಯಾಕೆ ಓದಬಾರದು ?"—ಎಂದು ಕೇಳಿದ.

"ಭಯ ! ಭಯ ! —ರಂಗಪ್ಪಾ ! ಆದರೂ ಓದ್ತೀನಿ ; ದೇವರ ದಯದಿಂದ ನನ್ನ ಭಯಕ್ಕೆ ಕಾರಣವಿಲ್ಲದಂತಾಗಲಿ"—ಎಂದು, ಕಾಗದವನ್ನು ಓದತೊಡಗಿದರು. ಅದರ ಒಕ್ಕಣೆ ಹೀಗಿತ್ತು : —

"ಪ್ರಿಯಮಿತ್ರನಾದ ಶಂಕರರಾವ್,

"ಈ ಪತ್ರ ನಿನ್ನ ಕೈಸೇರಿದ ವೇಳೆಗೆ ನಾನು ಅದೃಶ್ಯನಾಗಿರುತ್ತೇನೆ. ಆದರೆ, ಯಾವ ಸಂದರ್ಭ –ಸನ್ನಿವೇಶಗಳಲ್ಲಿ–ಹೇಗೆ ಅದೃಶ್ಯನಾಗುತ್ತೇನೋ– ಅದನ್ನು ಮುಂದಾಗಿ ಕಾಣುವ ಶಕ್ತಿ ನನಗಿಲ್ಲವಾಗಿದೆ. ನಾನು ಈಗ ಯಾವ ಪರಿಸ್ಥಿತಿಯಲ್ಲಿದ್ದೇನೋ ಅದಕ್ಕೆ ಹೆಸರಿಲ್ಲವಾಗಿದೆ. ಆದರೆ, ಈ ಅನಾಮಿಕ ಪರಿಸ್ಥಿತಿಗೆ ಕಾರಣವಾಗಿರುವ ಎಲ್ಲ ಸಂದರ್ಭಗಳೂ, ಜೊತೆಗೆ, ನನ್ನ ಸ್ವಭಾವಜನ್ಯವಾದ ಪ್ರೇರಕಶಕ್ತಿಯೂ, ಅಂತ್ಯವು ನಿಶ್ಚಯವೆಂದೂ ಕ್ಷಿಪ್ರವೆಂದೂ ಸೂಚಿಸುತ್ತಿವೆ. ಆದಕಾರಣ, ಶಂಕರರಾವ್, ಈ ಕೂಡಲೆ ನೀನು ಡಾಕ್ಟರ್ ಜಗನ್ನಾಥನ ಬಳಿಗೆ ಹೋಗಿ, ಅವನು ನಿನಗೆ ಬರೆದು ಒಪ್ಪಿಸುವುದಾಗಿ ನನಗೆ ಈ ಮೊದಲು ಎಚ್ಚರಿಕೆ ಕೊಟ್ಟಿದ್ದ ಅವನ ಹೇಳಿಕೆ ಏನಿದೆಯೋ ಅದನ್ನು ಮೊದಲು ಓದು. ಅನಂತರ, ನಿನಗೆ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ–ಆತುರಗಳಿದ್ದರೆ, ಆಗ, ಪರಮಪಾಪಿಯೂ, ಮಹಾ ದುಃಖಿಯೂ ಆದ ನಿನ್ನ ನಿರ್ಭಾಗ್ಯ ಸ್ನೇಹಿತನು ಒಪ್ಪಿಕೊಂಡು ಬರೆದಿರುವ ಹೇಳಿಕೆಯನ್ನು ಓದು —ಹರಿವಿಠಲ್."

ಈ ಪತ್ರವನ್ನು ಓದಿ ಮುಗಿಸಿದ ಲಾಯರು,

"ಹಾಗಾದರೆ, ರಂಗಪ್ಪಾ , ಮೂರನೇ ಪತ್ರ ಒಂದಿರಬೇಕಲ್ಲವೆ ?"

—ಎಂದರು. ರಂಗಪ್ಪ ಮೇಜಿನ ಮೇಲೆ ಸ್ವಲ್ಪ ಹುಡುಕಾಡಿ,

"ಇದೋ–ಅಯ್ಯಾ, ಇಲ್ಲೇ ಇದೆ ! "

—ಎಂದು, ಹಲವು ಕಡೆ ಅರಗಿನಿಂದ ಮೊಹರು ಮಾಡಲ್ಪಟ್ಟಿದ್ದ ಒಂದು ದೊಡ್ಡ–ದಪ್ಪ ಲಕ್ಕೋಟೆಯನ್ನು ಅವರ ಕೈಗೆ ಕೊಟ್ಟ . ಅದರ ಮೇಲೂ ಶಂಕರರಾಯರ ಹೆಸರು—ವಿಳಾಸಗಳಿದ್ದವು. ಲಾಯರು, ಅದನ್ನು ಜೇಬಿನಲ್ಲಿಟ್ಟುಕೊಳ್ಳುತ್ತ ,

"ರಂಗಪ್ಪ , ನಾನು ಈ ಪತ್ರದ ಸುದ್ದೀನ ಹೊರಗೆ ಬಿಡೋದಿಲ್ಲ —ನೀನೂ ಅಷ್ಟೆ —ಇದರ ವಿಷಯದಲ್ಲಿ ಬಾಯಿಗೆ ಬೀಗ ಹಾಕಿಕೋಬೇಕು. ನಿನ್ನ ಧಣಿಗಳು ಪರಾರಿಯಾಗಿದ್ದರೂ —ಸತ್ತೇ ಹೋಗಿದ್ದರೂ —ನಾವು ಎಚ್ಚರಿಕೆಯಿಂದ ಇದ್ದರೆ, ಅವರ ಮಾನವನ್ನಾದರೂ ಕಾಪಾಡಬಹುದು. ಈಗ ಹತ್ತು ಗಂಟೆ. ನಾನು ಈ

ಕೂಡಲೆ ಹೋಗಿ —ಮನೇಲಿ ನಿರಾತಂಕವಾಗಿ —ರಹಸ್ಯದಲ್ಲಿ ಈ ಪತ್ರಗಳನ್ನು ಓದಬೇಕು" —ಎಂದರು. ರಂಗಪ್ಪ,

"ಸರಿ, ರಾಯರೇ; ಆದರೆ ಇಲ್ಲಿ ಮುಂದಿನ ಕೆಲಸ ?" — ಎಂದು ಕೇಳಿದ.

—"ಯೋಚಿಸಬೇಡ. ನಾನು ಮಧ್ಯರಾತ್ರಿಗೆ ಮೊದಲೇ ಇಲ್ಲೀಗೆ ವಾಪಸು ಬರ್ತೇನೆ. ನಾನು ಬಂದಮೇಲೆ ಪೊಲೀಸಿನೋರಿಗೆ ಹೇಳಿಕಳಿಸೋಣ" — ಎಂದರು, ಲಾಯರು.

ಇಬ್ಬರೂ ಪ್ರಯೋಗಶಾಲೆಯ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಟರು. ಮನೆಯ ಸೇವಕರೆಲ್ಲ ಇನ್ನೂ ಊಟದ ಮನೆಯಲ್ಲಿ ಗುಂಪುಗೂಡಿ ಪಿಸುಗುಟ್ಟುತ್ತ ನಿಂತಿದ್ದರು. ಲಾಯರು ಅವರನ್ನು ನೋಡಿ, ಗಾಬರಿಗೆ ಏನೂ ಕಾರಣವಿಲ್ಲವೆಂದು ಅವರಿಗೆ ಸಮಾಧಾನ ಹೇಳಿ, ಡಾಕ್ಟರ್ ವಿಠಲ್–ರವರ ಮನೆಯಿಂದ ಹೊರಬಿದ್ದು ತಮ್ಮ ಕಾರಿನಲ್ಲಿ ಕುಳಿತರು. ಕಾರು ಅವರ ಮನೆಯ ಕಡೆ ಹೊರಟಿತು.

ಮನೆ ತಲುಪಿದ ಕೂಡಲೆ ಲಾಯರು, ಡ್ರೈವರಿಗೆ ಕಾದಿರುವಂತೆ ಹೇಳಿ–ನೇರವಾಗಿ ತಮ್ಮ ಆಫೀಸಿಗೆ ಹೋಗಿ, ಬಾಗಿಲನ್ನು ಮುಚ್ಚಿಕೊಂಡರು; ಕಬ್ಬಿಣದ ಪೆಟ್ಟಿಗೆಯಲ್ಲಿದ್ದ, ಡಾ॥ ಜಗನ್ನಾಥ್–ರವರಿಗೆ ಸಂಬಂಧಿಸಿದ ಲಕೋಟೆಯನ್ನು ಈಚೆಗೆ ತಂದು, ಮೇಜಿನ ದೀಪದ ಬೆಳಕಿನಲ್ಲಿ ಕುಳಿತರು. ಮೊದಲು ಅದರಲ್ಲಿದ್ದ ಡಾಕ್ಟರ್ ಜಗನ್ನಾಥ್ ರವರ–ಹೇಳಿಕೆಯನ್ನೋದತೊಡಗಿದರು.

## ೯. ಡಾಕ್ಟರ್ ಜಗನ್ನಾಥ್-ರವರ ಲಿಖಿತ ಕಥನ

ಜನವರಿ ಒಂಬತ್ತನೇ ತಾರೀಕಿನ ದಿನ–ಅಂದರೆ, ಇಂದಿಗೆ ನಾಲ್ಕು ದಿನಗಳ ಹಿಂದೆ, ನನಗೆ ಟಪ್ಪಾಲು ಮೂಲಕ ಒಂದು ರಿಜಿಸ್ಟರಾದ ಲಕ್ಕೋಟೆ ಬಂತು. ಅದರ ಮೇಲೆ ಬರೆದಿದ್ದ ನನ್ನ ಹೆಸರು–ವಿಳಾಸಗಳು, ನನ್ನ ಹಳೆಯ ಸಹಪಾಠಿಯೂ, ಸಹೋದ್ಯೋಗಿಯೂ ಆದ ಡಾ॥ ವಿಠಲನ ಕೈ ಅಕ್ಷರದಲ್ಲಿತ್ತು. ಇದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಕಾರಣವೇನೆಂದರೆ, ನಮ್ಮಿಬ್ಬರ ಮಧ್ಯೆ ಪರಸ್ಪರ ಪತ್ರವ್ಯವಹಾರದ ಅಭ್ಯಾಸವೇ ಇರಲಿಲ್ಲ. ಅಲ್ಲದೆ, ಕಾಗದ ಬಂದ ಹಿಂದಿನ ದಿನ ರಾತ್ರಿಯೇ ನಾನು ಅವನನ್ನು ಕಂಡಿದ್ದೆನಷ್ಟೇ ಅಲ್ಲ , ಅವನ ಕೂಡ ಊಟವನ್ನೂ ಮಾಡಿದ್ದೆ. ಇದೂ ಅಲ್ಲದೆ, ನನ್ನ ಅವನ ಸ್ನೇಹ ಸಂಬಂಧ, ಅವನು ನನಗೆ ಒಂದು ಪತ್ರವನ್ನು ಟಪ್ಪಾಲು ಮೂಲಕ ರಿಜಿಸ್ಟರು ಮಾಡಿ ಕಳಿಸುವಷ್ಟು ಔಪಚಾರಿಕವಾಗಿರಲಿಲ್ಲ. ಈ ಪತ್ರದ ಆಗಮನವೇ ನನಗೆ ಆಶ್ಚರ್ಯವನ್ನುಂಟು ಮಾಡಿದರೆ — ಅದರ ಒಕ್ಕಣೆ ನನ್ನನ್ನು ಮತ್ತೂ ಆಶ್ಚರ್ಯಕ್ಕೀಡುಮಾಡಿತು. ಆ ಪತ್ರದ ಬರವಣಿಗೆ ಈ ರೀತಿಯಾಗಿತ್ತು ! —

"೧೦ ನೇ ಡಿಸೆಂಬರ್ – ೧೯೪೪ —

"ಪ್ರಿಯ ಜಗನ್ನಾಥ್,

"ನೀನು, ನನ್ನ ಕೆಲವೇ ಬಹು ಹಳೆಯ ಮತ್ತು ಆಪ್ತಗೆಳೆಯರಲ್ಲಿ ಒಬ್ಬನಾಗಿರುತ್ತಿ. ವೈದ್ಯವೃತ್ತಿಗೆ ಸಂಬಂಧಪಟ್ಟ ವೈಜ್ಞಾನಿಕ ವಿಷಯಗಳಲ್ಲಿ ಕೆಲವು ವೇಳೆ ನನ್ನ–ನಿನ್ನ ಅಭಿಪ್ರಾಯಗಳು ಭಿನ್ನವಾಗಿವೆಯೆಂದು ನಾನು ಬಲ್ಲೆ. ಆದರೂ, ನನ್ನ ಕಡೆಯಿಂದ ಹೇಳುವುದಾದರೆ, ನಮ್ಮ ಪರಸ್ಪರ ಸ್ನೇಹ ವಿಶ್ವಾಸಗಳಿಗೆ ಯಾವ ಧಕ್ಕೆಯೂ ಆಗಿರುವಂತೆ ನನಗೆ ನೆನಪಿಲ್ಲ. ನೀನು ಎಂದಾದರೂ ನನ್ನನ್ನು ಕುರಿತು, 'ವಿಠಲ್, ನನ್ನ ಪ್ರಾಣ–ಮಾನ–ಬುದ್ಧಿಗಳೆಲ್ಲ ನಿನ್ನನ್ನಾಶ್ರಯಿಸಿವೆ' — ಎಂದಿದ್ದರೆ, ನಿನ್ನ ಸಹಾಯಕ್ಕೆ, ಜಗನ್ನಾಥ್, ನನ್ನ ಸಮಸ್ತ

ಆಸ್ತಿಯನ್ನೂ ಸೂರೆಮಾಡಲು-ಕಡೆಗೆ, ನನ್ನ ತೋಳನ್ನೇ ಕತ್ತರಿಸಿಕೊಡಲು ಹಿಂಜರಿಯುವಂಥ ದಿನ ಒಂದೂ ಇರಲಿಲ್ಲ — ಅಲ್ಲವೇ ? ಸರಿ, ನನ್ನ ಪ್ರಾಣ-ನನ್ನ ಕೀರ್ತಿ ಗೌರವಗಳು-ನನ್ನ ಬುದ್ಧಿ—ಎಲ್ಲ, ಈಗ ನಿನ್ನ ಕರುಣೆ, ಸಹಾನುಭೂತಿಗಳನ್ನಾಶ್ರಯಿಸುವ ಘಳಿಗೆ ಪ್ರಾಪ್ತವಾಗಿದೆ, ಜಗನ್ನಾಥ್. ಆದ್ದರಿಂದ ನೀನು ಈ ರಾತ್ರಿ ನನ್ನಕೈ ಬಿಟ್ಟರೆ — ನಾನು ಕೆಟ್ಟೆ ! — ಪೂರ್ತಿ ಕೆಟ್ಟೆ ! ! ಇಷ್ಟೆಲ್ಲ ಪೀಠಿಕೆಯನ್ನೋದಿ, ನಿನ್ನಿಂದ ನಾನು ಏನೋ ಅವಮಾನಕರವಾದುದನ್ನು ಬಯಸುತ್ತಿರುವೆನೆಂದು ನಿನಗೆ ಶಂಕೆಯಾದರೆ, ನನಗೆ ಆಶ್ಚರ್ಯವಿಲ್ಲ. ಆದರೆ, ನೀನೇ ಓದಿ ಅದನ್ನು ತೀರ್ಮಾನಮಾಡು.

"ಜಗನ್ನಾಥ್, ಈ ದಿನ ರಾತ್ರಿಯ ಮಟ್ಟಿಗೆ ನೀನು ನನಗೋಸ್ಕರವಾಗಿ ನಿನ್ನ ಉಳಿದೆಲ್ಲ ಕೆಲಸ ಕಾರ್ಯಗಳನ್ನೂ ಮುಂದಕ್ಕೆ ಹಾಕಬೇಕು-ಹಾಕಲೇಬೇಕು. ಕೇಳು, ನೀನು ಡಾಕ್ಟರಾಗಿ ಒಬ್ಬ ಚಕ್ರವರ್ತಿಯ ಹಾಸಿಗೆಯ ಬಳಿ ಹೋಗಬೇಕಾದ ಪ್ರಸಂಗವಿದ್ದರೂ, ಅದನ್ನು ಬಿಟ್ಟು, ನನಗೆ ಈ ರಾತ್ರಿ ಸಹಾಯ ನೀಡಬೇಕು. ನೀನು ಮಾಡಬೇಕಾದ್ದು ಇಷ್ಟು : ನೀನು ಈ ಕಾಗದದೊಡನೆ, ನಿನ್ನ ಕಾರಿನಲ್ಲಿ ನನ್ನ ಮನೆಗೆ ನೇರವಾಗಿ ಹೋಗಬೇಕು. ನೀನು ಬರುವ ವಿಷಯವನ್ನು ನನ್ನ ಖಾಸಾ ಸೇವಕ ರಂಗಪ್ಪನಿಗೆ ಈಗಾಗಲೇ ತಿಳಿಸಿ-ಅಗತ್ಯವಾದ ಅಪ್ಪಣೆಗಳನ್ನು ಕೊಡಲಾಗಿದೆ. ಅವನು ಒಬ್ಬ ಬೀಗದ ಕಾಮಾಟಿ (Lock Smith) ಯೊಡನೆ ನಿನಗಾಗಿ ಕಾದಿರುತ್ತಾನೆ. ನೀನು ನನ್ನ ಮನೆಯನ್ನು ತಲುಪಿದೊಡನೆಯೇ, ರಂಗಪ್ಪ ನಿನ್ನನ್ನೂ —ಕಾಮಾಟಿಯನ್ನೂ — ಮನೆಯ ಹಿಂದಿನ ಕಟ್ಟಡದಲ್ಲಿರುವ ನನ್ನ ಸ್ವಂತ ಕೊಠಡಿಯ ಬಳಿಗೆ ಕರೆದೊಯ್ಯುತ್ತಾನೆ. ನಿನ್ನ ಸಮಕ್ಷಮದಲ್ಲಿ ಕಾಮಾಟಿ ಆ ಕೊಠಡಿಯ ಬೀಗವನ್ನು ಬಲಾತ್ಕಾರದಿಂದ ಒಡೆದು ತೆಗೆಯಬೇಕು. ಅನಂತರ, ನೀನೊಬ್ಬನೇ ಆ ಕೊಠಡಿಯನ್ನು ಪ್ರವೇಶಿಸಬೇಕು. ಪ್ರವೇಶಿಸುತ್ತಲೇ, ಎಡಗಡೆ ಗೋಡೆಯ ಪಕ್ಕದಲ್ಲಿ, ಒಂದು, ಡ್ರಾಯರುಗಳಿರುವ — ಎತ್ತರವಾದ ಬೀರು ಇದೆ. E— ಎಂಬ ಅಕ್ಷರದ ಗುರುತಿನಿಂದ ನೀನು ಅದನ್ನು ಸುಲಭವಾಗಿ ಪತ್ತೆಮಾಡಬಹುದು. ಇದರಲ್ಲಿ, ಮೇಲಿನಿಂದ ನಾಲ್ಕನೇ ಡ್ರಾಯರನ್ನು (ಅದೇ, ಕೆಳಗಿನಿಂದ ಮೂರನೇ ಡ್ರಾಯರೂ ಹೌದು) ಪೂರ್ತಿ ಈಚೆಗೆ ಎಳೆದು ತೆಗೆಯಬೇಕು — ಅದರಲ್ಲಿನ ಸಾಮಾನುಗಳೆಲ್ಲ ಇದ್ದ ಹಾಗೆಯೇ ತೆಗೆಯಬೇಕು. ಜಗನ್ನಾಥ್, ಇದನ್ನು ಬರೆಯುತ್ತಿರುವಾಗ ನನ್ನ ಮನಸ್ಸು ವಿಶೇಷ ಗಲಿಬಿಲಿಯಿಂದ ಕ್ಷೋಭೆಗೀಡಾಗಿದೆ; ಆದ್ದರಿಂದ, ನಿನಗೆ ಕೊಡುವ ಸೂಚನೆಗಳಲ್ಲಿ ಎಲ್ಲಿ ತಪ್ಪುಮಾಡಿಬಿಡುವೆನೋ-ಎಂಬ ಹೆದರಿಕೆ ಪೀಡಿಸುತ್ತಿದೆ. ಆದರೆ, ಇಲ್ಲಿ ನನ್ನ ಸೂಚನೆಗಳಲ್ಲಿ ಒಂದು ವೇಳೆ ತಪ್ಪಿದರೂ, ಡ್ರಾಯರಿನ ಒಳಗಿರುವ ಸಾಮಗ್ರಿಗಳಿಂದ, ಸರಿಯಾದ ಡ್ರಾಯರು ಯಾವುದೆಂದು ನೀನು ಸುಲಭವಾಗಿ ಪತ್ತೆಮಾಡಬಹುದು. ಆ ಡ್ರಾಯರಿನಲ್ಲಿರುವ ವಸ್ತುಗಳು ಇಷ್ಟೆ ; ಕೆಲವು ಲವಣದ ಪುಡಿಗಳ ಪೊಟ್ಟಣಗಳು — ದ್ರಾವಕವಿರುವ ಒಂದು ಸೀಸೆ, ಮತ್ತು ಒಂದು ಪುಸ್ತಕ. ಇವುಗಳಿರುವ ಡ್ರಾಯರನ್ನು — **ಇವು ಹೇಗೆ ಇವೆಯೋ ಹಾಗೆಯೇ** —ತೆಗೆದುಕೊಂಡು, ಮಹಾವೀರ ಚೌಕದಲ್ಲಿರುವ ನಿನ್ನ ಚಿಕಿತ್ಸಾಲಯಕ್ಕೊಯ್ಯಬೇಕೆಂದು ನಿನ್ನಲ್ಲಿ ಯಾಚಿಸುತ್ತೇನೆ.

"ಇದು, ನಿನ್ನ ಸಹಾಯದ ಮೊದಲನೇ ಭಾಗ. ಇನ್ನು ಎರಡನೇ ಭಾಗ : ನೀನು ಈ ಕಾಗದ ಕಂಡ ಕೂಡಲೆ ಹೊರಟರೆ, ಕೆಲಸ ಮುಗಿಸಿಕೊಂಡು ಮಧ್ಯರಾತ್ರಿಗೆ ಬಹಳ ಮುಂದಾಗಿಯೇ ನಿನ್ನ ಚಿಕಿತ್ಸಾಲಯಕ್ಕೆ ವಾಪಸಾಗಬೇಕು. ಆದರೆ, ನಿನಗೆ ಸ್ವಲ್ಪ ಹೆಚ್ಚಿಗೆ ಕಾಲಾವಕಾಶ ಕೊಡುತ್ತೇನೆ; ಅಂದರೆ, ಮಧ್ಯರಾತ್ರಿಯವರೆಗೂ ಅವಕಾಶ ಕೊಡುತ್ತೇನೆ. ಇದಕ್ಕೆ ಎರಡು ಕಾರಣಗಳಿವೆ ; ನಿನ್ನ ಕೆಲಸಕ್ಕೆ ಅನಿರೀಕ್ಷಿತವಾದ ಮತ್ತು ಅನಿವಾರ್ಯವಾದ ಏನಾದರೂ ಸ್ವಲ್ಪ ಅಡಚಣೆ ಬಂದೊದಗಬಹುದು - ಎಂಬ ಭೀತಿ, ಒಂದು; ಮುಂದೆ, ನೀನು ನನಗಾಗಿ ಮಾಡಬೇಕಾಗಿರುವ ಕೆಲಸ — ರಹಸ್ಯದಲ್ಲಿ ನಡೆಯಬೇಕಾಗಿರುವುದ ರಿಂದ, ನಿನ್ನ ಸೇವಕರೆಲ್ಲ ತಮ್ಮ ತಮ್ಮ ಸ್ಥಳಗಳಿಗೆ ಹೋದ ಮೇಲೆ ಮಾಡುವುದು ಮೇಲು-ಎಂಬುದು, ಎರಡನೇ ಕಾರಣ. ಆದ್ದರಿಂದ, ಮಧ್ಯರಾತ್ರಿಯ ವೇಳೆಗೆ ನೀನು ಏಕಾಂಗಿಯಾಗಿ, ರೋಗಿಗಳನ್ನು ಕಾಣುವ ನಿನ್ನ ಬೈಠಕು ಖಾನೆಯಲ್ಲಿ ಇರಬೇಕು. ಮಧ್ಯರಾತ್ರಿಗೆ ಸರಿಯಾಗಿ ಒಬ್ಬ ಮನುಷ್ಯ ಬಂದು ನಿನ್ನನ್ನು ಭೇಟಿಯಾಗಿ, ಗುರುತಿಗಾಗಿ ನನ್ನ ಹೆಸರು ಹೇಳುತ್ತಾನೆ. ನೀನೇ ಸ್ವಯಂ ಅವನನ್ನು ಒಳಗೆ ಬರಮಾಡಿಕೊಂಡು, ನೀನು ನನ್ನ ಕೊಠಡಿಯಿಂದ ತಂದ ಡ್ರಾಯರನ್ನು-ಸಾಮಾನುಗಳ ಸಮೇತ-ಅವನ ವಶಕ್ಕೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಅಯ್ಯಾ ಜಗನಾಥ್, ನೀನು ಇಷ್ಟು ಮಾಡಿದರೆ, ನಿನ್ನ ಪಾತ್ರವನ್ನು ಬಹು ಸಮರ್ಪಕವಾಗಿ ನಿರ್ವಹಿಸಿದಂತಾಗುತ್ತದೆ ; ಮತ್ತು ಆಗ ನೀನು ನನ್ನ ಸಂಪೂರ್ಣವಾದ ಕೃತಜ್ಞತೆಗೆ ಪಾತ್ರನಾಗಿರುತ್ತಿ. ನೀನು ವಿವರಣೆಗಳಿಗೆ ಒತ್ತಾಯ ಪಡಿಸುವುದಾದರೆ, ನನ್ನ ಈ ಏರ್ಪಾಟುಗಳು ಅತಿ ಮಹತ್ವದ್ದೆಂದೂ, ವಿಲಕ್ಷಣವೆಂದು ತೋರಿದರೂ-ಇವುಗಳಲ್ಲಿ ಒಂದನ್ನು ಅಲಕ್ಷಿಸಿದರೂ,

ನನ್ನ ಬುದ್ಧಿಯ ಸರ್ವನಾಶದ–ಅಥವಾ ನನ್ನ ಮರಣದ–ಹೊಣೆಗಾರಿಕೆ ನಿನ್ನ ಅಂತಃಕರಣಕ್ಕೆ ಅಂಟುವುದೆಂದೂ, ಐದು ನಿಮಿಷಗಳ ತರುವಾಯ ನೀನೇ ತಿಳಿಯುವವನಾಗುತ್ತೀಯೆ.

"ಓ, ಜಗನ್ನಾಥ್, ನನ್ನ ಈ ಪ್ರಾರ್ಥನೆಯನ್ನು ನೀನು ಹಗುರವಾಗಿ ಕಂಡು ಅಲಕ್ಷಿಸುವುದಿಲ್ಲವೆಂಬ ಭರವಸೆ ನನಗಿದ್ದರೂ, ಅದು ಸಾಧ್ಯವಿರಬಹುದು —ಎಂದು, ಕೇವಲ ಯೋಚಿಸಿದರೂ, ನನ್ನ ಹೃದಯ ಭೂಮಿಗಿಳಿಯುತ್ತದೆ ! – ನನ್ನ ಕೈಗಳು ನಡುಗುತ್ತವೆ! ಜಗನ್ನಾಥ್ ! – ಪ್ರಿಯ ಜಗನ್ನಾಥ್ ! – ಈ ಘಳಿಗೆಯಲ್ಲಿ ನಿನ್ನ ನಿರ್ಭಾಗ್ಯ ಮಿತ್ರನಾದ ನಾನು ಅಪರಿಚಿತವಾದ ಒಂದು ಸ್ಥಳದಲ್ಲಿದ್ದೇನೆ. ಎಂತಹ ಪ್ರತಿಭಾವಂತನ ಕಲ್ಪನೆಯೂ ಉತ್ಪ್ರೇಕ್ಷೆ ಮಾಡಲಾರದಂತಹ, ಕರಾಳವೂ ವೇದನಾಮಯವೂ ಆದ ಚಿತ್ತಕ್ಷೋಭೆಯ ದವಡೆಯಲ್ಲಿ ಸಿಕ್ಕು ತೊಳಲುತ್ತಿದ್ದೇನೆ. ಇದನ್ನ ನಿನ್ನ ಮನಸಿಗೆ ತಂದುಕೋ. ಆದರೆ, ನನ್ನ ಸ್ಥಿತಿ ಹೀಗಿದ್ದರೂ, ನೀನು ಮಾತ್ರ ಎಲ್ಲೂ ತಪ್ಪದೆ–ಕಾಲಕ್ಕೆ ಸರಿಯಾಗಿ, ನನ್ನ ಪ್ರಾರ್ಥನೆಗಳನ್ನು ನೆರವೇರಿಸಿ ಸಹಾಯ ಮಾಡಿದ್ದೇ ಆದರೆ, ನನ್ನ ಕಷ್ಟಗಳೆಲ್ಲ, ಹಿಂದೆ ಎಂದೋ ನಡೆದು ಹೋಗಿ ಮಾಸಿದ ಕಥೆಯಂತೆ ಕಾಣುವುದೆಂದು ನಾನು ಚೆನ್ನಾಗಿ ಬಲ್ಲೆ. ನನ್ನ ಈ ಭರವಸೆಯನ್ನು ಗ್ರಹಿಸಿ, ಓ ನನ್ನ ಪ್ರಿಯ ಜಗನ್ನಾಥ್, ನಿನ್ನ ಸ್ನೇಹಿತನಿಗೆ ಸಹಾಯದ ಹಸ್ತವನ್ನು ನೀಡಿ ಬದುಕಿಸು.

"ಇತಿ ನಿನ್ನ ಗೆಳೆಯ
"ಹ.ವಿ."

"ವಿ. ಸೂ : — ನಾನು ಈ ಕಾಗದವನ್ನು ಬರೆದು ಮೊಹರು ಮಾಡಿದ ಮೇಲೆ ಹೊಸದೊಂದು ಭಯ ನನ್ನ ಎದೆಗೆ ಬಡಿಯಿತು. ಏನಾದರೂ ಕಾರಣದಿಂದ ಪೋಸ್ಟಾಫೀಸಿನಲ್ಲಿ ವಿಳಂಬವಾಗಿ, ಈ ಕಾಗದ ನಾಳೆ ಬೆಳಗಿನ ಪೋಸ್ಟತನಕ ನಿನ್ನ ಕೈ ಸೇರದೆ–ನನ್ನ ಏರ್ಪಾಟುಗಳೆಲ್ಲ ಕೆಟ್ಟುಹೋಗಬಹುದು — ಎಂದು ಶಂಕೆಯುಂಟಾಯಿತು. ಒಂದು ವೇಳೆ ಹಾಗಾದರೆ, ಪ್ರಿಯ ಜಗನ್ನಾಥ್, ಈ ಕಾಗದ ತಲುಪಿದ ಮೇಲೆ, ಮಧ್ಯರಾತ್ರಿಯ ಒಳಗೆ, ನಿನಗೆ ಬಹಳ ಅನುಕೂಲವಾದ ಹೊತ್ತಿನಲ್ಲಿ, ನನ್ನ ಕೆಲಸವನ್ನು ಮಾಡು. ಮತ್ತು ನಾಳೆ ದಿನ ಮಧ್ಯರಾತ್ರಿಗೆ ಸರಿಯಾಗಿ ನನ್ನ ಕಡೆಯಿಂದ ಬರುವ ದೂತನನ್ನು ನಿರೀಕ್ಷಿಸು. ಆ ವೇಳೆಗೆ ಆಗಲೇ ಕಾಲ ಮಿತಿಮೀರಿರಬಹುದು. ಆ ರಾತ್ರಿ ಯಾವ ಘಟನೆಯೂ ಇಲ್ಲದೆ ಕಳೆದರೆ, ಆಗ ನೀನು ಹರಿವಿಠಲನ ವಿಷಯ ಕೇಳುವುದು ಇದೇ ಕೊನೆ–ಎಂದು ತಿಳಿಯತಕ್ಕದ್ದು."

ಈ ವಿಚಿತ್ರ ಪತ್ರವನ್ನೋದಿದ ಕೂಡಲೆ ಮೊಟ್ಟಮೊದಲು ನನಗೆ ಅನ್ನಿಸಿದ್ದು, ನನ್ನ ಮಿತ್ರನಿಗೆ ಹುಚ್ಚು ಹಿಡಿದಿರಬೇಕೆಂದು. ಆದರೆ, ನನ್ನ ಕಲ್ಪನೆ ಅನುಮಾನಕ್ಕೆ ಆಸ್ಪದವಿಲ್ಲದಂತೆ ಸಿದ್ಧಪಡುವವರೆಗೂ, ಅವನ ಪ್ರಾರ್ಥನೆಯನ್ನು ಸಲ್ಲಿಸಲು ನಾನು ಬದ್ಧನಾಗಿದ್ದೆನೆನ್ನಿಸಿತು. ನಾನು ಅವನ ಈ ಪತ್ರದಂತೆ ನಡೆದುಕೊಳ್ಳುವುದರ ಮಹತ್ವ ಎಷ್ಟೆಂದು ತೀರ್ಮಾನಿಸುವ ಸ್ಥಿತಿಯಲ್ಲಿ ಇರಲಿಲ್ಲ. ಪತ್ರದ ಒಕ್ಕಣೆ ಅರ್ಥವಾದರಲ್ಲವೇ–ಅದರ ಪ್ರಾಮುಖ್ಯತೆ ಕಲ್ಪನೆಗೆ ಬರುವುದು? ನನಗಂತೂ ಎಷ್ಟು ಯೋಚಿಸಿದರೂ, ಅದರ ತಲೆ ಬಾಲ ಒಂದೂ ಗೊತ್ತಾಗಲಿಲ್ಲ. ಆದರೆ, ನನ್ನ ಮೇಲೆ ಬಹು ಗುರುತರವಾದ ಜವಾಬ್ದಾರಿಯನ್ನು ಹೇರಿದ್ದ ಅವನ ಪ್ರಾರ್ಥನೆಯ ಮಾತುಗಳನ್ನು ನಾನು ಹಗುರವಾಗಿ ಕಾಣುವಂತಿರಲಿಲ್ಲ. ಆದ್ದರಿಂದ, ಕೂಡಲೇ ಎದ್ದು, ಬಟ್ಟೆ ಹಾಕಿಕೊಂಡು, ನನ್ನ ಕಾರಿನಲ್ಲಿ ನೇರವಾಗಿ ವಿಠಲನ ಮನೆಗೆ ಹೋದೆ.

ರಂಗಪ್ಪ ನಾನು ಬರುವುದನ್ನೇ ಎದರು ನೋಡುತ್ತಿದ್ದ . ನನಗೆ ಬಂದ ಟಪ್ಪಾಲಿನಲ್ಲೇ ಅವನಿಗೂ ಒಂದು ರಿಜಿಸ್ಟರಾದ ಪತ್ರ ಬಂದಿತ್ತು. ಅದರಲ್ಲಿ ಅವನು ಮಾಡಬೇಕಾಗಿದ್ದ ಕೆಲಸಗಳನ್ನು ಸೂಚಿಸಲಾಗಿತ್ತು. ಅದರಂತೆ, ಅವನು ಕೂಡಲೆ ಒಬ್ಬ ಬೀಗದ ಕಾಮಾಟಿಗೂ ಒಬ್ಬ ಬಡಗಿಗೂ ಹೇಳಿಕಳಿಸಿದ್ದ. ನಾನು ರಂಗಪ್ಪನೊಡನೆ ಮಾತಾಡುತ್ತ ನಿಂತಿದ್ದಾಗ ಆ ಕೆಲಸಗಾರರಿಬ್ಬರೂ ಬಂದರು. ಕೂಡಲೆ ನಾವೆಲ್ಲ ಒಟ್ಟಾಗಿ ಹೋಗಿ ಪ್ರಯೋಗಶಾಲೆಯನ್ನು ಪ್ರವೇಶಿಸಿದೆವು. ರಂಗಪ್ಪ ಪ್ರಯೋಗಶಾಲೆಯ ದೀಪದ ಸ್ವಿಚ್ ಹಾಕಿದ. ಅದರ ಬೆಳಕಿನಲ್ಲಿ ಎಲ್ಲರೂ ಹಂತ ಹತ್ತಿ , ಅದರ ಮೇಲಿದ್ದ ವಿಠಲನ ಸ್ವಂತ ಕೊಠಡಿಯ ಮುಂದೆ ನಿಂತೆವು.

ಕೊಠಡಿಯ ಬಾಗಿಲು ಚೌಕಟ್ಟೂ ಕದಗಳೂ ಬಹಳ ಬಲವಾಗಿದ್ದವು. ಬಡಗಿ ಇವನ್ನೆಲ್ಲ ಪರೀಕ್ಷಿಸಿ, ಕಷ್ಟದ ಕೆಲಸವೆಂದೂ, ಬಲಪ್ರಯೋಗ ಮಾಡುವುದಾದರೆ—ಕದವನ್ನು ಕೆಡಿಸಬೇಕಾಗುತ್ತದೆಂದೂ ಸ್ಪಷ್ಟವಾಗಿ ಹೇಳಿಬಿಟ್ಟ. ಬೀಗದ ಕಾಮಾಟಿ ತಾನು ಕೈಹಾಕಿ ನೋಡುವುದಾಗಿ ಹೇಳಿ, ಒಳಗಿದ್ದ ಅಗಳಿಬೀಗವನ್ನು ಹೊರಗಿನಿಂದ ರಂಧ್ರದ ಮೂಲಕ ತೆರೆಯಲು, ಅದರ ಮೇಲೆ ತನ್ನ ಆಯುಧಗಳನ್ನು ಪ್ರಯೋಗಿಸಿದ. ಎಷ್ಟು ಪ್ರಯತ್ನಪಟ್ಟರೂ ಆ ಬೀಗ ಇವನಿಗೆ ಸೋಲುವಂತೆ ಕಾಣಲಿಲ್ಲ. ಆದರೆ, ಬೀಗದ ಕಾಮಾಟಿ ಸ್ವಲ್ಪ ಹಟಗಾರನಾದ ಮನುಷ್ಯನಾಗಿದ್ದ. ಅವನು ಸುಲಭವಾಗಿ ಸೋಲನ್ನೊಪ್ಪಿಕೊಳ್ಳಲು ಒಡಂಬಡದೆ, ಪಟ್ಟುಹಿಡಿದು, ಪ್ರಯತ್ನದ ಮೇಲೆ ಪ್ರಯತ್ನಮಾಡಿ–ಬೇರೆ ಬೇರೆ ಸಲಕರಣೆಗಳನ್ನು ಪ್ರಯೋಗಿಸಿ ಕೆಲಸ

ಮಾಡಿ, ಎರಡು ಗಂಟೆಗಳ ಮೇಲೆ ಬೀಗವನ್ನು ತೆರೆದು ಬಾಗಿಲನ್ನು ಹಿಂದಕ್ಕೆ ನೂಕಿದ. ಪತ್ರದ ಪ್ರಕಾರ ನಾನೊಬ್ಬನೇ ವಿಠಲನ ಕೊಠಡಿಯೊಳಕ್ಕೆ ಹೋದೆ. ಸ್ವಿಚ್‌ಹಾಕಿ ಬೆಳಕು ಮಾಡಿಕೊಂಡು ಸುತ್ತ ನೋಡಿದೆ. ಪತ್ರದಲ್ಲಿದ್ದಂತೆ, ಬಾಗಿಲ ಎಡಪಾರ್ಶ್ವದ ಗೋಡೆಯ ಬದಿಯಲಿ E — ಎಂಬ ಗುರುತಿನ ಬೀರು ಇತ್ತು. ಅದರಲ್ಲಿ ಯಾವುದು ಮೇಲಿನಿಂದ ನಾಲ್ಕನೆಯದೂ ಕೆಳಗಿನಿಂದ ಮೂರನೆಯದೂ ಆಗಿತ್ತೋ ಆ ಡ್ರಾಯರನ್ನು ಈಚೆಗೆಳೆದೆ. ಅದರಲ್ಲಿದ್ದ ಸಾಮಾನುಗಳು ಅಲುಗದಂತೆ ಅವುಗಳ ಮಧ್ಯೆ ಒಣ ಹುಲ್ಲನ್ನು ತುರುಕಿ, ಇಡೀ ಡ್ರಾಯರನ್ನು ಒಂದು ಮೇಜಿನ ಬಟ್ಟೆಯಲ್ಲಿ ಕಟ್ಟಿಕೊಂಡು, ಕಾರಿನಲ್ಲಿ ಮಹಾವೀರ ಚೌಕಕ್ಕೆ ಬಂದೆ.

ಚೌಕದಲ್ಲಿದ್ದ ನನ್ನ ಚಿಕಿತ್ಸಾಲಯವನ್ನು ಪ್ರವೇಶಿಸಿ, ಬಾಗಿಲು ಹಾಕಿಕೊಂಡು, ಬೈಠಕು ಖಾನೆಯಲ್ಲಿ ಕುಳಿತು, ನಾನು ತಂದಿದ್ದ ಡ್ರಾಯರಿನ ಸಾಮಾನುಗಳನ್ನು ಪರೀಕ್ಷಿಸತೊಡಗಿದೆ. ಅದರಲ್ಲಿದ್ದ ಲವಣದ ಪೊಟ್ಟಣಗಳು, ತಯಾರಿಕರಿಂದ ಕಟ್ಟಲ್ಪಟ್ಟಷ್ಟು ಅಚ್ಚುಗಟ್ಟಾಗಿರಲಿಲ್ಲ. ಇವು, ವಿಠಲ ಸ್ವಂತವಾಗಿ, ಯಾವುದೋ ಲವಣದ ಅಥವಾ ಲವಣಗಳ ಬೇರೆ ಬೇರೆ ಪ್ರಮಾಣವನ್ನು ತೂಕಮಾಡಿ–ಕಟ್ಟಿದ ಪೊಟ್ಟಣಗಳೆಂಬುದು ಖಂಡಿತವಾಗಿತ್ತು. ಒಂದು ಪೊಟ್ಟಣವನ್ನು ಬಿಚ್ಚಿ ನೋಡಿದೆ. ಅದರಲ್ಲಿದ್ದ ಬಿಳೀ ಲವಣದ ಕಣಗಳು ಬೆಳಕಿನಲ್ಲಿ ಥಳಥಳಿಸಿದವು. ಉಳಿದ ಪೊಟ್ಟಣಗಳಲ್ಲೂ, ಬೇರೆ ಬೇರೆ ವರ್ಣಛಾಯೆಯ, ಮರಳು ಕಣದಂಥ —ಅಥವಾ ಹಿಟ್ಟಿನಂಥ–ಲವಣಗಳೂ, ಹುಡಿಗಳೂ ಇದ್ದವು.

ಪೊಟ್ಟಣಗಳನ್ನು ಪರೀಕ್ಷಿಸಿದ ಮೇಲೆ ಸೀಸೆಯನ್ನು ಪರೀಕ್ಷಿಸಿದೆ. ಸೀಸೆ ನೀಲಿವರ್ಣದ್ದಾಗಿತ್ತು; ದುಂಡಗಿತ್ತು , ಮತ್ತು , ಸುಮಾರು ಆರು ಅಂಗುಲ ಎತ್ತರವಾಗಿ —ಮೂರು ಅಂಗುಲ ಗಾತ್ರವಾಗಿತ್ತು. ಕಿರಿದಾಗಿದ್ದ ಅದರ ಬಾಯಿಗೆ, ಗಾಳಿ ಸಂಚಾರಕ್ಕವಕಾಶವಿಲ್ಲದ ಗಾಜಿನ ಬಿರಡೆ ಹಾಕಿತ್ತು. ಇದರಲ್ಲಿ, ಸುಮಾರು ಮೂರು ಅಂಗುಲ ಮಟ್ಟದವರೆಗೆ ಯಾವುದೋ ದ್ರಾವಕವಿತ್ತು. ಬೆಳಕಿಗೆ ಅಡ್ಡವಾಗಿ ಹಿಡಿದು ನೋಡಿದಾಗ, ದ್ರಾವಕವಿದ್ದ ಸೀಸೆಯ ಕೆಳಭಾಗ, ಕೆಂಪು ಎಂದು ಗೊತ್ತಾಯಿತು. ಅದರ ಬಿರಡೆ ತೆಗೆದು ಮೆಲ್ಲಗೆ ಮೂಗಿನ ಬಳಿಗೆ ತಂದೆ. ಆ ದ್ರಾವಕದಿಂದ ಹೊರಡುತ್ತಿದ್ದ ವಾಸನೆ, ಬಹು ತೀಕ್ಷ್ಣವಾದ ಘಾಟಿನಿಂದ ಕೂಡಿತ್ತು. ಒಂದು ಉಸಿರಿಗೇ ತಲೆಸುತ್ತುವ ಹಾಗಾಯಿತು. ವಾಸನೆಯಲ್ಲಿ ನನಗೆ ಗುರುತು ಸಿಕ್ಕಿದ್ದು, ರಂಜಕ ಮತ್ತು ಗಾಳಿ ಸೋಕಿದೊಡನೆ ಸುಲಭವಾಗಿ ಆವಿಯಾಗುವ ಈಥರು ದ್ರವ. ಈ ದ್ರಾವಕ, ಇನ್ನೂ ಯಾವುದೋ ಲವಣ–ರಸ–ಆಮ್ಲಾದಿಗಳ ಭಟ್ಟಿ ಇಳಿಸಿದ ಸಾರ ದ್ರವ್ಯವಾಗಿರಬೇಕೆಂದು ತೋರಿತು. ಆದರೆ, ನಾನು ಅದರ ಹೆಚ್ಚು ಪರೀಕ್ಷೆಗೆ ಧೈರ್ಯಮಾಡದೆ, ಬಿರಡೆ ಹಾಕಿ ಇಟ್ಟು ಪುಸ್ತಕವನ್ನು ಪರೀಕ್ಷಿಸಿದೆ. ಅದು, ಟಿಪ್ಪಣಿ ಬರೆಯಲು ಬರೀ ಹಾಳೆಗಳಿಂದ ತಯಾರಿಸಿದ–ದಪ್ಪರಟ್ಟಿನ ಸಾಮಾನ್ಯವಾದ ಕೈಪುಸ್ತಕವಾಗಿತ್ತು. ಇದರಲ್ಲಿ ಅನುಕ್ರಮವಾಗಿ ಗುರ್ತಿಸಿದ ಕೆಲವು ತಾರೀಕುಗಳು ಹೊರತು ಇನ್ನೇನೂ ಇರಲಿಲ್ಲ. ಈ ತಾರೀಕುಗಳಲ್ಲಿ, ಮೊದಲನೆಯದಕ್ಕೂ ಕಟ್ಟಕಡೆಯದಕ್ಕೂ ಮಧ್ಯೆ, ಹಲವು ವರ್ಷಗಳ ಅವಧಿ ಅಡಕವಾಗಿತ್ತು. ತಾರೀಕುಗಳನ್ನು ಪರೀಕ್ಷಿಸುವಾಗ ಒಂದು ವಿಷಯ ನನ್ನ ಗಮನವನ್ನು ಸೆಳೆಯಿತು; ಸುಮಾರು ಒಂದು ವರ್ಷದ ಹಿಂದೆ, ಈ ತಾರೀಕುಗಳ ದಾಖಲಾತಿ, ಇದ್ದಕ್ಕಿದ್ದಂತೆ ನಿಂತುಹೋಗಿತ್ತು.

ಅಲ್ಲೊಂದು, ಇಲ್ಲೊಂದರಂತೆ, ಕೆಲವು ತಾರೀಕುಗಳಿಗೆ ಲಗತ್ತಾಗಿ, ಸಂಕ್ಷೇಪವಾದ– ಬಹುಮಟ್ಟಿಗೆ ಒಂದೇ ಮಾತಿನ–ಷರಾ ಬರೆಯಲ್ಪಟ್ಟಿತ್ತು. ಉದಾರಹರಣೆಗೆ, "ದ್ವಿಗುಣ" ಎಂಬ ಶಬ್ದವನ್ನು, ಒಟ್ಟು ಅನೇಕ ನೂರು ತಾರೀಕುಗಳ ಪೈಕಿ, ಬಹುಶಃ ಆರು ತಾರೀಕುಗಳಿಗೆ ಮಾತ್ರ ಲಗತ್ತಿಸಲಾಗಿತ್ತು. ಮತ್ತು ಈ ತಾರೀಕುಗಳ ಪಟ್ಟಿಯಲ್ಲಿ, ಬಹು ಮುಂಚಿನ ಒಂದು ತಾರೀಕಿಗೆ ಎದುರಾಗಿ, ನಾಲ್ಕು ಆಶ್ಚರ್ಯ ಸೂಚಕ ಚಿಹ್ನೆಗಳೊಡನೆ–ಈ ರೀತಿ — "ಪೂರ್ಣ ನಿಷ್ಫಲ ! ! ! ! " — ಎಂದು ಷರಾ ಇತ್ತು.

ನಾನು ನಡೆಸಿದ ಪರೀಕ್ಷೆಗಳಿಂದ ನನ್ನ ಕುತೂಹಲ ಕೆರಳಿತೇ ಹೊರತು ವಿಷಯ ಏನೂ ಸ್ಪಷ್ಟವಾಗಲಿಲ್ಲ. ನಾನು ತಂದಿದ್ದ ಡ್ರಾಯರಿನಲ್ಲಿದ್ದದ್ದು, ಯಾವುದೋ ತೀಕ್ಷ್ಣವಾಸನೆಯ ಮತ್ತು ಘಾಟಿನ ರಸಾಯನಿಕ ದ್ರವವಿದ್ದ ಒಂದು ಸೀಸೆ; ಯಾವ ಯಾವುದೋ ಲವಣ–ಪುಡಿ–ಹಿಟ್ಟುಗಳ ಪೊಟ್ಟಣಗಳು; ಒಂದು ಟಿಪ್ಪಣಿ ಪುಸ್ತಕ; ಅದರಲ್ಲಿ, ವಿಠಲನ ಅನೇಕಾನೇಕ ವಿಚಿತ್ರ —ವಿಲಕ್ಷಣ ಅಸಾಧ್ಯ ಸಂಶೋಧನೆಗಳಂತೆ–ಕೆಲಸಕ್ಕೆ ಬಾರದ ಹುಚ್ಚು ಹುಚ್ಚು ಪ್ರಯೋಗ–ಪರೀಕ್ಷೆಗಳ ದಾಖಲೆಗಳು. ಈ ಪದಾರ್ಥಗಳು ನನ್ನ ಮನೆಗೆ ತರಲ್ಪಡುವುದಕ್ಕೂ — ಭಯಗ್ರಸ್ತನಾದ ನನ್ನ ಗೆಳೆಯನ ಪ್ರಾಣ–ಮಾನ–ಬುದ್ಧಿ ಸ್ವಾಸ್ಥ್ಯಗಳ ಕ್ಷೇಮಕ್ಕೂ, ಯಾವ ಸಂಬಂಧವಿದ್ದೀತು ? ನನ್ನ ಸ್ಥಳಕ್ಕೆ ಬರಬಲ್ಲ ಅವನ ದೂತ, ಇನ್ನೊಂದು ಸ್ಥಳಕ್ಕೂ ಹೋಗಲಾರನೇಕೆ ? ಈ ವ್ಯವಹಾರಕ್ಕೆ ನನ್ನ ಸ್ಥಳವೇ ಏಕೆ ಅಗತ್ಯವಾಯಿತು ? ಒಂದು ವೇಳೆ ಹತ್ತಿರದ ಸ್ನೇಹಿತನೆಂಬ ಕಾರಣದಿಂದ ಅವನು ಕಳಿಸುವ ದೂತನನ್ನು ನಾನು, ನಡುರಾತ್ರಿಯಲ್ಲಿ, ಏಕಾಂಗಿಯಾಗಿ, ರಹಸ್ಯದಲ್ಲಿ ಬರಮಾಡಿಕೊಳ್ಳಬೇಕಾದ್ದೇಕೆ ?

ನಾನು ಈ ವಿಷಯವಾಗಿ ಯೋಚಿಸಿದಷ್ಟೂ, ಇದು ಒಬ್ಬ ಮೆದುಳುರೋಗಿಯ ಸಂಬಂಧವಾದದ್ದೆಂದು ನನಗೆ ಮಂದಟ್ಟಾಗತೊಡಗಿತು. ಬುದ್ಧಿಶಕ್ತಿಗೆ ಮಿತಿಮೀರಿದ ಶ್ರಮ ಕೊಟ್ಟರೆ, ಇದು ವಿಕಲ್ಪವಾಗಿ ಅಡ್ಡದಾರಿ ಹಿಡಿಯುವುದು ಅಸಂಭವವಲ್ಲ. ಕೆಲವು ವರ್ಷಗಳಿಂದ ವಿಠಲ, ಅವನಂತಹ ವಿಜ್ಞಾನಿಗೆ ತರವಲ್ಲದ ಹುಚ್ಚುಹುಚ್ಚಾದ ಅವೈಜ್ಞಾನಿಕ ಕಲ್ಪನೆಗಳಿಂದಲೂ ಪ್ರಯೋಗಗಳಿಂದಲೂ, ತಲೆ ಕೆಡಿಸಿಕೊಳ್ಳಲು ಶುರು ಮಾಡಿದ್ದ. ಆ ವಿಷಯದಲ್ಲಿ ನನಗೂ ಅವನಿಗೂ ಸಲಿಗೆ ಕೆಡುವಂತಹ ವ್ಯಾಜ್ಯವೇ ನಡೆದುಹೋಯಿತು. ಆಗಲೇ ನನಗೆ, ಇವನು ಎಂದಾದರೂ ಪೂರ ತಲೆ ಕೆಡಿಸಿಕೊಳ್ಳುತ್ತಾನೆಂದು ಅನ್ನಿಸಿತ್ತು. ನಾನು ನಿರೀಕ್ಷಿಸಿದಂತೆಯೇ ಈಗ ಅವನ ತಲೆ ಪೂರ ಕೆಟ್ಟೇಹೋಗಿತ್ತು. ! ಇದು ಹೊರತು, ನನಗೆ ಅವನ ವಿಷಯದಲ್ಲಿ ಬೇರೆ ಏನು ತೀರ್ಮಾನಕ್ಕೂ ಬರಲಾಗಲಿಲ್ಲ.

ರಾತ್ರಿ ಹತ್ತು ಗಂಟೆ ವೇಳೆಗೆ ನನ್ನ ಚಿಕಿತ್ಸಾಲಯದ ಸೇವಕರನ್ನೆಲ್ಲಾ ಕಳಿಸಿಬಿಟ್ಟೆ. ಬರುವುದು ಹೊತ್ತಾಗುವುದೆಂದೂ, ಊಟಕ್ಕೆ ಕಾಯಬೇಕಾಗಿಲ್ಲವೆಂದೂ ಮನೆಗೆ ಟೆಲಿಫೋನ್ ಮಾಡಿ, ಉಳಿದಿದ್ದ ಎರಡು ಗಂಟೆಗಳನ್ನು ಸವೆಸಲು ಸಿದ್ಧನಾಗಿ ಕುಳಿತೆ. ದೂತನನ್ನು ಕಳಿಸುವ ಮನುಷ್ಯನೇ ಹುಚ್ಚು–ಎಂದ ಮೇಲೆ, ಅವನು ಕಳಿಸುವ ದೂತ ಇನ್ನೆಂಥವನೋ !– ಎಂದು ಕಳವಳವಾಗಿ, ಆತ್ಮರಕ್ಷಣೆಯ ಸಂದರ್ಭ ಒದಗಿದರೆ ಇರಲೆಂದು, ನನ್ನ ರಿವಾಲ್ವರಿಗೆ ತೋಟಾಗಳನ್ನು ತುಂಬಿಟ್ಟುಕೊಂಡೆ.

ಕಾಲ ಕಳೆದ ಹಾಗೆಲ್ಲ, ಸುತ್ತುಮುತ್ತಿನ ಸದ್ದು ಅಡಗುತ್ತ ಬಂದು, ನಿಶ್ಶಬ್ದವಾದ ವಾತಾವರಣ ಆವರಿಸುತ್ತಿತ್ತು. ಕಿವಿಗೊಟ್ಟು ಆಲಿಸಿದರೆ ಮಾತ್ರ, ನಗರದ ದೂರದ ಪ್ರದೇಶಗಳ ಮರ್ಮರ ಶಬ್ದ ಕೇಳಿ ಬರುತ್ತಿತ್ತೇ ಹೊರತು, ಮಹಾವೀರ ಚೌಕದ ಸುತ್ತುಮುತ್ತಿನ ಪ್ರದೇಶ ನಿದ್ರೆಯಲ್ಲಿ ಮುಳುಗಿದಂತೆ ಭಾಸವಾಗುತ್ತಿತ್ತು.

ನನ್ನ ಬೈಠಕು ಖಾನೆಯ ಗೋಡೆ ಗಡಿಯಾರ ಹನ್ನೆರಡು ಗಂಟೆ ತೋರಿಸುತ್ತಿದ್ದ ಹಾಗೆಯೇ, ದೂರದಲ್ಲಿದ್ದ ನಗರದ ಪುರಸಭಾ ಭವನದ ಗೋಪುರ ಗಡಿಯಾರದಿಂದ ಗಂಟೆ ಹೊಡೆಯುವ ಸದ್ದು ಕೇಳಿಬರತೊಡಗಿತು. ಗಂಟೆ ಹನ್ನೆರಡನೇ ಸಲ ಬಾರಿಸಿ ನಿಂತಿತು. ಸದ್ದು ನಿಂತದ್ದೇ ತಡ, ನನ್ನ ಚಿಕಿತ್ಸಾಲಯದ ಮುಂಬಾಗಿಲನ್ನು ಯಾರೋ ಬೆರಳ ಗಿಣ್ಣಿನಿಂದ ಮೆಲ್ಲಗೆ ತಟ್ಟಿದ ಹಾಗಾಯಿತು. ನಾನು ಎದ್ದು ಹೋಗಿ ಬಾಗಿಲು ತೆರೆದೆ. ಹೊರಗೆ, ಮುಂದಿನ ಮೊಗಸಾಲೆಯ ಕಂಭದ ಮರೆಯಲ್ಲಿ ಒಬ್ಬ ಸಣ್ಣ ಆಕೃತಿಯ ಮನುಷ್ಯ ಬಾಗಿ ಅವಿತು ನಿಂತಿದ್ದ. ನಾನು ಅವನನ್ನುದ್ದೇಶಿಸಿ,

"ನೀನು ಯಾರು ?"

— ಎಂದು ಕೇಳಿದೆ. ಅವನು ಗೊಗ್ಗರಾದ ತಗ್ಗಿದ ಧ್ವನಿಯಲ್ಲಿ ,

"ಡಾ—ಡಾ—ಡಾಕ್ಟರ್ ವಿಠಲ್ ! ವಿಠಲ್‌ರ ಕ–ಕಡೆಯಿಂದ !"

—ಎಂದು ತೊದಲತೊಡಗಿದ.

"ಸರಿ, ಒಳಗೆ ಬಾ"

—ಎಂದೆ, ನಾನು. ಆದರೆ, ಕೂಡಲೆ ಅವನು ಒಳಕ್ಕೆ ಬರಲಿಲ್ಲ. ಒಂದು ಸಲ ಮರೆಯಿಂದ ಬಗ್ಗಿ ಚೌಕದ ಕಡೆ ದಿಟ್ಟಿಸಿ ನೋಡಿದ. ದೂರದಲ್ಲಿ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್–ಟಾರ್ಚು ಬೆಳಗುತ್ತ ಬರುತ್ತಿದ್ದುದು ಕಾಣಿಸಿತು. ಅವನನ್ನು ಕಂಡೊಡನೆಯೇ, ಬಂದಿದ್ದ ಮನುಷ್ಯ ಸರ್ರನೆ ಮನೆಯನ್ನು ಪ್ರವೇಶಿಸಿದ.

ಪೊಲೀಸಿನವನನ್ನು ಕಂಡಾಗ ಅವನಿಗೆ ಆದ ಅಂಜಿಕೆ ನನಗೆ ಹಿತವಾಗಿರಲಿಲ್ಲ. ಆದ್ದರಿಂದ ನಾನು, ಜೇಬಿನಲ್ಲಿದ್ದ ನನ್ನ ರಿವಾಲ್ವರಿನ ಮೇಲೆ ಕೈ ಇಟ್ಟುಕೊಂಡೇ, ಮುಂಬಾಗಿಲನ್ನು ಮುಚ್ಚಿ ಅವನನ್ನು ನನ್ನ ರೋಗಿಗಳ ಬೈಠಕುಖಾನೆಗೆ ಕರೆದೊಯ್ದೆ. ಬೈಠಕುಖಾನೆಯ ಬೆಳಕಿನಲ್ಲಿ ನನಗೆ ಅವನನ್ನು ನೋಡುವ ಅವಕಾಶ ಸಿಕ್ಕಿತು. ಅವನ ಮುಖ ನೋಡಿದ ಕೂಡಲೆ–ಅದು, ನಾನು ಹಿಂದೆಂದೂ–ಎಲ್ಲೂ–ನೋಡದ ಮುಖ ಎನ್ನುವುದಷ್ಟು ಖಂಡಿತವಾಯಿತು.

ನಾನು ಮೊದಲೇ ತಿಳಿದಂತೆ, ಬಂದ ಮನುಷ್ಯ ಎತ್ತರ–ಗಾತ್ರಗಳಲ್ಲಿ ಸಣ್ಣ ಅಳತೆಯವನಾಗಿದ್ದ. ನೋಡಿದ ಕೂಡಲೆ, ಕೆಂಪಗೆ ಕಾದ ಚೂರಿಯನ್ನು ತಟ್ಟನೆ ತಿವಿದರೆ ಆಗುವಂತಹ ಛಳುಕನ್ನುಂಟುಮಾಡುವ ಅವನ ಅಲೌಕಿಕ ವಿಕಾರ ಮುಖಭಾವ; ಆಕೃತಿ ಸಣ್ಣದಾದರೂ, ಅದರಲ್ಲಿ ಕಂಡುಬಂದ ಅಪಾರ ದೈಹಿಕಶಕ್ತಿಯ ಮೈಕಟ್ಟು; ಜೊತೆಯಲ್ಲೇ, ಇಡೀ ವ್ಯಕ್ತಿತ್ವದಲ್ಲಿ ಪ್ರಕಟವಾಗುತ್ತಿದ್ದ ಮಾನಸಿಕ ದೌರ್ಬಲ್ಯ; ಕೊನೆಯದಾಗಿ, ಆದರೆ ಎಲ್ಲಕ್ಕೂ ಹೆಚ್ಚಾಗಿ–ಅವನ ಸಾಮೀಪ್ಯದಿಂದ ನನ್ನ ಮನಸ್ಸಿನಲ್ಲಾಗಿದ್ದ ಗೊಂದಲ–ಇವೆಲ್ಲ ಅಂಶಗಳ ಒಟ್ಟು ಪ್ರಭಾವದಿಂದ, ನನಗೆ ತಟ್ಟಿದ ಛಳಿ ತಡೆಯಲಸಾಧ್ಯವಾಗಿತ್ತು ! ಕೆಲವು ಕ್ಷಣಗಳವರೆಗೆ ಸ್ತಂಭೀಭೂತನಾದೆ ! ನನ್ನ ನಾಡಿ ಕುಗ್ಗುತ್ತಿದ್ದಂತೆ ಭಾಸವಾಯಿತು. ನನ್ನಲ್ಲಿ ತಲೆದೋರಿದ ಈ ಲಕ್ಷಣಗಳು ನನಗೆ ಅತ್ಯಾಶ್ಚರ್ಯವನ್ನುಂಟುಮಾಡಿದರೂ, ಇವಕ್ಕೆಲ್ಲ, ನನ್ನಲ್ಲೇ ಇರಬಹುದಾದ, ಯಾವುದೋ ವಿಲಕ್ಷಣವೂ, ಕೇವಲ

ವೈಯಕ್ತಿಕವೂ ಆದ ಅಸಹನೆಯೇ ಕಾರಣವಿರಬೇಕೆಂದು ಬಗೆದೆ. ಆದರೆ ವಸ್ತುತಃ, ಕಾರಣ ಮಾನವ ಸ್ವಭಾವದ ಗಭೀರವಾದ ಗರ್ಭದಲ್ಲಿ ನೆಲೆಸಿದೆಯೆಂದೂ, ಈ ಕಾರಣವು ದ್ವೇಷ ಭಾವಕ್ಕಿಂತ, ಬೇರೆ ಯಾವುದೋ ಉದಾತ್ತಭಾವದ ಸುತ್ತ ತಿರುಗುವುದೆಂದೂ ನಂಬಲು, ನನಗೆ ಈಚೆಗೆ ಕಾರಣಗಳು ತೋರಿವೆ.

ಬಂದ ಕ್ಷಣದಿಂದ, ನನ್ನಲ್ಲಿ ಅಸಹ್ಯಪೂರ್ವಕವಾದ ಕುತೂಹಲವನ್ನುಂಟುಮಾಡಿದ್ದ ಈ ಮನುಷ್ಯ, ನೋಡಿದ ಯಾರಲ್ಲಾದರೂ ತಟ್ಟನೆ ನಗುವನ್ನುಕ್ಕಿಸುವಂತಹ ರೀತಿಯಲ್ಲಿ ಉಡುಪನ್ನು ಧರಿಸಿದ್ದ. ಅವನು ಧರಿಸಿದ್ದ ಸೂಟಿನ ಬಟ್ಟೆ ಬಹು ಬೆಲೆಯುಳ್ಳದ್ದೇನೋ ಆಗಿತ್ತು. ಆದರೆ, ಅವನ ಉಡುವು ಎಲ್ಲ ರೀತಿಯಲ್ಲೂ ಅವನ ಅಳತೆಗೆ ತೀರ ದೊಡ್ಡದಾಗಿ ದೊಗಲಾಗಿತ್ತು. ಅವನ ಮೋಟುಕಾಲುಗಳಿಗಿಂತ ಬಹಳ ಉದ್ದವಾಗಿದ್ದ ಷಾರಾಯಿ ನೆಲಕ್ಕೆ ಸೋಕದಿರಲೆಂದು, ಅದರ ಎರಡು ಕವಲುಗಳ ಕೆಳ ತುದಿಯನ್ನೂ ಮೇಲಕ್ಕೆ ಸುರಳಿ ಸುತ್ತಿದ್ದ. ಅವನು ಧರಿಸಿದ್ದ ದೊಗಲೆ ಅಂಗಿಯ ನಡು–ಅವನ ಸೊಂಟಕ್ಕಿಂತ ಬಹಳ ಕೆಳಮಟ್ಟದಲ್ಲಿತ್ತು; ಅದರ ಭುಜದ ಮೂಲೆಗಳು ಅವನ ಭುಜಗಳಿಂದ ಕೆಳಕ್ಕೆ ಜಾರಿ ಬಿದ್ದಿದ್ದವು. ಅವನ ವೇಷ ಇಷ್ಟು ನಗು ಪಾಟಲಿಯಾಗಿದ್ದರೂ, ನನ್ನಲ್ಲಿ ಉಂಟಾದ ಭಾವಕ್ಕೂ ನಗುವಿಗೂ ಬಹು ದೂರವಿತ್ತೆಂದು ತಿಳಿಸಲು ಆಶ್ಚರ್ಯವಾಗುತ್ತದೆ. ಇದರ ಕಾರಣ ಹುಡುಕುವುದಾದರೆ, ನನ್ನ ಎದುರಿಗಿದ್ದ ಪೈಶಾಚಿಕ ಪುರುಷಾಮೃಗದ ಸಾರಭೂತವಾದ ವ್ಯಕ್ತಿತ್ವದಲ್ಲೇ ಏನೋ ಒಂದು–ಆಕ್ರಮಿಸುವಂತಹ, ಆಶ್ಚರ್ಯಗೊಳಿಸುವಂತಹ, ಹೇಸಿಕೆಯನ್ನುಂಟುಮಾಡುವಂತಹ–ಗುಣ ಇದ್ದದ್ದರಿಂದ, ಅವನ ಈ ಉಡುಪಿನ ಹೊಸ ಅಸಂಬದ್ಧತೆ–ಆ ಗುಣಕ್ಕನುಸಾರವಾಗಿದ್ದು ಪುಷ್ಟಿ ಕೊಡುವಂತಿತ್ತು. ಆದಕಾರಣ, ಆ ಮನುಷ್ಯನ ಸ್ವಭಾವ–ಗುಣ–ನಡತೆಗಳ ವಿಷಯವಾಗಿ ಮಾತ್ರವೇ ಅಲ್ಲದೆ, ಅವನ ಹುಟ್ಟು, ಜೀವನ, ಸ್ಥಿತಿಗಳ, ಅಂತಸ್ತು–ಗಳ ವಿಷಯವಾಗಿಯೂ ಕುತೂಹಲ ಕೆರಳಿತು.

ಇಲ್ಲಿ, ಇದುವರೆಗೆ ಹೇಳಿರುವುದನ್ನೆಲ್ಲ ಬರೆದು ತಿಳಿಸುವುದಕ್ಕೆ , ಇಷ್ಟು ಹೆಚ್ಚಿನ ಸ್ಥಳವನ್ನೂ ಕಾಲವನ್ನೂ ಆಕ್ರಮಿಸಿದ್ದರೂ, ಇವೆಲ್ಲ ನಡೆದುಹೋದದ್ದು ಕೆಲವು ಕ್ಷಣಗಳಲ್ಲಿ ಮಾತ್ರ. ಬಂದಿದ್ದ ಮನುಷ್ಯ ಉದ್ವಿಗ್ನತೆಯಿಂದ ಅವಸರಪಡುತ್ತಿದ್ದಂತೆ ತೋರಿತು. ನನ್ನನ್ನು ನೋಡಿ,

"ತಂದಿದ್ದೀರಾ ಅದನ್ನ , ಹೇಳಿ – ತಂದಿದ್ದೀರಾ ?"

—ಎಂದು ಬಿರುಸಿನಿಂದ ಕೇಳಿದ. ಹೀಗೆ ಕೇಳುವಾಗ ಅವನು ನನ್ನ ಹತ್ತಿರ ಬಂದು, ನನ್ನ ಭುಜ ಹಿಡಿದು ಆಡಿಸಿದ; ಅಷ್ಟು ಆತುರದಲ್ಲಿದ್ದ ಅವನು. ಅವನ ಸ್ಪರ್ಶಕ್ಕೆ ಆಪಾದಮಸ್ತಕ ನನ್ನ ದೇಹದ ರಕ್ತವೆಲ್ಲ ಮಂಜುಗೆಡ್ಡೆಯಂತೆ ಹೆಪ್ಪುಗಟ್ಟಿದ ಹಾಗಾಯಿತು. ನಾನು ಅವನ ಕೈಯನ್ನು ತೆಗೆದು ಹಿಂದಕ್ಕೆ ತಳ್ಳಿ,

"ಹ್ಞಾ ! ಹ್ಞಾ ! ನಿಧಾನ ! – ಇಷ್ಟು ಸಲಿಗೆಯಾದರೆ ಹೇಗೆ ! ನನಗೆ ನಿಮ್ಮ ಪರಿಚಯವಿಲ್ಲ — ಅನ್ನೋದನ್ನ ಮರೆತಿರೋಹಾಗಿದೆ ! – ಅಲ್ಲಿ ಕೂತುಕೊಳ್ಳಿ —ದಯವಿಟ್ಟು"

—ಎಂದು ಒಂದು ಕುರ್ಚಿಯನ್ನು ತೋರಿಸಿದೆ. ನಾನು, ನನ್ನ ಕುರ್ಚಿಯಲ್ಲಿ ಕುಳಿತುಕೊಂಡೆ. ಆಗಲೋ, ಹೊತ್ತು ಮೀರಿದ ಸಮಯ; ನನ್ನ ಮನಸ್ಸಿನಲ್ಲೋ, ಈ ಮೊದಲೇ ತಾಂಡವಾಡುತ್ತಿದ್ದ ಯೋಚನೆಗಳು; ಜೊತೆಗೆ, ಬಂದವನ ವಿಷಯದಲ್ಲಿ ಉಂಟಾಗಿದ್ದ ಭಾವನೆಯೋ, ಭೀಕರ–ಅಸಹ್ಯ ! ಈ ಸನ್ನಿವೇಶದಲ್ಲಿ ನಾನು, ಸಾಧ್ಯವಾದಷ್ಟು ಶಾಂತತೆಯನ್ನನುಕರಿಸಿ, ನನ್ನ ಯಾರೋ ರೋಗಿಯೊಬ್ಬನೊಡನೆ ಮಾತಾಡುತ್ತಿರುವಂತೆ ಭಾವಿಸಿಕೊಂಡು, ಕುಳಿತೆ. ಅವನೂ ಕುಳಿತುಕೊಂಡು, ವಿನಯವಾಗಿಯೇ,

"ದಯವಿಟ್ಟು ಕ್ಷಮಿಸಿ, ಡಾಕ್ಟರ್ ಜಗನ್ನಾಥ್, ತಾವು ಹೇಳಿದ್ದು ಸರಿ, ನನ್ನದು ತಪ್ಪು. ಆತುರಕ್ಕೊಳಗಾಗಿ ಮರೆತು ಮಾಡಿದ ತಪ್ಪು ಅದು. ನಾನು, ತಮ್ಮ ಮಿತ್ರರೂ ಸಹೋದ್ಯೋಗಿಗಳೂ ಆದ ಡಾಕ್ಟರ್ ವಿಠಲ್–ರವರ ಕಡೆಯಿಂದ, ತುರುತು ಕಾರ್ಯದ ಮೇಲೆ ಇಲ್ಲಿಗೆ ಬಂದಿದ್ದೇನೆ, ನನಗೆ ತಿಳಿದಂತೆ —" ಎಂದು ತಡೆದು, ಕೈಯಿಂದ ಕುತ್ತಿಗೆಯನ್ನು ಹಿಡಿದುಕೊಂಡ. ಹೊರನೋಟಕ್ಕೆ ಶಾಂತನಾಗಿ ಸಮಾಧಾನವಾಗಿ ಕಂಡರೂ, ಅವನು, ತನ್ನಲ್ಲಿ ತಲೆದೋರಲು ಶುರುವಾಗಿದ್ದ ಏನೋ ಯಾತನೆಯೊಡನೆ ಹೋರಾಡುತ್ತಿದ್ದಂತೆ ತೋರಿತು. ಕೆಲವು ಕ್ಷಣಗಳು ಬಿಟ್ಟು , "ನನಗೆ ತಿಳಿದಂತೆ — ಒಂದು ಡ್ರಾಯರು...."

—ಎಂದ. ಅಷ್ಟರಲ್ಲೇ ನಾನು, ಅವನ ಮಾನಸಿಕ ಆತಂಕಕ್ಕೆ ಮರುಕಗೊಂಡು, ನನ್ನ ಕುತೂಹಲಕ್ಕೆ ಸೋತು, ಒಂದು ಮೇಜಿನ ಪಕ್ಕದಲ್ಲಿ ಇನ್ನೂ ಬಟ್ಟೆಯಿಂದ ಆವೃತವಾಗಿ ನೆಲದ ಮೇಲೆ ಇದ್ದ ಡ್ರಾಯರನ್ನು ತೋರಿಸುತ್ತ ,

"ಹೌದು, ಅದೋ ನೋಡಿ – ಅಲ್ಲೇ ಇದೆ"

—ಎಂದೆ. ನನ್ನ ಮಾತುಗಳನ್ನು ಕೇಳಿದೊಡನೆಯೇ, ಕುಳಿತಿದ್ದ ಅವನು ತಟ್ಟನೆ ಎದ್ದು ಅದರ ಕಡೆಗೆ ಕಪಿಯ ಹಾಗೆ ನೆಗೆದ. ನೆಗೆದವನೇ, ತಡೆದು ಎದೆಯ ಮೇಲೆ ಕೈ ಇಟ್ಟುಕೊಂಡ. ದವಡೆಗಳ ಸೆಳೆತ–ಬಿಗಿತಗಳಿಂದ, ಅವನ ಹಲ್ಲುಗಳು ಕಟಕಟನೆ ಮಸೆದುದು ಕೇಳಿಸಿತು. ಅವನ ಆ ವಿಕಾರವಾದ ಮುಖ,

ನೋಡುತ್ತಿದ್ದ ಹಾಗೆಯೇ ಭೀಕರವಾಯಿತು. ಅವನ ಪ್ರಾಣ-ಬುದ್ಧಿ ಎರಡರ ಕ್ಷೇಮಕ್ಕೂ ನನಗೆ ಬಹಳ ಗಾಬರಿಯಾಯಿತು.

"ಅವಸರವೇಕೆ ? ಸ್ವಲ್ಪ ಸಮಾಧಾನ ಹೊಂದಿರಿ"

—ಎಂದು ಹೇಳಿದೆ. ಅವನ ಉತ್ತರವಾಗಿ, ನನ್ನ ಕಡೆ ಒಮ್ಮೆ ತನ್ನ ವಿಕಟ ಮೋರೆಯನ್ನು ತಿರುಗಿಸಿ, ಭಯಾನಕವೂ ಅಸಹ್ಯವೂ ಆದ ಮುಗುಳ್ನಗೆಯನ್ನು ಬೀರಿದ. ಅನಂತರ ಬಾಗಿ, ಡ್ರಾಯರಿಗೆ ಸುತ್ತಿದ್ದ ಬಟ್ಟೆಯನ್ನು ಕಿತ್ತೊಗೆದು, ಡ್ರಾಯರನ್ನು ಪರೀಕ್ಷಿಸಿದ. ಅದರಲ್ಲಿದ್ದ ಸಾಮಗ್ರಿಗಳನ್ನು ನೋಡುತ್ತಲೇ, ಯಾವುದೋ ಅಗಾಧವಾದ ಭಾರ ಎದೆಯ ಮೇಲಿಂದ ಇಳಿದವನಂತೆ, ಒಂದು ಸಲ ಬಿಕ್ಕಳಿಸಿ ನಿಟ್ಟುಸಿರು ಬಿಟ್ಟು, ಕೂಡಲೆ, ತಕ್ಕಮಟ್ಟಿಗೆ ಹತೋಟಿಗೆ ಬಂದ ಧ್ವನಿಯಲ್ಲಿ,

"ತಮ್ಮ ಬಳಿಯಲ್ಲಿ ಒಂದು ಔನ್ಸು ಗ್ಲಾಸು ಇದೆಯೇ ?"

— ಎಂದು ಕೇಳಿದ. ನಾನು ಎದ್ದು ಹೋಗಿ ಅವನು ಕೇಳಿದನ್ನು ತಂದು ಕೊಟ್ಟೆ. ಅವನು ಮುಗುಳ್ನಗೆ ನಗುತ್ತಲೇ ತಲೆದೂಗಿ ನನ್ನನ್ನು ವಂದಿಸಿ, ಡ್ರಾಯರಲ್ಲಿದ್ದ ಸೀಸೆಯ ಕೆಂಪು ದ್ರಾವಕದ ಕೆಲವು ತೊಟ್ಟುಗಳನ್ನು, ಯಾವುದೋ ಅಳತೆಗೆ ಸರಿಯಾಗಿ ಗ್ಲಾಸಿಗೆ ಹಾಕಿಕೊಂಡು, ಅದಕ್ಕೆ ಕಾಗದದ ಪೊಟ್ಟಣಗಳ ಲವಣಗಳಲ್ಲಿ ಒಂದನ್ನು ಬೆರಸಿದ. ಮಿಶ್ರಣದಲ್ಲಿ ಮೊದಮೊದಲು ಕೆಂಪು ಛಾಯೆ ತಲೆದೋರಿ, ಲವಣದ ಹರಳುಗಳು ಕರಗಿದಂತೆಲ್ಲ ಬಣ್ಣವೇರಿ, ಕೇಳಿಸುವಂತೆ ನೂರೆ ನೊರೆಯಾಗುತ್ತ-ಸ್ವಲ್ಪ ಸ್ವಲ್ಪವಾಗಿ ಆವಿಯಾಗತೊಡಗಿತು. ಅನಂತರ, ಏಕಾಕಾರದಲ್ಲಿ —ನೊರೆಗುಟ್ಟುತ್ತಿದ್ದುದು ನಿಂತಿತು. ಮಿಶ್ರಣ, ಕಪ್ಪುನೇರಿಳೆ ವರ್ಣಕ್ಕೆ ತಿರುಗಿತು. ಆಮೇಲೆ ನಿಧಾನವಾಗಿ ತಿಳಿ ಹಸಿರು ವರ್ಣವಾಯಿತು.

ಮಿಶ್ರಣದ ಈ ಪರಿವರ್ತನೆಗಳನ್ನು ನಟ್ಟನೋಟದಿಂದ ನೋಡುತ್ತಿದ್ದ ಆ ಮನುಷ್ಯ-ಈಗ ಮುಗುಳ್ನಗೆ ನಕ್ಕು, ಮಿಶ್ರಣವಿದ್ದ ಗ್ಲಾಸನ್ನು ಮೇಜಿನ ಮೇಲಿಟ್ಟು ನನ್ನ ಕಡೆ ತಿರುಗಿದ. ಪರಿಶೋಧಿಸುವ ಸೋಗಿನಲ್ಲಿ ನನ್ನನ್ನು ನೋಡುತ್ತ,

"ಈಗ-ಇನ್ನು ಉಳಿದಿರುವುದನ್ನು ಇತ್ಯರ್ಥಮಾಡೋ ಕೆಲಸ. ನೀವು ವಿವೇಕಿಗಳಂತೆ ನನ್ನ ಮಾತನ್ನು ಲಾಲಿಸಿ, ನಾನು ಇನ್ನು ಹೆಚ್ಚು ಚರ್ಚಿಸದೆ ಈ ಗ್ಲಾಸಿನೊಡನೆ ಇಲ್ಲಿಂದ ಹೊರಟುಹೋಗಲು ಅವಕಾಶ ಕೊಡುವಿರಾ ? ಅಥವಾ, ನೀವು ಮಿತಿಮೀರಿದ ಕುತೂಹಲದ ಬಲಾತ್ಕಾರಕ್ಕೊಳಗಾಗಿದ್ದೀರಾ ? ಚೆನ್ನಾಗಿ ಪರ್ಯಾಲೋಚಿಸಿ ಹೇಳಿ. ಏಕೆಂದರೆ, ನಿಮ್ಮ ತೀರ್ಮಾನದಂತೆ ಮುಂದಿನ ಕೆಲಸ ನಡೆಯತಕ್ಕದ್ದಾಗಿದೆ. ನೀವು ತೀರ್ಮಾನಿಸಿದರೆ, ನೀವು ಮೊದಲು ಹೇಗಿದ್ದಿರೋ ಹಾಗೇ-ಅಂದರೆ, ನಿಮ್ಮ ಐಶ್ವರ್ಯ-ಜ್ಞಾನಗಳಲ್ಲಿ ಯಾವ ಹೆಚ್ಚಳವೂ ಆಗದಿರೋ ಸ್ಥಿತಿಯಲ್ಲಿ ನಿಮ್ಮನ್ನು ಬಿಟ್ಟುಹೋಗುತ್ತೇನೆ. ಆಗ, ಪ್ರಾಣಾಪತ್ತಿಗೊಳಗಾದ ಒಬ್ಬ ಮನುಷ್ಯನಿಗೆ ಸಹಾಯ ಮಾಡಿದೆನೆಂಬ ಹೆಮ್ಮೆಯ ಭಾವನೆಯೂ ಒಂದು ರೀತಿಯಲ್ಲಿ ಆತ್ಮದ ಐಶ್ವರ್ಯ-ಎಂದು ಗ್ರಹಿಸಿ, ತಾವು ತೃಪ್ತರಾಗಬಹುದು.

"ಅಥವಾ, ತಾವು ಇಷ್ಟಪಟ್ಟರೆ, ವಿಜ್ಞಾನದ ಅತ್ಯದ್ಭುತವಾದ ಒಂದು ಸೀಮೆಯನ್ನು-ಅತುಳಶಕ್ತಿ, ಅಪ್ರತಿಮ ಅಧಿಕಾರ, ದಿಗಂತ ವಿಶ್ರಾಂತವಾದ ಯಶಸ್ಸು-ಇವುಗಳಿಗೆ ಹೊಸ ಮಾರ್ಗಗಳನ್ನು ಇಲ್ಲಿ-ಇದೇ ಕೊಠಡಿಯಲ್ಲಿ-ಮತ್ತು-ಕೇಳಿ, ದೈವದ ಪರಮ ವೈರಿಯಾದವನೊಬ್ಬನ ನಾಸ್ತಿಕತೆಯನ್ನೂ ಬುಡಮಟ್ಟ ಕಿತ್ತುರುಳಿಸುವಂತಹ ಒಂದು ಅದ್ಭುತ ಘಟನಾ ದೃಶ್ಯದಿಂದ, ನಿಮ್ಮ ಕಣ್ಣುಗಳು ಕೋರೈಸಿ-ಸಿಡಿದು ಕುರುಡಾಗುವುವು !"

—ಎಂದ. ಅವನ ಮಾತುಗಳನ್ನು ಕೇಳಿ ವಾಸ್ತವವಾಗಿ ನನ್ನ ಮನಸ್ಸು ಕೇವಲ ಅಶಾಂತವಾಗಿತ್ತು. ಆದರೂ ಹೊರಗೆ ಶಾಂತತೆಯನ್ನು ನಟಿಸುತ್ತ,

"ಹುಹ್ ! ನೀವು ಅರ್ಥವಾಗದ ಒಗಟೆಗಳಲ್ಲೇ ಮಾತಾಡಿರುವಿರಿ. ಆದ್ದರಿಂದ, ನನಗೆ ನೀವು ಇದುವರೆಗೂ ಹೇಳಿದ್ದರಲ್ಲಿ ಅಂಥಾ ನಂಬಿಕೆಯೇನೂ ಹುಟ್ಟಿಲ್ಲ —ಎಂದರೆ, ನೀವು ಆಶ್ಚರ್ಯಪಡಬಾರದು. ಇದುವರೆಗೂ ನಾನು, ನನಗೆ ಅರ್ಥವಾಗದ ಕೆಲಸದಲ್ಲಿ ಪಾತ್ರವಹಿಸಿ, ಬಹುದೂರ ಬಂದದ್ದಾಗಿದೆ. ಇದರ ಕೊನೆಯ ಘಟ್ಟವನ್ನು ನೋಡುವತನಕ ನನಗೆ ತಡೆಯುವ –ಅಥವಾ ಹಿಂದಿರುಗುವ ಮನಸ್ಸಿಲ್ಲ" —ಎಂದೆ.

"ಸರಿ"—ಎಂದು, ಬಂದಿದ್ದ ಮನುಷ್ಯ —ಕೆಲವು ಕ್ಷಣಗಳವರೆಗೆ ನನ್ನನ್ನೇ ದಿಟ್ಟಿಸಿ ನೋಡಿ, ಅನಂತರ,

"ಜಗನ್ನಾಥ್ ! —ನಿನ್ನ ವೃತ್ತಿಯ ಪ್ರಮಾಣ ವಚನಗಳನ್ನು ಜ್ಞಾಪಿಸಿಕೊಂಡು ಕೇಳು; ಮುಂದೆ, ಇನ್ನು ಕೆಲವೇ ಕ್ಷಣಗಳಲ್ಲಿ ನಡೆಯಲಿರುವ ಘಟನೆಗಳು, ನಮ್ಮ ವೈದ್ಯವೃತ್ತಿಯ ಪ್ರಮಾಣವಚನಗಳ ನಿರ್ಬಂಧದಲ್ಲಿರತಕ್ಕದ್ದು !-ಗೊತ್ತಾಯ್ತೇ ? ಸರಿ, ಈಗ ನೋಡು – ಜಗನ್ನಾಥ್ ! ಬಹು ಕಾಲದಿಂದ,

ಕೇವಲ ಜಡವೂ, ಸಂಕುಚಿತವೂ, ಶುದ್ಧ ಭೌತಿಕಪರವೂ, ಅಪೂರ್ಣವೂ ಆದ ಅಭಿಪ್ರಾಯಗಳ ಸಂಕೋಲೆಯನ್ನೇ ಆಭರಣವೆಂದು ಬಗೆದಿದ್ದ —ಜಗನ್ನಾಥ್, ನೋಡು ! ನಿನ್ನ ಮರದಲೆಯ ಮಂದಬುದ್ಧಿಯ ಬಡಊಹೆಗೆ ಅತೀತವಾದ ವೈದ್ಯಕೀಯ ಪ್ರಯೋಗಗಳ ಶಕ್ತಿ–ಗುಣಗಳನ್ನು ನಂಬದೆ ನಿರಾಕರಿಸಿ, ನಿನಗಿಂತ ಮೇಲಾದವರನ್ನು ಅವಹೇಳನ ಮಾಡುತ್ತಿದ್ದೆಯಲ್ಲವೇ, ಜಗನ್ನಾಥ್ ? –ಇದೋ, ಈಗ ನೋಡು–ಜಗನ್ನಾಥ್ ! —ಎರಡೂ ಕಣ್ಣು ಬಿಟ್ಟು ನೋಡು !–ನೋಡು ! !"

—ಎಂದವನೇ ಕೈಲಿ ಹಿಡಿದಿದ್ದ ಗ್ಲಾಸನ್ನು ಎತ್ತಿ–ಒಂದೇ ಗುಟುಕಿನಲ್ಲಿ–ಅದರಲ್ಲಿದ್ದ ದ್ರಾವಕವನ್ನು ಕುಡಿದು ಬಿಟ್ಟ. ಕುಡಿದವನೇ, ಗ್ಲಾಸನ್ನು ಎಸೆದು ಕೂಗಿಕೊಂಡ. ಅನಂತರ, ನಿಂತಲ್ಲೇ ಸುತ್ತಿ ಸುತ್ತಿ ತೂರಾಡಿದ; ಬೀಳುವುದನ್ನು ತಡೆಯಲು, ಮೇಜಿನ ಅಂಚನ್ನು ಭದ್ರವಾಗಿ ಹಿಡಿದುಕೊಂಡ; ಕೆಂಪಡರಿದ ಕಣ್ಣುಗಳಿಂದ ಬಿರುನೋಟವನ್ನು ಬೀರುತ್ತ, ತೆರೆದ ಬಾಯಿಂದ ಏದುಸಿರನ್ನು ಬಿಡುತ್ತ, ನಿಂತುಕೊಂಡ. ನಾನು ದಿಙ್ಮೂಢನಾಗಿ ಎಲ್ಲವನ್ನೂ ನೋಡುತ್ತಿದ್ದೆ. ಅವನಲ್ಲಿ ವಿಚಿತ್ರ ಬದಲಾವಣೆಗಳಾಗುತ್ತಿದ್ದಂತೆ ಕಂಡಿತು. ಅವನ ಎತ್ತರ–ಗಾತ್ರಗಳು ಹೆಚ್ಚಿದಂತೆ ತೋರಿತು. ಅವನ ಮುಖ ಇದ್ದಕ್ಕಿದ್ದಹಾಗೆಯೇ ಮಸಿಯಂತೆ ಕಪ್ಪಗಾಗಿ–ಅದರ ಉಬ್ಬು–ತಗ್ಗು ಮೊದಲಾದ ಚಹರೆಗಳೆಲ್ಲ ಮೇಣದಂತೆ ಕರಗಿ, ಪುನಃ ಬೇರೆ ರೀತಿಯಲ್ಲಿ ಘನಿಸುತ್ತಿದ್ದಂತೆ ಭಾಸವಾಯಿತು. ಈ ವ್ಯತ್ಯಾಸಗಳೆಲ್ಲ ಆಗುತ್ತ–ಅವನ ದೊಗಲೆ ಅಂಗಿಯ ಜಳ್ಳುಭಾವ ಮಾಯವಾಯಿತು. ಮುಖದ ಕಪ್ಪು ಮಾಯವಾಗುತ್ತ ಆಗುತ್ತ, ಅವನ ಕಿವಿ–ಕಣ್ಣು–ಮೂಗು–ಬಾಯಿ–ಗಲ್ಲ ಎಲ್ಲದರ ವಿಕಾರವನ್ನೂ , ಯಾವುದೋ ಕಾಣದ ಮಾಂತ್ರಿಕ ಶಿಲ್ಪಿಯ ಕೈಬೆರಳುಗಳು, ಮಿಂಚಿನ ವೇಗದಿಂದ ತಿದ್ದುತ್ತಿದ್ದಂತೆ ತೋರಿತು. ಕೇವಲ ಕೆಲವೇ ತೀವ್ರಕ್ಷಣಗಳಲ್ಲಿ ನಡೆದು ಹೋದ ಈ ಊಹಾತೀತವಾದ ಬದಲಾವಣೆಗಳನ್ನು ಕಂಡು ನಾನು ಭಯಚಕಿತನಾಗಿ ಝುಗ್ಗನೆದ್ದು, ಅವನಿಂದ ದೂರು ಸರಿದು ಗೋಡೆಯ ಆಶ್ರಯವನ್ನು ಪಡೆದೆ. ಗೋಡೆಗೆ ಬೆನ್ನು ಕೊಟ್ಟು ನಿಲ್ಲಲಾರದೆ ನಿಂತು, ನನ್ನ ಕಣ್ಣೆದುರಿಗೆ ನಡೆದ, ನಂಬಲಸಾಧ್ಯವಾದ ಅದ್ಭುತ ವ್ಯಾಪಾರವನ್ನು ನೋಡಲಾರದೆ, ತೋಳೆತ್ತಿ ಮುಖ ಮರೆಸಿಕೊಂಡು,

"ಓ ದೇವರೇ ! –ಅಯ್ಯೋ ದೇವರೇ ! ! –ಆಹಾ ! —ದೇವರೇ ! ! !"

—ಎಂದು, ಪುನಃ ಪುನಃ ಮೊರೆಯಿಡುತ್ತ ನಿಂತೆ. ಕಾರಣ, ನನ್ನ ಕಣ್ಣ ಮುಂದೆ —ಬಿಳುಪೇರಿದ ಮುಖವುಳ್ಳವನಾಗಿ, ಥರ ಥರನೆ ಕಂಪಿಸುತ್ತ, ಅರೆಮೂರ್ಛಾವಸ್ಥೆ ಯಲ್ಲಿ ತನ್ನ ಕೈಗಳನ್ನು ಗಾಳಿಯಲ್ಲಿ ತಡಕಾಡುತ್ತ, ಮೃತ್ಯು ಮುಖದಿಂದ ಅದೇ ತಾನೇ ಮುಕ್ತನಾಗಿ ಬಂದವನಂತೆ ನಿಂತಿದ್ದ —ವ್ಯಕ್ತಿ ಇನ್ನಾರೂ ಅಲ್ಲ – ಹರಿವಿಠಲ !

ಅವನು ಮುಂದೆ ಒಂದು ಗಂಟೆಯ ಕಾಲದಲ್ಲಿ ನನಗೆ ಏನು ಹೇಳಿದನೋ ಅದನ್ನು, ಕಾಗದದ ಮೇಲೆ ಬರೆಯಲು ನನ್ನ ಮನಸ್ಸು ಒಡಂಬಡುವುದಿಲ್ಲ. ನಾನು ಏನನ್ನು ನೋಡಿದೆನೋ–ನೋಡಿದೆ; ಏನನ್ನು ಕೇಳಿದೆನೋ–ಕೇಳಿದೆ. ಅದನ್ನೆಲ್ಲ ನೋಡಿದ್ದರಿಂದ, ಕೇಳಿದ್ದರಿಂದ, ನನ್ನ ಜೀವ ಅಸಹನೀಯವಾದ ಕ್ಷೋಭೆಗೀಡಾಯಿತು. ಆದರೂ, ಈಗ–ಆ ಎಂದಿಗೂ ಮರೆಯಲಾಗದ ರಾತ್ರಿ ನಾನು ನೋಡಿದ ಆ ಘಟನೆಗಳ ದೃಶ್ಯ ನನ್ನ ಕಣ್ಣಿಂದ ಮಾಸಿರುವ ಈಗ —ಅದನ್ನು ನಂಬುತ್ತೀಯಾ ? —ಎಂದು ನನಗೆ ನಾನೇ ಪ್ರಶ್ನೆ ಮಾಡಿಕೊಂಡಾಗ, ನಾನು ನಿರುತ್ತರನಾಗುತ್ತೇನೆ. ನನ್ನ ಜೀವದ ಬೇರುಗಳೆಲ್ಲ ಅಲ್ಲಾಡಿ ಝುರ್ಝುರಿತವಾಗಿ ಹೋಗಿವೆ. ನಿದ್ರೆ ನನ್ನನ್ನು ತೊರೆದಿದೆ. ಎತ್ತ ತಿರುಗಿದರೂ ಶಾಂತಿ ಕಾಣದಾಗಿದೆ. ತಲೆ ತಗ್ಗಿಸಿ ನೋಡಿದರೆ ನೆಲ ಕುಸಿದ ಹಾಗಾಗುತ್ತದೆ; ಎತ್ತಿ ನೋಡಿದರೆ, ಆಕಾಶ ಅಪ್ಪಳಿಸಿ ಬೀಳುವಂತಾಗುತ್ತದೆ; ಉಸಿರಾಡುವುದೇ ಕಷ್ಟವಾಗಿ ತೋರುತ್ತಿದೆ. ಅಹೋರಾತ್ರಿಯಲ್ಲಿ, ವರ್ಣನಾತೀತವೂ–ಘೋರತಮವೂ ಆದ ನಿರಾಕಾರ ಭಯವೊಂದು, ಎಡಬಿಡದೆ ನನಗೆ ಅಂಟಿಕೊಂಡಿದೆ. ನನ್ನ ದಿನಗಳು ಮುಗಿದು ಬಂದಿರುವ ಹಾಗಿದೆ; ಮತ್ತು ನಾನು ಸಾಯುವುದು ಅನಿವಾರ್ಯವೆಂದೂ ಅನುಭವವಾಗುತ್ತಿದೆ. ಆದರೆ, ನಾನು ಸಾಯುತ್ತಿರುವಾಗಲೂ ನನ್ನ ಶಂಕೆ ನನಗೆ ಇದ್ದೇ ಇರುತ್ತದೆಂದು ಮಾತ್ರ ಬಲ್ಲೆ.

ಇನ್ನು, ಆ ಮನುಷ್ಯ, ಪಶ್ಚಾತ್ತಾಪದಿಂದ ಕಣ್ಣೀರು ಹಾಕುತ್ತ, ನೈತಿಕ ದೌರ್ಬಲ್ಯಗಳ ವಿಷಯವಾಗಿ ನನಗೆ ಏನೇನು ವಿವರಿಸಿದನೋ ಅವಲ್ಲ ಸ್ಮರಣೆಗೂ ಭಯಾನಕ ವಾಗಿವೆ !

ಇನ್ನು ಒಂದೇ ಒಂದು ವಿಷಯವನ್ನು ನಿನಗೆ ಇಲ್ಲಿ ತಿಳಿಸುತ್ತೇನೆ–ಶಂಕರರಾವ್. ಅದರ ಸತ್ಯತೆಯನ್ನು ನಿನ್ನ ಚಿತ್ತ ಒಪ್ಪಿದ ಪಕ್ಷದಲ್ಲಿ , ಅವಶ್ಯವಿದ್ದದ್ದಕ್ಕಿಂತ ಹೆಚ್ಚಾಗಿಯೇ ನೀನು ತಿಳಿದುಕೊಂಡ ಹಾಗಾಗುತ್ತದೆ. ಅದೇನೆಂದರೆ, ಸ್ವಯಂ ವಿಠಲನೇ ಒಪ್ಪಿಕೊಂಡ ಪ್ರಕಾರ, ಆ ರಾತ್ರಿ ನನ್ನ ಚಿಕಿತ್ಸಾಲಯಕ್ಕೆ ರಹಸ್ಯದಲ್ಲಿ ನುಸುಳಿ ಬಂದ ಆ ಪುರುಷಾಮೃಗ–ಇನ್ನಾರೂ ಅಲ್ಲ, ಧರ್ಮಸಿಂಧು ಹೊನ್ನಪ್ಪನವರ ಕೊಲೆಪಾತಕನೆಂದು ಯಾರನ್ನು

ಪೊಲೀಸಿನವರು ದೇಶದ ಮೂಲೆ ಮೂಲೆಗಳಲ್ಲೂ ಬೇಟೆಯಾಡುತ್ತಿದ್ದಾರೋ —ಆ **ಕಾಮೇಶ ಗುಪ್ತ** –ಎಂಬ ಹೆಸರಿನ ಮನುಷ್ಯನಾಗಿದ್ದ. —ಜಗನ್ನಾಥ್.

## ೧೦. ಹರಿವಿಠಲನಿಂದ ವಿದ್ಯಮಾನದ ಪೂರ್ಣಹೇಳಿಕೆ

ನಾನು ೧೮೪–ನೇ ಇಸವಿಯಲ್ಲಿ ತುಂಬ ಐಶ್ವರ್ಯವಂತರ ಏಕಮಾತ್ರ ಉತ್ತರಾಧಿಕಾರಿಯಾಗಿ ಜನಿಸಿದೆ. ಜೊತೆಗೆ ಉತ್ತಮ ಶಕ್ತಿಸಾಮರ್ಥ್ಯಗಳನ್ನೂ ಪಡೆದಿದ್ದೆ. ಬೆಳೆಯುತ್ತ ಬೆಳೆಯುತ್ತ, ಉದ್ಯಮಶೀಲತೆ ನನ್ನ ಸ್ವಭಾವವಾಯಿತು. ನನ್ನ ಜೊತೆಯ ವ್ಯಕ್ತಿಗಳಲ್ಲಿ ಸಭ್ಯರೂ ಜ್ಞಾನಿಗಳೂ ಆದವರ ಗೌರವಾದರಗಳಿಗೆ ಆಸೆಪಡುತ್ತಿದ್ದೆ. ನನ್ನ ಭವಿಷ್ಯವು ಈ ರೀತಿ, ಯಾರೇ ಆಗಲಿ ಭಾವಿಸಿಕೊಳ್ಳಬಹುದಾದಂತೆ, ವೈಶಿಷ್ಟ್ಯ ಪೂರ್ಣವಾಗಿರುವುದೆಂದೂ, ಘನತೆ–ಗೌರವಗಳಿಂದ ಕೂಡಿರುವುದೆಂದೂ ಭರವಸೆ ನೀಡುವುದಾಗಿತ್ತು.

ಮರ್ತ್ಯಮಾತ್ರನಿಗೆ ಸಾಧಾರಣವಾದ ಗುಣದೋಷಗಳಿಂದ ನಾನೇನೂ ಹೊರತಾಗಿರಲಿಲ್ಲ. ನನ್ನ ಗುಣದ ಮಾತು ಒತ್ತಟ್ಟಿಗಿರಲಿ; ನನ್ನಲ್ಲಿ ತೀರ ದೊಡ್ಡ ದೋಷವೊಂದಿತ್ತು. ಅದು–ನಾನು ಕಂಡಂತೆ, ಸಮಾಜದ ಹಲವರ ಸುಖ ಸಂತೋಷಗಳಿಗೆ ಕಾರಣವಾಗಿದ್ದ —ಎಲ್ಲ ಬಗೆಯ ಭೋಗ ವಿಲಾಸಗಳಲ್ಲಿ, ಒಂದು ರೀತಿಯಾದ ತಾಳ್ಮೆಯಿಲ್ಲದ ಉತ್ಕಟಾಸಕ್ತಿ ! ಆದರೆ, ಸಮಾಜದಲ್ಲಿ ಉನ್ನತ ಧ್ಯೇಯಗಳನ್ನು ಸಾಧಿಸಬೇಕೆಂದೂ, ಆ ಸಾಧನೆಗಳಿಗೆ ತಕ್ಕಂತೆ ನಿಲ್ಲುವ ಹಾಗಿರಬೇಕೆಂದೂ ಇದ್ದ ನನ್ನ ಮಹತ್ವಾಕಾಂಕ್ಷೆಯನ್ನು ನನ್ನ ಭೋಗಾಸಕ್ತಿಯೊಡನೆ ಹೊಂದಿಸುವುದು ಬಹು ಪ್ರಯಾಸದ ಕೆಲಸವಾಗಿ ಕಂಡಿತು. ಆದಕಾರಣ, ನಾನು ನನ್ನ ಭೋಗಾಸಕ್ತಿಯನ್ನು ಗುಪ್ತವಾಗಿ ತೀರಿಸಿಕೊಳ್ಳದೆ ಬೇರೆ ಮಾರ್ಗವಿರಲಿಲ್ಲ. ನನ್ನ ಬದುಕು ಇಬ್ಬಗೆಯದಾಯಿತು —ಹಗಲು–ರಾತ್ರಿಗಳಂತೆ ! ನನ್ನ ಐಶ್ವರ್ಯ, ಪ್ರಾಯ, ರೂಪ, ಶಕ್ತಿ, ಹುಮ್ಮಸ್ಸು, ರಸಿಕತೆ—ಎಲ್ಲವೂ, ನನ್ನ ಭೋಗಾಸಕ್ತಿಯ ಜ್ವಾಲೆಗೆ ಆಜ್ಯಾಹುತಿಗಳಾದವು.

ಈ ಇಬ್ಬಗೆಯ ಬದುಕಿನಲ್ಲಿ, ಹಿಂತಿರುಗಿ ನೋಡದೆ ಕೆಲವು ವರ್ಷಗಳೇ ಕಳೆದು ಹೋದವು. ಕ್ರಮೇಣ ನಿಂತು, ನಡೆದು ಬಂದ ದಾರಿಯನ್ನು ನಿಟ್ಟಿಸಿ ನೋಡುವ ವಯಸ್ಸು ಮುಟ್ಟಿದೆ. ಆಗ ಮಾನಸಿಕ ಹಿನ್ನೋಟದಿಂದ ನನ್ನನ್ನು ನಾನೇ ವಿಮರ್ಶೆ ಮಾಡಿಕೊಂಡೆ. ಸಮಾಜದಲ್ಲಿ ನನ್ನ ಸ್ಥಾನಮಾನಗಳನ್ನೂ , ಪ್ರಪಂಚದಲ್ಲಿ ಅದುವರೆಗಿನ ನನ್ನ ಪ್ರಗತಿಯನ್ನೂ ಅಳತೆಮಾಡತೊಡಗಿದೆ. ಆಗ ನನಗೆ ಗೊತ್ತಾಯಿತು– ನಾನು ಅತಿ ಹೇಯವಾದ ಮೋಸ ಜೀವನದ ಹೊಲಸು ಕೂಪದಲ್ಲಿ ಬಹು ಆಳಕ್ಕೆ ಇಳಿದಿದ್ದೇನೆಂಬುದು ! ಭೋಗಾಸಕ್ತಿಯ ಹಿಡಿತಕ್ಕೆ ಸಿಕ್ಕು ನಾನು ಯಾವ ಯಾವ ಅಕೃತ್ಯಗಳನ್ನು ರಹಸ್ಯದಲ್ಲಿ ಮಾಡಿದ್ದೆನೋ ಅವನ್ನು , ಬಹಿರಂಗವಾಗಿಯೇ ಮಾಡಿ ಘೋಷಿಸಿ ಕೊಚ್ಚಿಕೊಳ್ಳುವಂತಹ ಮಂದಿ ಹಲವರಿದ್ದರು. ಆದರೆ ನನಗೆ ಅದು ಸಾಧ್ಯವಿರಲಿಲ್ಲ. ನಾನು ಮುಂದಿಟ್ಟುಕೊಂಡಿದ್ದ ಉನ್ನತ ಧ್ಯೇಯಗಳನ್ನು ನೆನೆದೊಡನೆಯೇ ನನಗೆ ತಡೆಯಲಾರದಷ್ಟು ನಾಚಿಕೆಯುಂಟಾಗಿ, ನನ್ನ ಮೋಸದ ಜೀವನವನ್ನು ಗುಪ್ತವಾಗಿಯೇ ನಡೆಸತೊಡಗಿದೆ.

ಈ ರೀತಿ, ನಾನು ಏನಾಗಿ ರೂಪುಗೊಂಡೆನೋ ಅದಕ್ಕೆ, ನನ್ನ ದೋಷಗಳ ನಿರ್ದಿಷ್ಟವಾದ ಅವನತಿಗಿಂತ, ನನ್ನ ಮಹತ್ವಾಕಾಂಕ್ಷೆಗಳ ಬಲಾತ್ಕಾರ ಸ್ವಭಾವವೇ ಕಾರಣವಾಗಿತ್ತೆನ್ನಬೇಕು. ಮಾನವನಲ್ಲಿ ಯಾವ ದ್ವಂದ್ವಸ್ವಭಾವಗಳ ಸಹಕೂಟವು ದುಷ್ಟ–ಶಿಷ್ಟ ಶಕ್ತಿಗಳೆಂದು ವಿಂಗಡಿಸಲ್ಪಡುವುದೋ ಅವನ್ನು, ಈ ಬಲಾತ್ಕಾರವು, ಇತರ ಬಹು ಮಂದಿಗಿಂತ ನನ್ನಲ್ಲಿ ಆಳವಾಗಿ ಕತ್ತರಿಸಿ ಬೇರ್ಪಡಿಸಿತು. ಈ ಪರಿಸ್ಥಿತಿಯಲ್ಲಿ ಯಾವುದು ಆಸ್ತಿಕ ಮತ–ಧರ್ಮಗಳ ಮೂಲಕವೋ, ಯಾವುದು ದುಃಖ–ಯಾತನೆಗಳ ಅತ್ಯಂತ ಸಮೃದ್ಧವಾದ ಚಿಲುಮೆಗಳಲ್ಲಿ ಒಂದೋ, ಜೀವನದ ಆ ನಿಷ್ಠುರ ನಿಯಮವನ್ನು ಕುರಿತು, ನಾನು ಬಹುಕಾಲ ಗಭೀರವಾಗಿ ಆಲೋಚಿಸಲೇ ಬೇಕಾಯಿತು.

ಇಷ್ಟು ಸಂಪೂರ್ಣವಾಗಿ ನಾನು ಇಬ್ಬಗೆಯ ಬಾಳಿನವನಾಗಿದ್ದರೂ, ಯಾವ ದೃಷ್ಟಿಯಿಂದಲೂ ಡಾಂಭಿಕನಾಗಿರಲಿಲ್ಲ. ನನ್ನ ಎರಡು ಪ್ರವೃತ್ತಿಗಳೂ, ತಮ ತಮಗೆ ಆಸಕ್ತವಾದ ವಿಷಯಗಳಲ್ಲಿ ಅಪಾರ ಶ್ರದ್ಧೆಯನ್ನು ಹೊಂದಿದ್ದವು. ರಾತ್ರಿಯ ಮುಸುಕಿನಲ್ಲಿ, ನೀತಿ ನಿಯಮಗಳ ಕಟ್ಟುಗಳನ್ನೆಲ್ಲ ಕಿತ್ತೊಗೆದು ಲಜ್ಜಾಹೀನವಾದ ಬಾಳಿಗೆ ಧುಮುಕಿ ಮುಳುಗಿದಾಗ, ಯಾವ ರೀತಿ ನಾನು ನಾನಾಗಿ ಇರುತ್ತಿರಲಿಲ್ಲವೋ ಹಾಗೆಯೇ, ಹಗಲು ಹೊತ್ತಿನಲ್ಲಿ ರೋಗಿಗಳ ಯಾತನೆ–ದುಃಖಗಳನ್ನು ನಿವಾರಿಸುವುದಕ್ಕೆ ಮತ್ತು ಜ್ಞಾನವನ್ನು ಮುಂದುವರಿಸುವುದಕ್ಕೆ ಶ್ರಮಿಸುತ್ತಿದ್ದಾಗಲೂ, ನಾನು ನಾನಾಗಿ ಇರುತ್ತಿರಲಿಲ್ಲ.

ಹೀಗೇಯೇ ಕೆಲವು ಕಾಲ ಕಳೆದ ಮೇಲೆ, ಹೊಸ ವಿಷಯ ಒಂದು ನನಗೆ ಗೋಚರವಾಯಿತು. ನನ್ನ ಆಂತರ್ಯದಲ್ಲಿ ನನ್ನ ದ್ವಂದ್ವ ಪ್ರವೃತ್ತಿಗಳ ನಡುವೆ ಅವಿಚ್ಛಿನ್ನವಾಗಿ ನಡೆಯುತ್ತಿದ್ದ ಪ್ರಬಲ ಹೋರಾಟದ ಅರಿವು ನನಗುಂಟಾಗಿತ್ತು. ರಹಸ್ಯವೂ, ಕಲ್ಪನಾತೀತವೂ ಆದ ಅತೀಂದ್ರಿಯ ಜ್ಞಾನಸಿದ್ಧಿಯ ದಿಕ್ಕಿನಲ್ಲೇ ಪೂರ್ಣವಾಗಿ ಸಾಗಿದ್ದ ನನ್ನ ವೈಜ್ಞಾನಿಕ ವ್ಯಾಸಂಗಗಳು, ಈ ಆತ್ಮಾನುಭವದ ಮೇಲೆ ಪ್ರತಿಕರಿಸಿ, ಪ್ರಬಲವಾದ ಬೆಳಕನ್ನು ಬೀರಿದವು.

ಯಾವ ಸತ್ಯದ ಅರೆಜ್ಞಾನದಿಂದ ಭಯಾನಕವಾದ ಮಹಾನಾಶಕ್ಕೆ ನಾನು ತುತ್ತಾದೆನೋ ಆ ಸತ್ಯದೆಡೆಗೆ, ದಿನ ಕಳೆದಂತೆ ಕ್ರಮೇಣ, ನನ್ನ ತಿಳಿವಿನ ನೈತಿಕ–ಬೌದ್ಧಿಕ–ಎಂಬ ಎರಡು ಪಾರ್ಶ್ವಗಳಿಂದಲೂ ಸಮೀಪಿಸಿದೆ. ಆಗ ನನಗೆ ತೋರಿದ್ದು , ತತ್ವತಃ ಮನುಷ್ಯ–ಎಂದರೆ, ಒಬ್ಬನಲ್ಲ ಇಬ್ಬರು–ವಾಸ್ತವವಾಗಿ ಇಬ್ಬರು–ಎಂದು. ನನಗೆ ಗೋಚರವಾದದ್ದು ಈ ದ್ವಂದ್ವತೆ ಮಾತ್ರ. ನಾನು ಇದುವರೆಗೆ ಗಳಿಸಿರುವ ಜ್ಞಾನದಿಂದ, ಇದಕ್ಕೂ ಹೆಚ್ಚಾಗಿ ಕಾಣುವಂತಿಲ್ಲ.

ನನ್ನ ಶೋಧನೆಯ ಮಾರ್ಗವನ್ನೇ ಅನುಸರಿಸುವ ಇತರರು, ಬಹುಶಃ ಈ ದಿಕ್ಕಿನಲ್ಲಿ ನನ್ನನ್ನು ಮೀರಿಸುತ್ತಾರೆ. ಅವರ ಇನ್ನೂ ಹೆಚ್ಚಿನ ಸಂಶೋಧನೆ–ಪ್ರಯೋಗಗಳ ಫಲವಾಗಿ, ಅಂತ್ಯದಲ್ಲಿ, ಇಂದು ಮನುಷ್ಯ–ಎಂದು ತಿಳಿಯಲ್ಪಟ್ಟಿರುವವನು, ಅನೇಕಾನೇಕ ಅಸಂಬದ್ಧವೂ, ಪ್ರತ್ಯೇಕವೂ, ಸ್ವತಂತ್ರವೂ ಆದ ಜೀವಶಕ್ತಿಗಳ ಒಕ್ಕೂಟದ ಒಂದು ವ್ಯವಸ್ಥೆ ಮಾತ್ರ–ಎಂಬುದಾಗಿ ತಿಳಿಯಲ್ಪಡುತ್ತಾನೆ —ಎಂದು ಊಹಿಸುವ ಸಾಹಸಮಾಡುತ್ತೇನೆ. ಆದರೆ ನಾನು ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಬದುಕಿನ ಸ್ವಭಾವಕ್ಕನುಗುಣವಾಗಿ, ಒಂದು ದಿಕ್ಕಿನಲ್ಲಿ, ಒಂದು ದಿಕ್ಕಿನಲ್ಲಿ ಮಾತ್ರ–ತಪ್ಪದೆ ಮುಂದುವರಿದೆ.

ನನಗೆ ಗೋಚರವಾಗಿ ಮಾನವನ ದ್ವಂದ್ವತೆಯು, ಸಂಪೂರ್ಣವಾದುದೆಂದೂ, ಬಹು ಹಿಂದಿನ ಯುಗಾಂತರಗಳ ಅವಸ್ಥೆಗಳಿಂದ ಸಾಗಿಬಂದುದೆಂದೂ ಗುರುತು ಹಿಡಿಯುವುದನ್ನು ನಾನು ಕಲಿತದ್ದು–ನೈತಿಕ ಪಕ್ಷದಿಂದ ಮತ್ತು ನನ್ನಲ್ಲಿಯೇ. ನನ್ನ ಅರಿವಿನ ವಲಯದಲ್ಲಿ ಹೋರಾಡುತ್ತಿದ್ದ ಎರಡು ಸ್ವಭಾವಗಳಲ್ಲಿ ನಾನು ಯಾವುದಾದರೂ **ಒಂದು** ಆಗಿರಬಹುದೆಂದು ನ್ಯಾಯವಾಗಿಯೇ ಹೇಳಬಹುದಾದರೆ, ಅದಕ್ಕೆ ಕಾರಣ, ನಾನು ವಸ್ತುತಃ ಎರಡೂ ಆಗಿದ್ದೆನೆಂಬುದೇ. ಅಲ್ಲದೆ, ಬಹು ಮುಂಚಿನ ದಿನದಿಂದ–ಅಂದರೆ, ನನ್ನ ವೈಜ್ಞಾನಿಕ ಸಂಶೋಧನೆಗಳು ಅಂತಹ ಪವಾಡ ಒಂದರ ಸ್ಪಷ್ಟ ಸಾಧ್ಯತೆಯನ್ನು ಸೂಚಿಸತೊಡಗುವುದಕ್ಕೂ ಮೊದಲೇ–ನನ್ನ ಮನಸ್ಸು, ಒಂದು ಸುಖವಾದ ಹಾಗೂ ಬಹು ಸವಿಯಾದ ದಿವಾಸ್ವಪ್ನದ ಮೆಲುಕು ಹಾಕುವುದನ್ನು ಕಲಿತಿತ್ತು. ನನ್ನಲ್ಲಿ ಹೋರಾಡುತ್ತಿದ್ದ ಪರಸ್ಪರ ವಿರುದ್ಧವಾದ ಎರಡು ಪ್ರವೃತ್ತಿಗಳನ್ನು ಪ್ರತ್ಯೇಕಿಸುವ ಯೋಚನೆಯೇ, ಆ ಮೋಹಕ ಸುಂದರ ಸ್ವಪ್ನವಾಗಿತ್ತು.

ಪರಸ್ಪರ ವೈರಿಗಳಾಗಿದ್ದ ಈ ಎರಡು ಪ್ರವೃತ್ತಿಗಳನ್ನು ಪ್ರತ್ಯೇಕಿಸಿ, ಒಂದೊಂದಕ್ಕೂ, ಅದರದರ ಗುಣಾನುಸಾರವಾಗಿ, ಪ್ರತ್ಯೇಕವಾದ ದೈಹಿಕ ನಿವಾಸವನ್ನು ಒದಗಿಸಲು ಸಾಧ್ಯವಾದರೆ, ಈಗಿನಂತೆ ಅವುಗಳ ಸಹಕೂಟದ ಹೋರಾಟ ನಿವಾರಣೆಯಾಗಿ, ಜೀವನವು ದುರ್ಭರವಾದುದೆಲ್ಲದರಿಂದ ವಿಮುಕ್ತವಾಗುತ್ತದೆ–ಎಂದು ನನಗೆ ನಾನೇ ಹೇಳಿಕೊಂಡೆ. ಅದು ಸಾಧ್ಯವಾದಲ್ಲಿ, ದುಷ್ಟ ಪ್ರವೃತ್ತಿಯು, ತನ್ನ ಪ್ರಾಮಾಣಿಕ ಅವಳಿಯಾದ ಶಿಷ್ಟ ಪ್ರವೃತ್ತಿಯ ನಾಚಿಕೆ, ಹೇಸಿಕೆ, ಸಂಕೋಚ, ಸಂತಾಪ, ಆಕಾಂಕ್ಷೆಗಳ ಹಿಡಿತದಿಂದ ಬಿಡುಗಡೆಹೊಂದಿ, ತನಗೆ ಇಷ್ಟ ಬಂದ ಹಾದಿಯಲ್ಲಿ ತಾನು ಹೋಗಬಹುದೆಂದೂ–ಹಾಗೆಯೇ, ಪ್ರಾಮಾಣಿಕವಾದ ಚೇತನವು, ತನಗೆ ಬಾಹಿರವಾದ ದುಷ್ಟಪ್ರವೃತ್ತಿಯ ಪಾಪ ಪಶ್ಚಾತ್ತಾಪ–ಮಾನಹಾನಿಗಳಿಗೀಡಾಗದೆ, ತನಗೆ ಹಿತವೂ ಹರ್ಷದಾಯಕವೂ ಆದ ಸತ್ಕಾರ್ಯಗಳಲ್ಲಿ ನಿರತವಾಗಿ, ದೃಢ ನಿಶ್ಚಯದಿಂದಲೂ, ಸುರಕ್ಷಿತವಾಗಿಯೂ, ತನ್ನ ಊರ್ಧ್ವಗತಿಯಲ್ಲಿ ತಾನು ಸಾಗಬಹುದೆಂದೂ ನನಗೆ ನಾನೇ ಹೇಳಿಕೊಂಡೆ.

ಒಂದರಿಂದ ಒಂದು ತೀರ ಭಿನ್ನವಾಗಿ—ಅಸಂಬದ್ಧವಾಗಿದ್ದ ಈ ಪ್ರವೃತ್ತಿದ್ವಯಗಳು ಈ ರೀತಿ ಕೂಡಿ ಬಂಧಿತವಾಗಿದ್ದುದೂ, ದುರ್ಭರ ಯಾತನೆಗೀಡಾದ ಅರಿವಿನ ಗರ್ಭಾಂತರಾಳದಲ್ಲಿ ಈ ಧ್ರುವಾಂತರ–ವಿರುದ್ಧ ಯುಗ್ಮ ಶಕ್ತಿಗಳು ನಿರಂತರವೂ ಹೋರಾಡಬೇಕಾದ ಪರಿಸ್ಥಿತಿಯೂ, ಮಾನವಕುಲಕ್ಕೆ ಮಹಾಶಾಪವಾಗಿತ್ತೆಂದು ನನಗೆ ಅನ್ನಿಸಿತು. ಹಾಗಾದರೆ, ಇವುಗಳನ್ನು ಪ್ರತ್ಯೇಕಿಸುವ ಬಗೆ ಹೇಗೆ ?—ಎಂದು, ಗಾಢವಾಗಿ ಆಲೋಚಿಸತೊಡಗಿದೆ.

ನನ್ನ ಚಿಂತನೆಯಲ್ಲಿ ಇಷ್ಟು ದೂರ ಸಾಗಿದ್ದಾಗ, ಮೊದಲೇ ತಿಳಿಸಿದಂತೆ, ನನ್ನ ಸಂಶೋಧನಾಲಯದ ಪ್ರಯೋಗಗಳ ಕಡೆಯಿಂದ, ಈ ವಿಷಯದ ಮೇಲೆ, ಪ್ರಾಸಂಗಿಕವಾಗಿ ಒಂದು ಬೆಳಕು ಬೀಳತೊಡಗಿತು. ನಾವು ಧರಿಸಿ ತಿರುಗಾಡುವ ಈ ದೇಹವು, ಸ್ಥೂಲವಾದ ಅಸ್ಥಿ–ಮಾಂಸ–ರಕ್ತಾದಿಗಳೊಡನೆ ತನ್ನದೇ ಆದ ರೂಪ–ಆಕೃತಿಗಳಿಂದ ಕೂಡಿ ನೋಟಕ್ಕೆ ಘನ–ಗಾತ್ರವಾಗಿ ತೋರುತ್ತಿದ್ದರೂ, ಸೂಕ್ಷ್ಮವಾದ ಪರಿಶೀಲನೆಗೆ ಇದರ ಘನಸ್ಥಿತಿ–

ರೂಪ–ಆಕೃತಿಗಳು, ತೋರುವಷ್ಟು ಸ್ಥಿರವಲ್ಲವೆಂದೂ —ಇದರದು ವಾಸ್ತವಾಗಿ, ಆವಿಯಂತೆ ಕ್ಷಣಭಂಗುರವಾದ ಹಾಗೂ ಕಂಪನಾಶೀಲವಾದ ನಿರ್ವಸ್ತುಸ್ಥಿತಿಯೆಂದೂ–ಈವರೆಗೆ ಎಂದೂ ಸಾಧ್ಯವಾಗಿದ್ದಿರಲಾರದಷ್ಟು ಗಭೀರವಾದ ಆಲೋಚನೆಯಿಂದ, ನನಗೆ ಗೋಚರವಾಯಿತು. ನನ್ನ ಪ್ರಯೋಗಶಾಲೆಯಲ್ಲಿ ಜೀವರಸಾಯನಶಾಸ್ತ್ರಕ್ಕೆ ಸಂಬಂಧಪಟ್ಟ ಅನೇಕಾನೇಕ ಪರೀಕ್ಷೆಗಳನ್ನೂ ಪ್ರಯೋಗಗಳನ್ನೂ ನಡೆಸಿದುದರ ಫಲವಾಗಿ, ರಾಸಾಯನಿಕ ವಸ್ತುಗಳಲ್ಲಿ ಕೆಲವು ಹೊಸವೂ ಅಪೂರ್ವವೂ ಅತಿ ತೀಕ್ಷ್ಣವೂ ಆದ ಕಾರಕ ದ್ರವ್ಯಗಳನ್ನು ಕಂಡುಹಿಡಿದೆ. ಅಲ್ಲದೆ, ಮಾನವ ದೇಹದ ಕೋಟಿ ಕೋಟಿ ಕಣಕೋಶಗಳಿಗೆ ವಿದ್ಯುದ್ವೇಗದಲ್ಲಿ ವ್ಯಾಪಿಸಿ, ಅವುಗಳನ್ನು ಅದುರಿಸಿ–ಅಲ್ಲಾಡಿಸಿ–ಜಗ್ಗಿಸಿ, ಆಮೂಲಾಗ್ರವಾಗಿ, ಅದರ ರೂಪಾಕೃತಿಗಳನ್ನು ಪಲ್ಲಟಗೊಳಿಸುವ ಅಪಾರ ಶಕ್ತಿಯು, ಈ ಕಾರಕ ದ್ರವ್ಯಗಳಿಗಿವೆಯೆಂದೂ—ವಿವಿಧ ಪ್ರಯೋಗಗಳಿಂದ ಪತ್ತೆಮಾಡಿದೆ.

ನನ್ನ ವೈಜ್ಞಾನಿಕ ವಿಭಾಗದ ಪ್ರಯೋಗಗಳನ್ನು ಕುರಿತು ನಾನು ಇಲ್ಲಿ ಒಪ್ಪಿಕೊಳ್ಳುತ್ತಿರುವುದಕ್ಕಿಂತಲೂ ಹೆಚ್ಚು ಬಿಡಿಸಿ ಹೇಳಲು ನನಗೆ ಮನಸ್ಸಿಲ್ಲ. ನನ್ನ ಈ ತೀರ್ಮಾನಕ್ಕೆ ಎರಡು ಒಳ್ಳೆಯ ಕಾರಣಗಳಿವೆ. ಮೊದಲನೆಯದು: ನಮ್ಮ ಬದುಕಿನ ಹೊರೆ–ಅದೃಷ್ಟಗಳು ಏನಿವೆಯೋ ಅವುಗಳು, ಎಂದೆಂದಿಗೂ ಮಾನವನ ಹೆಗಲಿಗೆ ಗಂಟುಬಿದ್ದಂಥವು; ಮತ್ತು, ಅವುಗಳನ್ನು ಕಿತ್ತೊಗೆಯುವ ಪ್ರಯತ್ನಮಾಡಿದರೆ, ಅವು ಇನ್ನೂ ಅಪರಿಚಿತವಾದ ಮತ್ತು ದುರ್ಭರವಾದ ಭಾರದಿಂದ ಹಿಂದಿರುಗಿ ನಮ್ಮ ಬೆನ್ನು ಹತ್ತುತ್ತವೆ–ಎಂದು ನಾನು ಕಲಿಯಬೇಕಾಗಿ ಬಂದದ್ದು. ಎರಡನೆಯದು: ಆಹಾ !–ನನ್ನ ಮುಂದಿನ ಕಥನವು ತೀರ ಸ್ಪಷ್ಟಪಡಿಸುವಂತೆ !—ನನ್ನ ಸಂಶೋಧನೆಗಳೂ, ಪ್ರಯೋಗಗಳೂ, ಇನ್ನೂ ಅಪೂರ್ಣವಾಗಿಯೇ ಇರುವುದು.

ಇರಲಿ, ನನ್ನ ಆತ್ಮಾಂಶದ ಕೇವಲ ಪ್ರಭಾಯುಕ್ತವಾದ ಕೆಲವು ನಿರ್ದಿಷ್ಟ ಸೂಕ್ಷ್ಮಶಕ್ತಿಗಳಿಗೂ, ನನ್ನ ಸಹಜಸ್ಥೂಲದೇಹಕ್ಕೂ ಇದ್ದ ಅಂತರವನ್ನು ಕಂಡುಕೊಂಡುದುದಲ್ಲದೆ, ನನ್ನ ದೇಹದ ಪ್ರಧಾನ ಸ್ಥಾನದಲ್ಲಿದ್ದ ಈ ಶಕ್ತಿಗಳನ್ನು ಪ್ರತ್ಯೇಕಿಸಿ, ಪದಚ್ಯುತಿ ಮಾಡಿ, ಇವುಗಳಿಗೆ ಬೇರೊಂದು—ಆದರೂ, ನನ್ನ ಆತ್ಮದ ಕೀಳು ಪ್ರವೃತ್ತಿಗಳ ಮುದ್ರೆಯನ್ನುಳ್ಳದ್ದಾಗಿರುವುದರಿಂದ ಅದೂ ನನಗೆ ಸಹಜವೇ ಆದಂಥ—ಬೇರೊಂದು, ಸ್ಥೂಲವಾದ ರೂಪ–ಆಕೃತಿಗಳ ಆಶ್ರಯವು ದೊರಕುವಂತೆ ಮಾಡಬಲ್ಲ, ಒಂದು ಬಹು ಪ್ರಬಲವಾದ ಸಿದ್ಧೌಷಧವನ್ನು ತಯಾರಿಸಿಕೊಂಡೆ. ಪ್ರಸಕ್ತ ಸಂದರ್ಭಕ್ಕೆ ಇಷ್ಟು ಸಾಕು.

ಕಲ್ಪನೆಯಲ್ಲಿ ರೂಪುಗೊಂಡಿದ್ದ ನನ್ನ ಈ ತತ್ವವನ್ನು ಸ್ವಯಂಪ್ರಾಯೋಗಿಕ ಪರೀಕ್ಷೆಗೆ ಒಡ್ಡುವ ಮೊದಲು ಬಹುಕಾಲ ಹಿಂಜರಿದೆ. ಈ ಕೆಲಸದಲ್ಲಿ ನನಗೆ ಪ್ರಾಣಾಪಾಯದ ಸಂಭವವಿದೆಯೆಂದು ಚೆನ್ನಾಗಿ ಗೊತ್ತಿತ್ತು. ಏಕೆಂದರೆ, ವ್ಯಕ್ತಿತ್ವದ ಕೋಟೆಯಾದ ದೇಹದ ಮೇಲೆ ಅಷ್ಟು ಪ್ರಬಲವಾದ ಹತೋಟಿಯುಳ್ಳದ್ದಾಗಿ ಅದರ ತಳಹದಿಯನ್ನು ಅಲ್ಲಾಡಿಸಬಲ್ಲಷ್ಟು ಪ್ರಚಂಡಶಕ್ತಿಯ ಔಷಧದ ಸೇವನೆಯಲ್ಲಿ ಒಂದೇ ಒಂದು ಹನಿ ಹೆಚ್ಚಾದರೂ, ಅಥವಾ ಸೇವನೆಯ ಸಮಯವು ಕೇವಲ ಕ್ಷಣಾರ್ಧದ ಮಟ್ಟಿಗೆ ಅಕಾಲಿಕವಾದರೂ, ಅದು—ಅಂದರೆ ಆ ಔಷಧವು, ಯಾವ ನಿರ್ವಸ್ತುವಿನ ರೂಪವನ್ನು ಬದಲಿಸುವುದೆಂದು ನನ್ನ ನಿರೀಕ್ಷೆಯಿತ್ತೋ ಅದನ್ನು ಶುದ್ಧಾಂಗವಾಗಿ ಅಳಿಸಿಯೇಬಿಡಬಹುದೆಂದು ತೋರಿತು !

ಆದರೆ, ಇಷ್ಟು ಗಹನವೂ ಅಪೂರ್ವವೂ ಆದ ಒಂದು ಸಂಶೋಧನೆಯ ಸ್ವಯಂಪ್ರಯೋಗ ಪರೀಕ್ಷೆಯ ಚಾಪಲ್ಯವು ನನ್ನ ಭೀತಿಯನ್ನು ಗೆದ್ದಿತು. ಔಷಧದ ದ್ರಾವಕಾಂಶವನ್ನು ಬಹಳ ಹಿಂದೆಯೇ ಸಿದ್ಧಪಡಿಸಿಕೊಂಡಿದ್ದೆ. ಇದು ಪೂರ್ಣವಾಗಬೇಕಾದರೆ–ಕಡೆಯದಾಗಿ, ಇನ್ನು ಒಂದೇ ಒಂದು ಅಪೂರ್ವವಾದ ರಾಸಾಯನಿಕ ಲವಣವು ಮಾತ್ರ ಅವಶ್ಯಕವೆಂದು ಪ್ರಯೋಗಗಳಿಂದ ಅರಿತಿದ್ದ ನಾನು, ಈಗ ಕೂಡಲೆ ಒಬ್ಬ ರಾಸಾಯನಿಕ ವಸ್ತುಗಳ ಒಟ್ಟು ವ್ಯಾಪಾರಿಯಿಂದ, ಈ ಲವಣವನ್ನು ಹೆಚ್ಚು ಪ್ರಮಾಣದಲ್ಲಿ ಕೊಂಡುಕೊಂಡೆ.

ಇನ್ನು ಸ್ವಯಂಪ್ರಯೋಗದ ಪರೀಕ್ಷೆಯೊಂದೇ ಉಳಿದಿತ್ತು. ಒಂದು ದುರ್ದಿನದ ರಾತ್ರಿಯಲ್ಲಿ, ಬಹಳ ಹೊತ್ತಾದ ಮೇಲೆ, ಬಹು ಎಚ್ಚರಿಕೆಯಿಂದ ದ್ರಾವಕವನ್ನು ಅಳೆದುಕೊಂಡು, ಲವಣವನ್ನು ತೂಗಿ, ಎರಡನ್ನೂ ಒಂದು ಗ್ಲಾಸಿನಲ್ಲಿ ಬೆರಸಿದೆ. ಕೂಡಲೆ, ಮಿಶ್ರಣವು ಕುದಿಯತೊಡಗಿ ಅದರಿಂದ ಹಬೆ ಹೊರಡಲಾರಂಭಿಸಿತು. ಸ್ವಲ್ಪ ಹೊತ್ತಿನಲ್ಲೇ ಕುದಿತ ನಿಂತಿತು. ಧೈರ್ಯೋತ್ಸಾಹಗಳಿಂದ ಮನಸ್ಸನ್ನು ಗಟ್ಟಿ ಮಾಡಿಕೊಂಡು, ಔಷಧವನ್ನು ಕುಡಿದುಬಿಟ್ಟೆ.

ಔಷಧವನ್ನು ಗುಟುಕಿಸಿದೊಡನೆಯೇ, ಇಡೀ ದೇಹವನ್ನು ಛಿದ್ರ ಛಿದ್ರ ಮಾಡುವಂತಹ, ಸಹನಾತೀತವಾದ ಯಾತನಾಪರಂಪರೆಗೆ ಆರಂಭವಾಯಿತು. ಮೂಳೆ ಮೂಳೆಯೂ ಗಾಣದ ಅರೆತಕ್ಕೆ ಸಿಕ್ಕ ಅನುಭವವಾಯಿತು. ಮಾಂಸ ಖಂಡಗಳೆಲ್ಲವನ್ನೂ ಏಕಕಾಲದಲ್ಲಿ ಹಿಂಡಿ ಹಿಂಡಿ ಹೀರಿದ ಹಾಗಾಯಿತು. ನರಗಳೆಲ್ಲ ತುಂಡಾದಂತೆ ಭಾಸವಾಯಿತು. ದೇಹಾದ್ಯಂತ ಮಿಂಚಿನ ತುಮುಲ ಯುದ್ಧ ನಡೆದಂತೆ ತೋರಿತು.

ಕರುಳೆಲ್ಲ ಈಚೆಗೆ ಬರುವುದೋ — ಎಂಬಂಥ ಓಕರಿಕೆಯುಂಟಾಯಿತು. ಕಣ್ಣು ಕತ್ತಲೆ ಗುಡಿಸಿತು. ಜ್ಞಾನವು ಕತ್ತಲಲ್ಲಿ ಮುಳುಗಿತು. ಜನನ–ಅಥವಾ ಮರಣದ ಸಮಯದಲ್ಲಿ ಜೀವವು ಅನುಭವಿಸುವ ಭಯವು ಸಹ, ನನಗೆ ಆ ಸಮಯದಲ್ಲಾದ ಭಯವನ್ನು ಮೀರಿಸಲಾರದು ! ಇಷ್ಟೆಲ್ಲ ಅನುಭವಿಸಿಯಾದ ಮೇಲೆ, ಈ ಯಾತನೆಗಳು ಎಷ್ಟು ಶೀಘ್ರವಾಗಿ ತಲೆದೋರಿದ್ದವೋ ಅಷ್ಟೇ ಶೀಘ್ರವಾಗಿ ಮಾಯವಾಗತೊಡಗಿದವು. ಯಾವುದೋ ದಾರುಣವಾದ ರೋಗದಿಂದ ಗುಣಮುಖನಾದವನಂತೆ, ಜ್ಞಾನ ತಿಳಿದು ಎಚ್ಚರವಾದೆ. ಆ ಸಮಯದಲ್ಲಿ, ಏನೋ ವರ್ಣಿಸಲಾಗದಷ್ಟು ನೂತನವಾದ ಇಂದ್ರಿಯಾನುಭವವಾಗಲು ತೊಡಗಿ, ಈ ನವ್ಯತೆಯಿಂದಲೇ, ಅದು ನಂಬಲಾರದಷ್ಟು ಮಧುರವಾಗಿತ್ತು. ವಯಸ್ಸಿನಲ್ಲಿ ಎಷ್ಟೋ ವರ್ಷಗಳು ಕಡಿಮೆಯಾಗಿ, ಹೊಸಪ್ರಾಯ ಬಂದಂತಾಗಿ, ದೇಹ ಹಗುರವಾಗಿ ಹಿತವಾಗಿತ್ತು. ನನ್ನ ಆಂತರ್ಯದಲ್ಲಿ ಉನ್ಮತ್ತ ಅಜಾಗರೂಕತೆಯ ಭಾವ ಮೂಡಿದಂತೆಯೂ, ನನ್ನ ಕಲ್ಪನೆಯಲ್ಲಿ ಆಕ್ರಮ ಕಾಮುಕದೃಶ್ಯಾವಳಿಗಳು ಭೋರ್ಗರೆಯುವ ತುಂಬು ಪ್ರವಾಹದಂತೆ ಓಡುತ್ತಿದ್ದಂತೆಯೂ, ದಾಕ್ಷಿಣ್ಯ ಹಂಗುಗಳ ನಿರ್ಬಂಧಗಳು ನಾಶವಾದಂತೆಯೂ, ಮತ್ತು ಅಪರಿಚಿತವಾದ–ಆದರೆ, ನಿರ್ದುಷ್ಟವಲ್ಲದ–ಆತ್ಮ ಸ್ವಾತಂತ್ರ್ಯ ಪ್ರಾಪ್ತವಾದಂತೆಯೂ ಅನುಭವವಾಯಿತು.

ನಾನು ಮೊದಲಿಗಿಂತಲೂ ದುಷ್ಟನಾಗಿದ್ದೆನೆಂದೂ–ಹತ್ತರಷ್ಟು ದುಷ್ಟನಾಗಿದ್ದೆ ನೆಂದೂ ! —ಮತ್ತು ನಾನು ನನ್ನ ಅಸಲು ಪಾಪಕ್ಕೆ ಮಾರಿಕೊಂಡ ಗುಲಾಮನಾಗಿದ್ದೆನೆಂದೂ, ಈ ಹೊಸ ಅವತಾರದ ಮೊದಲ ಉಸಿರೆಳೆಯುತ್ತಿದ್ದ ಹಾಗೆಯೇ ಗೊತ್ತಾಯಿತು. ಆ ಸಮಯದಲ್ಲಿ ಈ ಅರಿವು, ಮಾದಕ ದ್ರವ್ಯದಂತೆ ನನ್ನನ್ನು ಉಲ್ಲಾಸಗೊಳಿಸಿತು. ಈ ಅನುಭವಗಳ ಹೊಸತನದಿಂದ ಮೈಯುಬ್ಬಿದವನಾಗಿ, ತೋಳುಗಳನ್ನು ಚಾಚಿದೆ. ಹೀಗೆ ಮಾಡಿದಾಗ, ಇದ್ದಕ್ಕಿದ್ದಹಾಗೆಯೇ, ನನ್ನ ಎತ್ತರ —ಗಾತ್ರಗಳು ಕಡಿಮೆಯಾಗಿದ್ದುದು ಗೋಚರವಾಯಿತು.

ಈ ಘಟನೆ ನಡೆದ ದಿನದಲ್ಲಿ ನನ್ನ ಕೊಠಡಿಯಲ್ಲಿ ಕನ್ನಡಿ ಇರಲಿಲ್ಲ. ನಾನು ಇದನ್ನು ಬರೆಯುತ್ತಿರುವ ಈಗ ನನ್ನ ಎದುರಿಗಿರುವ ಕನ್ನಡಿಯು, ರೂಪಬದಲಾವಣೆಗಳನ್ನು ನೋಡಿಕೊಳ್ಳುವ ಉದ್ದೇಶದಿಂದಲೇ, ಅನಂತರ ತರಲ್ಪಟ್ಟದು.

ಘಟನೆ ನಡೆದಾಗ ಹೊತ್ತು, ರಾತ್ರಿಯ ಬಹುಭಾಗ ಸವೆದು ಮುಂಜಾವು ಹತ್ತಿರವಾಗುತ್ತಿತ್ತು. ಇನ್ನೂ ಕತ್ತಲಾಗಿದ್ದರೂ, ಬೇಗನೆ ಹಗಲು ಮೂಡುವ ಸೂಚನೆ ತೋರುತ್ತಿತ್ತು. ನನ್ನ ಮನೆಯಲ್ಲೇ ಇರುತ್ತಿದ್ದ ಸೇವಕರು, ಆ ಹೊತ್ತಿಗೆ ಬಹು ಸಹಜವಾದ ಗಾಢನಿದ್ರೆಯಲ್ಲಿದ್ದರು. ಈ ಘಟನೆ ನಡೆದದ್ದು , ಹಿಂದುಗಡೆ ಪ್ರಯೋಗಶಾಲೆಯ ಮೇಲಿನ ನನ್ನ ಖಾಸಾ ಕೊಠಡಿಯಲ್ಲಿ. ನನ್ನ ಹಲವು ವರ್ಷಗಳ ಸತತಪ್ರಯತ್ನದ ಸಿದ್ಧಿಯಿಂದಲೂ, ಈ ಸಿದ್ಧಿಯ ಮುಂದೆ ತೋರುತ್ತಿದ್ದ ಮಧುರ ಭರವಸೆಯಿಂದಲೂ ಉದ್ದೀಪ್ತನಾಗಿದ್ದ ನಾನು, ಈ ಸಮಯದಲ್ಲಿ , ಮುಂದಿನ ಮನೆಯಲ್ಲಿದ್ದ ನನ್ನ ಮಲಗುವ ಕೊಠಡಿಗೆ ಹೋಗಲು ನಿರ್ಧರಿಸಿದೆ.

ಈಗ ಲೋಕದ ಮಟ್ಟಿಗೆ ಬೇರೊಂದು ವ್ಯಕ್ತಿತ್ವ–ರೂಪ–ಆಕಾರಗಳನ್ನು ಹೊಂದಿದ್ದ ನಾನು ಕೊಠಡಿಯಿಂದಿಳಿದು, ಪ್ರಯೋಗಶಾಲೆಯನ್ನು ಹಾಯ್ದು , ಎರಡು ಕಟ್ಟಡಗಳಿಗೂ ನಡುವೆ ಇದ್ದ ಅಂಗಳಕ್ಕೆ ಬಂದೆ. ಅಲ್ಲಿ ಕೆಲವು ಕ್ಷಣಗಳು ನಿಂತು ಕತ್ತೆತ್ತಿ ನೋಡಿದೆ. ಆಕಾಶದಲ್ಲಿ ನಕ್ಷತ್ರಮಂಡಲಗಳು ಮಿನುಗುತ್ತಿದ್ದವು. ಅನಾದಿಕಾಲದಿಂದ ನಿದ್ರಾರಹಿತವಾದ ಜಾಗೃತಾವಸ್ಥೆಯಲ್ಲಿರುತ್ತ ಸೃಷ್ಟಿಯ ಸಾಕ್ಷಿಗಳಾಗಿದ್ದ ಅವು, ಇದುವರೆಗೆ ಎಂದೂ ಕಂಡಿರಲಾರದ ನನ್ನಂತಹ ವಿಚಿತ್ರ ಪ್ರಾಣಿಯನ್ನವಲೋಕಿಸಿ ಆಶ್ಚರ್ಯಪಡುತ್ತಿದ್ದಂತೆ ಭಾಸವಾಯಿತು. ಈಗ ನನ್ನ ಸ್ವಂತ ಮನೆಯಲ್ಲೇ ಅಪರಿಚಿತನಾಗಿದ್ದ ನಾನು, ಮನೆಯನ್ನು ಕಳ್ಳನಂತೆ ಪ್ರವೇಶಿಸಿ, ನಿಶ್ಶಬ್ದವಾಗಿ ಬಾಗಿಲು–ಕೊಠಡಿಗಳನ್ನು ಹಾಯ್ದು ಹೋದೆ. ನನ್ನ ಮಲಗುವ ಮನೆಯನ್ನು ಪ್ರವೇಶಿಸುತ್ತಲೇ ಅಲ್ಲಿ , ನನ್ನಲ್ಲಾಗಿದ್ದ ದೈಹಿಕ ಪಲ್ಲಟವನ್ನು ಮೊಟ್ಟ ಮೊದಲಿಗೆ ಕನ್ನಡಿಯಲ್ಲಿ ಕಂಡು ಆಶ್ಚರ್ಯಚಕಿತನಾದೆ. ಹಿಂದೆ–ಅಂದರೆ, ವಿಠಲನಾಗಿದ್ದಾಗ, ಅವನ ಯಶಸ್ಸು–ಕೀರ್ತಿ–ಗೌರವಗಳ ಪಾಲನೆಯ ಹೊಣೆಗಾರಿಕೆಯಿಂದ, ಗುಪ್ತವಾದ ಜೀವನದ ನಿರ್ಬಂಧಕ್ಕೊಳಗಾಗಿದ್ದ ನನ್ನ ಕಾಮಭೋಗ ತೃಷೆಗೆ ಲಭ್ಯವಾಗಿದ್ದ ಈ ಹೊಸ ರೂಪಕ್ಕೆ, ಅದೇ ಕ್ಷಣದಲ್ಲಿ , ಕಾಮೇಶ ಗುಪ್ತ–ಎಂದು ಅನ್ವರ್ಥವಾಗಿ ನಾಮಕರಣವನ್ನೂ ಮಾಡಿಬಿಟ್ಟೆ !

ಇಲ್ಲಿ ನಾನು, ಯಾವುದನ್ನು ಬಲ್ಲೆನೋ ಅದನ್ನು ಬಿಟ್ಟು, ಯಾವುದು ತೀರ ಸಂಭವನೀಯವೆಂದು ಬಗೆಯುವೆನೋ ಅದನ್ನು ಕುರಿತು, ಕಲ್ಪನೆಯ ಆಧಾರದ ಮೇಲೆ ಮಾತ್ರವೇ ಮಾತಾಡಬೇಕು.

ನನ್ನ ಪ್ರಯೋಗಗಳ ಸಿದ್ಧಿಯ ಮುದ್ರೆಯುಳ್ಳದ್ದಕ್ಕೆ ವರ್ಗಾಯಿಸಲ್ಪಟ್ಟಿದ್ದ ನನ್ನ ದುಷ್ಟಪ್ರವೃತ್ತಿಯು, ಧಾರ್ಷ್ಟ್ಯತೆ–ಬೆಳವಣಿಗೆಗಳಲ್ಲಿ, ಅದೇ ತಾನೆ ಪದಚ್ಯುತವಾಗಿದ್ದ ನನ್ನ ಶಿಷ್ಟಪ್ರವೃತ್ತಿಗಿಂತ ಕೆಳಗೈಯಾಗಿತ್ತು. ಎಷ್ಟಾದರೂ, ಹತ್ತರಲ್ಲಿ ಒಂಬತ್ತು ಪಾಲು, ಉದ್ಯಮ–ಶೀಲ–ಸಂಯಮಗಳಿಂದ ಕೂಡಿದ್ದ ನನ್ನ ಬದುಕಿನ ಈವರೆಗಿನ ಅವಧಿಯಲ್ಲಿ, ನನ್ನ ದುಷ್ಟಪ್ರವೃತ್ತಿಯ ಉಪಯೋಗ–ಬೆಳವಣಿಗೆ–ವ್ಯಯಗಳಿಗೆ ಇದ್ದ ಅವಕಾಶ ತೀರ ಕಡಮೆಯಾಗಿತ್ತು. ಆದಕಾರಣವೇ

ಕಾಮೇಶ ಗುಪ್ತನು, ವಯಸ್ಸು, ಆಕೃತಿಗಳಲ್ಲಿ ಕಿರಿಯನಾಗಿಯೂ, ದೇಹದಲ್ಲಿ ಹಗುರವಾಗಿಯೂ ಇರುವಂತಾಯಿತೆಂದು ಯೋಚಿಸುತ್ತೇನೆ.

ಒಂದರ ಮುಖದಲ್ಲಿ ಸೌಜನ್ಯ ಬೆಳಗಿದಂತೆ, ಇನ್ನೊಂದರ ಮುಖದ ತುಂಬ ದೌರ್ಜನ್ಯ ಸ್ಪಷ್ಟವಾಗಿ ಪ್ರಕಟಿತವಾಗಿತ್ತು. ಅಲ್ಲದೆ, (ಮಾನವನಲ್ಲಿ ಪ್ರಾಣನಾಶಕವೆಂದು ನಾನು ಇನ್ನೂ ನಂಬಬೇಕಾದ) ದೌರ್ಜನ್ಯವು, ತನಗೆ ದತ್ತವಾಗಿದ್ದ ದೇಹದ ಮೇಲೆ, ವಕ್ರತೆ-ಶೈಥಿಲ್ಯಗಳ ಮುದ್ರೆಯನ್ನೊತ್ತಿತ್ತು.

ಹೀಗಿದ್ದರೂ, ಕನ್ನಡಿಯಲ್ಲಿ ಆ ಕುರೂಪಮೂರ್ತಿಯ ಮೋರೆಯನ್ನು ನೋಡಿದ ಕ್ಷಣದಲ್ಲಿ , ನನಗೆ ಅಸಹ್ಯವಾಗುವುದರ ಬದಲು, ಸಂತೋಷಾತಿಶಯದಿಂದ ನೆಗೆದು ಅದನ್ನು ಸ್ವಾಗತಿಸುವಂತಾಯಿತು ! ಕಾರಣ, ಇದೂ ನಾನೇ ಆಗಿದ್ದೆ ! - ಆದ್ದರಿಂದ ಇದೂ, ಸ್ವಭಾವವಾಗಿಯೂ, ಮಾನುಷವಾಗಿಯೂ ಇತ್ತು. ಕನ್ನಡಿಯ ಪ್ರತಿಬಿಂಬವು, ನನ್ನ ಕಣ್ಣಿಗೆ ಇದುವರೆಗೂ ನನ್ನದು-ಎಂದು ಕರೆದುಕೊಳ್ಳಲು ರೂಢಿಯಾಗಿದ್ದ ತನ್ನ ಅಪರಿಪೂರ್ಣವಾದ ಇಬ್ಬಗೆಯ ಮುಖಭಾವಕ್ಕಿಂತ ಹೆಚ್ಚು ಪ್ರಕಟವಾಗಿ ಒಬ್ಬಗೆಯಾಗಿತ್ತಲ್ಲದೆ, ಜೀವನದ ಲವಲವಿಕೆಯನ್ನು ಹೆಚ್ಚಾದ ಪ್ರಮಾಣದಲ್ಲಿ ಹೊಂದಿದ್ದಂತೆ ತೋರಿತು. ಇಲ್ಲಿಯವರೆಗೆ ನಿಸ್ಸಂದೇಹವಾಗಿ ನನ್ನ ಕಲ್ಪನೆ ಸರಿಯಾಗಿತ್ತು.

ನಾನು ಕಾಮೇಶ ಗುಪ್ತನ ರೂಪವನ್ನು ತಳೆದಾಗ, ಯಾರೇ ಆಗಲಿ, ಮೊಟ್ಟಮೊದಲಿಗೇ ಸ್ಪಷ್ಟವಾಗಿ ಸಂಶಯಗ್ರಸ್ತರಾಗದೆ ನನ್ನ ಹತ್ತಿರ ಬರಲು ಸಾಧ್ಯವಿಲ್ಲವೆಂದು ಕಂಡಿದ್ದೇನೆ. ಇದಕ್ಕೆ ನನ್ನ ಗ್ರಹಿಕೆಯಂತೆ, ಸಮಾಜದಲ್ಲಿ ನಮ್ಮ ಕಣ್ಣಿಗೆ ಬೀಳುವ ಮನುಷ್ಯರೆಲ್ಲ, ವಸ್ತುತಃ, ಸೌಜನ್ಯ-ದೌರ್ಜನ್ಯಗಳ ಮಿಳಿತಮೂರ್ತಿಗಳಾಗಿರುವುದೇ ಕಾರಣ. ಅವರಲ್ಲೆಲ್ಲ, ದೌರ್ಜನ್ಯದ ಅಸಹ್ಯತೆಯನ್ನು ಬಹುಮಟ್ಟಿಗೆ ಮರೆಮಾಡುವ ಸೌಜನ್ಯವಿರುತ್ತದೆ; ಆದರೆ, ಇಡೀ ಮಾನವ ಕುಲಕೋಟಿಯಲ್ಲಿ , ಏಕೈಕ-ಶುದ್ಧ ದೌರ್ಜನ್ಯ ಮೂರ್ತಿಯಾಗಿದ್ದವನೆಂದರೆ-ಕಾಮೇಶ ಗುಪ್ತ !

ನಾನು ಕನ್ನಡಿಯ ಮುಂದಿದ್ದದ್ದು ಒಂದು ಕ್ಷಣ ಮಾತ್ರ. ತೀರ್ಮಾನಕರವಾದ ಎರಡನೆಯ ಪ್ರಯೋಗಪರೀಕ್ಷೆಯನ್ನು ಇನ್ನೂ ಮಾಡುವುದಿತ್ತು ! ಮರಳಿ ಎಂದೆಂದಿಗೂ ಪಡೆಯಲಾಗದಂತೆ ನಾನು ನನ್ನ ಪೂರ್ವದ ವ್ಯಕ್ತಿತ್ವಾಕಾರಗಳನ್ನು ಕಳೆದುಕೊಂಡಿದ್ದೇನೇ ? ಹಾಗಾದರೆ, ಇನ್ನು ನನ್ನದಾಗಿರದ ಈ ಮನೆಯಿಂದ, ಬೆಳಗಾಗುವುದರೊಳಗೆ ನಾನು ಪಲಾಯನವಾಗಬೇಕೇ ? —ಎಂಬುದನ್ನು ಪರೀಕ್ಷಿಸಿ ನೋಡುವುದು ಇನ್ನೂ ಉಳಿದಿತ್ತು. ಆದ್ದರಿಂದ, ಪುನಃ ಅವಸರವಾಗಿ ನನ್ನ ಪ್ರಯೋಗಶಾಲೆಯ ಮೇಲಿನ ಸ್ವಂತ ಕೊಠಡಿಗೆ ಹೋಗಿ, ಇನ್ನೊಮ್ಮೆ ಔಷಧವನ್ನು ಬೆರಸಿಕೊಂಡು ಕುಡಿದೆ. ಇನ್ನೊಮ್ಮೆ ರೂಪವಿಸರ್ಜನೆಯ ಅನಿರ್ವಚನೀಯ ಯಾತನಾಪರಂಪರೆಗಳನ್ನನುಭವಿಸುತ್ತ ವಿಸ್ಮೃತಿಯಲ್ಲಿ ಮುಳುಗಿದವನು, ಮತ್ತೊಮ್ಮೆ, ಹರಿವಿಠಲನ ಮುಖಭಾವ-ಎತ್ತರ-ಸ್ವಭಾವಗಳೊಡನೆ-ಎದ್ದು ನಿಂತೆ !

ಆ ರಾತ್ರಿ ನಾನು, ನನ್ನ ಜೀವನಪಥದ ಕವಲೊಡೆಯುವ ಸ್ಥಳವನ್ನು ಮುಟ್ಟಿ, ಘೋರವಾದ ಸಂದಿಗ್ಧ ಸ್ಥಿತಿಯಲ್ಲಿದ್ದೆ. ನನ್ನ ಸಂಶೋಧನೆಯ ವಿಷಯದಲ್ಲಿ ನಾನು ಮಿಗಿಲಾದ ಕುಲೀನತೆಯನ್ನು ವ್ಯಕ್ತಪಡಿಸಿದ್ದಿದ್ದರೆ, ಉದಾರವೂ ಧಾರ್ಮಿಕವೂ ಆದ ಭಾವನೆಗಳ ಪ್ರಭಾವಕ್ಕೊಳಗಾಗಿದ್ದ ಸಮಯದಲ್ಲಿ ನಾನು ಪ್ರಯೋಗವನ್ನು ನಡೆಸಿದ್ದಿದ್ದರೆ, ಎಲ್ಲವೂ ಬೇರೆ ರೀತಿಯಾಗಿದ್ದು, ಜನನ ಮರಣಗಳ ಯಾತನಾಂತರಾಳದಿಂದ ನಾನು ಒಬ್ಬ ಪೈಶಾಚಿಕ ವ್ಯಕ್ತಿಯ ಬದಲು ದೇವತಾಮನುಷ್ಯನಾಗಿ ಹೊರಬೀಳುತ್ತಿದ್ದೆ.

ನಾನು ತಯಾರಿಸಿಕೊಂಡಿದ್ದ ಔಷಧವು ಕ್ರಿಯಾಶಕ್ತಿಯಲ್ಲಿ ತಾರತಮ್ಯದ ವಿವೇಚನೆಯನ್ನುಳ್ಳದ್ದಾಗಿರಲಿಲ್ಲ; ಮನೋವೃತ್ತಿಗಳ ಕಾರಾಗೃಹದ ಬಾಗಿಲನ್ನು ಅಲ್ಲಾಡಿಸಿ ತೆರೆಯುವ ಸಾಧನ ಮಾತ್ರವಾಗಿತ್ತು -ಇದು. ನಾನು ಪ್ರಯೋಗ ನಡೆಸಿದ ಸಮಯದಲ್ಲಿ, ನನ್ನ ಸೌಜನ್ಯ ಪ್ರಕೃತಿ ನಿದ್ರಿಸುತ್ತಿತ್ತು; ಆಗ, ಪ್ರಬಲಾಕಾಂಕ್ಷೆಯಿಂದ ಜಾಗೃತವಾಗಿದ್ದ ನನ್ನ ದೌರ್ಜನ್ಯ ಪ್ರಕೃತಿಯು, ದೊರೆತ ಅವಕಾಶವನ್ನು ತಟ್ಟನೆ ಚುರುಕಿನಿಂದ ಉಪಯೋಗಿಸಿಕೊಂಡು, ಕಾಮೇಶಗುಪ್ತನಾಗಿ ಪ್ರಕಟವಾಯಿತು.

ಈಗ ನನಗೆ ಎರಡು ರೂಪಾಕೃತಿಗಳು ಇದ್ದಂತಾಯಿತು: ಸಂಪೂರ್ಣವಾಗಿ ದುಷ್ಟವಾಗಿದ್ದದ್ದು, ಒಂದು; ಹಿಂದಿನ ಹರಿವಿಠಲನಾಗಿಯೇ ಇನ್ನೂ ಇದ್ದದ್ದು, ಇನ್ನೊಂದು. ಅಸಂಬದ್ಧವಾದ ಸಹಕೂಟದ ಮಿತ್ರವ್ಯಕ್ತಿಯಾಗಿದ್ದ ವಿಠಲನ ಉದ್ಧಾರ-ಅಭಿವೃದ್ಧಿಗಳ ವಿಷಯದಲ್ಲಿ ನಾನಾಗಲೇ ನಿರಾಶನಾಗಿದ್ದೆ; ಆದಕಾರಣ, ಪೂರ್ಣವಾಗಿ ನನ್ನ ಗಮನ ಅಧೋಮುಖವಾಯಿತು.

ಈ ಪ್ರಯೋಗವನ್ನು ನಡೆಸಿದ ಕಾಲದಲ್ಲಿ ಕೂಡ, ವ್ಯಾಸಂಗಜೀವನದ ನೀರಸತೆಯಲ್ಲಿ ನನಗಿದ್ದ ವಿರೋಧವನ್ನು ನಾನು ಜಯಿಸಿರಲಿಲ್ಲ. ಆದುದರಿಂದ, ಕೆಲವು ವೇಳೆ, ನನ್ನಲ್ಲಿ ಇನ್ನೂ ಉಲ್ಲಾಸ ಮನೋವೃತ್ತಿ ಪ್ರಕಟಗೊಳ್ಳುತ್ತಿತ್ತು. ಈ ಮನೋವೃತ್ತಿಯು ಬಯಸುತ್ತಿದ್ದ ಸುಖಗಳು, ಸ್ವಲ್ಪ ಮಾತಿನಲ್ಲೇ ಹೇಳುವುದಾದರೂ,

ತೀರ ಅಗೌರವವಾಗಿದ್ದವು. ಆದರೆ, ನಾನು ಎಲ್ಲರಿಗೂ ಚೆನ್ನಾಗಿ ತಿಳಿದವನಾಗಿ, ಎಲ್ಲರ ವಿಶೇಷ ಗೌರವಕ್ಕೆ ಪಾತ್ರನಾಗಿ ಹಿರಿಯತನದ ವಯಸ್ಸನ್ನು ಮುಟ್ಟುತ್ತಿದ್ದೆ. ಆದ್ದರಿಂದ, ನನ್ನ ಜೀವನದಲ್ಲಿನ ಈ ಅಸಂಬದ್ಧತೆ, ದಿನ ದಿನಕ್ಕೆ ನನಗೆ ಅಹಿತವಾಗುತ್ತ ಬಂದಿತು.

ನನಗೆ ಸಿದ್ಧಿಸಿದ್ದ ಹೊಸ ಶಕ್ತಿಯ ಉಪಯೋಗದ ಚಾಪಲ್ಯವು, ನನ್ನನ್ನು ಸುಖಲೋಲುಪ್ತಿಯ ಕಡೆ ಸೆಳೆಯತೊಡಗಿತು. ಕಡೆಗೆ ನಾನು ಅದರ ದಾಸ್ಯಕ್ಕೆ ಬಿದ್ದೆ. ವಿಖ್ಯಾತನಾದ ಹರಿವಿಠಲನ ದೇಹವನ್ನು ಕಳಚಿ ಬಿಸುಟು, ಮಂದವಾದ ಮುಸುಕಿನಂತೆ, ಕಾಮೇಶ ಗುಪ್ತನ ಆಕಾರವನ್ನು ತಳೆಯುವುದಕ್ಕೆ, ನಾನು ಮಾಡಬೇಕಾಗಿದ್ದ ಕೆಲಸ ಎಂದರೆ–ಔಷಧಿಯನ್ನು ಬೆರಸಿ ಕುಡಿಯುವುದು ಮಾತ್ರವಾಗಿತ್ತು. ಈ ಯೋಚನೆಯನ್ನು ಸವಿಯುತ್ತ ಮುಗುಳ್ನಗೆ ನಕ್ಕೆ. ಆ ಸಮಯದಲ್ಲಿ ಈ ಯೋಚನೆಯು ಹಾಸ್ಯಪೂರ್ಣವಾಗಿ ತೋರಿತು. ಇಲ್ಲಿಂದ ಮುಂದೆ, ನನಗೆ ಹಸ್ತಗತವಾಗಿದ್ದ ಈ ಅಪೂರ್ವಶಕ್ತಿಯ ಪೂರ್ಣ ಪ್ರಯೋಜನವನ್ನು ಪಡೆಯುವ ಯೋಚನೆ ಮಾಡಿ, ಅದಕ್ಕೆ ತಕ್ಕಂತೆ, ವಿಶೇಷ ಎಚ್ಚರಿಕೆಯಿಂದ ಸಿದ್ಧತೆಗಳನ್ನು ಮಾಡಿಕೊಂಡೆ.

ಈಚೆಗೆ ಕಾಮೇಶ ಗುಪ್ತನ ಜಾಡು ಹಿಡಿದು ಹೋಗಿ ಯಾವ ಮನೆಯನ್ನು ಪೊಲೀಸಿನವರು ಕಾಮಾಟಿಪುರದಲ್ಲಿ ಪತ್ತೆಹಚ್ಚಿದರೋ–ಆ ಮನೆಯನ್ನು ಕೊಂಡುಕೊಂಡು, ನನ್ನ ಇಷ್ಟ ಪ್ರಕಾರ ಅದನ್ನು ಸಜ್ಜುಗೊಳಿಸಿ, ಮೌನಿಯೆಂದೂ, ನಿರ್ದಾಕ್ಷಿಣ್ಯಪ್ರಕೃತಿಯವಳೆಂದೂ ನನಗೆ ಚೆನ್ನಾಗಿ ತಿಳಿದ, ಒಬ್ಬ ಮುದಿ ಹೆಣ್ಣಾಳನ್ನು ಮನೆವಾರ್ತೆಗೆ ನಿಯಮಿಸಿಕೊಂಡೆ.

ಇತ್ತಕಡೆ, ನನ್ನ ಸ್ವಂತ ಮನೆಯ ಸೇವಕರಿಗೆಲ್ಲ , ಚಹರೆಯ ವರ್ಣನೆಯಿಂದ ಕಾಮೇಶ ಗುಪ್ತನನ್ನು ಪರಿಚಯ ಮಾಡಿಕೊಟ್ಟು, ಅವನಿಗೆ ನನ್ನ ಈ ಚೌಕದ ಮನೆಯಲ್ಲಿ ಸರ್ವಸ್ವಾತಂತ್ರ್ಯವು ಅಧಿಕಾರವೂ ಇರತಕ್ಕದೆಂದು ತಿಳಿಸಿದೆ. ಅಷ್ಟೇ ಅಲ್ಲ —ಆಕಸ್ಮಿಕಗಳು ಆಗದಿರಲೆಂದು, ನನ್ನ ಎರಡನೇ ರೂಪದಲ್ಲಿ ಬಂದು ಭೇಟಿಯಾಗುತ್ತ, ಎಲ್ಲರಿಗೂ ಬಳಕೆಯಾದೆ.

ಅನಂತರ —ನನಗೆ ಡಾಕ್ಟರ್ ವಿಠಲನ ವ್ಯಕ್ತಿತ್ವದಲ್ಲಿ ಏನಾದರೂ ಆಗಬಾರದ್ದು ಆದರೆ, ಹಣಕಾಸಿನ ನಷ್ಟವಿಲ್ಲದೆ, ನಾನು ಕಾಮೇಶ ಗುಪ್ತನ ವ್ಯಕ್ತಿತ್ವವನ್ನು ಧರಿಸಬಹುದೆಂದು ಬಗೆದು —ನೀನು ಅಷ್ಟು ಆಕ್ಷೇಪಿಸಿದ ಆ ಉಯಿಲನ್ನು ಬರೆದೆ. ಈ ರೀತಿ, ನಾನು ಭಾವಿಸಿದಂತೆ, ಎಲ್ಲ ಕಡೆಯಿಂದಲೂ ಭದ್ರಮಾಡಿಕೊಂಡು, ನನ್ನ ಅನುಕೂಲಸ್ಥಿತಿಯ ನಿರಾಪತ್ತಿಗಳಿಂದ ಲಾಭ ಪಡೆಯತೊಡಗಿದೆ. ಆದರೆ, ಕೇವಲ ತನ್ನ ಸ್ವಂತ ಸುಖತೃಪ್ತಿಗಳಿಗಾಗಿ ಮೊಟ್ಟಮೊದಲು ಈ ರೀತಿ ಮಾಡಿದವರು ಯಾರಾದರೂ ಇದ್ದರೆ, ಅದು ನಾನು ! ಸಾರ್ವಜನಿಕರ ದೃಷ್ಟಿಯಲ್ಲಿ ಪ್ರಿಯನೂ ಮಾನ್ಯನೂ ಆದ ವ್ಯಕ್ತಿಯಾಗಿ ತಿರುಗಾಡುತ್ತಿದ್ದು, ಒಂದು ಕ್ಷಣದಲ್ಲಿ, ಶಾಲೆ ಬಿಟ್ಟು ಬಂದ ಬಾಲಕನಂತೆ, ನಿರ್ಬಂಧಗಳನ್ನೆಲ್ಲ ಕಿತ್ತೊಗೆದು, ಸ್ವಾತಂತ್ರ್ಯಸಾಗರದಲ್ಲಿ ಧುಮುಕಬಲ್ಲವರಲ್ಲಿ ಮೊಟ್ಟಮೊದಲನೆಯವನೆಂದರೆ, ನಾನೊಬ್ಬನೇ ! ! ಆದರೆ, ನನ್ನ ವಿಷಯದಲ್ಲಿ ಮಾತ್ರ ಭೇದಿಸಲಾಗದ ರೂಪದ ಮುಸುಕಿನಲ್ಲಿ ನನ್ನ ಸುರಕ್ಷಿತೆ ಸಂಪೂರ್ಣವಾಗಿತ್ತು.

ಯೋಚಿಸಿ ನೋಡು ! ಕಾಮೇಶ ಗುಪ್ತನಾದ ನನಗೆ ಅಸ್ತಿತ್ವವೆಂಬುದೇ ಇರಲಿಲ್ಲ ! ನಾನು ನನ್ನ ಪ್ರಯೋಗಶಾಲೆಗೆ ನುಸುಳಿಹೋಗುವುದೇ ತಡ ! —ಅಲ್ಲಿ ನನ್ನ ಸಿದ್ಧೌಷಧವನ್ನು ಬೆರಸಿ ಕುಡಿಯಲು ಒಂದೆರಡು ಕ್ಷಣಗಳ ಅವಕಾಶ ಸಿಕ್ಕಿದರಾಯ್ತು, ಕಾಮೇಶ ಗುಪ್ತನು–ಅವನು ಏನೇ ಮಾಡಬಾರದ್ದನ್ನು ಮಾಡಿರಲಿ—ಕನ್ನಡಿಯ ಮೇಲಿನ ಉಸಿರಿನ ಗುರುತಿನಂತೆ ಮಾಯವಾಗಿ, ಅವನ ಬದಲು, ತನ್ನಷ್ಟಕ್ಕೆ ತಾನು ಮನೆಯಲ್ಲಿದ್ದುಕೊಂಡು, ವ್ಯಾಸಂಗದ ಕೊಠಡಿಯಲ್ಲಿ ನಡುರಾತ್ರಿಯ ದೀಪವನ್ನುರಿಸುತ್ತ, ಅನುಮಾನವನ್ನು ಧಿಕ್ಕರಿಸಿ ನಗಬಲ್ಲಂಥ ದೊಡ್ಡ ಮನುಷ್ಯ–ಹರಿವಿಠಲನಿರುತ್ತಾನೆ !

ರೂಪವನ್ನು ಮರೆಸಿಕೊಂಡು, ಆತುರದಿಂದ ನಾನು ಅರಸಿ ಭೋಗಿಸಿದ ವಿಷಯ ಸುಖಗಳು, ನಾನು ಮೊದಲೇ ಸೂಚಿಸಿರುವಂತೆ, ಶುಚಿ—ಶೀಲ–ಗಾಂಭೀರ್ಯರಹಿತವಾಗಿದ್ದವು. ಇದಕ್ಕಿಂತಲೂ ಕರ್ಕಶವಾದ ಅಶ್ಲೀಲ ಶಬ್ದಗಳನ್ನು ನಾನು ಉಪಯೋಗಿಸಲೊಲ್ಲೆ. ಆದರೆ, ಕಾಮೇಶ ಗುಪ್ತನ ಕೈಲಿ ಅವು–ಆ ವಿಷಯಾಸಕ್ತಿಗಳು–ಬಹು ಬೇಗ ಪೈಶಾಚಿಕದ ಕಡೆಗೆ ತಿರುಗಿದವು. ನಾನು ಈ ತರದ ವಿಷಯೋಪಭೋಗಗಳ ತೃಷೆಯನ್ನು ತೀರಿಸಿಕೊಳ್ಳಲು ಹೋದ ಕಡೆಗಳಿಂದ ಹಿಂತಿರುಗಿದ ವೇಳೆಗಳಲ್ಲಿ —ಹಲವು ಸಲ, ನನ್ನ ಅನ್ಯಮೂಲಕವಾದ ಲಂಡತನಕ್ಕೆ ನಾನೇ ಬೆಕ್ಕಸಬೆರಗಾಗಿ ಹೋಗುತ್ತಿದ್ದೆ.

ತಾನು ಕಾಣಬಯಸಿದ ಸುಖವನ್ನುಣ್ಣಲು, ನನ್ನ ಸ್ವಂತ ಆತ್ಮದ ಅಂತರಾಳದಿಂದ ಈಚೆಗೆಳೆಯಲ್ಪಟ್ಟು ಏಕಾಂಗಿಯಾಗಿ ಹೊರದೂಡಲ್ಪಟ್ಟ ಈ ಭೂತಸ್ವರೂಪನು, ಸ್ವಾಭಾವಿಕವಾಗಿಯೇ ಪರಮ ದ್ವೇಷಿಯೂ, ಅತಿ ನೀಚನೂ ಆಗಿದ್ದ. ಅವನ ಯೋಚನೆ–ಕ್ರಿಯೆ–ಆಸೆಗಳೆಲ್ಲ ಪೂರ್ಣ ಸ್ವಾರ್ಥದಲ್ಲಿ ಕೇಂದ್ರೀಕೃತವಾಗಿದ್ದವು.

ನಿಷ್ಕರುಣಿಯಾದ ಈ –ಕಲ್ಲೆದೆಯ ಕರಾಳ ವ್ಯಕ್ತಿಯು, ಅನ್ಯರಿಗೆ ಮಿತಿಮೀರಿದ ಚಿತ್ರಹಿಂಸೆ ಕೊಡುವುದರಲ್ಲಿ ಕೇವಲ ಪಾಶವೀಯವಾದ ತೃಷಾತಿರೇಕವನ್ನು ವ್ಯಕ್ತಪಡಿಸುತ್ತಿದ್ದ.

ಕೆಲವು ವೇಳೆಗಳಲ್ಲಂತೂ ಹರಿವಿಠಲನು, ಕಾಮೇಶ ಗುಪ್ತನ ಘೋರ ಅಕೃತ್ಯಗಳನ್ನು ಕಂಡು ಬೆಚ್ಚಿ ಬೆರಗಾಗಿ ಹೋಗುತ್ತಿದ್ದ. ಆದರೆ, ಸಾಮಾನ್ಯ ನಿಯಮಗಳಿಗೆ ಹೊರತಾಗಿದ್ದ ಪರಿಸ್ಥಿತಿಯ ದ್ರೋಹದಿಂದ, ಆತ್ಮವಿವೇಕದ ಮುಷ್ಟಿಯು ಸಡಿಲಿತು. ಇಷ್ಟಕ್ಕೂ, ಅಪರಾಧಿಯಾಗಿದ್ದವನು, ಕಾಮೇಶ ಗುಪ್ತ–ಕಾಮೇಶ ಗುಪ್ತನೊಬ್ಬನೇ ! ಅವನ ಅಪರಾಧಗಳ ಸೊಂಕು ಹರಿವಿಠಲನಿಗಿರಲಿಲ್ಲ. ಗುಪ್ತಾವಸ್ಥೆಯಿಂದ ಪಲ್ಲಟವಾಗಿ ಎಚ್ಚೆತ್ತಾಗ, ಅವನ–ಅಂದರೆ, ಹರಿವಿಠಲನ–ಸೌಜನ್ಯಪ್ರವೃತ್ತಿಗೆ ಯಾವ ತೆರನ ಘಾಸಿಯೂ ಆಗಿರದಂತೆ ತೋರುತ್ತಿತ್ತು. ವಿಠಲ, ಸಾಧ್ಯವಾದೆಡೆಗಳಲ್ಲಿ ಕಾಮೇಶ ಗುಪ್ತನ ಅಕೃತ್ಯಗಳನ್ನು ಸರಿಪಡಿಸುವುದರಲ್ಲಿ ಆತುರದಿಂದಲೇ ಮುಂದಾಗುತ್ತಿದ್ದ. ಈ ರೀತಿ, ಆತ್ಮವಂಚನೆಯ ಮುಸುಕಿನಲ್ಲಿ ಅವನ ವಿವೇಕ ನಿದ್ರಿಸತೊಡಗಿತು.

ನಾನು ಏನೂ ಅರಿಯದವನಂತೆ ನಟಿಸುತ್ತಿದ್ದ ಅಪಖ್ಯಾತಿಕರವಾದ ಕೃತ್ಯಗಳನ್ನು ಕುರಿತು (ಏಕೆಂದರೆ, ಅವುಗಳನ್ನು ನಾನೇ ಮಾಡಿದವನೆಂದು ಒಪ್ಪಿಕೊಳ್ಳಲು ಈಗಲೂ ನನಗೆ ಸಾಧ್ಯವಾಗುತ್ತಿಲ್ಲ) ವಿವರಗಳಿಗೆ ಪ್ರವೇಶಿಸಲು ನನಗೆ ಮನಸ್ಸಿಲ್ಲ. ಆದರೆ, ನನ್ನ ಶಿಕ್ಷೆಯು ನನಗೆ ಎಚ್ಚರಿಕೆಗಳನ್ನು ಕೊಡುತ್ತ, ನನ್ನೆಡೆಗೆ ಹೆಜ್ಜೆ ಹೆಜ್ಜೆಯಾಗಿ ಬರುತ್ತಿದ್ದುದನ್ನು ಮಾತ್ರ ಕುರಿತು ಹೇಳಬೇಕೆಂದಿದ್ದೇನೆ.

ನನಗೆ ಒಂದು ಆಕಸ್ಮಿಕ ಸಂಭವಿಸಿತು. ಅದರಿಂದ ನನಗೆ ಹೆಚ್ಚು ದುಷ್ಪರಿಣಾಮವೇನೂ ಆಗದಿದ್ದ ಕಾರಣ, ಇಲ್ಲಿ ಅದರ ಪ್ರಸ್ತಾಪಕ್ಕಿಂತ ಹೆಚ್ಚಾಗಿ ಹೇಳುವುದಿಲ್ಲ. ಒಂದು ಸಲ, ಒಬ್ಬ ಹೆಂಗಸಿನ ವಿಷಯದಲ್ಲಿ ನನ್ನ ಕ್ರೂರವರ್ತನೆ, ಹಾದಿಯಲ್ಲಿ ಹೋಗುತ್ತಿದ್ದ ಒಬ್ಬಾತನ ಕೋಪವನ್ನು ಕೆರಳಿಸಿತು. ನಿನ್ನೊಡನೆ ಬಂದಿದ್ದ ನಿನ್ನ ಸಂಬಂಧಿಯೇ ಅವನೆಂದು ನೀವಿಬ್ಬರೂ ಬಂದಿದ್ದ ದಿನ ಗುರ್ತು ಹಿಡಿದೆ. ಒಬ್ಬ ಡಾಕ್ಟರೂ, ಆ ಹೆಂಗಸಿನ ಮನೆಯವರೂ ಬಂದು ಅವನೊಡನೆ ಸೇರಿಕೊಂಡನು. ಆಗ ನನಗೆ ಕೆಲವು ಕ್ಷಣಗಳ ಕಾಲ ಪ್ರಾಣಭೀತಿಯುಂಟಾಯಿತು. ಅವರೆಲ್ಲರಿಗೂ ನ್ಯಾಯವಾಗಿಯೇ ಉಂಟಾಗಿದ್ದ ಕೋಪಶಮನಾರ್ಥವಾಗಿ, ಕಾಮೇಶ ಗುಪ್ತ ಅವರನ್ನು ಮನೆಗೆ ಕರೆತಂದು, ಹರಿವಿಠಲನ ರುಜುವಿದ್ದ ಒಂದು ಚೆಕ್ಕನ್ನು ಅವರ ಕೈಲಿಡಬೇಕಾಯಿತು.

ಇಂತಹ ಸಂದರ್ಭ ಮತ್ತೆ ಒದಗಿದರೆ ಅಪಾಯಕರವೆಂದು ಯೋಚಿಸಿ, ನಾನು ಕೂಡಲೆ, ಕಾಮೇಶ ಗುಪ್ತನ ಹೆಸರಿನಲ್ಲಿ, ಬೇರೊಂದು ಬ್ಯಾಂಕಿನಲ್ಲಿ ಹಣ ಇಟ್ಟು, ಅಪಾಯವನ್ನು ನಿವಾರಿಸಿಕೊಂಡೆ. ಬರವಣಿಗೆಯಲ್ಲಿ, ಅಕ್ಷರಗಳನ್ನು ಎಡಕ್ಕೆ ಬಾಗಿಸಿ, ವ್ಯತ್ಯಾಸ ಕಾಣುವಂತೆ ಮಾಡಿದೆನಲ್ಲದೆ, ನನ್ನ ಅವಳಿಜೀವಿಗೆ, ಅವನದೆ ಆದ ರುಜು ಒಂದನ್ನು ಕಲ್ಪಿಸಿಕೊಟ್ಟೆ. ಇಷ್ಟು ಮಾಡಿದ ಮೇಲೆ ನಾನು, ವಿಧಿಗೆ ನಿಲುಕದಷ್ಟು ದೂರದಲ್ಲಿ ಸುರಕ್ಷಿತನಾಗಿದ್ದೆನೆಂದು ಭಾವಿಸಿಕೊಂಡೆ.

ಧರ್ಮಸಿಂಧು ಹೊನ್ನಪ್ಪನವರ ಕೊಲೆಗೆ ಸುಮಾರು ಎರಡು ತಿಂಗಳ ಹಿಂದೆ, ನಾನು ಗುಪ್ತ–ರೂಪಿಯಾಗಿ ಎಲ್ಲೋ ಒಂದು ಕಡೆ ಮಜ ಮಾಡಲು ಹೋಗಿದ್ದವನು, ರಾತ್ರಿ ಬಹಳ ಹೊತ್ತಾದ ಮೇಲೆ ವಾಪಸು ಬಂದೆ. ಮರುದಿನ ಬೆಳಗಿನಲ್ಲಿ , ಹಾಸಿಗೆಯ ಮೇಲೆ ಎಚ್ಚರವಾಗಿ ಕಣ್ಣು ಬಿಟ್ಟಾಗ, ನನಗೆ ಏನೋ ಒಂದು ರೀತಿಯ, ಅರೆಸ್ವಪ್ನಾವಸ್ಥೆಯ ವಿಲಕ್ಷಣ ಇಂದ್ರಿಯಾನುಭವವಾಗುತ್ತಿತ್ತು ! ಮಲಗಿದಹಾಗೆಯೇ, ಸುತ್ತ ಕಣ್ಣು ಹೊರಳಿಸಿ ನೋಡಿದೆ. ಚೌಕದಲ್ಲಿನ ನನ್ನ ಮನೆಯ ಮಲಗುವ ಕೊಠಡಿಯ ವಿಶಾಲವಾದ ಅಳತೆ, ಸೊಗಸಾದ ಮೇಜು–ಕುರ್ಚಿ–ಸೋಫ ಇತ್ಯಾದಿ ಸಜ್ಜಿಕೆಗಳನ್ನೂ ನೋಡಿದೆ. ನನ್ನ ಕರೀಮರದ ಮಂಚದ ಪರದೆ ಕಂಭಗಳ ನಕಾಸೆ ಕೆಲಸವನ್ನೂ, ಪರದೆಯ ಕಸೂತಿ ಚಿತ್ರಗಳನ್ನೂ ನೋಡಿದೆ. ಆದರೆ ಇವೆಲ್ಲವನ್ನೂ ನೋಡಿದ್ದೂ ವ್ಯರ್ಥವಾಗಿತ್ತು. ನಾನು ಇರುವಂತೆ ಭಾಸವಾಗುತ್ತಿದ್ದೆಡೆಯಲ್ಲಿ ನಿಜಕ್ಕೂ ಇರಲಿಲ್ಲವೆಂದೂ, ನಾನು ಎಲ್ಲಿದ್ದೆನೆಂದು ತೋರುತ್ತಿತ್ತೋ ಅಲ್ಲಿ ಎಚ್ಚರಗೊಂಡಿರಲಿಲ್ಲವೆಂದೂ, ವಾಸ್ತವವಾಗಿ, ನಾನು ಕಾಮೇಶ ಗುಪ್ತನ ದೇಹಧಾರಣೆ ಮಾಡಿದಾಗ ನಿದ್ರಿಸುತ್ತಿದ್ದ–ಕಾಮಾಟಿಪುರದ ಮನೆಯ ಚಿಕ್ಕ ಕೊಠಡಿಯಲ್ಲಿದ್ದೆನೆಂದೂ, ನನ್ನ ಅಂತರಂಗದಲ್ಲಿ ಯಾವುದೋ ಧ್ವನಿ ಒತ್ತಿ ಒತ್ತಿ ಹೇಳುತ್ತಿತ್ತು.

ನನಗೆ ನಾನೇ ಮುಗುಳುನಗೆ ನಕ್ಕು, ಸೋಮಾರಿತನದ ಭಾವದಿಂದ, ನನಗೆ ವಾಡಿಕೆಯಾಗಿದ್ದ ಮಾನಸಿಕ ರೀತಿಯಲ್ಲಿ, ಈ ಭ್ರಾಂತಿವಿಲಾಸದ ಮೂಲಕಾರಣಗಳನ್ನು ಕುರಿತು, ಸಮಾಧಾನವಾಗಿ ವಿಚಾರಮಾಡತೊಡಗಿದೆ. ಮಾಡುತ್ತ ಮಾಡುತ್ತ, ಆಗಾಗ, ಹಿತವಾದ ಬೆಳಗಿನ ಜಾವದ ತೂಕಡಿಕೆಯಲ್ಲಿ ಮೈಮರೆಯುತ್ತಿದ್ದೆ.

ನಾನಿನ್ನೂ ಈ ಮಾನಸಿಕ ವ್ಯಾಯಾಮದಲ್ಲೇ ಇದ್ದೆ. ಆಗ, ಒಮ್ಮೆ ಚೆನ್ನಾಗಿಯೇ ಎಚ್ಚರಗೊಂಡಿದ್ದ ಕ್ಷಣದಲ್ಲಿ, ನನ್ನ ದೃಷ್ಟಿ, ಹೊದಿಕೆಯ ಮೇಲೆ ಇಟ್ಟುಕೊಂಡಿದ್ದ ನನ್ನ ಕೈ ಮೇಲೆ ಬಿತ್ತು. ಈಗ ಕೇಳು, ಹರಿವಿಠಲನ ಕೈ, ನೀನೇ ಎಷ್ಟೋ ಬಾರಿ ಕಂಡಿರುವಂತೆ, ಆಕಾರ —ಗಾತ್ರಗಳಲ್ಲಿ, ವೈದ್ಯವೃತ್ತಿಯ ಕಸಬುದಾರೀ ಕೈಯಾಗಿತ್ತು; ಅಂದರೆ ಅದು, ದೊಡ್ಡದಾಗಿಯೂ, ದೃಢವಾಗಿಯೂ ಬೆಳ್ಳಗೆ ಮಾಟವಾಗಿಯೂ ಇತ್ತು. ಆದರೆ ಈಗ ನಾನು

ಕೊಠಡಿಯ ಮಬ್ಬುಬೆಳಕಿನಲ್ಲೂ ಸ್ಪಷ್ಟವಾಗಿ ನೋಡಿದ ಕೈ , ತೆಳ್ಳಗೆ ಹುರಿ ಹುರಿಯಾಗಿ, ಗಿಣ್ಣುಗಳೆಲ್ಲ ಗಂಟುಗಂಟಾಗಿ, ಮಾಸಲು ಬಿಳುಪಿನ ವರ್ಣದ್ದಾಗಿತ್ತು; ಮತ್ತು, ಅದರ ಮುಂಗೈ ಮೇಲೆಲ್ಲ ದಟ್ಟವಾಗಿ ಕೂದಲು ಬೆಳೆದಿತ್ತು. ನನಗೆ ಕೂಡಲೆ ಅದರ ಗುರುತು ಸಿಕ್ಕಿತು; ಅದು ಕಾಮೇಶ ಗುಪ್ತನ ಕೈಯಾಗಿತ್ತು !

ಅನಿರೀಕ್ಷಿತವಾಗಿ ಔಷಧದ ಸಹಾಯವಿಲ್ಲದೆ ಆಗಿದ್ದ ಈ ಮಾರ್ಪಾಟನ್ನು ನೋಡಿ ನನ್ನ ಆಶ್ಚರ್ಯಕ್ಕೆ ಕೊನೆಯಿರಲಿಲ್ಲ. ಕೇವಲ ದಿಙ್ಮೂಢಾವಸ್ಥೆಯಲ್ಲಿ ಮುಳುಗಿ, ಕೈಯನ್ನು ಅರೆನಿಮಿಷದವರೆಗೆ ದುರುಗುಟ್ಟಿ ನೋಡಿರಬಹುದು; ಅಷ್ಟರಲ್ಲೇ ನನ್ನ ಹೃದಯದಲ್ಲಿ —ಬರಸಿಡಿಲು ಬಡಿದಂತೆ —ಮಹತ್ತಾದ ಭಯ ಮೂಡಿತು ! ಒಂದೇ ಏಟಿಗೆ ಹಾಸಿಗೆಯಿಂದ ನೆಗೆದು, ಕನ್ನಡಿಯ ಕಡೆ ನುಗ್ಗಿದೆ. ಅದರಲ್ಲಿ ನನ್ನ ಕಣ್ಣುಗಳನ್ನು ಎದುರುಗೊಂಡ ದೃಶ್ಯವನ್ನು ನೋಡಿ, ನನ್ನ ನಾಳ ನಾಳಗಳಲ್ಲಿನ ರಕ್ತ, ನೀರಿಗಿಂತಲೂ ತೆಳುವಾಗಿ ಮಾರ್ಪಟ್ಟಂತಾಗಿ, ಮಂಜುಗೆಡ್ಡೆಯಂತೆ ಕೊರೆಯತೊಡಗಿತ್ತು ! ಆಹಾ ! ಹೌದು ! —ನಾನು ಹರಿವಿಠಲನಾಗಿ ಹಾಸಿಗೆಯಲ್ಲಿ ಮಲಗಿ, ಕಾಮೇಶ ಗುಪ್ತನಾಗಿ ಎಚ್ಚರವಾಗಿದ್ದೆ ! !

ಇದಕ್ಕೆ ಏನು ವಿವರಣೆ ? – ಎಂದು ನನಗೆ ನಾನೇ ಪ್ರಶ್ನೆ ಹಾಕಿಕೊಂಡೆ. ಉತ್ತರ ತೋರದೆ, ನನ್ನ ಮೈ ಮತ್ತೊಮ್ಮೆ ಭಯದಿಂದ ಕಂಪಿಸಿತು. ಇದನ್ನು ಸರಿಪಡಿಸುವುದಾದರೂ ಹೇಗೆ ? —ಎಂದು, ತೀವ್ರವಾಗಿ ಯೋಚಿಸತೊಡಗಿದೆ.

ಆಗ ಚೆನ್ನಾಗಿ ಬೆಳಗಾಗಿತ್ತು. ಸೇವಕರೆಲ್ಲ ಎಚ್ಚರವಾಗಿ–ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿದ್ದರು. ಔಷಧದ್ರವ್ಯಗಳೆಲ್ಲ, ಪ್ರಯೋಗಶಾಲೆಯ ಮಹಡಿಯ ಮೇಲಿನ ನನ್ನ ಖಾಸಾ ಕೊಠಡಿಯಲ್ಲಿದ್ದವು. ಅದನ್ನು ತಲುಪಬೇಕಾದರೆ, ನಾನು ಎರಡು ಕಡೆ ಹಂತಗಳನ್ನು ಇಳಿದು, ಹಿಂದಿನ ಮಾರ್ಗವಾಗಿ ಬಯಲಾದ ಅಂಗಳವನ್ನು ದಾಟಿ, ಪ್ರಯೋಗಶಾಲೆಯ ಮೂಲಕ ಹಾದು ಹೋಗಬೇಕಾಗಿತ್ತು. ನಾನು ಭಯಗ್ರಸ್ತನಾಗಿ ನಿಂತಿದ್ದ ಸ್ಥಳದಿಂದ–ಆ ಕೊಠಡಿಗೆ ಪ್ರಯಾಣವು, ಈ ಹೊತ್ತಿನಲ್ಲೂ, ಸನ್ನಿವೇಶದಲ್ಲೂ–ಬಹುದೂರವೇ ಆಗಿತ್ತು ! ನಾನು ಮುಖವನ್ನು ಹೇಗೋ ಮರೆಮಾಡಿಕೊಳ್ಳಬಹುದೆಂದು ತೋರಿತು. ಆದರೆ, ನನ್ನ ಎತ್ತರದಲ್ಲಾಗಿದ್ದ ತೀರ ಸ್ಪಷ್ಟವಾದ ಮಾರ್ಪಾಟನ್ನು ಮುಚ್ಚಿಕೊಳ್ಳಲಸಾಧ್ಯವಾಗಿದ್ದಾಗ, ಬರೀ ಮುಖವನ್ನು ಮುಚ್ಚಿಕೊಂಡದ್ದರಿಂದ ಆಗುವ ಪ್ರಯೋಜನವೇನು ?–ಅನ್ನಿಸಿತು. ಹೀಗೆ ತರ್ಕಿಸುತ್ತಿದ್ದಾಗ ತಟ್ಟನೆ ಒಂದು ವಿಷಯ ನೆನಪಿಗೆ ಬಂದು, ಬಹು ಹಿತವಾಗಿ ಮನಸ್ಸಿನ ಚಿಂತಾಭಾರವನ್ನು ಹಗುರಮಾಡಿತು. ಈ ಮನೆಯಲ್ಲಿ ನನ್ನ ಎರಡನೇ ರೂಪದ ಆಗಮನ —ನಿರ್ಗಮನಗಳಿಗೆ ನನ್ನ ಸೇವಕರು ಈ ಮೊದಲೇ ಒಗ್ಗಿಹೋಗಿದ್ದರು !

ಕೂಡಲೆ ನಾನು, ನನ್ನ ಸ್ವಂತ ಅಳತೆಯ ಉಡುಪನ್ನೇ–ಸಾಧ್ಯವಾದಷ್ಟು ಸರಿಹೋಗುವಂತೆ ಧರಿಸಿಕೊಂಡು, ಮಲಗುವ ಮನೆಯಿಂದ ಈಚೆಗೆ ಬಂದು, ಮುಂದಿನ ಮನೆಯನ್ನು ಬೇಗ ದಾಟಿ, ಹಿಂಭಾಗಕ್ಕೆ ಹೋದೆ. ಅಂಥಾ ವೇಷದಲ್ಲಿ–ಆ ಸಮಯದಲ್ಲಿ–ಆ ಮನೆಯಲ್ಲಿ ಕಾಮೇಶ ಗುಪ್ತನನ್ನು ಕಂಡು, ಅಲ್ಲೇ ಕೆಲಸಮಾಡುತ್ತಿದ್ದ ಸಿದ್ದೋಜಿ, ದುರುಗುಟ್ಟುತ್ತ ಒಂದು ಹೆಜ್ಜೆ ಹಿಮ್ಮೆಟ್ಟಿದ.

ಹತ್ತು ನಿಮಿಷಗಳ ಅನಂತರ, ಡಾಕ್ಟರ್ ವಿಠಲನು ಸ್ವಯಂರೂಪದಲ್ಲಿ ಕಾಣಿಸಿಕೊಂಡು ಹುಬ್ಬುಗಂಟಿಕ್ಕಿ ಬೆಳಗಿನ ಉಪಾಹಾರ ಮಾಡುತ್ತಿರುವವನಂತೆ ನಟಿಸುತ್ತ ಕುಳಿತಿದ್ದ.

ಆ ಸಮಯದಲ್ಲಿ ನಿಜವಾಗಿಯೂ ನನಗೆ ಹಸಿವೇ ಇರಲಿಲ್ಲ. ವಿವರಿಸಲಸಾಧ್ಯವಾದ ಈ ಘಟನೆ, ನನ್ನ ಹಿಂದಿನ ಎಲ್ಲ ಅನುಭವಗಳ ಈ ವಿಪರ್ಯಾಸ, ಇವು —ಕಟ್ಟಕಡೆಯಲ್ಲಿ ನನಗೆ ಕಾದಿದ್ದ ತೀರ್ಮಾನ ಮತ್ತು ಶಿಕ್ಷೆಯ ಮಾತುಗಳನ್ನು ಅಗೋಚರವಾದ ವಿಧಿಯ ಹಸ್ತವು ನನ್ನ ಚಿತ್ತಭಿತ್ತಿಯ ಮೇಲೆ ಊರಿ ಬರೆದಂತೆ ಎಂದು ತೋರಿದವು. ಆದ್ದರಿಂದ, ನನ್ನ ಈ ಇಬ್ಬಗೆಯ ಬದುಕಿನ ಫಲಿತಾಂಶ ಮತ್ತು ಸಾಧ್ಯತೆಗಳನ್ನು ಕುರಿತು, ಎಂದಿಗಿಂತಲೂ ಗುರುತರ ಭಾವದಿಂದ, ಗಾಢವಾಗಿ ಚಿಂತನೆ ಮಾಡತೊಡಗಿದೆ.

ಯಾವ ನನ್ನ ಅಂಶವನ್ನು ಪ್ರತ್ಯೇಕಿಸಿ ಬಹಿರ್ಮುಖಮಾಡಲು ನಾನು ಶಕ್ತನಾಗಿದ್ದೆನೋ ಅದು, ಈಚೆಗೆ, ವಿಶೇಷವಾದ ಚಟುವಟಿಕೆಗಳಿಂದಲೂ ಆರೈಕೆಯಿಂದಲೂ ಪುಷ್ಟಿಗೊಂಡಿತ್ತು. ಈ ಕಾರಣದಿಂದ, ಕಾಮೇಶ ಗುಪ್ತನ ದೇಹವು, ಪ್ರಮಾಣದಲ್ಲಿ ಬೆಳೆದಿದೆಯೋ ಎಂಬಂತೆ ತೋರುತ್ತಿತ್ತು. ಅಲ್ಲದೆ, ಆ ರೂಪವನ್ನು ತಳೆದ ಸಮಯಗಳಲ್ಲಿ, ನನ್ನ ರಕ್ತಪುಷ್ಟಿಯೂ ಧಾರಾಳವಾದಂತೆ ಅನುಭವವಾಗುತ್ತಿತ್ತು. ಈ ಪರಿಸ್ಥಿತಿಯನ್ನು ಹೀಗೇ ಮುಂದುವರಿಯಲು ಅವಕಾಶ ಕೊಟ್ಟರೆ, ಇದುವರೆಗೂ ಇದ್ದ ನನ್ನ ಸ್ವಭಾವದ ಸಮತೂಕ ತಪ್ಪಿಹೋದೀತೆಂಬ ಶಂಕೆಯುಂಟಾಯಿತು. ಹಾಗಾದಲ್ಲಿ, ನನ್ನ ಸ್ವೇಚ್ಛಾರೂಪ ಪಲ್ಲಟ ಶಕ್ತಿಯು ನಾಶವಾಗಿ, ಬದಲಿಸಲು ಸಾಧ್ಯವೇ ಇಲ್ಲದ ರೀತಿಯಲ್ಲಿ ಕಾಮೇಶ ಗುಪ್ತನ ಪಾತ್ರವು ನನ್ನದಾಗಿಬಿಡಬಹುದಾದ ಘೋರ ಅಪಾಯದ ಸೂಚನೆಯನ್ನು ಕಂಡೆ.

ಔಷಧದ ಶಕ್ತಿಯು ಯಾವಾಗಲೂ ಏಕರೀತಿಯಾಗಿ ಪ್ರಕಟವಾಗಿರಲಿಲ್ಲ. ನನ್ನ ಈ ದ್ವಂದ್ವಜೀವನದ ಬಹು ಮುಂಚಿನ ದಿನಗಳಲ್ಲೊಂದು ದಿನ, ಈ ಔಷಧವು ಸಂಪೂರ್ಣವಾಗಿ ನಿಷ್ಫಲವಾಗಿತ್ತು. ಅಂದಿನಿಂದ, ಅನೇಕ ಸಲ, ಅದರ ಸೇವೆಯ ಪ್ರಮಾಣವನ್ನು ದ್ವಿಗುಣ ಮಾಡಬೇಕಾಯಿತು. ಒಮ್ಮೆಯಂತೂ, ವಿಶೇಷ ಪ್ರಾಣಾಪಾಯಕ್ಕೀಡಾಗುವುದನ್ನೂ ಗಮನಿಸದೆ, ತ್ರಿಗುಣ ಪ್ರಮಾಣದಲ್ಲಿ ಅದನ್ನು ಸೇವಿಸಬೇಕಾಯಿತು. ಅಪರೂಪವಾದ ಈ ಅನಿಶ್ಚಿತತೆಗಳು, ನನ್ನ ನೆಮ್ಮದಿಯ ಮೇಲೆ ಬೀರಿದ್ದ ಏಕಮಾತ್ರ ಭಯದ ಛಾಯೆಯಾಗಿತ್ತು.

ಅಂತೂ ಈಗ, ಆ ಬೆಳಗಿನ ಅನುಭವದಿಂದ, ಒಂದು ವಿಷಯ ನನ್ನ ಗಮನಕ್ಕೆ ಬಂದಿತು; ಅದೇನೆಂದರೆ, ಪ್ರಾರಂಭದಲ್ಲಿ ವಿಠಲನ ದೇಹ ವಿಸರ್ಜನೆ ಮಾಡುವಾಗ ಆಗುತ್ತಿದ್ದ ಯಾತನೆಗಳು, ಈಚೆಗೆ, ನಿಧಾನವಾಗಿಯಾದರೂ ನಿಸ್ಸಂದೇಹವಾಗಿ — ನನ್ನ ಇನ್ನೊಂದು ರೂಪಕ್ಕೆ ಆಗತೊಡಗಿದ್ದುದು.

ಆದ್ದರಿಂದ, ನಾನು ನಿಧಾನವಾಗಿ, ಉತ್ತಮವಾದ ನನ್ನ ಪ್ರಥಮ ವ್ಯಕ್ತಿತ್ವದ ಮೇಲಿನ ಹತೋಟಿಯನ್ನು ಕಳೆದುಕೊಂಡು, ಕ್ರಮೇಣ, ಅಧಮವಾದ ನನ್ನ ದ್ವಿತಿಯ ವ್ಯಕ್ತಿತ್ವದಲ್ಲಿ ಐಕ್ಯವಾಗುತ್ತಿದ್ದೆನೆಂಬುದನ್ನು , ಈ ಎಲ್ಲ ಅನುಭವಗಳೂ ಸೂಚಿಸುತ್ತಿದ್ದಂತೆ ತೋರಿತು.

ಈ ಸಮಯದಲ್ಲಿ ನಾನು ಎರಡರಲ್ಲಿ ಒಂದರ ಆಯ್ಕೆಯನ್ನು ಮಾಡಲೇಬೇಕೆಂದೆನ್ನಿಸಿತು. ನನ್ನ ಎರಡು ಸ್ವಭಾವಗಳಿಗೂ ಏಕವಾಗಿಯೂ ಸಾಮಾನ್ಯವಾಗಿಯೂ ಇದ್ದದ್ದು —ಸ್ಮೃತಿಯೊಂದೇ; ಉಳಿದೆಲ್ಲ ಶಕ್ತಿಗಳ ಹಂಚಿಕೆ ಇವೆರಡರ ನಡುವೆ, ತೀರ ಅಸಮಾನವಾದ ರೀತಿಯಲ್ಲಿ ಆಗಿತ್ತು.

ಸಂಯುಕ್ತ ವ್ಯಕ್ತಿಯಾಗಿದ್ದ ವಿಠಲ, ಒಮ್ಮೊಮ್ಮೆ ಬಹು ಸೂಕ್ಷ್ಮವಾದ ಶಂಕೆಯಿಂದಲೂ, ಒಮ್ಮೊಮ್ಮೆ ಅತ್ಯಾಸೆಯ ಉತ್ಸಾಹಾಧಿಕ್ಯದಿಂದಲೂ, ಗುಪ್ತನ ವ್ಯಕ್ತಿತ್ವವನ್ನು ತಳೆದು ಕಾರ್ಯಕಲಾಪಗಳಲ್ಲೂ, ವಿಷಯ ಭೋಗಗಳಲ್ಲೂ ಪಾಲುದಾರನಾಗುತ್ತಿದ್ದ. ಆದರೆ ಗುಪ್ತನು ಮಾತ್ರ ವಿಠಲನ ವಿಷಯದಲ್ಲಿ ಉದಾಸೀನತೆಯನ್ನು ತೋರುತ್ತಿದ್ದ; ಅಥವಾ, ಬೆಟ್ಟದ ಕಳ್ಳನು, ತಾನು ತಲೆ ತಪ್ಪಿಸಿಕೊಂಡು ಅವಿತುಕೊಳ್ಳುವ ಗವಿಯನ್ನು ಹೇಗೆ ಜ್ಞಾಪಿಸಿಕೊಳ್ಳುವನೋ ಹಾಗೆ–ಅವನನ್ನು (ವಿಠಲನನ್ನು) ಜ್ಞಾಪಿಸಿಕೊಳ್ಳುತ್ತಿದ್ದ. ವಿಠಲನಿಗೆ ಗುಪ್ತನ ವಿಷಯದಲ್ಲಿ , ಹೆತ್ತ ತಂದೆಗಿಂತ ಹೆಚ್ಚಾದ ಮಮತೆ–ಕುತೂಹಲಗಳಿದ್ದವು, ಗುಪ್ತನಿಗೆ ವಿಠಲನ ವಿಷಯದಲ್ಲಿ ಅಯೋಗ್ಯ ಮಗನನ್ನೂ ಮೀರಿಸಿದ ಅನಾದರಣೆ, ಉದಾಸೀನಗಳ ಭಾವವಿತ್ತು.

ನಾನು ವಿಠಲನ ಪಕ್ಷಪಾತಿಯೇ ಆದ ಪಕ್ಷದಲ್ಲಿ, ಯಾವ ಯಾವ ಕ್ಷುತ್ಪಿಪಾಸೆಗಳನ್ನು ಅತಿಮಮತೆಯಿಂದ ತೃಪ್ತಿಪಡಿಸಿಕೊಳ್ಳುತ್ತ ಬಂದಿದ್ದೆನೋ ಅವುಗಳಿಗೆಲ್ಲ ಇನ್ನು ಮೇಲೆ ಮೃತಪ್ರಾಯನಾದಂತೆಯೇ ಆಗುತ್ತಿತ್ತು. ಹಾಗಲ್ಲದೆ, ಕಾಮೇಶ ಗುಪ್ತನ ಪಕ್ಷಪಾತಿಯಾದೆನೋ, ಆಗ ನನಗೆ ಕುತೂಹಲವಿದ್ದ ಸಹಸ್ರಾರು ವಿಷಯಗಳಿಗೂ, ಉನ್ನತಾಕಾಂಕ್ಷೆಗಳಿಗೂ ಮೃತಪ್ರಾಯವಾಗಿ, ಇದ್ದಕ್ಕಿದ್ದಹಾಗೆಯೇ, ಸ್ನೇಹಿತರಿಂದ ಎಂದೆಂದಿಗೂ ತ್ಯಜಿಸಲ್ಪಟ್ಟು — ತಿರಸ್ಕೃತನಾಗಬೇಕು.

ಪರ–ವಿರೋಧಗಳ ತುಲನೆ ಮಾಡಿ ನೋಡಿದರೆ, ಇವೆರಡು ಸಂದರ್ಭಗಳ ನಡುವೆ ಸಮಾನತೆ ಇಲ್ಲದಂತೆ ಕಾಣಬಹುದು. ಹೀಗಿರುವಲ್ಲಿ, ಇನ್ನೂ ಒಂದು ವಿಷಯವನ್ನು ತೂಗಿ ನೋಡುವುದಿತ್ತು. ವಿಠಲನು ವಿಷಯಾಸಕ್ತಿಯನ್ನು ತೊರೆದರೆ, ಬಲವಂತದ ವೈರಾಗ್ಯದ ಜ್ವಾಲೆಯಲ್ಲಿ ಸಹಿಸಲಾಗದ ಸಂಕಟವನ್ನನುಭವಿಸುವಂಥವನಾಗುತ್ತಿದ್ದ. ಆದರೆ ಕಾಮೇಶ ಗುಪ್ತನಾದರೋ, ತಾನು ಕಳೆದುಕೊಂಡಿದ್ದ ಗೌರವ ಪದವಿಯ ಅರಿವು ಕೂಡ ಇಲ್ಲದಂಥವನಾಗುತ್ತಿದ್ದ !

ನನ್ನ ಪರಿಸ್ಥಿತಿ ಇಷ್ಟು ವಿಚಿತ್ರವಾಗಿದ್ದರೂ, ನಾನಿಲ್ಲಿ ಚರ್ಚಿಸಿರುವ ರೀತಿನೀತಿಗಳು, ಮಾನವಕುಲದಷ್ಟೇ ಸಾಧಾರಣವೂ ಪುರಾತನವೂ ಆಗಿವೆ. ಚಾಪಲ್ಯಪೀಡಿತನಾದ ಯಾವ ಭಯಕಂಪಿತ ಪಾಪಿಯ ಜೀವನದಲ್ಲೇ ಆಗಲಿ, ಹೆಚ್ಚು ಕಡಿಮೆ ಇಂತಹುವೇ ಪ್ರೋತ್ಸಾಹಗಳೂ, ಭೀತಿಗಳೂ, ಅವನ ಅದೃಷ್ಟಪರೀಕ್ಷೆಯ ದಾಳಗಳನ್ನೆಸೆದು, ಅವನ ಪಥವನ್ನು ತೀರ್ಮಾನಿಸುತ್ತವೆ. ನನ್ನ ಜೊತೆಮಂದಿಯಲ್ಲಿ ಬಹು ಸಂಖ್ಯಾತರಿಗಾಗುವಂತೆ ನನ್ನ ವಿಷಯದಲ್ಲೂ , ದಾಳಗಳ ತೀರ್ಮಾನ, ನಾನು ನಡೆಸಲು ಸಾಮರ್ಥ್ಯ ಸಾಲದಾಗಿದ್ದ ಉತ್ತಮ ಜೀವನದ ಪರವಾಗಿತ್ತು.

ಹೌದು, ನಾನು ಉತ್ತಮ ಜೀವನವನ್ನೇ ಅಪೇಕ್ಷಿಸಿದೆ. ಗುಪ್ತನ ದೇಹಾವಲಂಬಿಯಾಗಿ ನಾನು ಭೋಗಿಸಿದ್ದ ರಹಸ್ಯ ವಿಷಯಸುಖಗಳಿಗೂ, ಅವನ ಸ್ವಾತಂತ್ರ್ಯ—ಪ್ರಾಯ—ಲಘುಗಮನ–ನರ್ತಿಸುವ ನಾಡಿಗಳ ಬಿಸಿರಕ್ತದ ಹುಮ್ಮಸ್ಸು —ಇವೇ ಮೊದಲಾದವುಗಳಿಗೂ, ಗಟ್ಟಿ ಮನಸ್ಸಿನಿಂದ ಕಟ್ಟಕಡೆಯ ನಮಸ್ಕಾರ ಮಾಡಿ, ಅತೃಪ್ತಿಯಿಂದ ಪೀಡಿತನಾಗಿದ್ದರೂ ಪರವಾಗಿಲ್ಲ—ಸ್ನೇಹಿತರಿಂದ ಪರಿವೃತನಾಗಿ, ಹೃದಯದಲ್ಲಿ ಪ್ರಾಮಾಣಿಕವಾದ ಆಶೋತ್ತರಗಳನ್ನು ಪೋಷಿಸುವ ಹಿರಿಯ ವಯಸ್ಸಿನ ಡಾಕ್ಟರ ಜೀವನವೇ ಇರಲಿ —ಎಂದು ಬಯಸಿದೆ.

ಬಹುಶಃ ನಾನು, ಅರಿವಿಲ್ಲದೆಯೆ–ಏನೋ ಮಾನಸಿಕ ವಿನಾಯಿತಿಯನ್ನಿಟ್ಟುಕೊಂಡೇ —ಈ ತೀರ್ಮಾನಕ್ಕೆ ಬಂದೆನೆಂದು ನನ್ನ ಭಾವನೆ. ಏಕೆಂದರೆ, ನಾನು ಕಾಮಾಟಿಪುರದ ಆ ಮನೆಯನ್ನು ಬಿಡಲೂ ಇಲ್ಲ —ಪ್ರಯೋಗ ಶಾಲೆಯ ಮೇಲಿನ ನನ್ನ ಖಾಸಾ ಕೊಠಡಿಯಲ್ಲಿ ಇನ್ನೂ ಇದ್ದ, ಕಾಮೇಶ ಗುಪ್ತನ ಉಡುಪುಗಳನ್ನು ನಾಶಮಾಡಲೂ ಇಲ್ಲ.

ಅಂತೂ, ಎರಡು ತಿಂಗಳ ಕಾಲ ನನ್ನ ನಿರ್ಧಾರದ ಪಾಲನೆಯಲ್ಲಿ ನಿಷ್ಠನಾಗಿದ್ದೆ. ಎರಡು ತಿಂಗಳ ಕಾಲ–ಹಿಂದೆ ಎಂದೂ ಸಾಧಿಸದ ಮಟ್ಟಿನ ಕಠೋರ ನಿಯಮಗಳ ನಿರ್ಬಂಧದಲ್ಲಿ ಜೀವನವನ್ನು ಸಾಗಿಸಿದೆ. ಈ ಕಾಲದಲ್ಲಿ, ನನಗಾಗಿದ್ದ ವಿಷಯಸುಖಗಳ ನಷ್ಟಕ್ಕೆ, ನನ್ನ ಆತ್ಮಸಾಕ್ಷಿಯ ಮೆಚ್ಚಿಕೆಯ ರೂಪದ ಪರಿಹಾರವನ್ನು ಸಂತೋಷದಿಂದ ಅನುಭವಿಸಿದೆ. ಹೀಗೆಯೇ ಕಾಲ ಕಳೆಯಿತು. ಕೊನೆಗೆ ಅದರ ಪ್ರಭಾವದಿಂದ, ನನ್ನ ಭೀತಿಯು ಹಳೆಯದಾಗಿ, ಕ್ರಮೇಣ ಅಳಿಸಿಹೋಗುತ್ತ ಬಂತು. ನಿತ್ಯವಿಧಿಯಾಗಿದ್ದ ಆತ್ಮದ ಹೊಗಳಿಕೆಗಳು, ಕೇವಲ ಅರ್ಥವಿಲ್ಲದ ಅಭ್ಯಾಸವಾಗತೊಡಗಿದುವು. ಬಿಡುಗಡೆಯಾಗಿ ಹೊರಬಿದ್ದ ಕೂಡಲೆ ಕಾಮೇಶ ಗುಪ್ತನಿಗಾಗುತ್ತಿದ್ದಂತೆ ನನಗೂ ವಿಷಯಾಸಕ್ತಿಗಳ ವೇದನೆ ಪ್ರಬಲವಾಯಿತು. ಕಡಗೆ, ನೈತಿಕದೌರ್ಬಲ್ಯದ ಒಂದು ದುರ್ಮುಹೂರ್ತದಲ್ಲಿ, ನಾನು ಮತ್ತೊಮ್ಮೆ ಪಲ್ಲಟಕಾರಿಯಾದ ಆ ಔಷಧವನ್ನು ಬೆರೆಸಿ ಕುಡಿದುಬಿಟ್ಟೆ.

ಕುಡುಕನಾದವನು ತನ್ನ ಕೆಟ್ಟ ಚಟವನ್ನು ಕುರಿತು, ತನ್ನೊಳಗೆ ತಾನೇ ಚರ್ಚಿಸುವುದಾದರೆ, ಪಾಶವೀಯವಾದ ಅಜ್ಞಾನಾವಸ್ಥೆಯಿಂದ ತನಗೆ ಉಂಟಾಗಬಹುದಾದ ಅಪಾಯಗಳನ್ನು ಕುರಿತು ಅವನು—ಸಾವಿರದಲ್ಲಿ ಒಂದು ಸಲವಾದರೂ—ಯೋಚಿಸುತ್ತಾನೆಂದು ನನಗೆ ತೋರುವುದಿಲ್ಲ. ಅವನಂತೆ ನಾನು ಸಹ, ನನ್ನ ಪರಿಸ್ಥಿತಿಯನ್ನು ಕುರಿತು ಬಹುಕಾಲದಿಂದ ಚಿಂತಿಸಿದ್ದರೂ, ಕಾಮೇಶ ಗುಪ್ತನ ಪ್ರಮುಖ ಲಕ್ಷಣಗಳಾಗಿದ್ದ ಪೂರ್ಣನೈತಿಕ ನಿರ್ಲಿಪ್ತತೆಗೂ, ನೀಚೋದ್ಯಮಗಳಲ್ಲಿ ಪ್ರಜ್ಞಾಹೀನ ಕಾತರತೆಗೂ, ಸಾಕಾದಷ್ಟು ಉತ್ತರ ಕೊಟ್ಟಿರಲಿಲ್ಲ. ಆದರೂ, ನನಗೆ ಶಿಕ್ಷೆಯಾದದ್ದು ಇವುಗಳಿಂದಲೇ. ಬಹುಕಾಲದಿಂದ ಪಂಜರದಲ್ಲಿ ಬಂಧಿತವಾಗಿದ್ದ ನನ್ನ ಪೈಶಾಚಿಕವೃತ್ತಿಯು, ರೂಪ ತಳೆದು ಘರ್ಜಿಸುತ್ತ ಹೊರಕ್ಕೆ ನುಗ್ಗಿತು. ಅಕಾರ್ಯಪ್ರವೃತ್ತಿಯು ಎಂದಿಗಿಂತಲೂ ನಿರ್ಬಂಧರಹಿತವಾಗಿ ಉದ್ರೇಕಗೊಂಡಿದ್ದುದರ ಅರಿವು, ನನಗೆ ಔಷಧವನ್ನು ಪಾನಮಾಡುತ್ತಿದ್ದ ಸಮಯದಲ್ಲೇ ಆಯಿತು.

ನನಗೆ ಬಲಿಯಾದ ಆ ನಿರ್ಭಾಗ್ಯ ವ್ಯಕ್ತಿಯ ಸೌಜನ್ಯಪೂರ್ಣವಾದ ಮಾತುಗಳನ್ನು ಕೇಳಿ ತಾಳ್ಮೆತಪ್ಪಿದ ನನ್ನ ಕೋಪದ ಬಿರುಗಾಳಿಗೆ, ಬಹುಶಃ, ನನ್ನ ದೌರ್ಜನ್ಯದ ಈ ಅವಸರವೇ ಕಾರಣವಾಗಿರಬೇಕೆಂದು ಊಹಿಸುತ್ತೇನೆ. ನೈತಿಕಪ್ರಜ್ಞೆಯಿದ್ದ ಯಾವ ಮನುಷ್ಯನೇ ಆಗಲಿ, ಅಷ್ಟು ಅಲ್ಪಕಾರಣಕ್ಕಾಗಿ ಅಂತಹ ಘೋರಕೃತ್ಯದ ಅಪರಾಧಿಯಾಗಲು ಸಾಧ್ಯವಿಲ್ಲವೆಂದು– ಭಗವಂತನ ಸಾಕ್ಷಿಯಾಗಿಯಾದರೂ—ನಾನು ಹೇಳುತ್ತೇನೆ. ಆ ಕೆಲಸವನ್ನು ಮಾಡಿದ ಸಮಯದಲ್ಲಿ ನಾನು, ಕೋಪಗೊಂಡ ಒಂದು ಮಗು ಆಟದ ಸಾಮಾನನ್ನು ಒಡೆದು ಹಾಕುವಾಗ ತೋರಿಸುವ ವಿವೇಕಕ್ಕಿಂತ ಹೆಚ್ಚಿನ ವಿವೇಕವನ್ನೇನೂ ತೋರಿಸಲಿಲ್ಲ.

ನಮ್ಮಲ್ಲಿ ತೀರ ಕೆಟ್ಟವರಾದವರೂ, ವಿಲೋಭನಗಳ ನಡುವೆ ತಕ್ಕಮಟ್ಟಿನ ಸ್ಥೈರ್ಯದಿಂದ ನಡೆಯಲು ಸಾಧ್ಯವಾಗುವಂತೆ, ಕೆಲವು ಸಮತೂಗಿಸುವ ಸಹಜಶಕ್ತಿಗಳಿರುತ್ತವೆ. ಆದರೆ ನಾನು ಮಾತ್ರ, ಇಷ್ಟಪೂರ್ವಕವಾಗಿಯೇ, ಅವುಗಳೆಲ್ಲದರಿಂದ ಪೂರ್ತಿ ವಿಮುಕ್ತನಾಗಿದ್ದೆ. ಆದಕಾರಣ, ನನ್ನ ವಿಷಯದಲ್ಲಿ, ಚಾಪಲ್ಯ ಎಷ್ಟೇ ಅಲ್ಪವಾದದ್ದಾದರೂ ನಾನು ಅದಕ್ಕೆ ಸೋಲುವುದು ಸಿದ್ಧ —ಎಂದು ಖಂಡಿತವಾಗಿತ್ತು.

ಆ ಮನುಷ್ಯನನ್ನು ಕಂಡ ಕ್ಷಣದಲ್ಲಿ, ನನ್ನ ದುರುಳ ಸ್ವಭಾವವು ನರಕ ಜ್ವಾಲೆಯಂತೆ ಎದ್ದು ಭುಗಿಲೆಂದು ಕುಣಿಯತೊಡಗಿತ್ತು. ಸ್ವಲ್ಪವೂ ಪ್ರತಿಭಟಿಸದೆ ಇದ್ದ ಆತನ ದೇಹವನ್ನು ಉನ್ಮತ್ತ ಕೇಳಿಯಿಂದ ಚೆಚ್ಚುತ್ತ, ಏಟು ಏಟಿಗೂ ಅತುಳಾನಂದವನ್ನು ಸವಿದೆ. ಹೊಡೆದು ಹೊಡೆದು ಕೈ ಸೋತು ಬಂದಾಗ, ನನ್ನ ಉತ್ಕಟಾವೇಶದ ನಡುವೆ–ಹಟಾತ್ತನೆ, ನನ್ನ ಹೃದಯವು ಭಯದ ಚಳಿಯಿಂದ ನಡುಗಿತು. ಅದುವರೆಗೂ ನನಗೆ ಕವಿದಿದ್ದ ಮಂಜು ಚದುರಿತು. ನನ್ನ ಪ್ರಾಣವು ಮುಟ್ಟುಗೋಲಾಗಿದ್ದುದನ್ನು ಕಂಡೆ. ಕೂಡಲೆ, ಏಕಕಾಲದಲ್ಲಿ ನಡುಗುತ್ತಲೂ, ಹೆಮ್ಮೆಪಡುತ್ತಲೂ, ಅಕೃತ್ಯ ನಡೆಸಿದ ಸ್ಥಳದಿಂದ ಪಲಾಯನ ಮಾಡಿದೆ. ನನ್ನ ಪಾಪತೃಷೆಯು ತೃಪ್ತವಾಗಿ ಉದ್ದೀಪ್ತವಾಗಿತ್ತು. ನನ್ನ ಜೀವನಾಕಾಂಕ್ಷೆಯು ಪರಾಕಾಷ್ಠತೆಯನ್ನು ಮುಟ್ಟಿತ್ತು.

ಆ ಸ್ಥಳದಿಂದ ನೇರವಾಗಿ ನನ್ನ ಕಾಮಾಟಿಪುರದ ಮನೆಗೆ ಹೋದೆ. ಅಲ್ಲಿ, ನನ್ನ ಸುರಕ್ಷಿತೆ ಪೂರ್ಣವಾಗಿರಲೆಂದು, ಅನುಮಾನಾಸ್ಪದವಾದ ಕಾಗದ ಪತ್ರಗಳನ್ನೆಲ್ಲ ಸುಟ್ಟು ನಾಶಮಾಡಿದೆ. ಅನಂತರ, ಅಲ್ಲಿಂದ ಹೊರಟು, ಇನ್ನೂ ಉರಿಯುತ್ತಿದ್ದ ಬೀದಿಯ ದೀಪಗಳ ಬೆಳಕಿನಲ್ಲಿ , ಬೀದಿಗಳ ಮೇಲೆ ಬೀದಿಗಳನ್ನು ದಾಟಿ ನಡೆದೆ. ಮಿಶ್ರಿತ ಚಿತ್ತೋನ್ಮಾದದಲ್ಲಿ ಒಂದು ಕಡೆ, ಘೋರ ಪಾತಕವೊಂದನ್ನು ನಡೆಸಿದ್ದಕ್ಕೆ ಹೆಮ್ಮೆಪಡುತ್ತ, ಇನ್ನೊಂದು ಕಡೆ ಉಲ್ಲಾಸ ಮನಸ್ಸಿನಿಂದ, ಮುಂದೆ ಇತರ ಅಕೃತ್ಯಗಳನ್ನು ಯೋಚಿಸುತ್ತ, ಮಧ್ಯೆ ಮಧ್ಯೆ, ಸೇಡು

ತೀರಿಸಿಕೊಳ್ಳಲು ಯಾರಾದರೂ ಬೆನ್ನಟ್ಟಿ ಬರುತ್ತಿದ್ದಾರೆಯೋ – ಎಂದು ಹೆಜ್ಜೆ ಸಪ್ಪಳಕ್ಕೆ ಆಲಿಸುತ್ತ–ಬೇಗ ಬೇಗ ನಡೆದೆ.

ಕೊಠಡಿಗೆ ಬಂದು, ಔಷಧವನ್ನು ಬೆರೆಸಿ ಕುಡಿಯುತ್ತಿದ್ದಾಗ ಕಾಮೇಶ ಗುಪ್ತನ ತುಟಿಗಳ ಮೇಲೆ ಉಲ್ಲಾಸದ ಗೀತೆಯೊಂದು ಉರುಳುತ್ತಿತ್ತು. ಕುಡಿಯುತ್ತ ಅವನು, ತನ್ನಿಂದ ಮೃತನಾದ ವ್ಯಕ್ತಿಯ ಆತ್ಮಕ್ಕೆ ಸೌಹಾರ್ದದಿಂದ ಸ್ವಸ್ತಿ ವಚನವನ್ನಿತ್ತ ರೂಪಪಲ್ಲಟದ ಯಾತನೆಗಳು ಇನ್ನೂ ನಿಂತಿರಲಿಲ್ಲ. ಅಷ್ಟರಲ್ಲೇ, ಕೃತಜ್ಞತೆಯ ಹಾಗೂ ಪಶ್ಚಾತ್ತಾಪದ ಕಣ್ಣೀರು ಸುರಿಸುತ್ತ ಹರಿವಿಠಲ, ಮಂಡಿಯೂರಿ ಭಗವಂತನಿಗೆ ಜೋಡಿಸಿದ ಕೈಗಳನ್ನೆತ್ತಿದ್ದ.

ಆಪಾದಮಸ್ತಕವಾಗಿ ಮುಸುಕಿಕೊಂಡಿದ್ದ ಸ್ವಾರ್ಥಮಮತೆಯ ತೆರೆಯು ಹರಿದು ಬಿದ್ದಿತು. ನನ್ನ ಸಮಗ್ರ ಬಾಳಿನ ದರ್ಶನವಾಯಿತು. ಬಾಲ್ಯದಲ್ಲಿ ತಂದೆಯವರ ಕೈ ಹಿಡಿದು ಓಡಾಡುತ್ತಿದ್ದ ದಿನಗಳಿಂದ ಹಿಡಿದು, ಕಠಿಣವಾದ ನಿಸ್ವಾರ್ಥ ವೃತ್ತಿಜೀವನದ ಮೂಲಕ ಹರಿಯುತ್ತಿದ್ದ ನನ್ನ ಮಾನಸಿಕ ದೃಷ್ಟಿಗೆ, ಕೊನೆಯಲ್ಲಿ —ಎಷ್ಟು ಸಲ ಪ್ರಯತ್ನಪಟ್ಟರೂ, ಪುನಃ ಪುನಃ ಅದೇ, ಶುದ್ಧ ಭ್ರಮೆಯೆಂದು ತೋರುತ್ತಿದ್ದ—ಆ ರಾತ್ರಿಯ ಆ ಅನಿಷ್ಟ ಭಯಾನಕ ಘಟನೆಯೇ ಕಾಣುತ್ತಿತ್ತು.

ಆಗ ನಾನು ಗಟ್ಟಿಯಾಗಿ ಕಿರಿಚಿಕೊಳ್ಳಬಹುದಾಗಿತ್ತು ! ನನ್ನ ಸ್ಮೃತಿಯು ನನ್ನ ಮೇಲೆ ಹೇರುತ್ತಿದ್ದ ಭಯಂಕರ ಶಬ್ದಗಳನ್ನೂ, ವಿಕೃತ ರೂಪಗಳನ್ನೂ, ಕಣ್ಣೀರಿನಿಂದಲೂ ಪ್ರಾರ್ಥನೆಗಳಿಂದಲೂ ದಮನಮಾಡಲು ಪ್ರಯತ್ನಿಸಿದೆ. ಆದರೂ, ನನ್ನ ಪ್ರಾರ್ಥನೆಗಳ ನಡುವೆ ನನ್ನ ಅನ್ಯಾಯದ ವಿಕಾರ ರೂಪವು ನನ್ನ ಆತ್ಮವನ್ನು ದುರುಗುಟ್ಟಿ ನೋಡುತ್ತಿತ್ತು.

ಈ ಪಶ್ಚಾತ್ತಾಪದ ತೀವ್ರತೆಯು ಕ್ಷೀಣಿಸುತ್ತ ಹೋದ ಹಾಗೆ, ಅದರ ಹಿಂದೆಯೇ ಆನಂದಾನುಭವವಾಗತೊಡಗಿತು. ನನ್ನ ನಡತೆಯ ಸಮಸ್ಯೆಗೆ ಪರಿಹಾರ ದೊರೆತಿತ್ತು. ಆ ಘೋರರಾತ್ರಿಯ ತರುವಾಯ, ಕಾಮೇಶ ಗುಪ್ತನ ಬಾಳು ಅಸಾಧ್ಯವಾದ ವಿಷಯವಾಗಿತ್ತು. ನನಗೆ ಇಷ್ಟವಾಗಿರಲಿ–ಅನಿಷ್ಟವಾಗಿರಲಿ, ಅಂತು—ಈಗ ನಾನು, ನನ್ನ ಬಾಳಿನ ಉತ್ತಮ ಪಕ್ಷಕ್ಕೆ ಒಳಗಾಗಿದ್ದೆ. ಆಹಾ ! ಇದನ್ನು ಯೋಚಿಸುವುದೂ ನನಗೆ ಎಷ್ಟು ಆನಂದಕರವಾಗಿತ್ತು! ಅದೆಷ್ಟು ಹೃತ್ಪೂರ್ವಕವಾದ ದೈನ್ಯತೆಯಿಂದ ಸಹಜ ಬಾಳಿನ ನಿರ್ಬಂಧಗಳನ್ನು ಒಪ್ಪಿಕೊಂಡು ಅಪ್ಪಿದೆ ! ಅದೆಂತಹ ಶ್ರದ್ಧಾಪೂರ್ಣ ತ್ಯಾಗ ಬುದ್ಧಿಯಿಂದ—ನಾನು ಎಷ್ಟೋ ಬಾರಿ ಹೋಗಿಬರಲು ಬಳಸಿದ್ದ ಆ ಬಾಗಿಲಿಗೆ ಬೀಗವನ್ನು ಹಾಕಿ, ಬೀಗದ ಕೈಯನ್ನು ಕಾಲಿನಿಂದ ತುಳಿದು ಮುರಿದೆ !

ನಾನು ನಡೆಸಿದ್ದ ಕೊಲೆಯನ್ನು ನೋಡಿದ ಸಾಕ್ಷಿಗಳಿದ್ದರೆಂದೂ, ಗುಪ್ತನ ಅಪರಾಧವು ಲೋಕಕ್ಕೆಲ್ಲಾ ಪ್ರಕಟವಾಗಿದೆಯೆಂದೂ, ಕೊಲೆಯಾದ ವ್ಯಕ್ತಿಯು ಸಮಾಜದ ಗಣ್ಯಪುರುಷನಾಗಿದ್ದನೆಂದೂ—ಮರುದಿನವೇ ಸುದ್ದಿ ಬಂತು. ಕೃತ್ಯವು ಘೋರವಾದ ಅಪರಾಧವಷ್ಟೇ ಅಲ್ಲ, ಅತಿ ವಿಷಾದಕರವಾದ ವಿವೇಕಶೂನ್ಯ ಕೃತ್ಯವೂ ಆಗಿತ್ತೆಂದು ಜನರು ಆಡಿಕೊಳ್ಳುತ್ತಿದ್ದರು. ಇದನ್ನು ತಿಳಿದು ನನಗೆ ಸಂತೋಷವಾಯಿತು. ಗಲ್ಲಿನ ಭಯವು ಈ ರೀತಿ ನನ್ನ ಉತ್ತಮ ಪ್ರವೃತ್ತಿಗಳಿಗೆ ರಕ್ಷಣೆಯಾಗಿ ದೊರೆತುದು ಒಳ್ಳೆಯದೇ ಆಯಿತೆಂದು ಸಂತೋಷಪಟ್ಟೆ. ಈಗ ವಿಠಲ ನನಗೆ ಆಶ್ರಯಕೊಡುವ ನಗರವಾಗಿದ್ದ. ಕಾಮೇಶ ಗುಪ್ತನು ಪುನಃ ಏನಾದರೂ, ಒಂದು ಕ್ಷಣದ ಮಟ್ಟಿಗೆ ಈಚೆಗೆ ಇಣಿಕಿದನೆಂದರೆ ಸಾಕು, ಸರ್ಕಾರ ಹಾಗಿರಲಿ–ಜನರೇ ಅವನ ಮೇಲೆ ಕೈ ಮಾಡಿ ಕೊಲ್ಲುವುದರಲ್ಲಿ ಸಂದೇಹವಿರಲಿಲ್ಲ.

ನನ್ನ ಹಿಂದಿನ ಅನೇಕಾನೇಕ ಅಕೃತ್ಯಗಳಿಗೆಲ್ಲ ಪರಿಹಾರ ರೂಪವಾಗಿರುವಂತೆ, ನನ್ನ ಮುಂದಿನ ನಡತೆಯನ್ನು ರೂಪಿಸಿಕೊಳ್ಳಲು ದೃಢ ನಿಶ್ಚಯಮಾಡಿದೆ. ನನ್ನ ನಿಶ್ಚಯ ಸ್ವಲ್ಪಮಟ್ಟಿಗೆ ಒಳ್ಳೆಯ ಫಲ ಕೊಟ್ಟಿತೆಂದು ಪ್ರಮಾಣ ಮಾಡಿ ಹೇಳಬಲ್ಲೆ. ಹೋದ ವರ್ಷದ ಕಡೆಯ ತಿಂಗಳುಗಳಲ್ಲಿ ಜನರ ರೋಗರುಜಿನಗಳ ಸಂಕಟವನ್ನು ನಿವಾರಿಸಲು ನಾನು ಎಷ್ಟು ಶ್ರದ್ಧೆಯಿಂದ ದುಡಿದೆನೆಂಬುದನ್ನು ನೀನೇ ಬಲ್ಲೆ. ನನ್ನಿಂದ ಇತರರಿಗೆ ಹೆಚ್ಚಾಗಿಯೇ ಸಹಾಯವಾಯಿತು. ಆ ದಿನಗಳು ನನಗೆ ಶಾಂತಿಯುತವಾಗಿದ್ದವು. ನನಗಂತೂ ಆ ಕಾಲ ಸುಖವಾಗಿಯೇ ಇತ್ತು. ಇವೆಲ್ಲ ನಿನಗೆ ತಿಳಿದ ವಿಷಯಗಳೇ ಆಗಿವೆ. ಸತ್ಯವಾಗಿ ಹೇಳುವುದಾದರೆ, ಈ ಉಪಯುಕ್ತವೂ ಸಾಧುವೂ ಆದ ಜೀವನದಿಂದ ಬೇಸರಗೊಂಡೆ ಎನ್ನಲಾರೆ. ಅದರ ಬದಲು, ದಿನಕಳೆದ ಹಾಗೆ, ನನಗೆ ಈ ಜೀವನದಿಂದ ದೊರಕುತ್ತಿದ್ದ ಸುಖ–ಸಂತೋಷಗಳು ಹೆಚ್ಚು ಹೆಚ್ಚು ಪೂರ್ಣವಾಗಿರುತ್ತಿದ್ದವು. ಆದರೂ, ನನ್ನ ಉದ್ದೇಶದ ದ್ವಂದ್ವತೆ, ಶಾಪದಂತೆ ನನ್ನನ್ನು ಕಾಡುತ್ತಲೆ ಇತ್ತು. ನನ್ನ ಪಶ್ಚಾತ್ತಾಪದ ಮೊದಲ ಕಾವು ಇಳಿಯಿತು. ಕೂಡಲೆ, ಬಹುಕಾಲ ಕೀಳು ತೃಪ್ತಿಯ ಸುಖವನ್ನುಂಡು ರುಚಿ ಕಂಡಿದ್ದು, ಇತ್ತೀಚೆಗೆ ಸಂಕೋಲೆಯೊಳಗಿದ್ದ —ನನ್ನ ನೀಚ ಪ್ರವೃತ್ತಿಯು, ಬಹಿರ್ಮುಖವಾಗಲು ಗುರುಗುಟ್ಟತೊಡಗಿತು. ಅಂದರೆ, ಇದರ ಅರ್ಥ–ನಾನು ಗುಪ್ತನ ಪುನರುತ್ಥಾನದ ಕನಸು ಕಾಣುತ್ತಿದ್ದೆನೆಂದಲ್ಲ–ಸರ್ವಥಾ ಅಲ್ಲ; ಅದರ ಕೇವಲ ಯೋಚನೆಯೇ ನನ್ನನ್ನು ಉತ್ಕಟ ಭಯಕ್ಕೀಡು ಮಾಡುವುದಾಗಿತ್ತು. ಇಲ್ಲ ನನ್ನ ಸ್ವಂತ ರೂಪದಲ್ಲೇ ನನ್ನ ಆತ್ಮಸಾಕ್ಷಿಯೊಡನೆ ಹುಡುಗಾಟವಾಡುವ

ಚಾಪಲ್ಯಕ್ಕೆ ಸಿಕ್ಕಿಬಿದ್ದೆ. ಈ ಚಾಪಲ್ಯದ ಆಕ್ರಮಣದ ಮುಂದೆ, ನಾನು ಕಡೆಗೂ ಪತನವಾದದ್ದು ಒಬ್ಬ ಸಾಮಾನ್ಯ ರಹಸ್ಯ ಪಾಪಿಯಂತೆ.

ಎಲ್ಲಕ್ಕೂ ಅಂತ್ಯ —ಎನ್ನು ವುದು ಬಂದೇ ಬರುತ್ತದೆ. ಬೃಹತ್ತಮವಾದ ಪಾತ್ರೆಯೂ ಕಾಲಕ್ರಮದಲ್ಲಿ ತುಂಬಿಬರಲೇಬೇಕು —ಅಲ್ಲವೇ ? ನಾನು ನನ್ನ ದುರುಳತನಕ್ಕೆ ತೋರಿಸಿದ ಈ ಕ್ಷಣಿಕ ಅನುಗ್ರಹವೇ, ಅಂತ್ಯದಲ್ಲಿ, ನನ್ನ ಸಮತೂಕವನ್ನು ನಾಶಮಾಡಿತು. ನನಗೆ ಭಯವಾಗಲಿಲ್ಲ. ನನ್ನ ಸಂಶೋಧನೆಯ ಪೂರ್ವದ ದಿನಗಳಿಗೆ ಮರಳಿದಂತಾಗಿ, ನನ್ನ ಪತನ ಸ್ವಾಭಾವಿಕವಾಗಿ ಕಂಡಿತು.

ಅಂದು, ಜನವರಿ ತಿಂಗಳು ಆದಿಭಾಗದಲ್ಲಿ ಒಂದು ಬಲು ಸೊಗಸಾದ ಶುಭ್ರವಾದ ದಿನವಾಗಿತ್ತು. ಅದೇತಾನೆ ಉದಯವಾಗಿದ್ದ ಸೂರ್ಯನ ಎಳೆ ಬಿಸಿಲ ಕಿರಣಗಳಲ್ಲಿ —ಆನಂದ ಬಾಗ್–ನ ಉದ್ಯಾನದ ಹಸಿರು ಹುಲ್ಲಿನ ಮೇಲೆ ಥಳಥಳಸುತ್ತಿದ್ದ ಹಿಮದ ಕಣಗಳು, ಚಿತ್ತಾಕರ್ಷಕವಾಗಿದ್ದವು. ಹಕ್ಕಿಗಳ ಕಲರವದಿಂದಲೂ, ಪುಷ್ಪಗಳ ನಿಶ್ವಾಸದಿಂದಲೂ, ಉದ್ಯಾನದ ವಾಯುಮಂಡಲವು ತುಂಬಿತುಳುಕುತ್ತಿತ್ತು.

ಆ ಸಮಯದಲ್ಲಿ ನಾನು ಉದ್ಯಾನದ ಒಂದು ಕಲ್ಲು ಬೆಂಚಿನ ಮೇಲೆ ಕುಳಿತು ಬಿಸಿಲು ಕಾಯಿಸಿಕೊಳ್ಳುತ್ತಿದ್ದೆ. ನನ್ನಲ್ಲಡಗಿದ್ದ ಪಶುವು, ಸವಿನೆನಪಿನ ಮೆಲುಕು ಹಾಕುತ್ತಿತ್ತು. ಸ್ವಲ್ಪಮಟ್ಟಿಗೆ ತೂಕಡಿಸುತ್ತಿದ್ದ ನನ್ನ ಆತ್ಮಸಾಕ್ಷಿಯು, ಕಾರ್ಯಾನಂತರದ ಪಶ್ಚಾತ್ತಾಪದ ಭರವಸೆಯನ್ನು ನೀಡುತ್ತಿತ್ತು; ಆದರೆ, ಇನ್ನೂ ಕಾರ್ಯೋನ್ಮುಖವಾಗಿರಲಿಲ್ಲ. ಇಷ್ಟರ ಮೇಲೆ, ನಾನೂ ನನ್ನ ನೆರೆಯವರಂತೆಯೇ ಇದ್ದೆನಲ್ಲವೇ ? —ಎಂದು ಮನಸ್ಸಿನಲ್ಲೇ ಅಂದುಕೊಂಡೆ. ಇತರ ಮಂದಿಯೊಡನೆ ನನ್ನನ್ನು ಹೋಲಿಸಿಕೊಂಡು, ಅವರ ಸೋಮಾರಿತನ–ಅಲಕ್ಷ್ಯ–ಕ್ರೌರ್ಯಗಳೊಡನೆ, ಕ್ರಿಯಾಪೂರ್ಣವಾದ ನನ್ನ ಸದ್ಭಾವವನ್ನು ತುಲನೆ ಮಾಡಿ ನೋಡುತ್ತ–ಮೆಚ್ಚಿಕೆಯಿಂದ ತಲೆದೂಗುತ್ತ , ಮುಗುಳುನಗೆ ನಕ್ಕೆ.

ಈ ಅಹಂಕಾರಮಯವಾದ ಯೋಚನೆಯಲ್ಲಿ ನಾನು ತೊಡಗಿದ್ದ ಕ್ಷಣದಲ್ಲೇ, ನನ್ನಲ್ಲಿ, ಇದ್ದಕ್ಕಿದ್ದಹಾಗೇ ಏನೋ ತಳಮಳ ತಲೆದೋರಿತು. ಸಹಿಸಲಸಾಧ್ಯವಾದ ಓಕರಿಕೆಯ ಸಂಕಟವುಂಟಾಯಿತು. ಜೊತೆಗೇ, ದೇಹಾದ್ಯಂತ ಮಾರಕಕಂಪನ ವ್ಯಾಪಿಸಿತು. ಅನಂತರ, ಕ್ರಮೇಣ, ಈ ಲಕ್ಷಣಗಳೆಲ್ಲ ನನ್ನನ್ನು ಮೂರ್ಛಾವಸ್ಥೆಯಲ್ಲಿ ಬಿಟ್ಟು ಮಾಯವಾದವು. ಆಮೇಲೆ, ಮೂರ್ಛೆ ತಿಳಿಯುತ್ತ ಬಂದ ಹಾಗೆ, ನನ್ನ ಯೋಚನೆಗಳ ಹದವೇ ಮಾರ್ಪಟ್ಟಂತೆ ಭಾಸವಾಯಿತು. ಈ ಮಾರ್ಪಾಟಿನ ಫಲವಾಗಿ, ನನ್ನಲ್ಲಿ ಎಂದಿಗಿಂತ ಹೆಚ್ಚಾದ ಕೆಚ್ಚೂ, ಅಪಾಯದ ದುರ್ಲಕ್ಷ್ಯವೂ, ಋಣ–ಹಂಗು–ದಾಕ್ಷಿಣ್ಯಗಳ ನಿರ್ಬಂಧಗಳು ನಾಶವಾದುದರ ಭಾವವೂ ತಲೆದೋರಿದವು. ನನ್ನ ಅಂಗಾಂಗಗಳ ಕಡೆ ಕಣ್ಣು ಹೊರಳಿಸಿ ನೋಡಿಕೊಂಡೆ. ನನ್ನ ಉಡುಪು, ಕುಗ್ಗಿದ ದೇಹದ ಮೇಲೆ, ಜಳ್ಳಾಗಿ ಆಕಾರಗೆಟ್ಟು ಕಾಣುತ್ತಿತ್ತು ! ಮೊಣಕಾಲ ಮೇಲೆ ಇಟ್ಟುಕೊಂಡಿದ್ದ ನನ್ನ ಕೈ, ಹುರಿಗೊಂಡು, ಗಿಣ್ಣುಗಳು ಗಂಟುಗಂಟಾಗಿ, ಕೂದಲಿಂದ ತುಂಬಿತ್ತು ! ನಾನು ಮತ್ತೊಮ್ಮೆ ಕಾಮೇಶ ಗುಪ್ತನಾಗಿಬಿಟ್ಟಿದ್ದೆ !

ಒಂದು ಕ್ಷಣಕ್ಕೆ ಮುಂಚೆ ನಾನು, ಜನರ ಮನ್ನಣೆಗೆ ಪಾತ್ರನಾದ —ಸ್ಥಿತಿವಂತನಾದ —ಜನಪ್ರಿಯನಾದ ವ್ಯಕ್ತಿಯಾಗಿದ್ದು, ಸುರಕ್ಷಿತನಾಗಿದ್ದೆ. ಮನೆಗೆ ಹೋದೊಡನೆಯೇ ಅಲ್ಲಿ ನನಗೆ ಉಪಾಹಾರ ಕಾದಿರುತ್ತಿತ್ತು. ಆದರೆ, ಈಗ ನಾನು, ಇಡೀ ಮಾನವನಕುಲದ ಏಕಮಾತ್ರ ಬೇಟೆಯ ಮೃಗವಾಗಿ, ಅವರಿಂದ ಬೆನ್ನಟ್ಟಲ್ಪಟ್ಟ, ನೆಲೆಯಿಲ್ಲದ ನಿರ್ಭಾಗ್ಯನಾಗಿದ್ದೆ ! –ಎಲ್ಲರಿಗೂ ತಿಳಿದ ಕೊಲೆಪಾತಕನಾಗಿ, ಗಲ್ಲಿನ ಬಾಯ ತುತ್ತಾಗಿದ್ದೆ !

ನನ್ನ ವಿವೇಕ ಹಿಂದು ಮುಂದು ನೋಡಿತು —ಆದರೆ, ಪೂರ್ಣವಾಗಿ ನನ್ನನ್ನು ತೊರೆಯಲಿಲ್ಲ. ನನ್ನ ದ್ವಿತೀಯ ಪಾತ್ರದಲ್ಲಿ , ಬುದ್ಧಿ ಬಹು ಹರಿತವಾಗಿರುತ್ತಿತ್ತೆಂದೂ, ನನ್ನ ಶಕ್ತಿಗಳು ಹಿಗ್ಗಿ ಬಿಗಿತುಕೊಳ್ಳುತ್ತಿದ್ದವೆಂದೂ, ಅನೇಕ ಸಲ ಅನುಭವದಿಂದ ಕಂಡಿದ್ದೆ. ಆದಕಾರಣವೇ ಬಹುಶಃ ವಿಠಲ ಸೋತು ಬಲಿಯಾಗಿ ಬೀಳುತ್ತಿದ್ದ ಆ ಸನ್ನಿವೇಶದಲ್ಲಿ , ಆ ಕ್ಷಣದ ಪ್ರಾಮುಖ್ಯತೆಗೆ ತಕ್ಕ ಸಮಯಸ್ಫೂರ್ತಿಯಿಂದ, ಎದ್ದೆ.

ನನ್ನ ಔಷಧ ದ್ರವ್ಯಗಳು, ನನ್ನ ಚೌಕದ ಮನೆಯ ಸ್ವಂತ ಕೊಠಡಿಯಲ್ಲಿದ್ದ ಬೀರುಗಳ ಪೈಕಿ ಒಂದರಲ್ಲಿತ್ತು. ನಾನು ಅವುಗಳನ್ನು ತಲುಪುವ ಬಗೆ ಹೇಗೆ ? —ಎಂಬುದೇ, ನನ್ನ ಮುಂದಿದ್ದ ದೊಡ್ಡ ಪ್ರಶ್ನೆಯಾಗಿತ್ತು.

ನನ್ನ ತಲೆಯ ಪಕ್ಕಗಳನ್ನು ಎರಡು ಕೈಗಳಿಂದಲೂ ಒತ್ತಿಕೊಳ್ಳುತ್ತ , ಈ ಸಮಸ್ಯೆಯನ್ನು ಬಿಡಿಸಲೆತ್ನಿಸಿದೆ. ಪ್ರಯೋಗಶಾಲೆಯ ಹಿಂದಿನ ಬಾಗಿಲನ್ನು ಒಳಗಡೆಯಿಂದ ಮುಚ್ಚಿ , ಬೀಗ ಹಾಕಿ, ಬೀಗದ ಕೈಯನ್ನು ಮುರಿದುಹಾಕಿಬಿಟ್ಟಿದ್ದೆ. ನಾನು ಮುಂದುಗಡೆ ಮನೆಯಿಂದ ಪ್ರವೇಶಿಸಲೆತ್ನಿಸಿದರೆ, ನನ್ನ ಸ್ವಂತ ಸೇವಕರೇ ನನ್ನನ್ನು ಗಲ್ಲಿಗೆ ಕಳಿಸುವುದರಲ್ಲಿ ಸಂದೇಹವಿರಲಿಲ್ಲ.

ನಾನು ಈ ಇಕ್ಕಟ್ಟಿನಲ್ಲಿದ್ದಾಗ, ಬೇರೊಬ್ಬರ ಕೈಯಿಂದ ನನ್ನ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದು ಹೊಳೆಯಿತು. ಈ ಯೋಚನೆಯ ಹಿಂದೆಯೇ, ಜಗನ್ನಾಥನ ನೆನಪೂ ಆಯಿತು. ಸರಿ–ಆದರೆ, ನಾನು ಅವನನ್ನು ಕಾಣುವ ಬಗೆ ಹೇಗೆ ? —ಒಪ್ಪಿಸುವ ಬಗೆ ಹೇಗೆ ? ಒಂದು ವೇಳೆ ನಾನು ಬೀದಿಗಳಲ್ಲೇ ಸೆರೆಸಿಕ್ಕುವುದನ್ನು ತಪ್ಪಿಸಿಕೊಳ್ಳುವೆನೆಂದು ಭಾವಿಸಿದರೂ, ಅವನ ಬಳಿ ನಾನು ಹೋಗುವುದು ಹೇಗೆ ? ನಾನಾದರೋ, ಅಪರಿಚಿತನಾದ —ಅಸಹ್ಯ ರೂಪಿಯಾದ ಆಗಂತುಕ ! ಇಂಥವನು, ಜಗನ್ನಾಥನಂತಹ ಪ್ರಖ್ಯಾತ ವೈದ್ಯನನ್ನು, ಅವನ ಸಹೋದ್ಯೋಗಿಯಾದ ಡಾಕ್ಟರ್ ವಿಠಲನ ಮನೆಯನ್ನು ಪ್ರವೇಶಿಸಿ–ಆತನ ಅಂತರಂಗ ಕೊಠಡಿಯಿಂದ ಕೆಲವು ವಸ್ತುಗಳನ್ನು ಕದ್ದು ತರುವಂತೆ, ಪ್ರೇರೇಪಿಸಿ ಒತ್ತಾಯ ಪಡಿಸುವುದಾದರೂ ಹೇಗೆ ?

ಈ ಪ್ರಶ್ನಾವಳಿಯೊಡನೆ ನಾನು ಹೆಣಗುತ್ತಿದ್ದಾಗ, ಒಂದು ವಿಷಯ ನನಗೆ ತಟ್ಟನೆ ನೆನಪಾಯಿತು. ನನ್ನ ಪ್ರಥಮ ಪಾತ್ರದ ಒಂದು ವೈಶಿಷ್ಟ್ಯವು ನನ್ನ ದ್ವಿತೀಯ ಪಾತ್ರಕ್ಕೂ ಉಳಿದಿತ್ತು ! ಅಂದರೆ, ನನ್ನ ದ್ವಿತೀಯ ಪಾತ್ರದಲ್ಲೂ, ನನ್ನ ಪ್ರಥಮ ಪಾತ್ರದ ಕೈ ಅಕ್ಷರಗಳನ್ನೇ ಬರೆಯಬಲ್ಲವನಾಗಿದ್ದೆ ! ಈ ನೆನಪು, ಕಿಡಿಯಂತೆ ನನ್ನ ಆಸೆಯ ಜ್ವಾಲೆಯನ್ನು ಎಬ್ಬಿಸಿ, ನನ್ನ ಮುಂದಿನ ಮಾರ್ಗವನ್ನು ಆಮೂಲಾಗ್ರವಾಗಿ ಬೆಳಗಿತು.

ಅನಂತರ ನಾನು ನನ್ನ ಉಡುಪನ್ನು ಸಾಧ್ಯವಾದಷ್ಟು ಸರಿಪಡಿಸಿಕೊಂಡು, ಉದ್ಯಾನವನದ ಮೂಲಕ ಹಾದು ಹೋಗುತ್ತಿದ್ದ ಒಂದು ಖಾಲಿ ಟ್ಯಾಕ್ಸಿಯನ್ನು ನಿಲ್ಲಿಸಿ, ಅದರಲ್ಲಿ ಕುಳಿತು, ನಾನಾರಾಯನ ಬೀದಿಯಲ್ಲಿ ನನಗೆ ನೆನಪಿದ್ದ ಒಂದು ಹೋಟಲಿಗೆ ಹೋಗುವಂತೆ ಡ್ರೈವರಿಗೆ ತಿಳಿಸಿದೆ.

ನಾನು ಧರಿಸಿದ್ದ ಉಡುಪಿನ ಮರೆಯಲ್ಲಿ ನನ್ನ ಬಾಳು ಎಷ್ಟೇ ಶೋಚನೀಯಾ ವಸ್ಥೆಯಲ್ಲಿದ್ದರೂ, ಹೊರ ನೋಟಕ್ಕೆ ನನ್ನ ವೇಷವು ತಕ್ಕಮಟ್ಟಿಗೆ ಹಾಸ್ಯಾಸ್ಪದವಾಗಿಯೇ ಇತ್ತು. ಆದ್ದರಿಂದ, ನನ್ನ ಸ್ವರೂಪವನ್ನು ಕಂಡು ಡ್ರೈವರಿಗೆ ನಗುವನ್ನು ತಡೆಯಲಾಗಲಿಲ್ಲ. ಅದನ್ನು ಕಂಡು ನನಗೆ ಯಮಕೋಪ ಬಂದು, ಅವನ ಕಡೆ ಕಟಕಟನೆ ಹಲ್ಲುಗಳನ್ನು ಕಡಿದೆ. ಕೂಡಲೆ ಅವನು ನಗುವುದನ್ನು ನಿಲ್ಲಿಸಿದ. ಅವನು ನಗು ನಿಲ್ಲಿಸಿದ್ದು, ಅವನ–ಅವನಿಗಿಂತ ಹೆಚ್ಚಾಗಿ ನನ್ನ–ಸುಕೃತ ಎಂದು ಹೇಳಬೇಕು ! ಏಕೆಂದರೆ, ಅವನು ನಗು ನಿಲ್ಲಿಸುವುದನ್ನು ಇನ್ನೊಂದು ಕ್ಷಣ ತಡಮಾಡಿದ್ದರೆ, ನಾನು ಖಂಡಿತ ಅವನ ಮೇಲೆ ಬೀಳುತ್ತಿದ್ದೆ.

ಹೋಟಲನ್ನು ಪ್ರವೇಶಿಸಿದ ಕೂಡಲೆ ನಾನು, ಹುಬ್ಬುಗಳನ್ನು ಗಂಟಿಕ್ಕಿ ಕೋಪದ ಕರಾಳ ಮುಖದಿಂದ, ಅತ್ತ ಇತ್ತ ನೋಡಿದೆ. ಅಲ್ಲಿದ್ದ ಸೇವಕರು ನನ್ನನ್ನು ಕಂಡು ನಡುಗಿದರು. ನನ್ನ ಎದುರಲ್ಲಿ ಒಮ್ಮೆಯಾದರೂ ಅವರು ಪರಸ್ಪರ ನೋಡುವ ಸಾಹಸ ಮಾಡಲಿಲ್ಲ. ಬಹು ವಿಧೇಯತೆಯಿಂದ ನನ್ನ ಅಪ್ಪಣೆಗಳನ್ನು ಸ್ವೀಕರಿಸುತ್ತ, ನನ್ನ ಇಷ್ಟದಂತೆ, ಒಂದು ಪ್ರತ್ಯೇಕವಾದ ಕೊಠಡಿಗೆ ನನ್ನನ್ನು ಒಯ್ದು, ಕಾಗದ–ಲೇಖನಿ ಮುಂತಾದ ಬರೆಯುವ ಸಾಮಗ್ರಿಗಳನ್ನು ತಂದು ಕೊಟ್ಟರು.

ಪ್ರಾಣಾಪಾಯಕ್ಕೀಡಾಗಿ, ಕೋಪೋದ್ರೇಕದಿಂದ ಕುದಿಯುತ್ತ, ನೋಯಿಸಲು ದಾಹಪಡುತ್ತ , ಕೊಲೆ ಮಾಡಲೂ ಸಿದ್ಧನಾಗಿದ್ದ ಗುಪ್ತನ ರೀತಿ ನನಗೆ ಹೊಸದಾಗಿತ್ತು. ಆದರೂ, ಈ ಪ್ರಾಣಿಯ ಬುದ್ಧಿ ಬಹು ಚುರುಕಾಗಿತ್ತು. ಮಹತ್ತಾದ ಮನೋದಾರ್ಢ್ಯದಿಂದ ತನ್ನ ಕೋಪವನ್ನು ಹತೋಟಿಯಲ್ಲಿಟ್ಟುಕೊಂಡ. ತನ್ನ ಆ ಎರಡು ಮುಖ್ಯವಾದ ಪತ್ರಗಳನ್ನು ಬರೆದ. ಅವುಗಳಲ್ಲಿ ಒಂದು ಜಗನ್ನಾಥನಿಗೆ, ಇನ್ನೊಂದು ರಂಗಪ್ಪನಿಗೆ. ಅವು ವಿಳಾಸದಾರರಿಗೆ ತಪ್ಪದೆ ತಲುಪಲೆಂದು, ಪತ್ರಗಳು ಅಂಚೆಯಲ್ಲಿ ರಿಜಿಸ್ಟರಾಗಿ ರವಾನಿಸಲ್ಪಡಬೇಕೆಂದು ಅಪ್ಪಣೆ ಮಾಡಿ ಕಳುಹಿಸಿದ.

ಅನಂತರ, ದಿನವೆಲ್ಲ ತನ್ನ ಕೊಠಡಿಯಲ್ಲಿ ಬಾಗಿಲು ಹಾಕಿಕೊಂಡು ಕುಳಿತು, ಗಂಟೆಗಳನ್ನು ಎಣಿಸತೊಡಗಿದ. ಕೊಠಡಿಗೇ ಆಹಾರವನ್ನು ತರಿಸಿಕೊಂಡು, ಭಯದಿಂದ–ಏಕಾಂತದಲ್ಲಿ–ಊಟಮಾಡಿದ. ಊಟ ತಂದ ಪರಿಚಾರಕ ಇವನ ರೀತಿಯನ್ನು ನೋಡಿ ನಡುಗಿಹೋದ.

ಹಾಗೂ ಹೀಗೂ ಸಂಜೆಯಾಯಿತು. ಇನ್ನು ಸ್ವಲ್ಪ ಹೊತ್ತಿನಲ್ಲಿ ರಾತ್ರಿಯ ಕಪ್ಪೂ ಮುಸುಕಿತು. ಗುಪ್ತ ಹೋಟಲಿನಿಂದ ಹೊರಟು, ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿಕೊಂಡ. ಅದರ ಮೂಲೆಯಲ್ಲಿ ಮುದುರಿ ಕುಳಿತು, ಹೊತ್ತು ಕಳೆಯಲು ನಗರದ ಬೀದಿ ಬೀದಿಗಳಲ್ಲಿ ಹಿಂದಕ್ಕೂ ಮುಂದಕ್ಕೂ ಸುತ್ತಾಡಿದ. ಹೌದು ಗುಪ್ತ — ಎಂದೇ ಹೇಳುತ್ತೇನೆ —ನಾನು —ಎಂದು ಹೇಳಿಕೊಳ್ಳಲಾರೆ, ನಾನು. ಆ ನರಕೋದ್ಭವನಲ್ಲಿ ಮಾನವೀಯತೆ ಎಂಬುದೇನೇನೂ ಇರಲಿಲ್ಲ. ಭಯ–ದ್ವೇಷಗಳು ಹೊರತು ಅವನಲ್ಲಿ ಇನ್ನೇನೂ ಜೀವಂತವಾಗಿರಲಿಲ್ಲ.

ಗೊತ್ತುಗುರಿಯಿಲ್ಲದೆ ಸುತ್ತಾಡುತ್ತಿದ್ದುದನ್ನು ಕಂಡು, ಟ್ಯಾಕ್ಸಿಯ ಡ್ರೈವರಿಗೆ, ಒಳಗೆ ಕುಳಿತಿದ್ದವನ ತಲೆ ಸರಿಯಾಗಿದೆಯೋ–ಇಲ್ಲವೋ ಎಂದು ಅನುಮಾನವಾಗತೊಡಗಿತು. ಗುಪ್ತ ಇದನ್ನು ಗ್ರಹಿಸಿ, ಒಂದು ಕಡೆ ಗಾಡಿಯಿಂದ ಇಳಿದು ಅವನಿಗೆ ಸಲ್ಲಬೇಕಾಗಿದ್ದ ಬಾಡಿಗೆ ಹಣವನ್ನು ಕೊಟ್ಟು ಕಳುಹಿಸಿ, ಕಾಲುನಡಿಗೆಯಿಂದ ಹೊರಟು, ಮಾರ್ಕೆಟ್ಟು ಬಳಿಯ ಗಲ್ಲಿಗಳಲ್ಲಿ, ನಿಶಾಚರರಾಗಿದ್ದ ಕೀಳು ಜನರ ಗುಂಪಿನಲ್ಲಿ ಸೇರಿಕೊಂಡ. ಅವನ

ದೊಗಲೆ ಉಡುಪಿನ ವೇಷ, ಆ ಜನಗಳ ಮಧ್ಯೆ ಅವನನ್ನು ಪ್ರತ್ಯೇಕಿಸುವಂತಿರಲಿಲ್ಲ. ಈ ಉದ್ದೇಶದಿಂದಲೇ ಅವನು ಅವರ ಗುಂಪಿನಲ್ಲಿ ಸೇರಿಕೊಂಡ. ಆದರೆ, ಅವರ ಮಧ್ಯೆಯೂ, ಅವನ ದೇಹದ ಮೇಲೆ ತೀರ ಜಳ್ಳಾಗಿ ಜೋತುಬಿದ್ದಿದ್ದ ಉಡುಪು ಯಾರ ಗಮನವನ್ನಾದರೂ ಸೆಳೆಯುವಂತಿತ್ತು. ಅವನ ಹೃದಯದ ಭಯ–ಭೀತಿಭಾವಗಳ ಸುಂಟರಗಾಳಿಗೆ ಸಿಕ್ಕ ನೌಕೆಯಾಗಿತ್ತು – ಅವನ ದೇಹ.

ತನ್ನ ಹೃದಯದ ಭೀತಿಗೆ ತಾನೇ ಬೇಟೆಯಾಗಿ, ಅವನು ತನ್ನಲ್ಲಿ ತಾನೇ ಗೊಣಗುತ್ತ, ಹೆಚ್ಚು ಜನಸಂಚಾರವಿಲ್ಲದ ಬೀದಿಗಳ ಮೂಲಕ ಜೀವಗಳ್ಳನಂತೆ ತಲೆ ಮರಸಿಕೊಳ್ಳುತ್ತ, ತನಗೂ ಮಧ್ಯರಾತ್ರಿಗೂ ಇನ್ನೂ ಇದ್ದ ಅಂತರದ ನಿಮಿಷಗಳನ್ನು ಎಣಿಕೆ ಹಾಕುತ್ತ, ಅವಸರದಿಂದ ನಡೆಯುತ್ತಿದ್ದ. ಆಗ ಒಂದು ಕತ್ತಲಾದ ಓಣಿಯಲ್ಲಿ, ಕೀಳು ವರ್ಗದ ವಿಲಾಸಿನಿಯೊಬ್ಬಳು ಇವನನ್ನು ಕಂಡು, ಮಾತಾಡಿಸುವ ನೆವದಲ್ಲಿ ಇವನನ್ನು ಆಕರ್ಷಿಸಲು ಪ್ರಯತ್ನಪಟ್ಟಳು. ಬೇರೆ ಪರಿಸ್ಥಿತಿ–ಸನ್ನಿವೇಶಗಳಾಗಿದ್ದಿದ್ದರೆ ಹೇಗೋ ! ಆದರೆ, ಈಗ ಭಯಕ್ಕೆ ಬೇಟೆಯಾಗಿದ್ದ ಕಾಮೇಶ, ಅವಳ ವೈಯ್ಯಾರದಿಂದ ಕೋಪಗೊಂಡು, ಪಟೀರ್–ಎಂದು ಅವಳ ಕೆನ್ನೆಗೆ ಏಟು ಕೊಟ್ಟ. ಅವಳು ಚೀರಿಡುತ್ತ ಪಲಾಯನ ಮಾಡಿದಳು.

* * * *

ನಾನು ಜಗನ್ನಾಥನ ಮನೆಯಲ್ಲಿ —ಅವನ ಮುಂದೆ, ಔಷಧವನ್ನು ಬೆರಸಿ ಕುಡಿದು ವಿತಲನಾಗಿ ಮಾರ್ಪಟ್ಟು ನಿಂತಾಗ, ಅವನಿಗುಂಟಾದ ಭಯಾತಿರೇಕದ ಕಂಪನ, ಬಹುಶಃ ನನಗೂ ಸ್ವಲ್ಪ ತಟ್ಟಿರಬೇಕೆಂದು ತೋರುತ್ತದೆ. ನಾನು ನಿರ್ದಿಷ್ಟವಾಗಿ ಹೇಳಲಾರೆ. ಆದರೆ, ನಾನು ಆ ಕ್ಷಣಕ್ಕೆ ಹಿಂದೆ ಕೆಲವು ಗಂಟೆಗಳಲ್ಲಿ ಅನುಭವಿಸಿದ್ದ ಭೀತಿಯೊಡನೆ ಹೋಲಿಸಿದರೆ, ಅವನ ಭೀತಿಯು, ಸಮುದ್ರದಲ್ಲಿ ಒಂದು ಹನಿಯಂತೆ–ಇತ್ತು. ನನ್ನಲ್ಲಿ ಪರಿಣಾಮಕಾರಿಯಾದ ಬದಲಾವಣೆಯುಂಟಾಗಿತ್ತು. ನನಗೆ ಈಗ ಇದ್ದದ್ದು ಗಲ್ಲಿನ ಭಯವಲ್ಲ; ಅನಿರೀಕ್ಷಿತವಾಗಿ ಪುನಃ ಗುಪ್ತನಾಗಿಬಿಡುವೆನೇನೋ ಎಂಬ—ಎದೆಬಿರಿಯುವಂಥ ಉತ್ಕಟವೂ ದುರ್ದಮ್ಯವೂ ಆದ ಭಯ !

ಜಗನ್ನಾಥ ನನ್ನನ್ನು ದೂಷಿಸಿದ —ಭರ್ತ್ಸನೆ ಮಾಡಿದ —ಕಟುವಾಗಿ ಟೀಕಿಸಿದ. ನಾನು ಎಲ್ಲವನ್ನೂ ಅರೆಸ್ವಪ್ನಾವಸ್ಥೆಯಲ್ಲಿ ಕೇಳಿದೆ. ಅನಂತರ ಅದೇ ಅರೆಸ್ವಪ್ನಾವಸ್ಥೆಯಲ್ಲೇ, ಮನೆಯನ್ನು ತಲುಪಿದೆ —ಹಾಸಿಗೆಯ ಮೇಲೆ ಮಲಗಿದೆ.

ಆ ದಿನದ ವಿದ್ಯಮಾನಗಳಿಂದ, ನಾನು ಪೂರ ದಣಿದು ದುರ್ಬಲನಾಗಿದ್ದೆ. ಆದಕಾರಣ, ನಿದ್ರೆಯಲ್ಲಿ ನನ್ನನ್ನು ಕಾಡುತ್ತಿದ್ದ ಭಯಂಕರ ಸ್ವಪ್ನಗಳಿಗೂ ಎಚ್ಚರವಾಗದಂತಹ ಗಾಢನಿದ್ರೆಯಲ್ಲಿ ಮುಳುಗಿದ್ದೆ. ಬೆಳಿಗ್ಗೆ ಎದ್ದಾಗ, ನನ್ನ ದೇಹ ಕುಲುಕಿ ಅಲ್ಲಾಡಿಸಿದಂತಾಗಿತ್ತು; ಶಕ್ತಿಹೀನವಾಗಿತ್ತು; ಆದರೂ ದಣುವಾರಿದ ಲವಲವಿಕೆಯಿಂದ ಕೂಡಿತ್ತು. ಆದರೆ, ನನ್ನಲ್ಲಿ ಹುದುಗಿ ಸುಪ್ತವಾಗಿದ್ದ ದೈತ್ಯಪಶುವಿನ ನೆನಪು ಮಾತ್ರ, ನನ್ನಲ್ಲಿ ಇನ್ನೂ ಭಯವನ್ನೂ ದ್ವೇಷವನ್ನೂ ಹುಟ್ಟಿಸುತ್ತಿತ್ತು. ಹಿಂದಿನ ದಿನದ ಭಯಂಕರ ಅಪಾಯಗಳನ್ನು ನಾನು ಮರೆಯುವ ಹಾಗೇ ಇರಲಿಲ್ಲ. ಆದರೆ, ಈಗ ನಾನು ಪುನಃ ನನ್ನ ಸ್ವಂತ ಮನೆಯ ಸಲಿಗೆಯ ಆವರಣದಲ್ಲಿ ಸುರಕ್ಷಿತನಾಗಿದ್ದೆ. ನನ್ನ ಔಷಧಗಳು ಬೇಕೆಂದಾಗ ಕೈಗೆಟುಕುವಂತಿದ್ದವು. ಬಂದ ಗಂಡಾಂತರದಿಂದ ಪಾರಾದುದಕ್ಕೆ, ಭರವಸೆಯ ಬೆಳಕಿಗಿಂತಲೂ ಮಿಗಿಲಾಗಿ, ನನ್ನ ಆತ್ಮವು ಕೃತಜ್ಞತೆಯಿಂದ ಪ್ರಜ್ವಲಿಸಿತು.

ಬೆಳಗಿನ ಉಪಾಹಾರವನ್ನು ಮುಗಿಸಿಕೊಂಡು ನಾನು, ಮನೆಯ ಹಿಂದಿನ ಅಂಗಳದ ತೋಟದಲ್ಲಿ, ಉಲ್ಲಾಸದಿಂದ ಗಾಳಿಯ ತಂಪನ್ನು ಸೇವಿಸುತ್ತ, ಶತಪಥ ತಿರುಗುತ್ತಿದ್ದೆ. ಆಗ ಇದ್ದಕ್ಕಿದ್ದ ಹಾಗೆಯೇ, ರೂಪ ಮಾರ್ಪಾಟಿಗೆ ಪೂರ್ವಭಾವಿಯಾಗಿ ತಲೆದೋರುವ–ಅನುಭವಕ್ಕೆ ಮಾತ್ರ ವೇದ್ಯವಾದ–ಇಂದ್ರಿಯವ್ಯಾಪಾರಗಳ ಅರಿವಾಗತೊಡಗಿತು. ಪ್ರಯೋಗಶಾಲೆಯ ಮೇಲಿನ ನನ್ನ ರಹಸ್ಯ ಕೊಠಡಿಗೆ ಹೋಗುವಷ್ಟು ಕಾಲಾವಕಾಶ ಮಾತ್ರ ಇತ್ತು. ಕೊಠಡಿಯ ಮುಚ್ಚಿದ ಬಾಗಿಲ ಹಿಂದೆ, ನಾನು ಪುನಃ ರೂಪ ಮಾರ್ಪಾಟಿನ ಯಮಯಾತನಾಪರಂಪರೆಗಳ ಮೂಲಕ, ಗುಪ್ತನ ರೂಪಧಾರಣೆ ಮಾಡಿ ಭಾವೋದ್ರೇಕದಿಂದ ನಡುಗುತ್ತ ನಿಂತೆ.

ಈ ಬಾರಿ ನಾನು ನನ್ನ ಸ್ವಂತ ರೂಪಕ್ಕೆ ಹಿಂದಿರುಗಲು ಔಷಧವನ್ನು ದ್ವಿಗುಣ ಮಾಡಬೇಕಾಯಿತು; ಮತ್ತು ಆರು ಗಂಟೆಗಳ ತರುವಾಯ, ನಾನು ಖಿನ್ನಮನಸ್ಕನಾಗಿ ಯೋಚಿಸುತ್ತ ಕುಳಿತಿದ್ದಾಗ, ಮಾರ್ಪಾಟಿನ ಯಾತನೆಗಳು ಮರುಕಳಿಸಿ, ಪುನಃ ಔಷಧವನ್ನು ಸೇವಿಸುವ ಅಗತ್ಯ ಬಿತ್ತು.

ಸಂಕ್ಷೇಪವಾಗಿ ಹೇಳುವುದಾದರೆ, ಅಂದಿನಿಂದ ಮುಂದಕ್ಕೆ, ಸಾಧಕ ಮಾಡಿದಂತೆ, ವಿಶೇಷ ಪ್ರಯತ್ನದಿಂದ ಮತ್ತು ತಕ್ಕ್ಷಣದ ಔಷಧ ಸೇವನೆಯಿಂದ ಮಾತ್ರವೇ, ನನಗೆ ವಿಠಲನ ರೂಪವನ್ನು ಉಳಿಸಿಕೊಳ್ಳಲು ಸಾಧ್ಯವಾಗಿತ್ತು. ಅಹೋರಾತ್ರಿಯ ಎಲ್ಲ ಹೊತ್ತಿನಲ್ಲೂ, ಭಯ ಸೂಚಕವಾದ ಮುನ್ನೆಚ್ಚರಿಕೆಯ ಕಂಪನ ನನ್ನನ್ನು ಕಾಡುತ್ತಿತ್ತು. ಎಲ್ಲಕ್ಕೂ ಹೆಚ್ಚಾಗಿ, ನಾನು ನಿದ್ದೆ ಮಾಡಿದರೂ, ಅಥವಾ ಕುರ್ಚಿಯಲ್ಲಿ ಕುಳಿತು ಸ್ವಲ್ಪ ತೂಕಡಿಕೆಯಲ್ಲಿ ಮೈಮರೆತರೂ ಸಾಕು —ಪ್ರತಿಸಲವೂ ಗುಪ್ತನಾಗಿಯೇ ಎಚ್ಚರವಾಗುತ್ತಿದ್ದೆ !

ನಾನು ಈ ನಿರಂತರವಾದ ಭಯದ ಭಾರಕ್ಕೆ ನರಳುತ್ತ, ನನಗೆ ನಾನೇ ನಿದ್ರಾಭಾವದ ಶಾಪಕ್ಕೊಳಗಾದೆ. ಇದು ಮಾನವನೊಬ್ಬನಿಗೆ ಸಂಭವಿಸಲು ಸಾಧ್ಯವೆಂಬುದು, ನನ್ನ ಊಹೆಗೂ ನಿಲುಕದ ವಿಷಯವಾಗಿತ್ತು. ನಿದ್ರೆಯ ದುರ್ಭರಕ್ಷಾಮ —ಭಯದ ದುರ್ಭರಪೀಡನ --- ಇವೆರಡರಿಂದ, ನನ್ನ ಸ್ವಂತ ದೇಹವು ಜ್ವರಗ್ರಸ್ತವಾಗಿ ನಶಿಸತೊಡಗಿತು. ದೇಹದ ಜೊತೆಗೆ ಮನಸ್ಸೂ ಬೇಸರದಿಂದ ದುರ್ಬಲವಾಯಿತು. ಆಗ ನನಗಿದ್ದುದು ಒಂದೇ ಒಂದು ಚಿಂತೆ–ಚಿತೆಗಿಂತ ಹೆಚ್ಚಾಗಿ ದಹಿಸುತ್ತಿದ್ದ —ಮಹಾಚಿಂತೆ; ಅದು, ನನ್ನ ಆ ಇನ್ನೊಂದು ರೂಪದ ಭಯ !

ಆದರೆ, ದಿನ ಕಳೆದ ಹಾಗೆ, ರೂಪ ಪಲ್ಲಟದ ಯಾತನೆಗಳ ತೀಕ್ಷ್ಣತೆ ಕಡಿಮೆಯಾಗುತ್ತಿದ್ದ ಕಾರಣ, ನಾನು ನಿದ್ದೆಯಿಂದ ಏಳುವ ಸಮಯದಲ್ಲಿ , ಅಥವಾ, ಔಷಧದ ಪ್ರಭಾವ ಇಳಿದು ಹೋದಾಗ—ಬದಲಾವಣೆಯ ಅಂತರ ಪರಿಸ್ಥಿತಿಯೇ ಇಲ್ಲದೆ, ತಟ್ಟನೆ ಮಾರ್ಪಾಟಾಗಿ ಬಿಡುತ್ತಿದ್ದೆ ! ಆಗ, ಭಯಂಕರಾಕೃತಿಗಳಿಂದ ತುಂಬಿ ತುಳುಕುತ್ತಿತ್ತು —ನನ್ನ ಆತ್ಮ. ಆಗ ನನ್ನೊಳಗೆ ಭೋರ್ಗರೆಯುತ್ತಿದ್ದ ಜೀವನದ ಕಾತರಶಕ್ತಿಗಳ ಧಾರಣೆಗೆ ತಕ್ಕಷ್ಟು ಬಲಿಷ್ಠವಲ್ಲವೇನೋ —ಎಂದು ತೋರುತ್ತಿತ್ತು —ನನ್ನ ದೇಹ !

ವಿಠಲನ ದೇಹಾಲಸ್ಯ ಸಂಕಟಗಳು ಹೆಚ್ಚಿದ ಹಾಗೆಲ್ಲ , ಗುಪ್ತನ ಶಕ್ತಿ ಬೆಳೆದು ಪುಷ್ಟವಾದಂತೆ ತೋರಿತು. ಆದರೆ, ಈಗ ಅವರಿಬ್ಬರನ್ನೂ ಬೇರ್ಪಡಿಸಿದ್ದ ದ್ವೇಷವು ಮಾತ್ರ, ಪರಸ್ಪರ ಸಮತೂಕವಾಗಿತ್ತು. ವಿಠಲನ ಈ ದ್ವೇಷವು –ಜನನ ಮರಣಗಳಷ್ಟು ಪ್ರಾಮುಖ್ಯತೆಯನ್ನು ಹೊಂದಿತ್ತು. ಈಗ ಅವನು ತನ್ನ ಇಂದ್ರಿಯ ವ್ಯಾಪಾರಗಳಲ್ಲಿ ಕೆಲವುದರ ಅರಿವಿನ ಪಾಲುದಾರನಾಗಿದ್ದ. ಆ ಇನ್ನೊಂದು ಪ್ರಾಣಿಯ ಪೂರ್ಣ ಅಂಗವಿಕಲತೆಯ ಸಮಗ್ರ ರೂಪವನ್ನು ನೋಡಿದ್ದನಲ್ಲದೆ, ಅವನೊಡನೆ ಆಮರಣಾಂತ ಸಹವಾಸದಾರನೂ ಆಗಿದ್ದ. ಅವರಿಬ್ಬರನ್ನೂ ಒಂದುಗೂಡಿಸಿದ ಸರಪಳಿ ಕೊಂಡಿಗಳಂತಿದ್ದ ಈ ಎರಡು ವಿಷಯಗಳೂ, ಅವನ ದುಃಸ್ಥಿತಿಯ ಅತಿದಾರುಣತೆಗೆ ಕಾರಣವಾಗಿದ್ದವು, ಇವೆರಡರ ಹೊರತು, ಗುಪ್ತನ ಶಕ್ತಿ, ಸಾಮರ್ಥ್ಯಗಳೇನೆ ಇರಲಿ – ಎಷ್ಟೇ ಇರಲಿ, ವಿಠಲನ ಯೋಚನೆಯಲ್ಲಿ ಅವನು ನರಕಸದೃಶನಾಗಿದ್ದಲ್ಲದೆ ಅಸಹಜವಸ್ತುಸ್ವರೂಪನೂ ಆಗಿದ್ದ.

ಅಸಹ್ಯವಾದ ಕೆಸರಿನ ಕಾಳಕೂಪಸ್ವರೂಪಿಯಿಂದ ಕೂಗು–ಕರೆಗಳು ಕೇಳಿ ಬರುವಂತಾಗಿತ್ತು. ನಿರಾಕಾರ ಮೃತ್ಕಣಗಳು, ಸ್ಪಂದನ–ಚಲನಗಳನ್ನು ಹೊಂದಿ, ಪಾಪಕಾರ್ಯದಲ್ಲಿ ತೊಡಗುವಂತಾಗಿತ್ತು. ಆಕಾರಗೆಟ್ಟು ಮೃತಪ್ರಾಯವಾಗಿದ್ದದ್ದು, ಬದುಕಿನ ಅಧಿಕಾರ ಸ್ಥಾನಗಳನ್ನಾಕ್ರಮಿಸುವಂತಾಗಿತ್ತು. ಅಲ್ಲದೇ ಆ ದಂಗೆಕೋರನ ಭಯವು ಅವನೊಡನೆ, ಮಡದಿಗಿಂತಲೂ ಅಧಿಕವಾಗಿ – ಕಣ್ಣಿಗಿಂತಲೂ ನಿಕಟವಾಗಿ—ಹೆಣೆದುಕೊಂಡಿತ್ತು. ಅವನ ಮಾಂಸಖಂಡಗಳಲ್ಲಿ ಸೆರೆಯಾಗಿ ಬಿದ್ದಿದ್ದುದು, ಗೊಣಗುತ್ತ —ಜನ್ಮತಾಳಲು ಹಾತೊರೆಯುತ್ತಿತ್ತು. ಮತ್ತು , ದುರ್ಬಲವಾದ ಎಲ್ಲ ಹೊತ್ತಿನಲ್ಲೂ, ನಿದ್ರೆಯ ನಿರಾತಂಕದ ವೇಳೆಯಲ್ಲೂ ಬಾಳಗೊಡದೆ, ಬಲಪ್ರಯೋಗದಿಂದ ಅವನನ್ನು ಓಡಿಸುತ್ತಿತ್ತು. ಈ ಪರಿಸ್ಥಿತಿ, ವಿಠಲನಿಗೆ ಯೋಚಿಸುವುದಕ್ಕೂ ಘೋರತಮವಾಗಿತ್ತು.

ವಿಠಲನ ವಿಷಯದಲ್ಲಿ ಗುಪ್ತನ ದ್ವೇಷವು ಬೇರೆಯ ವರ್ಗದ್ದಾಗಿತ್ತು. ಗಲ್ಲಿನ ಭಯವು ನಿರಂತರವೂ ಅವನನ್ನು ಕಾಡುತ್ತಿತ್ತು. ಆಗ ಅವನು, ತಾತ್ಕಾಲಿಕ ಆತ್ಮಹತ್ಯೆಯೋ ಎಂಬಂತೆ, ತನ್ನ ಪೂರ್ಣವ್ಯಕ್ತಿತ್ವದ ಬದಲು ವಿಠಲನ ಒಂದು ಭಾಗವಾಗಿ ತನ್ನ ಆಶ್ರಿತಸ್ಥಾನದ ಮರೆಹೋಗಬೇಕಾಗಿತ್ತು. ಇದರ ಅಗತ್ಯಕ್ಕೆ ಅವನು ಬಹುವಾಗಿ ಹೇಸುತ್ತಿದ್ದ. ಹಾಗೆಯೇ, ವಿಠಲನ ಅಧೈರ್ಯವನ್ನು ಕಂಡೂ ಹೇಸುತ್ತಿದ್ದ. ಅಲ್ಲದೆ, ತನ್ನ ವಿಷಯದಲ್ಲಿ ವಿಠಲನಿಗಿದ್ದ ಅನಾದರಣೆಯನ್ನು ಕಂಡು ಕೋಪಗೊಳ್ಳುತ್ತಿದ್ದ.

ಆದಕಾರಣವೇ ಅವನು ಪ್ರತೀಕಾರ ಬುದ್ಧಿಯಿಂದ, ನನ್ನ ಪುಸ್ತಕಗಳ ಪುಟಗಳ ಮೇಲೆಲ್ಲ ಅವಾಚ್ಯ ಶಬ್ದಗಳನ್ನು ಬರೆಯುವುದು — ನನ್ನ ಕಾಗದದ ಪತ್ರಗಳನ್ನು ಸುಡುವುದು—ನನ್ನ ತಂದೆಯ ಭಾವಚಿತ್ರವನ್ನು ವಿಕಾರಗೊಳಿಸುವುದು–ಇವೇ ಮೊದಲಾದ ಕೋತಿಚೇಷ್ಟೆಗಳನ್ನು ನನ್ನ ಮೇಲೆ ಪ್ರಯೋಗಿಸ ತೊಡಗಿದ್ದ. ವಸ್ತುತಃ, ಅವನಿಗೆ ಪ್ರಾಣಭಯ ಒಂದು ಇಲ್ಲದೆ ಹೋಗಿದ್ದಿದ್ದರೆ ಖಂಡಿತವಾಗಿಯೂ ಅವನು ಬಹಳ ಹಿಂದೆಯೇ, ತನ್ನ ಕೇಡಿನಲ್ಲಿ ನನ್ನನ್ನೂ ಸೇರಿಸಿಕೊಳ್ಳುವ ದುರುದ್ದೇಶದಿಂದಲಾದರೂ, ತನಗೆತಾನೇ ನಾಶಕ್ಕೀಡಾಗುತ್ತಿದ್ದ.

ಆದರೆ, ಅವನ ಬದುಕಿನ ವ್ಯಾಮೋಹ ಅತ್ಯಾಶ್ಚರ್ಯಕರವಾದುದು ! ಅಷ್ಟೇ ಅಲ್ಲ; ಅವನನ್ನು ನೆನಸಿಕೊಂಡ ಮಾತ್ರದಿಂದಲೇ ಭಯದ ಚಳಿ ಹುಟ್ಟಿ ಹೆಪ್ಪುಗಟ್ಟಿ ರೋಸಿಹೋಗುವ ನಾನು ಕೂಡ, ಅವನ ಈ ಪೂರ್ಣವೂ ತೀವ್ರವೂ ಆದ ಜೀವನವ್ಯಾಮೋಹವನ್ನು ನೆನೆದಾಗ — ನನ್ನ ಆತ್ಮಹತ್ಯೆಯಿಂದ ಅವನ ಸರ್ವನಾಶಮಾಡಬಲ್ಲ ನನ್ನ ಶಕ್ತಿಗೆ ಅವನು ಹೇಗೆ ಹೆದರುತ್ತಾನೆಂದು ತಿಳಿದಿದ್ದರೂ—ಅವನ ವಿಷಯದಲ್ಲಿ ನನ್ನ ಹೃದಯ ಮರುಕಗೊಳ್ಳುವುದು ಸಾಧ್ಯವಾಗಿದೆ !

ಕಾಲವು ತೀವ್ರಗತಿಯಿಂದ ತೀರುತ್ತ ಬಂದಿರುವ ಈ ಸಮಯದಲ್ಲಿ ಈ ವರ್ಣನೆಯನ್ನು ಇನ್ನು ಮುಂದೆ ಬೆಳೆಸುವುದರಿಂದ ಪ್ರಯೋಜನವಿಲ್ಲ. ಇಂತಹ ವರ್ಣನಾತೀತವಾದ, ಅನಿರ್ವಚನೀಯವಾದ ಘೋರ ಯಾತನಾ ಪರಂಪರೆಗಳನ್ನು ಅನುಭವಿಸಿರುವ ಮತ್ತೊಬ್ಬ ನಿರ್ಭಾಗ್ಯ ಇಲ್ಲ—ಎಂದರೆ ಸಾಕು. ಮತ್ತು ಅಭ್ಯಾಸಬಲವಾದರೂ, ಈ ಯಾತನೆಗಳ ತೀಕ್ಷ್ಣತೆಯನ್ನು ಸ್ವಲ್ಪವಾದರೂ ತಗ್ಗಿಸಲಿಲ್ಲ—ಇಲ್ಲ; ಅದರ ಬದಲು, ನನ್ನ ಆತ್ಮವು ಗೋರ್ಕಲ್ಲಿನಂತೆ ಕಠಿಣವಾಯಿತು—ಒಂದು ಬಗೆಯ ನಿರಾಶೆಯನ್ನಪ್ಪಿತು. ಕಡೆಯದಾಗಿ, ನನ್ನ ಸ್ವಂತ ರೂಪ—ಸ್ವಭಾವಗಳಿಂದ ನನ್ನನ್ನು ಅಗಲಿಸಿರುವ ಈ ಕೊನೆಯ ವಿಪತ್ತು ಸಂಭವಿಸದೆ ಇದ್ದಿದ್ದರೆ, ನನ್ನ ಶಿಕ್ಷೆಯು ಇನ್ನೂ ಹಲವು ವರ್ಷಗಳವರೆಗೆ ಹೀಗೆಯೇ ನಡೆಯಬಹುದಾಗಿತ್ತು.

ನನ್ನ ಪ್ರಥಮ ಪ್ರಯೋಗದ ದಿನದಿಂದ, ಖರ್ಚು ಆದಹಾಗೆಲ್ಲ ಪುನಃ ಶೇಖರಿಸಿಕೊಳ್ಳದೆ ಹೋದ ಕಾರಣ, ಔಷಧದ ತಯಾರಿಕೆಗಾಗಿ ನಾನು ಕೂಡಿಟ್ಟುಕೊಂಡಿದ್ದ ಲವಣ ತೀರುತ್ತ ಬಂದಿತ್ತು. ಹೇಳಿಕಳಿಸಿ, ಅದೇ ಲವಣದ ಹೊಸ ಮಾದರಿಯನ್ನು ಮತ್ತಷ್ಟು ತರಿಸಿಕೊಂಡು ಔಷಧವನ್ನು ತಯಾರಿಸಿ ನೋಡಿದೆ. ದ್ರಾವಕ ಕುದಿಯತೊಡಗಿತು. ಅದರ ವರ್ಣದ ಮೊದಲನೇ ಮಾರ್ಪಾಟು ಆಯಿತು—ಎರಡನೆಯದು ಆಗಲೇ ಇಲ್ಲ. ಔಷಧವನ್ನು ಕುಡಿದು ಪರೀಕ್ಷಿಸಿದೆ. ಆದರೆ ಅದು ಪರಿಣಾಮಕಾರಿಯಾಗಿರಲಿಲ್ಲ.

ನನಗೆ ಅತ್ಯವಶ್ಯಕವಾಗಿ ಬೇಕಾಗಿದ್ದ ಆ ಒಂದು ರಸಾಯನಿಕ ಲವಣಕ್ಕಾಗಿ ನಾನು ಹೇಗೆ ಇಡೀ ಲೋಕನಗರದ ಶೋಧನೆ ನಡೆಯುವಂತೆ ಮಾಡಿದೆನೆಂಬುದನ್ನು, ನೀನು ರಂಗಪ್ಪನಿಂದ ತಿಳಿಯಬಹುದು. ನನ್ನ ಪ್ರಯತ್ನಗಳೆಲ್ಲ ವ್ಯರ್ಥವಾದವು. ನಾನು ಪ್ರಥಮತಃ ಶೇಖರಿಸಿಕೊಂಡ ಆ ಲವಣ ಅಶುದ್ಧವಾಗಿದ್ದಿರಬೇಕೆಂದೂ, ಆದರ ಆ ಅಜ್ಞಾತ ದೋಷವೇ, ಔಷಧವು ಅಷ್ಟು ಪೂರ್ಣವಾಗಿ ಪರಿಣಾಮಕಾರಿಯಾಗಲು ಮುಖ್ಯ ಕಾರಣವಾಗಿತ್ತೆಂದೂ, ಈಗ ನನಗೆ ತೋರುತ್ತಿದೆ.

ಈಗ ಸುಮಾರು ಒಂದು ವಾರ ಕಳೆದಿದೆ. ಇನ್ನೂ ಸ್ವಲ್ಪ ಉಳಿದಿದ್ದ ಹಳೆಯ ಲವಣದಿಂದ ತಯಾರಿಸಿದ ಔಷಧದ ಪ್ರಭಾವಕ್ಕೊಳಗಾಗಿ, ವಿಠಲನ ರೂಪದಲ್ಲಿ, ಹೇಳಿಕೆಯ ಈ ಬರವಣಿಗೆಯನ್ನು ಮುಗಿಸುತ್ತಿದ್ದೇನೆ. ಅಂದ ಮೇಲೆ, ಏನಾದರೂ ಪವಾಡದ ಫಲವಾಗಿ ಹೊರತು—ಹರಿವಿಠಲನು, ಈಗ ವಿಷಾದಕರವಾಗಿ ಮಾರ್ಪಟ್ಟಿರುವ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುವುದೂ, ತನ್ನವೇ ಆದ ಯೋಚನೆಗಳನ್ನು ಮಾಡುವುದೂ, ಇದೇ ಕಡೆಯ ಸಲ—ಎಂಬುದು ಅನಿವಾರ್ಯವೂ ನಿಶ್ಚಯವೂ ಆಗಿದೆ.

ನನ್ನ ಬರವಣಿಗೆಯ ಮುಕ್ತಾಯವನ್ನಾದರೂ ನಾನು ಹೆಚ್ಚು ವಿಳಂಬ ಮಾಡುವಂತಿಲ್ಲ. ಏಕೆಂದರೆ, ನನ್ನ ಈ ಕಥನವು ಇದುವರೆಗೆ ನಾಶವನ್ನು ತಪ್ಪಿಸಿಕೊಂಡಿದ್ದರೆ, ಅದಕ್ಕೆ ಮುಖ್ಯವಾಗಿ, ಬಹು ಹೆಚ್ಚಿನ ವಿವೇಕದ ಹಾಗೂ ಮಹಾ ಸುಯೋಗದ ಒಕ್ಕೂಟವೇ ಕಾರಣ.

ನಾನು ಇದನ್ನು ಬರೆಯುತ್ತಿರುವಾಗಲೇ ರೂಪ ಮಾರ್ಪಾಟಿನ ಯಾತನೆಗಳಿಗೊಳಗಾದರೆ, ಗುಪ್ತ ಇದನ್ನು ಹರಿದು ಚೂರು ಚೂರು ಮಾಡಿ ಬಿಡುತ್ತಾನೆ. ಹಾಗಲ್ಲದೆ, ಇದನ್ನು ಬರೆದು ಮುಗಿಸಿ ಬಚ್ಚಿಡುವಷ್ಟು ಕಾಲಾವಕಾಶ ಸಿಕ್ಕರೆ, ಆಗ ಅವನ ಅಚ್ಚರಿಗೊಳಿಸುವ ಸ್ವಾರ್ಥಬುದ್ಧಿಯೂ, ಮಾರ್ಪಾಟಾದ ಕ್ಷಣದ ಉತ್ಕಟಾವೇಷವೂ, ಇದನ್ನು ಅವನ ಮರ್ಕಟಚಿತ್ತದ ಪ್ರತೀಕಾರದಿಂದ ರಕ್ಷಿಸಬಹುದು. ನಮ್ಮಿಬ್ಬರಿಗೂ ಕೂಡಿ ಸಮೀಪಿಸುತ್ತಿರುವ ನಮ್ಮ ಕಡೆಯ ಶಿಕ್ಷೆಯ ಅರಿವಿನಿಂದ, ಅವನೂ ಈಗಾಗಲೇ ಬದಲಾಯಿಸಿ ಪೂರ ಕಂಗೆಟ್ಟು ಹೋಗಿದ್ದಾನೆ.

ಈಗಿನಿಂದ ಇನ್ನು ಅರ್ಧಗಂಟೆಯ ತರುವಾಯ, ನಾನು ಪುನಃ ಶಾಶ್ವತವಾಗಿ ಆ ಅನಿಷ್ಟರೂಪವನ್ನು ತಳೆದಾಗ—ಹೇಗೆ ನಡುಗುತ್ತ, ಅಳುತ್ತ, ನನ್ನ ಕುರ್ಚಿಯಲ್ಲಿ ಕುಳಿತಿರುವೆನೆಂದು, ಅಥವಾ, ಅತ್ಯುತ್ಕಟ ಪ್ರಾಣಭಯದಿಂದ ಪ್ರತಿಯೊಂದು ಭಯೋತ್ಪಾದಕ ಶಬ್ದವನ್ನೂ ಆಲೈಸಿ ಕೇಳುತ್ತ, ಇಹಲೋಕದ ನನ್ನ ಕಟ್ಟಕಡೆಯ ಆಶ್ರಯವಾದ ಈ ಕೊಠಡಿ ಯಲ್ಲಿ, ಹೇಗೆ, ಬೋನಿಗೆ ಬಿದ್ದ ಕಾಡು ಪ್ರಾಣಿಯಂತೆ ಒದ್ದಾಡುತ್ತಿರುತ್ತೇನೆಂದು ಬಲ್ಲೆ, ಚೆನ್ನಾಗಿ ಬಲ್ಲೆ.

ಕಾಮೇಶಗುಪ್ತ ಗಲ್ಲಿಗೇರಿ ಸಾಯುತ್ತಾನೋ ?—ಅಥವಾ, ಕಟ್ಟ ಕಡೆಯ ಕ್ಷಣದಲ್ಲಿ, ತನ್ನ ವಿಮೋಚನೆ ಮಾಡಿಕೊಳ್ಳುವ ಧೈರ್ಯ ಅವನಿಗೆ ಹುಟ್ಟುತ್ತದೆಯೋ ? ದೇವರೇ ಬಲ್ಲ ! ಈ ವಿಷಯದಲ್ಲಿ ನಾನು ಕೇವಲ ಉದಾಸೀನನಾಗಿದ್ದೇನೆ. ಇದು ನನ್ನ ಮರಣದ ನಿಜವಾದ ಮುಹೂರ್ತ. ಅನಂತರದ ಘಟನೆ ಏನೇ ಇರಲಿ, ಅದು ನಾನಲ್ಲದ ಬೇರೊಂದು ವ್ಯಕ್ತಿಗೆ ಸಂಬಂಧಪಟ್ಟದ್ದಾಗಿರುತ್ತದೆ.

ಇಲ್ಲಿಗೆ ನನ್ನ ಕಥೆ ಮುಗಿಯಿತು. ಇದೋ, ಲೇಖನಿಯನ್ನು ಕೆಳಗಿಟ್ಟು, ಈ ಹೇಳಿಕೆಯನ್ನು ಮೊಹರು ಮಾಡುತ್ತಿರುವ ಈ ಕ್ಷಣದಲ್ಲಿ, ಆ ನಿರ್ಭಾಗ್ಯ ಹರಿವಿಠಲನ ದುಃಖಮಯವೂ ದುರ್ಭರವೂ ಆದ ಜೀವನವನ್ನು ಕೊನೆಗಾಣಿಸುತ್ತೇನೆ.

❖❖❖